# ಅಪೊಸ್ತಲರ ಕೃತ್ಯಗಳು

**ಗ್ರಂಥಕರ್ತ:**

ಲೂಕ. ಲೂಕನ ಸುವಾರ್ತೆಯ ಪೀಠಿಕೆ ಭಾಗವನ್ನು ನೋಡಿರಿ ಮತ್ತು ಅಪೊ 1 ನೇ ಅಧ್ಯಾಯದ 1 ನೇ ವಾಕ್ಯವನ್ನು ಲೂಕ 1 ನೇ ಅಧ್ಯಾಯದ 1 ನೇ ವಾಕ್ಯದೊಂದಿಗೆ ಹೋಲಿಸಿ ನೋಡಿರಿ.

**ದಿನಾಂಕ:**

ಬಹುಶಃ ಕ್ರಿ.ಶ. 60 ಮತ್ತು 63 ರ ನಡುವೆ ಇರಬಹುದು.

**ಧ್ಯೇಯಗಳು:**

ಯೇಸು ಕ್ರಿಸ್ತನ ಸಭೆಯ ಪ್ರಾರಂಭದ ಚರಿತ್ರೆ, ಯೇಸು ಕ್ರಿಸ್ತನ ಮರಣ ಮತ್ತು ಪುನರುತ್ಥಾನ ನಂತರದ ಮೊದಲ ಮೂವತ್ತು ವರ್ಷಗಳಲ್ಲಿ ಆತನ ಸುವಾರ್ತೆಯ ಪ್ರಚಾರ, ಯೇಸು ಕ್ರಿಸ್ತನು ಪರಲೋಕಕ್ಕೆ ಆರೋಹಣನಾದ ನಂತರ ಭೂಮಿಯ ಮೇಲೆ ಮುಂದುವರೆಸಿದ ಕಾರ್ಯ. 1:8 ಮುಖ್ಯ ವಚನ. ಲೂಕನು ಈ ಪುಸ್ತಕಕ್ಕೆ "ಅಪೊಸ್ತಲರ ಕೃತ್ಯಗಳು" ಎಂಬ ಶೀರ್ಷಿಕೆಯನ್ನು ಕೊಟ್ಟಿಲ್ಲ. ನಂತರದಲ್ಲಿ ಬೇರೆಯವರು ಈ ಹೆಸರನ್ನು ಕೊಟ್ಟಿದ್ದಾರೆ. ಹೆಚ್ಚು ವಿವರಣೆಯುಳ್ಳದ್ದಾಗಿ ವಾಸ್ತವಕ್ಕೆ ಹತ್ತಿರವಾದ ಶೀರ್ಷಿಕೆ ಯಾವುದೆಂದರೆ "ಅಪೊಸ್ತಲರ ಮೂಲಕ ದೇವರಾತ್ಮನ ಕಾರ್ಯಗಳು" ಅಥವಾ "ತನ್ನ ಅಪೊಸ್ತಲರ ಮೂಲಕ ಯೇಸು ಕ್ರಿಸ್ತನ ಮುಂದುವರೆದ ಕಾರ್ಯಗಳು."

# 1

**1:1** *"ಥಿಯೊಫಿಲನೇ"*– ಲೂಕ 1:3. ಸುವಾರ್ತೆಗಳಲ್ಲಿ ಬರೆಯಲ್ಪಟ್ಟಿರುವ ಯೇಸು ಕ್ರಿಸ್ತನ ಕ್ರಿಯೆಗಳು ಮತ್ತು ಬೋಧನೆಗಳು ಆತನ ಸೇವೆಯ ಪ್ರಾರಂಭವಾಗಿವೆಯಷ್ಟೇ. ಆತನ ಮರಣ, ಪುನರುತ್ಥಾನ ಮತ್ತು ಪರಲೋಕಾರೋಹಣದ ನಂತರ, ಆತನು ತನ್ನ ಸೇವಕರ ಮೂಲಕ ತನ್ನ ಸೇವೆಯನ್ನು ಮುಂದುವರೆಸಿದನು. ಅಪೊಸ್ತಲರ ಕೃತ್ಯಗಳಲ್ಲಿ ನಾವು ಆ ಕಾರ್ಯಗಳ ಕೆಲವು ದಾಖಲೆಗಳನ್ನು ನೋಡಬಹುದು – 2:33; 3:6,16,26; 4:10,30; 5:31; 7:56; 9:3-16; 18:9-10; 26:15-18. ಮತ್ತಾಯ 28:20; ಮಾರ್ಕ 16:20 ವಾಕ್ಯಗಳೊಂದಿಗೆ ಹೋಲಿಸಿ ನೋಡಿರಿ. **2**

**1:2** ವಾಕ್ಯಗಳು 9-11; ಮಾರ್ಕ 16:19; ಲೂಕ 24:51. ಪವಿತ್ರಾತ್ಮನ ಕುರಿತಾದ ನೋಟ್ಸ್ ಗಾಗಿ ಮತ್ತಾಯ 3:16; ಯೋಹಾನ 7:39; 14:16-17,26; 20:22 ನೋಡಿರಿ. ಹಾಗೆಯೇ

ಆದಿ 1:2 ಸಹ ನೋಡಿರಿ. "ಅಪೊಸ್ತಲರು" ಎಂದರೆ "ಆದೇಶಗಳೊಂದಿಗೆ ಕಳುಹಿಸಲ್ಪಟ್ಟಿರುವ ಜನರು."

"*ತಾನಾರಿಸಿಕೊಂಡಿದ್ದವರು*"– ಮತ್ತಾಯ 10:2; ಮಾರ್ಕ 3:13-19; 6:12-16. **3**

**1:3** "*ತನ್ನನ್ನು ಜೀವಿತನೆಂದು ತೋರಿಸಿಕೊಂಡನು*"– ಮತ್ತಾಯ 28:6 ರಲ್ಲಿ ನೋಟ್ಸ್ ನೋಡಿರಿ.

"*ಬಾಧೆಪಟ್ಟು*"– ಆತನು ಶಿಲುಬೆಗೆ ಜಡಿಯಲ್ಪಟ್ಟಿದ್ದು ಮತ್ತು ಪ್ರಾಣ ಕೊಟ್ಟಿದ್ದು. 2:24; 17:3; 26:23 ರೊಂದಿಗೆ ಹೋಲಿಸಿ ನೋಡಿರಿ.

"*ಅನೇಕ ಪ್ರಮಾಣಗಳು*"– ನಾನು ಪುನರುತ್ಥಾನಗೊಳ್ಳುವೆನು ಎಂಬದಾಗಿ ಯೇಸು ಕ್ರಿಸ್ತನು ಮುಂಚಿತವಾಗಿ ಹೇಳಿದ್ದು ಮಾತ್ರವಲ್ಲ (ಮತ್ತಾಯ 16:21; 17:23; ಯೋಹಾನ 10:17-18), ನಿಜವಾಗಿಯೂ ಸತ್ತವರೊಳಗಿಂದ ಎದ್ದು ಬಂದನು ಮತ್ತು ತಾನು ಪುನರುತ್ಥಾಗೊಂಡಿರುವದನ್ನು ಅನೇಕ ಸಾಕ್ಷಿಗಳ ಮೂಲಕ ನಿರೂಪಿಸಿದನು (ಮತ್ತಾಯ 28:16-18; ಮಾರ್ಕ 16:12-14; ಲೂಕ 24:36-43; ಯೋಹಾನ 20:19-29; 21:1; 1 ಕೊರಿಂಥ 15:5-8). ಈ ಪುರಾವೆಗಳು ಅತ್ಯಂತ ಸಮಂಜಸವಾಗಿದ್ದರಿಂದ ಆತನ ಅಪೊಸ್ತಲರು ಈ ಸತ್ಯವನ್ನು ಸಾರುತ್ತಾ ಸಂತೋಷವಾಗಿ ಬಾಧೆಪಡಲು ಮತ್ತು ಪ್ರಾಣಕೊಡಲು ಸಿದ್ಧರಾಗಿದ್ದರು. ಅವರ ಎಲ್ಲಾ ಬೋಧನೆಗಳಲ್ಲಿ ಇದು ಅತ್ಯಂತ ಪ್ರಮುಖವಾದ ಧ್ಯೇಯವಾಗಿತ್ತು. ಅವರು ಈ ಸತ್ಯವನ್ನು ಎಲ್ಲಾ ಕಡೆಗಳಲ್ಲಿಯೂ ಪ್ರಚುರಪಡಿಸಿದರು (2:24,32; 3:15; 5:30-32; 10:40; 13:30-31; 17:31), ಈ ಘಟನೆಗಳೆಲ್ಲವೂ ಯೆರೂಸಲೇಮಿನಲ್ಲಿ ನಡೆದದ್ದರಿಂದ, ಅಲ್ಲಿದ್ದವರಿಗೆ ನಡೆದ ಘಟನೆಗಳು ಗೊತ್ತಿತ್ತು ಆದ್ದರಿಂದ ಅವರಲ್ಲಿ ಬಹುತೇಕ ಜನರು ಅವರ ಮಾತುಗಳನ್ನು ನಂಬಿದರು.

"*ನಲವತ್ತು ದಿವಸಗಳು*"– ಯೇಸು ಕ್ರಿಸ್ತನು ಪುನರುತ್ಥಾನಗೊಂಡ ನಂತರ ಪರಲೋಕಕ್ಕೆ ಆರೋಹಣವಾಗುವ ಮೊದಲು ಭೂಲೋಕದಲ್ಲಿ ಎಷ್ಟು ದಿವಸಗಳು ಇದ್ದನು ಎಂಬದನ್ನು ಇಡೀ ಸತ್ಯವೇದದಲ್ಲಿ ಈ ವಾಕ್ಯ ಮಾತ್ರ ತಿಳಿಯಪಡಿಸುತ್ತದೆ. ಈ ಅವಧಿಯಲ್ಲಿ ಯೇಸು ಕ್ರಿಸ್ತನು ಕಲಿಸಿದ ಕೆಲವು ವಿಷಯಗಳನ್ನು ನಾವು ಲೂಕ 24:44-47 ರಲ್ಲಿ ನೋಡಬಹುದಾಗಿದೆ.

"*ದೇವರ ರಾಜ್ಯ*"– ಮತ್ತಾಯ 4:17. ಹಾಗೆಯೇ ಅಪೊ 1:6; 8:12; 14:22; 19:8; 20:25; 28:23,31 ಸಹ ನೋಡಿರಿ. **4-5**

**1:4-5** ಯೇಸು ಕ್ರಿಸ್ತನ ಅಪೊಸ್ತಲರು ಪವಿತ್ರಾತ್ಮನ ಶಕ್ತಿಯನ್ನು ಹೊಂದದ ತನಕ ಆತನ ಸೇವೆಗೆ ಅರ್ಹರಾಗಿರಲಿಲ್ಲ. ಯೇಸು ಕ್ರಿಸ್ತನ ಕುರಿತಾಗಿ ಅವರಿಗಿದ್ದ ತಿಳುವಳಿಕೆಗಳು ಮತ್ತು ಹಳೆಯ ಒಡಂಬಡಿಕೆಯ ಬಗ್ಗೆ ಅವರಿಗಿದ್ದ ಮಾಹಿತಿಗಳು ಮುಂಬರುವ ಕಾರ್ಯಗಳಿಗಾಗಿ ಅವರನ್ನು ಸಿದ್ಧಮಾಡುವದಾಗಿರಲಿಲ್ಲ. **4**

**1:4** "*ತಂದೆ ಮಾಡಿದಂತ ವಾಗ್ದಾನ*"– ಲೂಕ 11:13; 24:49; ಯೋಹಾನ

14:16-17,26 ನೋಡಿರಿ. ವಾಗ್ದಾನ ಏನೆಂದರೆ ಅವರಿಗೆ ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನವಾಗುವದು. ಮತ್ತಾಯ 3:11; ಮಾರ್ಕ 1:8; ಲೂಕ 3:16 ನೋಡಿರಿ. ಅಪೊಸ್ತಲನಾದ ಪೌಲನ ಪ್ರಕಾರ ವಿಶ್ವಾಸಿಗಳು ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವ ಮೂಲಕ ತಂದೆಯಿಂದ ಈ ವಾಗ್ದಾನವನ್ನು ಪಡೆಯಬಹುದಾಗಿಯೇ ಹೊರತು ಇದಕ್ಕೆ ಬೇರೆ ಯಾವುದೇ ಮಾರ್ಗವಿಲ್ಲ. ಗಲಾ 3:2,14 ನೋಡಿರಿ. **5**

**1:5** *"ಪವಿತ್ರಾತ್ಮನ ದೀಕ್ಷಾಸ್ನಾನ"*– ಪಂಚಾಶತ್ತಮ ದಿನದಂದು ಅಪೊಸ್ತಲರು ಏನನ್ನು ಹೊಂದಿದರು ಎಂಬದನ್ನು ವಿವರಿಸಲು ನಾಲ್ಕು ವಿಷಯಗಳನ್ನು ಇಲ್ಲಿ ತಿಳಿಸಲಾಗಿದೆ: "ಪವಿತ್ರಾತ್ಮನ ದೀಕ್ಷಾಸ್ನಾನ ಹೊಂದಿದರು" ವ8: "ಪವಿತ್ರಾತ್ಮನು ನಿಮ್ಮ ಮೇಲೆ ಬರಲು" 2:4 : "ಪವಿತ್ರಾತ್ಮಭರಿತರಾದರು" 10:47 : "ಪವಿತ್ರಾತ್ಮವರವನ್ನು ಹೊಂದಿದರು." 2:1-4. ರಲ್ಲಿ ವಿವರಿಸಲಾಗಿರುವ ಘಟನೆಯ ಬಗ್ಗೆಯೇ ಈ ನಾಲ್ಕು ವಿಷಯಗಳು ಮಾತನಾಡುತ್ತವೆ. ಆ ದಿನದಲ್ಲಿ ಯೇಸು ಕ್ರಿಸ್ತನು ಅವರಿಗೆ ಹೊಸ ರೀತಿಯಲ್ಲಿ ದೇವರ ಆತ್ಮನನ್ನು ಕೊಟ್ಟನು. ಇದು ಅವರನ್ನು ನೀರಿನೊಳಗೆ ಮುಳುಗಿಸುವಂತೆ ಅಥವಾ ಆತ್ಮನನ್ನು ಅವರ ಮೇಲೆ ಸುರಿಸುವಂತೆ ಇತ್ತು (2:33; 10:45), ಮತ್ತು ಇದರ ಫಲಿತಾಂಶವಾಗಿ ಅವರು ಸಂಪೂರ್ಣವಾಗಿ ಪವಿತ್ರಾತ್ಮಭರಿತರಾದರು ಮತ್ತು ಕ್ರೈಸ್ತೀಯ ಜೀವಿತವನ್ನು ಜೀವಿಸಲು ಬೇಕಾದ ಬಲವನ್ನು ಹೊಂದಿದರು ಹಾಗೂ ಸಾಕ್ಷಿಕೊಡುವವರಾಗಿ ದೇವರ ಸೇವೆಯಲ್ಲಿ ಮುಂದುವರೆದರು.ಅವರು ದೇವರಾತ್ಮನಿಗನುಸಾರವಾಗಿ ಜೀವಿಸಲು ಮತ್ತು ಮುಂದೆ ಸಾಗಲು, ಪ್ರೇರಣೆ ಹೊಂದಲು, ಪ್ರೋತ್ಸಾಹ ಹೊಂದಲು ಹಾಗೂ ದೇವರಾತ್ಮನ ನಿಯಂತ್ರಣದಲ್ಲಿರಲು ಪ್ರಾರಂಭಿಸಿದರು. ಆ ಸಮಯದಿಂದ ಈಗಿನ ತನಕ, ಕರ್ತನಾದ ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವಾಗ ಜನರು ವ್ಯಕ್ತಿಗತವಾಗಿ ಆತನನ್ನು ಅಂಗೀಕರಿಸಿಕೊಳ್ಳುವವರಾದರು (ಯೋಹಾನ 7:37-39; ಗಲಾ 3:2; ಎಫೆ 1:13 ನೋಡಿರಿ). ಒಂದುವೇಳೆ ಅವರು ದೇವರಾತ್ಮನಾಗಿರುವ, ಕ್ರಿಸ್ತನ ಆತ್ಮನನ್ನು ಪಡೆದುಕೊಂಡಿಲ್ಲವೆಂದರೆ, ಯೇಸು ಕ್ರಿಸ್ತನಿಗೆ ಸೇರಿದವರಾಗಲು ಆಗುವದಿಲ್ಲ; ಅಂದರೆ ಅವರು ನಿಜವಾಗಿಯೂ ಆತನಲ್ಲಿ ನಂಬಿಕೆಯನ್ನಿಟ್ಟಿಲ್ಲ ಅಥವಾ ಮೇಲಿನಿಂದ ಹುಟ್ಟಿದವರಾಗಿರುವದಿಲ್ಲ (ರೋಮಾ 8:9 ನೋಡಿರಿ). 1 ಕೊರಿಂಥ 12:12-13 ರ ಪ್ರಕಾರ ಪ್ರತಿಯೊಬ್ಬ ವಿಶ್ವಾಸಿಯು ದೇವರಾತ್ಮನ ದೀಕ್ಷಾಸ್ನಾನದಿಂದ ಕ್ರಿಸ್ತನ ದೇಹದೊಳಗೆ ಸೇರಿದ್ದಾರೆ (ಅಥವಾ ದೇವರಾತ್ಮನ "ಮೂಲಕ" ಅಥವಾ ದೇವರಾತ್ಮನಲ್ಲಿ ದೀಕ್ಷಾಸ್ನಾನ ಹೊಂದಿದ್ದಾರೆ – ಗ್ರೀಕ್ ಪದವು ಇದರಲ್ಲಿ ಯಾವುದಾದರು ಒಂದು ಅರ್ಥವನ್ನು ಕೊಡುತ್ತದೆ ಮತ್ತು ಇಲ್ಲಿ ಅಪೊಸ್ತಲರ ಕೃತ್ಯಗಳಲ್ಲಿ ಉಪಯೋಗಿಸಲಾಗಿರುವ ಪದವನ್ನೇ ಅಲ್ಲಿಯೂ ಉಪಯೋಗಿಸಲಾಗಿದೆ). ಅವರು ಕರ್ತನಾದ ಯೇಸು ಕ್ರಿಸ್ತನನ್ನು ತಮ್ಮ ಕರ್ತನನ್ನಾಗಿ ಮತ್ತು ರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳುವಾಗಲೂ ಇದು ಸಂಭವಿಸುತ್ತದೆ. ದೇವರಾತ್ಮನ ಬರೋಣಕ್ಕಾಗಿ ಮೂಲ ಅಪೊಸ್ತಲರು ದೇವರು ನಿಗದಿಪಡಿಸಿದ ಸಮಯಕ್ಕಾಗಿ ಕಾದ ಹಾಗೆ

ಅವರು ಕಾಯುವ ಅವಶ್ಯಕತೆಯಿಲ್ಲ. ದೇವರು ಪವಿತ್ರಾತ್ಮನ ಯುಗವನ್ನು, ಕೃಪೆಯ ಕಾಲವನ್ನು, ಭೂಲೋಕದಲ್ಲಿ ತನ್ನ ಹೊಸ ಕಾರ್ಯವನ್ನು ಪ್ರಾರಂಭಿಸಲು ದೇವರು ಪಂಚಾಶತ್ತಮ ದಿನವನ್ನು ಆರಿಸಿಕೊಂಡನು. ಈಗ ಅದು ಪ್ರಾರಂಭವಾಗಿದೆ ಮತ್ತು ಇಷ್ಟೊಂದು ಶತಮಾನಗಳಿಂದ ಸಾಗುತ್ತಾ ಬಂದಿರುವದರಿಂದ ಕಾಯುವದು ಅವಶ್ಯವಲ್ಲವಾಗಿದೆ. ಯೇಸು ಕ್ರಿಸ್ತನನ್ನು ಅಂಗೀಕರಿಸಿಕೊಳ್ಳುವ ಮೂಲಕ ಪವಿತ್ರಾತ್ಮನನ್ನು ಹೊಂದುವಾಗ ಮತ್ತು ಅದೇ ಸಮಯದಲ್ಲಿ ಆತ್ಮನ ಮೂಲಕ ದೀಕ್ಷಾಸ್ನಾನ ಹೊಂದಿ ಕ್ರಿಸ್ತನ ದೇಹದೊಳಗೆ ಸೇರುವದರಿಂದ, ಪ್ರತಿಯೊಬ್ಬ ವಿಶ್ವಾಸಿಯು ಪವಿತ್ರಾತ್ಮಭರಿತರಾಗಲು ಆಸಕ್ತಿಯಿಂದ ಬಯಸುವವರಾಗಿರಬೇಕು (ಎಫೆ 5:18). ಪವಿತ್ರಾತ್ಮನ ದೀಕ್ಷಾಸ್ನಾನ ಒಮ್ಮೆ ಮಾತ್ರವೇ ಆಗುತ್ತದೆ ಆದರೆ ವಿಶ್ವಾಸಿಗಳು ಮತ್ತೆಮತ್ತೆ ಪವಿತ್ರಾತ್ಮಭರಿತರಾಗಬಹುದಾಗಿದೆ. ಇದಲ್ಲದೆ ಪವಿತ್ರಾತ್ಮನು ನಮ್ಮೊಳಗೆ ಜೀವಿಸುತ್ತಿದ್ದಾನೆ ಎಂಬ ಅರಿವು ಅಂದರೆ ನಾವು ಆತ್ಮನ ದೀಕ್ಷಾಸ್ನಾನ ಹೊಂದಿದ್ದೇವೆ ಎಂಬ ದೃಢತೆ ನಮಗಿದ್ದರೂ ಒಂದುವೇಳೆ ನಾವು ಆತ್ಮಭರಿತರಾಗಿಲ್ಲ ಎಂಬದಾಗಿ ಯೋಚಿಸಲು ನಮಗೆ ಕಾರಣವಿದ್ದರೆ, ನಾವು ನಮ್ಮ ಪೂರ್ಣ ಪ್ರಾಣದಿಂದ, ಮನಸ್ಸಿನಿಂದ, ಶಕ್ತಿಯಿಂದ ಹಾಗೂ ಬುದ್ಧಿಯಿಂದ ಪವಿತ್ರಾತ್ಮಭರಿತರಾಗಲು ಬಯಸಬೇಕು. "ಪವಿತ್ರಾತ್ಮನ ದೀಕ್ಷಾಸ್ನಾನ" ಎಂಬ ಪದಗಳಿರುವ ಕೆಲವು ವಾಕ್ಯಗಳನ್ನು ಮಾತ್ರವೇ ನಾವು ಸತ್ಯವೇದದಲ್ಲಿ ನೋಡಬಹುದಾಗಿದೆ. ಸ್ನಾನಿಕನಾದ ಯೋಹಾನನ ಮಾತುಗಳನ್ನು ನಾಲ್ಕು ಸುವಾರ್ತೆಗಳಲ್ಲಿ ಬರೆಯಲಾಗಿದೆ (ಮತ್ತಾಯ 3:11 ನೋಡಿರಿ). ನಂತರ ನಾವು ಯೇಸು ಕ್ರಿಸ್ತನ ಮಾತುಗಳನ್ನು ನೋಡಬಹುದು. ಪೇತ್ರನು ಅಪೊ 11:16 ರಲ್ಲಿ ಈ ಮಾತುಗಳನ್ನು ಬರೆದಿದ್ದಾನೆ. ನಂತರ ನಾವು 1 ಕೊರಿಂಥ 12:13 ರಲ್ಲಿ ಪೌಲನ ಮಾತುಗಳನ್ನು ನೋಡಬಹುದು. ಇವುಗಳನ್ನು ಬಿಟ್ಟರೆ ಬೇರೆ ಇಲ್ಲ. **6**

**1:6** ಕರ್ತನಾದ ಯೇಸು ಕ್ರಿಸ್ತನು ನಲವತ್ತು ದಿವಸಗಳ ಕಾಲ ಅವರಿಗೆ ದೇವರ ರಾಜ್ಯದ ಬಗ್ಗೆ ಕಲಿಸುತ್ತಿದ್ದನು (ವ 3) ಮತ್ತು ಹಳೆಯ ಒಡಂಬಡಿಕೆಯನ್ನು ಅರ್ಥಮಾಡಿಕೊಳ್ಳಲು ಅವರ ಮನಸ್ಸುಗಳನ್ನು ತೆರೆಯ ಮಾಡಿದ್ದನು (ಲೂಕ 24:45. ಕರ್ತನಾದ ಯೇಸು ಕ್ರಿಸ್ತನು ಪರಲೋಕಕ್ಕೆ ಆರೋಹಣವಾದ ದಿನ ಅವರು ಈ ಪ್ರಶ್ನೆಯನ್ನು ಕೇಳಿದರು – ವ 9). ಆದ್ದರಿಂದ ಅವರು ಈ ಪ್ರಶ್ನೆಯನ್ನು ಅಮಾಯಕರಾಗಿ ಕೇಳಲಿಲ್ಲ, ಬದಲಾಗಿ ಇಸ್ರಾಯೇಲ್ ದೇಶದ ವಿಷಯದಲ್ಲಿ ದೇವರ ಯೋಜನೆ ಏನಾಗಿದೆ ಎಂಬ ತಿಳುವಳಿಕೆಯಲ್ಲಿ ಕೇಳಿದರು. ದೇವರು ಅವರ ಮಧ್ಯದಲ್ಲಿ ತನ್ನ ರಾಜ್ಯವನ್ನು ತೆಗೆದಿದ್ದಾನೆ ಎಂಬದು ಅವರಿಗೆ ಗೊತ್ತಿತ್ತು (ಮತ್ತಾಯ 21:43). ಆದರೆ ಯೇಸು ಕ್ರಿಸ್ತನು ಅವರಿಗೆ ಕಲಿಸಿದ ವಿಷಯಗಳಿಗನುಸಾರವಾಗಿ ದೇವರು ಒಂದು ದಿನ ಅವರಿಗೆ ರಾಜ್ಯವನ್ನು ಹಿಂದಿರುಗಿಸುವನು ಮತ್ತು ಲೋಕದಲ್ಲಿ ಅದನ್ನು ಪ್ರಾಮುಖ್ಯವಾದ ಸ್ಥಾನಕ್ಕೆ ತಂದು ಅಧಿಕಾರದಲ್ಲಿ ನಿಲ್ಲಿಸುವನು ಎಂಬ ವಿಷಯದಲ್ಲಿ ಸಂದೇಹಪಡಲಿಲ್ಲ (3:19-21; ಯೆಶಾಯ 2:2-4; 14:1-2; ಜೆಕರ್ಯ 14:16-21

ನೋಡಿರಿ). ಆದರೆ ದೇವರು ಈ ಕಾರ್ಯವನ್ನು ಯಾವಾಗ ಮಾಡುವನು ಎಂಬದು ಶಿಷ್ಯರಿಗೆ ಗೊತ್ತಿರಲಿಲ್ಲ. "ನೀನು ಇಸ್ರಾಯೇಲ್ ಜನಾಂಗವನ್ನು ಪುನರ್ ಸ್ಥಾಪಿಸುವೆಯಾ?" ಎಂಬದಾಗಿ ಅವರು ಕೇಳಲಿಲ್ಲ ಬದಲಾಗಿ "ಈ ಸಮಯದಲ್ಲಿ ನೀನು ಇಸ್ರಾಯೇಲ್ ಜನಾಂಗವನ್ನು ಪುನರ್ ಸ್ಥಾಪಿಸುವೆಯಾ" ಎಂಬದಾಗಿ ಕೇಳಿದರು ಎಂಬದನ್ನು ಗಮನಿಸಿರಿ. **7**

**1:7** ತಾನು ಇಸ್ರಾಯೇಲ್ ಜನಾಂಗವನ್ನು ಪುನರ್ ಸ್ಥಾಪಿಸುವ ಅವರ ದೃಷ್ಟಿಕೋನವನ್ನು ಕರ್ತನು ಸರಿಪಡಿಸಲಿಲ್ಲ. ಆತನು ನಲವತ್ತು ದಿವಸಗಳಿಂದ ದೇವರ ರಾಜ್ಯದ ಬಗ್ಗೆ ಅವರಿಗೆ ಬೋಧಿಸುತ್ತಿದ್ದರಿಂದ, ಅವರು ಎಲ್ಲಾ ವಿಷಯಗಳನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಬೇಕೆಂದು ಆತನು ಬಯಸಿದನು ಎಂಬದು ಸ್ಪಷ್ಟವಾಗಿದೆ. ಅವರು ಭೂಲೋಕದಲ್ಲಿ ಆತನ ಪ್ರತಿನಿಧಿಗಳಾಗಿದ್ದರು, ಆತನ ಸಭೆಯ ಬೋಧಕರಾಗಿದ್ದರು. ಆತನು ಇಸ್ರಾಯೇಲ್ಯರಿಗೆ ದೇಶವನ್ನು ಪುನರ್ ಸ್ಥಾಪಿಸುವನು ಎಂಬ ತಮ್ಮ ನಂಬಿಕೆಯಲ್ಲಿ ಅವರು ತಪ್ಪಾಗಿದ್ದರೆ, ಆತನು ಅವರಿಗೆ ಹೀಗೆ ಹೇಳಿರಬಹುದೇ ಎಂದು ನಾವು ಯೋಚಿಸಬಹುದಾ? ಮೂಲ ವಿಷಯದ ಕುರಿತು ಆತನು ಅವರನ್ನು ತಪ್ಪಾದ ತಿಳುವಳಿಕೆಯಲ್ಲಿಯೇ ಇರಿಸಿದ್ದಾನೆ ಎಂದು ನಾವು ಯೋಚಿಸಬಹುದೇ? ಆದರೆ ಆತನು ಅವರಿಗೆ ಹೇಳಿದ್ದೇನೆಂದರೆ ಕಾಲಗಳನ್ನು ಮತ್ತು ಸಮಯಗಳನ್ನು ತಿಳಿಯುವದು ನಿಮ್ಮ ಕೆಲಸವಲ್ಲ. ಈ ರೀತಿಯಲ್ಲಿ ಆತನು ಇಸ್ರಾಯೇಲ್ ಮತ್ತು ದೇವರ ರಾಜ್ಯದ ಕುರಿತು ಅವರ ಯೋಚನೆಯನ್ನು ದೃಢಪಡಿಸಿದನು. **8**

**1:8** ವಚನ 5. ಇಲ್ಲಿ ಬಲ ಎಂದರೆ ಅಸಾಧಾರಣವಾದ ಶಕ್ತಿ ಮತ್ತು ಸಾಮರ್ಥ್ಯವಾಗಿದೆ. ಹುದುವಾದ ಲೋಕದಲ್ಲಿ ದೇವರಿಗೆ ಸಾಕ್ಷಿಯಾಗಿರಬೇಕೆಂದರೆ, ಆತನ ಬಗ್ಗೆಯೇ ಮಾತನಾಡುತ್ತಾ, ಸೇವೆ ಮಾಡುತ್ತಾ, ಆತನಿಗಾಗಿ ಜೀವಿಸುವದೆಂದರೆ, ಸ್ವಾಭಾವಿಕವಾದ ಬಲಕ್ಕಿಂತಲೂ ಹೆಚ್ಚಿನ ಬಲ ಅವಶ್ಯವಾಗಿತ್ತು ಮತ್ತು ಹೊಸ ಜನನದ ನಿಮಿತ್ತ ಅವರಿಗೆ ಅತ್ಯಧಿಕ ಬಲವನ್ನು ಹೊಂದಿದರು (ಯೋಹಾನ 1:12-13; 3:3,5,8). ಇದು ಇಂದಿಗೂ ಸತ್ಯವಾಗಿದೆ. ಅವರಿಗೆ ಅವಶ್ಯವಾಗಿತ್ತು ಮತ್ತು ನಮಗೂ ಆತ್ಮನ ಪರಿಪೂರ್ಣತೆ ಅವಶ್ಯವಾಗಿದೆ.

"*ಸಾಕ್ಷಿ*"– ಲೂಕ 24:48; ಯೋಹಾನ 15:27; ಅಪೊ 2:32; 3:15; 5:32; 10:39; 13:31; 22:15 ನೋಡಿರಿ. ಸಾಕ್ಷಿ ಎಂದರೆ ತಾನು ನೋಡಿರುವದನ್ನು ಅಥವಾ ಕೇಳಿಸಿಕೊಂಡಿರುವದನ್ನು ಅಥವಾ ಅನುಭವದಿಂದ ತಿಳಿದುಕೊಂಡಿರುವದನ್ನು ಇತರರಿಗೆ ಹೇಳುವವನಾಗಿದ್ದಾನೆ. ಅಪೊಸ್ತಲರು ಯೇಸು ಕ್ರಿಸ್ತನ ಜೀವನ, ಮರಣ, ಪುನರುತ್ಥಾನ ಮತ್ತು ಪರಲೋಕಾರೋಹಣದ ಸಾರಿದರು – ಈ ಎಲ್ಲಾ ಕಾರ್ಯಗಳನ್ನು ಅವರು ತಮ್ಮ ಸ್ವಂತ ಕಣ್ಣಾರೆ ನೋಡಿದ್ದರು. ಆತನು ಕಲಿಸುವದನ್ನು ಅವರು ಕೇಳಿಸಿಕೊಂಡದ್ದರಿಂದ ಅದನ್ನೇ ಕಲಿಸಿದರು. ಈ ವಾಕ್ಯದ ಆಧಾರದ ಮೇರೆಗೆ ಅಪೊಸ್ತಲರ ಕೃತ್ಯಗಳನ್ನು ನಾವು ಮೂರು ಭಾಗಗಳನ್ನಾಗಿ ಮಾಡಬಹುದು-ಯೆರೂಸಲೇಮಿನಲ್ಲಿ ಸಾಕ್ಷಿಯಾಗಿರುವದು (ಅಧ್ಯಾಯ 1-7), ಯೂದಾಯ ಮತ್ತು ಸಮಾರ್ಯದಲ್ಲಿ ಸಾಕ್ಷಿಯಾಗಿರುವದು (ಅಧ್ಯಾಯ 8-12), ಲೋಕದ

ಇತರೆ ಭಾಗಗಳಿಗೆ ಸಾಕ್ಷಿಯಾಗಿರುವದು (ಅಧ್ಯಾಯ 13-28). ಸತ್ಯದ ವಿಷಯವಾಗಿ ಸಾಕ್ಷಿಯಾಗಿರುವದು ಈಗಲೂ ಮುಂದುವರೆಯುತ್ತಿದೆ. ಈಗ ಲೋಕದ ಎಲ್ಲಾ ಭಾಗಗಳಲ್ಲಿರುವ ದೇವಸೇವಕರು, ಕರ್ತನಾದ ಯೇಸು ಕ್ರಿಸ್ತನನ್ನು ನೋಡಿದ ಮತ್ತು ಆತನ ಮಾತುಗಳನ್ನು ಕೇಳಿಸಿಕೊಂಡ ಮೂಲ ಅಪೊಸ್ತಲರ ಸಾಕ್ಷಿಯಿಂದ ಕಲಿತುಕೊಂಡಿರುವ ಸತ್ಯವನ್ನು ಪ್ರಕಟಿಸುತ್ತಿದ್ದಾರೆ. ಇದಲ್ಲದೆ ಅವರು ಯೇಸು ಕ್ರಿಸ್ತನ ವಿಷಯವಾಗಿ ತಮಗಿರುವ ವೈಯಕ್ತಿಕ ಅನುಭವದಿಂದಲೂ ಸಾಕ್ಷಿ ಕೊಡುವವರಾಗಿದ್ದಾರೆ. **9**

**1:9** 2:33; ಮಾರ್ಕ 16:19; ಲೂಕ 24:51; ಫಿಲಿಪ್ಪಿ 2:9-11 ನೋಡಿರಿ. ಯೇಸು ಕ್ರಿಸ್ತನ ಆರೋಹಣಕ್ಕೆ ಸಂಬಂಧವಾಗಿ ಕೇವಲ ಇಲ್ಲಿ ಮಾತ್ರವೇ ಮೇಘಗಳನ್ನು ಸೂಚಿಸಲಾಗಿದೆ. ಸತ್ಯವೇದದಲ್ಲಿ ಮೇಘಗಳು ಕೆಲವೊಮ್ಮೆ ದೇವರ ಪ್ರಸನ್ನತೆ ಮತ್ತು ಪ್ರಭಾವಕ್ಕೆ ಸಂಕೇತಗಳಾಗಿವೆ (ವಿಮೋ 13:21; 16:10; 19:9,16; 24:15; 34:5; 40:34-35; ಯಾಜಕ 16:2; 1 ಅರಸು 8:10-11; ಯೆಶಾಯ 4:5; 19:1; ಮತ್ತಾಯ 17:5; ಪ್ರಕ 10:1; 14:14). ಕರ್ತನಾದ ಯೇಸು ಕ್ರಿಸ್ತನು ಅವರ ಮಧ್ಯದಿಂದ ಹೊರಟು ಹೋಗಿದ್ದನು. ಈಗಿನಿಂದ ಆತನ ಶಿಷ್ಯರು ನೋಡುವದರಿಂದಲ್ಲ ಬದಲಾಗಿ ನಂಬಿಕೆಯಿಂದ ಜೀವಿಸಬೇಕಾಗಿತ್ತು. ಯೇಸು ಕ್ರಿಸ್ತನು ಎಲ್ಲಿಗೆ ಹೋದನು? ಪರಲೋಕದಲ್ಲಿ ದೇವರ ಬಲಗಡೆಗೆ ಹೋದನು (2:33; 3:21). ಪರಲೋಕವು ಎಷ್ಟು ದೂರದಲ್ಲಿದೆ? ಬಹುಶಃ ತುಂಬಾ ಹತ್ತಿರದಲ್ಲಿರಬಹುದು (7:55-56 ನೋಡಿರಿ). ಅದು ಆತ್ಮೀಕ ರಂಗವಾಗಿದ್ದು ಭೂಮಿಯ ಮೇಲಿರುವ ಮಾನವರ ಕಣ್ಣುಗಳಿಗೆ ಕಾಣಿಸುವದಿಲ್ಲ ಆದರೆ ಅದು ಈ ಭೌತಿಕ ಲೋಕದೊಂದಿಗೆ ಅಸ್ತಿತ್ವದಲ್ಲಿರುವದಾಗಿದೆ. **10**

**1:10** ಮಾರ್ಕ 16:5; ಲೂಕ 24:4; ಯೋಹಾನ 20:12 ರೊಂದಿಗೆ ಹೋಲಿಸಿ ನೋಡಿರಿ. **11**

**1:11** ಈ ಪದಗಳ ಅರ್ಥ ಬಹುಶಃ ಹೀಗಿರಬಹುದು: ಯೇಸು ಕ್ರಿಸ್ತನು ಪರಲೋಕಕ್ಕೆ ಹೋಗುತ್ತಿದ್ದನು ಮತ್ತು ಕೆಲವು ಸಮಯ ಅಲ್ಲಿಯೇ ಇರಬೇಕೆಂದಿದ್ದನು. ಆತನು ಕೂಡಲೇ ಹಿಂದಿರುಗುವವನಾಗಿರಲಿಲ್ಲ ಆದ್ದರಿಂದ ಆತನನ್ನು ಎದುರುನೋಡುತ್ತಾ ಅವರು ಅಲ್ಲಿಯೇ ನಿಲ್ಲುವ ಅವಶ್ಯಕತೆಯಿರಲಿಲ್ಲ. ಆದರೆ ಈ ಸಮಯದಲ್ಲಿ ಅವರು ಮಾಡಬೇಕಾಗಿದ್ದ ಕೆಲವು ಕಾರ್ಯಗಳಿದ್ದವು. ಯೇಸು ಕ್ರಿಸ್ತನ ಎರಡನೇ ಬರೋಣದ ಕುರಿತು ತಿಳಿಯಲು ಮತ್ತಾಯ 24:30; 26:64; ಮಾರ್ಕ 13:26; ಲೂಕ 21:27; ಯೋಹಾನ 14:3 ನೋಡಿರಿ. **12**

**1:12** ಎಣ್ಣೇಮರಗಳ ಗುಡ್ಡವು ಉತ್ತರ ಯೆರೂಸಲೇಮಿಗೆ ಒಂದು ಕಿಲೊ ಮೀಟರ್ ದೂರದಲ್ಲಿತ್ತು. ಯೆಹೂದ್ಯರು ತಮ್ಮ ವಿಶ್ರಾಂತಿ ದಿನದಂದು ಎಷ್ಟು ದೂರ ನಡೆಯಬೇಕೆಂಬ ಮೇರೆಯನ್ನು ಯೆಹೂದ್ಯ ಬೋಧಕರು ನಿರ್ಧರಿಸಿದ್ದರು. **13**

**1:13** ಇದು ಬಹುಶಃ ನಾವು ಯೋಹಾನ 20:19,26ರಲ್ಲಿ ನೋಡುವ ಕೋಣೆಯೇ ಆಗಿರಬಹುದು. **14**

**1:14** ಯೇಸು ಕ್ರಿಸ್ತನು ತಮಗೆ ವಾಗ್ದಾನ ಮಾಡಿದ್ದ ವಿಷಯಕ್ಕಾಗಿಯೇ ಅವರು ನಿಸ್ಸಂದೇಹವಾಗಿ ಪ್ರಾರ್ಥನೆ ಮಾಡುತ್ತಿದ್ದಿರಬಹುದು-ವಚನ 4,5,8; ಲೂಕ 11:13; 24:49. ಸ್ತ್ರೀಯರು ಸಹ ಹೆಚ್ಚಿನ ಸಂಖ್ಯೆಯಲ್ಲಿ ಯೇಸು ಕ್ರಿಸ್ತನನ್ನು ನಂಬಿದ್ದರು. ಯೇಸು ಕ್ರಿಸ್ತನ ತಾಯಿಯಾದ ಮರಿಯಳು ಈಗ ಯೋಹಾನನೊಂದಿಗೆ ಇರುತ್ತಿದ್ದಳು (ಯೋಹಾನ 19:26-27). ಸತ್ಯವೇದದಲ್ಲಿ ಆಕೆಯ ಬಗ್ಗೆ ಬರೆಯಲ್ಪಟ್ಟಿರುವದು ಇದೇ ಕೊನೆ. ಆಕೆ ಸಂಪೂರ್ಣವಾಗಿ ತೆರೆಯ ಹಿಂದೆ ಸರಿಯುತ್ತಾಳೆ ಮತ್ತು ಆಕೆಯ ಮಗನು ಸಭೆಯ ದರ್ಶನವನ್ನು ಪೂರ್ತಿಗೊಳಿಸುತ್ತಾನೆ. ಯೇಸು ಕ್ರಿಸ್ತನ ಸಹೋದರರು (ಮತ್ತಾಯ 13:55) ಯೇಸು ಕ್ರಿಸ್ತನು ದೇವಕುಮಾರನಾಗಿರುವ ಇಸ್ರಾಯೇಲಿನ ಮೆಸ್ಸೀಯನು ಎಂಬದನ್ನು ಪ್ರಾರಂಭದಲ್ಲಿ ನಂಬುತ್ತಿರಲಿಲ್ಲ (ಯೋಹಾನ 7:5). ಆತನ ಪುನರುತ್ಥಾನದ ನಂತರ, ಅವರು ನಂಬಿದರು ಮತ್ತು ಆತನ ಶಿಷ್ಯರೊಂದಿಗೆ ಸೇರಿಕೊಂಡರು. ದೇವರಾತ್ಮನ ಆಗಮನಕ್ಕಾಗಿ ಅವರೆಲ್ಲರೂ ಹತ್ತು ದಿವಸ ಕಾಯುತ್ತಾ ಕೂತಿದ್ದರು. ಈಗ ಆತನ ಆತ್ಮನು ಬಂದಿರುವದರಿಂದ ಆತನ ಬರೋಣಕ್ಕಾಗಿ ಕಾಯುವ ಅವಶ್ಯಕತೆಯಿಲ್ಲ. ಆದರೆ ಈಗಲೂ ದೇವರಿಗಾಗಿ ಕಾಯುವದು ಮತ್ತು ಆತನ ಮುಖದರ್ಶನವನ್ನು ಬಯಸುವದು ಆತನ ಆತ್ಮನಿಂದ ತುಂಬಿಸಲ್ಪಡುವಿಕೆ ನಮ್ಮ ಹೃದಯಗಳನ್ನು ಸಿದ್ಧಮಾಡುತ್ತದೆ. **15**

**1:15** *"ಶಿಷ್ಯರು"*– ಮತ್ತಾಯ 10:1 ರಲ್ಲಿ ನೋಟ್ಸ್ ನೋಡಿರಿ. ಯೇಸು ಕ್ರಿಸ್ತನು ಯೆರೂಸಲೇಮಿನಲ್ಲಿ ಅದ್ಭುತವಾದ ವಿಷಯಗಳನ್ನು ಬೋಧಿಸಿದ್ದರೂ ಮತ್ತು ಅಮೋಘವಾದ ಸೂಚಕಕಾರ್ಯಗಳನ್ನು ಮಾಡಿದ್ದರೂ, ಅಲ್ಲಿ ಮೊದಲನೆಯ ವಿಶ್ವಾಸಿ ಸಂಘವನ್ನು ಪ್ರಾರಂಭಿಸಲು ಕೇವಲ 120 ಜನರು ಮಾತ್ರವೇ ಅಪೊಸ್ತಲರ ಜೊತೆ ಸೇರಿಕೊಂಡರು. ಇತರೆ ವಿಶ್ವಾಸಿಗಳು ಯಾವುದೋ ಒಂದು ಅಥವಾ ಇನ್ನೊಂದು ಕಾರಣದಿಂದ ಆ ಸಂಘವನ್ನು ಸೇರಿಕೊಳ್ಳಲಿಲ್ಲ ಎಂಬದರಲ್ಲಿ ಯಾವುದೇ ಸಂದೇಹವಿಲ್ಲ. 1 ಕೊರಿಂಥ 15:6 ರಲ್ಲಿ ಐನೂರು ಜನ ವಿಶ್ವಾಸಿಗಳು ಎಂದು ಬರೆಯಲಾಗಿದೆ ಆದರೆ ಬಹುಶಃ ಬಹುತೇಕ ಜನರು ಗಲಿಲಾಯದಲ್ಲಿ ಇದ್ದಿರಬಹುದು. ದೊಡ್ಡ ವ್ಯತ್ಯಾಸವೆಂದರೆ ಪಂಚಾಶತ್ತಮ ದಿನದಂದು 3000 ಜನರು ಪಶ್ಚಾತ್ತಾಪಪಟ್ಟು ಸುವಾರ್ತೆಯನ್ನು ನಂಬಿದರು (2:41. ಯೋಹಾನ 14:12; 16:7-8ರೊಂದಿಗೆ ಹೋಲಿಸಿ ನೋಡಿರಿ). **16**

**1:16** ಕರ್ತನಾದ ಯೇಸು ಕ್ರಿಸ್ತನಿಗೆ ಹಳೆಯ ಒಡಂಬಡಿಕೆಯ ಬಗ್ಗೆ ಇದ್ದ ಉನ್ನತವಾದ ಆಲೋಚನೆಯೇ ಪೇತ್ರನಿಗೂ ಇತ್ತು. ಹಳೆಯ ಒಡಂಬಡಿಕೆಯು ದೇವರಾತ್ಮನ ಪ್ರೇರೇಪಣೆಯಾಗಿದೆ ಅದನ್ನು ನೆರವೇರಿಸಬೇಕು ಎಂಬದಾಗಿ ಅವನು ನಂಬಿದ್ದನು. 4:25-26; ಮತ್ತಾಯ 4:4; 5:17-18; 15:3,6; ಲೂಕ 24:44-46; ಯೋಹಾನ 10:35ರೊಂದಿಗೆ ಹೋಲಿಸಿ ನೋಡಿರಿ. **17**

**- 1:17** ಮತ್ತಾಯ 10:1-4. **18-19**

**1:18-19** ಮತ್ತಾಯ 27:3-8. ಮಹಾಯಾಜಕರು ಹೊಲವನ್ನು ಕೊಂಡುಕೊಂಡರು, ಆದರೆ ಅದನ್ನು ಪುರಾವೆ ಸಮೇತವಾಗಿ ಯೂದನ ಹೆಸರಿನಲ್ಲಿ ಕೊಂಡುಕೊಂಡರು. ಯೂದನು ಅದನ್ನು "ಕೊಂಡುಕೊಂಡನು" ಎಂಬದಾಗಿ ಹೇಳಬಹುದು ಯಾಕಂದರೆ ಯೇಸು ಕ್ರಿಸ್ತನನ್ನು ಹಿಡಿದುಕೊಡುವದಕ್ಕಾಗಿ ಅವನು ಆ ಹಣವನ್ನು ಪಡೆದಿದ್ದನು, ಮತ್ತು ಆ ಹಣದಿಂದಲೇ ಹೊಲವನ್ನು ಕೊಂಡುಕೊಳ್ಳಲಾಯಿತು. ಅವನು ಉರುಲು ಹಾಕಿಕೊಂಡನು ಆದರೆ ಹಗ್ಗ ಅಥವಾ ಮರದ ಕೊಂಬೆ ಕಡಿದು ಹೋಗಿರಬಹುದು ಎಂಬದಾಗಿ ಅನ್ನಿಸುತ್ತದೆ, ಆದ್ದರಿಂದ ಅವನು ಕೆಳಗೆ ಬಿದ್ದಿರಬಹುದು ಮತ್ತು ಅದರ ಫಲಿತಾಂಶವನ್ನೇ ಇಲ್ಲಿ ವಿವರಿಸಲಾಗಿದೆ. **20**

**- 1:20** ಕೀರ್ತನೆ 69:25; 109:8. **21-22**

**1:21-22** ಯೇಸು ಕ್ರಿಸ್ತನು ಮಾಡಿದ ಕಾರ್ಯಗಳು ಮತ್ತು ಬೋಧಿಸಿದ ವಿಷಯಗಳನ್ನು ಅವರು ಕೇಳಿಸಿಕೊಂಡಿರುವದಕ್ಕೆ ಇಲ್ಲಿ ಪ್ರಾಮುಖ್ಯತೆ ಕೊಡಲಾಗಿರುವದನ್ನು ನೋಡಿರಿ. ಯೋಹಾನ 15:27ರೊಂದಿಗೆ ಹೋಲಿಸಿ ನೋಡಿರಿ. **23-26**

**1:23-26** ಈ ವಿಷಯದಲ್ಲಿ ಅವರು ಬುದ್ಧಿವಂತರಾಗಿ ನಡೆದುಕೊಂಡರೇ ಅಥವಾ ತಪ್ಪು ಮಾಡಿದರೇ? ಹೊಸ ಒಡಂಬಡಿಕೆಯಲ್ಲಿ ಮತ್ತೀಯನ ಕುರಿತು ಬೇರೆ ಎಲ್ಲಿಯೂ ಬರೆಯಲ್ಪಟ್ಟಿಲ್ಲ. "ಅವರು" ಇಬ್ಬರು ವ್ಯಕ್ತಿಗಳನ್ನು ಸೂಚಿಸಿದರು ಎಂಬದನ್ನು ಗಮನಿಸಿರಿ. ಅವರಿಬ್ಬರಲ್ಲಿ ಒಬ್ಬನನ್ನು ಕರ್ತನು ಆರಿಸಿಕೊಂಡಿದ್ದಾನೋ ಇಲ್ಲವೋ ಎಂಬದನ್ನು ತಿಳಿಯಲು ಅವರು ಚೀಟು ಹಾಕಿದರು. ಇಬ್ಬರ ಹೆಸರುಗಳನ್ನು ಸೂಚಿಸುವ ಮೊದಲು ಅವರು ಪ್ರಾರ್ಥನೆ ಮಾಡಿದ್ದಾರೋ ಇಲ್ಲವೋ ಎಂಬದು ಬರೆಯಲ್ಪಟ್ಟಿಲ್ಲ ಬದಲಾಗಿ ಅವರು ಸೂಚಿಸಿದ ನಂತರ ಪ್ರಾರ್ಥನೆ ಮಾಡಿದ್ದಾರೆ. ಕರ್ತನು ಅವರಿಬ್ಬರ ನಡುವೆಯೇ ಆಯ್ಕೆ ಮಾಡಬೇಕೆಂಬದು ಆತನಿಗೆ ಒತ್ತಾಯಪಡಿಸುವಂತೆ ಆಗುವದಿಲ್ಲವೇ? ಹನ್ನೆರೆಡು ಮಂದಿ ಅಪೊಸ್ತಲರಲ್ಲಿ ಒಬ್ಬನನ್ನಾಗಿ ಕರ್ತನು ನಂತರದಲ್ಲಿ ಪೌಲನನ್ನು ನೇಮಿಸಿದನು ಎಂಬದು ಈ ನೋಟ್ಸ್ ಗಳ ಬರಹಗಾರನಿಗೆ ಅನ್ನಿಸಿದಂತೆ ತೋರುತ್ತದೆ (ರೋಮಾ 1:1,5; 1 ಕೊರಿಂಥ 9:1; 15:8-10; 2 ಕೊರಿಂಥ 12:12; ಗಲಾ 1:1), ಮತ್ತು ದೇವರ ಪಟ್ಟಣದ ಅಸ್ತಿವಾರದ ಮೇಲೆ ಮತ್ತೀಯನ ಹೆಸರು ಕಾಣಿಸಿಕೊಂಡು ಪೌಲನ ಹೆಸರು ಕಾಣಿಸಿಕೊಳ್ಳದಿರುವದನ್ನು ಊಹಿಸಿಕೊಳ್ಳಲು ಆಗಲಿಲ್ಲ ಅನ್ನಿಸುತ್ತದೆ (ಪ್ರಕ 21:14). ಚೀಟು ಹಾಕುವದರ ಬಗ್ಗೆ ತಿಳಿಯಲು ಯಾಜಕ 16:8; ಯೆಹೋ 18:6,8,10; 1 ಸಮು 14:42; ನೆಹೆ 10:34 ನೋಡಿರಿ. **26**

**1:26** "*ಅಪೊಸ್ತಲರು*"– ಮತ್ತಾಯ 10:2ರಲ್ಲಿ ನೋಟ್ ನೋಡಿರಿ.

# 2 1

**2:1** "*ಪಂಚಾಶತ್ತಮ*"– ಎಂದರೆ "ಐವತ್ತನೆಯ." –ಇದು ಇಸ್ರಾಯೇಲ್ಯರ ಹಬ್ಬಗಳಲ್ಲಿ

ಒಂದು ಹಬ್ಬವಾಗಿದೆ. ಇದನ್ನು ವಾರಗಳ ಹಬ್ಬ ಎಂಬದಾಗಿಯೂ ಕರೆಯುತ್ತಾರೆ (ಯಾಜಕ 23:15-21ರ ನೋಟ್ಸ್ ನೋಡಿರಿ). ಪಂಚಾಶತ್ತಮ ಹಬ್ಬ ಮುಗಿದ ಐವತ್ತು ದಿನಗಳ ನಂತರ ಈ ಹಬ್ಬ ಬರುತ್ತದೆ. ಇದು ಸುಗ್ಗಿಯ ಹಬ್ಬವಾಗಿದೆ. ಪವಿತ್ರಾತ್ಮನು ಆ ದಿನದಲ್ಲಿ ಬರುವನು ಮತ್ತು ಜನರನ್ನು ಪಶ್ಚಾತ್ತಾಪ ಹಾಗೂ ಯೇಸು ಕ್ರಿಸ್ತನಲ್ಲಿನ ನಂಬಿಕೆಯ ಕಡೆಗೆ ನಡೆಸುವ ದೊಡ್ಡ ಸುಗ್ಗಿಯನ್ನು ಪ್ರಾರಂಭಿಸುವನು ಎಂಬದಕ್ಕೆ ಇದು ಸೂಕ್ತವಾಗಿ ಹೊಂದಿಕೊಳ್ಳುತ್ತದೆ (ವ 41). ಕಾಯುತ್ತಾ ಕುಳಿತ್ತಿದ್ದ ಶಿಷ್ಯರ ಮೇಲೆ ಪಂಚಾಶತ್ತಮ ದಿನದಂದು ದೇವರಾತ್ಮನು ಬಂದ ಈ ದಿನವು ಇಡೀ ಮಾನವ ಚರಿತ್ರೆಯಲ್ಲಿಯೇ ಅತ್ಯಂತ ವಿಶೇಷವಾದ ದಿನವಾಗಿದೆ. ಭೂಮಿಯ ಮೇಲೆ ಮಾನವರ ನಡುವೆ ದೇವರು ಮಾಡುತ್ತಿದ್ದ ಕಾರ್ಯಗಳಿಗೆ ಇದು ಹೊಸ ಪ್ರಾರಂಭವಾಗಿದೆ. ಹೊಸ ಯುಗ – ಕೃಪೆಯ ಯುಗ, ದೇವರಾತ್ಮನ ಯುಗ – ಉದ್ಘಾಟನೆಯಾಯಿತು. ಯೇಸು ಕ್ರಿಸ್ತನ ಸುವಾರ್ತೆಯನ್ನು ಭೂಮಿಯ ಕಟ್ಟಕಡೆಗೆ ತಲುಪಿಸುವ ಕಾರ್ಯವು ಆ ದಿನದಂದು ಪ್ರಾರಂಭವಾಯಿತು. ಆ ಸಮಯವು ಪ್ರಾರಂಭವಾಗಿದೆ ಎಂಬದನ್ನು ಸೂಚಿಸಲು ದೇವರು ಆಶ್ಚರ್ಯಕರವಾದ ಕಾರ್ಯಗಳು ಸೂಚನೆಯಾಗಿ ಅನುಗ್ರಹಿಸಿದನು. ವಿಮೋ 19:16-19ರಲ್ಲಿ ಬರೆಯಲ್ಪಟ್ಟಿರುವ ಧರ್ಮಶಾಸ್ತ್ರ ಯುಗದ ಪ್ರಾರಂಭದೊಂದಿಗೆ ಹೋಲಿಸಿ ನೋಡಿರಿ. **2**

**2:2** ಗ್ರೀಕ್ ನಂತೆಯೇ, ಇಬ್ರಿಯ ಭಾಷೆಯಲ್ಲಿಯೂ, ಈ ಪದದ ಅರ್ಥ ಗಾಳಿ (ಅಥವಾ ಉಸಿರು) ಮತ್ತು ಆತ್ಮ ಎಂಬದಾಗಿದೆ. ಆದ್ದರಿಂದ ಗಾಳಿಯು ದೇವರಾತ್ಮನ ಗುರುತಾಗಿರುವದು ಸಹಜವಾದ ಸಂಗತಿಯಾಗಿದೆ (ಯೋಹಾನ 3:8; ಯೆಹೆಜ್ಕೇಲ 37:9-14) ಮತ್ತು ಆತ್ಮನ ಬರೋಣವನ್ನು ಬಲವಾದ ಗಾಳಿ ಬೀಸುವ ಶಬ್ದ ಮೂಲಕ ಪ್ರಕಟಿಸಲಾಯಿತು ಎಂಬದು ಸಮಂಜಸವಾದದ್ದಾಗಿದೆ. **3**

**2:3** ಯೆಹೂದ್ಯರು ಬಹಳಷ್ಟು ಶತಮಾನಗಳಿಂದ ಬೆಂಕಿಯನ್ನು ದೇವರ ಪ್ರಸನ್ನತೆಯ ಗುರುತು ಎಂಬದಾಗಿ ಭಾವಿಸುತ್ತಿದ್ದರು (ವಿಮೋ 3:2 ರ ನೋಟ್ಸ್ ನೋಡಿರಿ). ದೇವರಾತ್ಮನು ಉಳಿದವರೆಲ್ಲರೊಂದಿಗೆ ಇದ್ದಾನೆ ಎಂಬದಕ್ಕೆ ಬೆಂಕಿಯು ಪ್ರತಿಯೊಬ್ಬ ಶಿಷ್ಯನಿಗೂ ಗುರುತಾಗಿತ್ತು. ಬೆಂಕಿಯ "ನಾಲಿಗೆಗಳು" ಅವರ ಪ್ರಥಮ ಕಾರ್ಯ ಏನು ಎಂಬದಕ್ಕೆ ಸೂಚನೆಯಾಗಿದೆ. ಅವರು ದೇವರ ಪರವಾಗಿ ಮಾತನಾಡುವವರಾಗಿದ್ದರು (1:8) ಮತ್ತು ದೇವರಾತ್ಮನೇ ಅವರಿಗೆ ಮಾತನಾಡುವ ಬಲವನ್ನು ಕೊಡುವವನಾಗಿದ್ದನು. ಆತ್ಮನ ಬರೋಣವು ಕರ್ತನಾದ ಯೇಸು ಕ್ರಿಸ್ತನ ಮಾತುಗಳ ನೆರವೇರುವಿಕೆಯಾಗಿದೆ (1:4-5; ಲೂಕ 24:49; ಯೋಹಾನ 14:16-17,26; 16:6). **4**

**2:4** *"ಪವಿತ್ರಾತ್ಮಭರಿತರಾದರು"*– ಕರ್ತನಾದ ಯೇಸು ಕ್ರಿಸ್ತನು 1:5 ರಲ್ಲಿ ಅವರಿಗೆ ವಾಗ್ದಾನ ಮಾಡಿದ್ದ ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಅವರು ಈಗ ಹೊಂದಿದರು ಮತ್ತು ಅದರ ಫಲಿತಾಂಶವೇ ಇದಾಗಿದೆ. 1:5ರ ನೋಟ್ಸ್ ನೋಡಿರಿ; ಹಾಗೆಯೇ ಎಫೆ 5:18 ನೋಡಿರಿ.

ವಿಶ್ವಾಸಿಗಳು ದೇವರಾತ್ಮಭರಿತರಾಗುವದು ಅತ್ಯಂತ ಪ್ರಾಮುಖ್ಯವಾದ ಕಾರ್ಯವಾಗಿದೆ. ಪಂಚಶಾತ್ತಮದಿನದಂದು ತುಂಬಿಸಲ್ಪಡುವಿಕೆಯೊಂದಿಗೆ ನಡೆದ ಕಾರ್ಯಗಳು ಪ್ರಾಮುಖ್ಯವಾದ ಕಾರ್ಯಗಳಲ್ಲ. ದೇವರು ಗುರುತುಗಳನ್ನು ಕೊಡುತ್ತಾನೆ ಅಥವಾ ತನಗೆ ಮನಸ್ಸು ಬಂದ ಹಾಗೆ ಅವುಗಳನ್ನು ತಡೆಹಿಡಿಯುತ್ತಾನೆ, ಆದರೆ ನಂಬಿಕೆಯಿಂದ ಆತನನ್ನು ಹುಡುಕುವವರಿಗೆ ಆತನು ಪವಿತ್ರಾತ್ಮನನ್ನು ಮತ್ತು ಆತನ ಸಂಪೂರ್ಣತೆಯನ್ನು ಉದಾರವಾಗಿ ಕೊಡುತ್ತಾನೆ (ವಚನ 39; ಲೂಕ 11:13). ಆಗ ಕಾಣಿಸಿಕೊಂಡ ಗುರುತುಗಳನ್ನು ನಾವೂ ಕೇಳಿಕೊಳ್ಳಬೇಕೆಂದು ದೇವರು ಸತ್ಯವೇದದಲ್ಲಿ ಎಲ್ಲಿಯೂ ಹೇಳಿಲ್ಲ (ಮತ್ತಾಯ 12:38-39 ರೊಂದಿಗೆ ಹೋಲಿಸಿ ನೋಡಿರಿ), ಹಾಗೆಯೇ ಸತ್ಯವೇದದಲ್ಲಿ ಎಲ್ಲಿಯೂ ನಾವು ಪವಿತ್ರಾತ್ಮನ ದೀಕ್ಷಾಸ್ನಾನ ಹೊಂದಬೇಕು ಅಥವಾ ಅದನ್ನು ಎದುರುನೋಡುವವರಾಗಿರಬೇಕೆಂದು ಆಜ್ಞಾಪಿಸಿಲ್ಲ (ಇದನ್ನು ನೋಡಬೇಕಾಗಿರುವದು ಪ್ರಾಮುಖ್ಯವಾಗಿದೆ) ಆದರೆ ನೀವು ನನ್ನ ಆತ್ಮಭರಿತರಾಗಬೇಕು ಎಂಬದಾಗಿ ಆತನು ಆಜ್ಞಾಪಿಸಿದ್ದಾನೆ. ಒಬ್ಬ ವ್ಯಕ್ತಿಯು ಪವಿತ್ರಾತ್ಮಭರಿತನಾಗುವಾಗ ಜೊತೆಯಲ್ಲಿ ಯಾವುದೇ ಗುರುತುಗಳು ಕಾಣಿಸಿಕೊಳ್ಳದಿದ್ದರೆ, ತಾನು ಪವಿತ್ರಾತ್ಮಭರಿತನಾಗಿದ್ದೇನೆ ಎಂದು ಆತನಿಗೆ ಗೊತ್ತಾಗುತ್ತದೆಯೇ? ಖಂಡಿತವಾಗಿಯೂ. ಅವನಿಗೆ ನಂಬಿಕೆಯಿಂದ ಗೊತ್ತಾಗುತ್ತದೆ (1 ಯೋಹಾನ 5:14-15), ಆದರೆ ಅವನ ನಂಬಿಕೆಯು ದೇವರ ವಾಗ್ದಾನಗಳ ಮೇಲೆ ಆಧಾರವಾಗಿರಬೇಕು. ಮತ್ತು ನಂತರದಲ್ಲಿ ತಾನು ಪವಿತ್ರಾತ್ಮನಭರಿತನಾಗಿರುವದು ಅವನಿಗೆ ಅವನ ಅನುಭವಗಳಿಂದಲೇ ಗೊತ್ತಾಗುತ್ತದೆ – ಅವನಿಗೆ ಪರಿಶುದ್ಧನಾಗಿ ಜೀವಿಸಲು ಮತ್ತು ಆತನಿಗೆ ಸಾಕ್ಷಿಯಾಗಿ ಆತನ ಸೇವೆ ಮಾಡಲು ಅವನಲ್ಲಿ ಶಕ್ತಿಯಿರುತ್ತದೆ (ಎಫೆ 5:19-21 ನೋಡಿರಿ). ಆ ದಿನದಂದು ಅಪೊಸ್ತಲರು “ಬೇರೆಬೇರೆ ಭಾಷೆಗಳಿಂದ ಮಾತನಾಡಿದರು” ಪದಗಳ ಅರ್ಥವನ್ನು ತಿಳಿಯಲು 11ನೇ ವಚನವನ್ನು ನೋಡಿರಿ. ಇಲ್ಲಿ “ಭಾಷೆಗಳು” ಎಂಬದಾಗಿ ಭಾಷಾಂತರ ಮಾಡಲಾಗಿರುವ ಪದದ ಅರ್ಥ ನಮ್ಮ ನಾಲಿಗೆ ಮತ್ತು ಭಾಷೆಗಳು ಎರಡೂ ಆಗಿದೆ. ಈ ಪದವನ್ನು “ಅವರು ಬೇರೆಬೇರೆ ಭಾಷೆಗಳಲ್ಲಿ ಮಾತನಾಡಲು ಪ್ರಾರಂಭಿಸಿದರು” ಎಂಬದಾಗಿ ಭಾಷಾಂತರ ಮಾಡಿರುವದು ಸೂಕ್ತವಾಗಿದೆ. **5-13**

**2:5-13** ದೇವರಲ್ಲಿ ಭಯಭಕ್ತಿಯುಳ್ಳ ಈ ಯೆಹೂದ್ಯರು ಯೂದಾಯದ ನಿವಾಸಿಗಳಾಗಿದ್ದರು (ವ 9) ಅಥವಾ ಹೊರಗಡೆಯಲ್ಲಿ ಜೀವಿಸುವವರಾಗಿದ್ದರು ಮತ್ತು ಯೆರೂಸಲೇಮಿಗೆ ಹಿಂದಿರುಗಿದ್ದರು – ಕೆಲವರು ಅಲ್ಲಿಯೇ ಜೀವಿಸಲು ಬಂದಿದ್ದರು ಮತ್ತು ಇನ್ನೂ ಕೆಲವರು ಪಸ್ಕ ಹಬ್ಬ ಹಾಗೂ ಪಂಚಾಶತ್ತಮ ಹಬ್ಬಕ್ಕಾಗಿ ಬಂದಿದ್ದರು. ಹದಿನೈದು ವಿವಿಧ ಸ್ಥಳಗಳ ಹೆಸರುಗಳನ್ನು ಬರೆಯಲಾಗಿದೆ, ಈಗ ಇರಾನ್ ಎಂಬದಾಗಿ ಕರೆಯಲ್ಪಡುವ ಸ್ಥಳದ ಪೂರ್ವದಿಂದ ರೋಮ್ ನ ಪಶ್ಚಿಮದ ತನಕ ಇರುವ ಸ್ಥಳಗಳಿಂದ ಜನರು ಅಲ್ಲಿಗೆ ಬಂದಿದ್ದರು. ಆ ದಿನ ಎರಡು ವಿಭಿನ್ನ ರೀತಿಯ ಜನರು ಸೇರಿ ಬಂದಿದ್ದರು. ಕೆಲವರು

“ಭ್ರಮೆಯುಳ್ಳವರಾಗಿದ್ದರು” (ವ 6), “ಆಶ್ಚರ್ಯಪಡುವವರಾಗಿದ್ದರು” (ವ 7), ಮತ್ತು “ಕಳವಳಗೊಳ್ಳುವವರಾಗಿದ್ದರು” (ವ 12). ಅಪರಿಚಿತವಾದ ಮತ್ತು ಅದ್ಭುತವಾದ ಕಾರ್ಯವು ಸಂಭವಿಸುತ್ತಿದೆ, ಅದನ್ನು ವಿವರಿಸಲು ಆಗುವದಿಲ್ಲ ಎಂಬದು ಅವರಿಗೆ ಗೊತ್ತಿತ್ತು. ಇನ್ನೂ ಕೆಲವರಂತೂ ನಡೆಯುತ್ತಿರುವ ಕಾರ್ಯಗಳೆಲ್ಲವನ್ನೂ ಬಲ್ಲವರಾಗಿದ್ದರು (ವ 13). ಅವರು ಹೊಸದಾದ ಅಥವಾ ಅಪರಿಚಿತವಾದ ಯಾವುದೇ ಕಾರ್ಯಗಳು ಸಂಭವಿಸಿದರೂ ಅವುಗಳನ್ನು ತಿರಸ್ಕರಿಸುವ ಮತ್ತು ಗೇಲಿ ಮಾಡುವ ಹಾಗೂ ಎಲ್ಲವುಗಳಿಗೂ ತಮ್ಮ ಬಳಿ ಉತ್ತರವಿದೆ ಎಂದು ಯೋಚಿಸುವ ಜನರಾಗಿದ್ದರು. ಮಾನವ ಚರಿತ್ರೆಯ ಅತ್ಯಂತ ಪ್ರಾಮುಖ್ಯವಾದ ದಿನವು ಪ್ರಾರಂಭವಾಯಿತು, ಆದರೆ ಅವರು ಗೇಲಿ ಮಾಡುತ್ತಿದ್ದರು. ಯಾವುದೇ ಕಾಲಮಾನದಲ್ಲಾದರೂ ದೇವರಾತ್ಮ ಭರಿತರಾಗುವ ಜನರು ಎರಡೂ ರೀತಿಯ ಜನರನ್ನು ಸಂಧಿಸುತ್ತಾರೆ. **7**

**2:7** ಗಲಿಲಾಯದ ಯೆಹೂದ್ಯರು ಮಾತನಾಡುತ್ತಿದ್ದ ಭಾಷೆ ಅವರನ್ನು ಇತರ ಯೆಹೂದ್ಯರಿಗೆ ತಮ್ಮನ್ನು ಪರಿಚಯಪಡಿಸುವಂಥದ್ದಾಗಿತ್ತು (ಮಾರ್ಕ 14:70). **11**

**2:11** ಇದನ್ನು ಮೂರು ಸಲ ಹೇಳಲಾಗಿದೆ (ವಚನ 6,8). ದೇವರು ಆ ಶಿಷ್ಯರಿಗೆ ಅನ್ಯಭಾಷೆಯನ್ನು ಮಾತನಾಡುವ ಸಾಮರ್ಥ್ಯವನ್ನು ತಕ್ಷಣವೇ ಕೊಟ್ಟನು ಅದನ್ನು ಅವರು ಎಂದಿಗೂ ಕಲಿತುಕೊಂಡಿರಲಿಲ್ಲ. ಅವರ ಮಾತುಗಳನ್ನು ಕೇಳಿಸಿಕೊಂಡವರು ಅವುಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಂಡರು (ಆದರೆ ಶಿಷ್ಯರಿಗೆ ತಾವು ಮಾತನಾಡುತ್ತಿದ್ದ ಭಾಷೆ ಅರ್ಥವಾಯಿತೋ ಇಲ್ಲವೋ ಎಂಬದನ್ನು ಪ್ರಕಟಪಡಿಸಲಾಗಿಲ್ಲ). ಕೆಲವು ಜನರು ಕಲಿಸುವದೇನೆಂದರೆ ಅನ್ಯಭಾಷೆಗಳಲ್ಲಿ ಮಾತನಾಡುವದು ದೇವರಾತ್ಮನ ದೀಕ್ಷಾಸ್ನಾನದೊಂದಿಗೆ ಕಾಣಿಸಿಕೊಳ್ಳುವ ನಿಶ್ಚಯವಾದ ಗುರುತಾಗಿದೆ. ಅಪೊಸ್ತಲರು “ಅನ್ಯಭಾಷೆಗಳಲ್ಲಿ” ಮಾತನಾಡಿದಾಗ ಅಲ್ಲಿದ್ದ ಜನರಿಗೆ ಅರ್ಥವಾಗುವ ಭಾಷೆಯನ್ನು ಮಾತನಾಡಿದರು ಎಂಬದನ್ನು ಇಲ್ಲಿ ನಾವು ನೋಡಬಹುದಾಗಿದೆ. ಈ ನೋಟ್ಸ್ ಗಳ ಗ್ರಂಥಕರ್ತರು ಈ ಗುರುತು ಆತ್ಮನ ದೀಕ್ಷಾಸ್ನಾನದೊಂದಿಗೆ ಯಾವಾಗಲೂ ಕಾಣಿಸಿಕೊಳ್ಳುತ್ತದೆ ಎಂಬದನ್ನು ನಂಬುವದಿಲ್ಲ, ಯಾಕಂದರೆ ಆ ರೀತಿಯ ಅನುಭವವು ನಮ್ಮ ಸಮಯದಲ್ಲಿ ಅತ್ಯಂತ ಅಪರೂಪವಾಗಿದೆ ಮತ್ತು ಸಭೆಯ ಇಡೀ ಚರಿತ್ರೆಯಲ್ಲಿಯೇ ಅಸಹಜವಾದ ಕಾರ್ಯವಾಗಿದೆ. ಬಹುತೇಕ ಸಂಖ್ಯೆಯ ಜನರು ಪವಿತ್ರಾತ್ಮನ ದೀಕ್ಷಾಸ್ನಾನ ಹೊಂದಿದರು ಮತ್ತು ಪವಿತ್ರಾತ್ಮಭರಿತರಾಗಿ “ಅನ್ಯಭಾಷೆಗಳನ್ನು” (ತಮಗೆ ಗೊತ್ತಿಲ್ಲದ ಭಾಷೆ) ಮಾತನಾಡಿದರು ಎಂದು ನಮಗೆ ಗೊತ್ತಿದೆ. “ಗುರುತುಗಳ” ಬಗ್ಗೆ ತಿಳಿಯಲು 4ನೇ ವಾಕ್ಯದ ನೋಟ್ಸ್ ನೋಡಿರಿ. “ಅನ್ಯಭಾಷೆಗಳ” ಕುರಿತಾದ ಹೆಚ್ಚಿನ ಮಾಹಿತಿಗೆ 10:46; 1 ಕೊರಿಂಥ 12:10,28,30; 13:1,8; 14:5-6,18,21,22,23,39 ನೋಡಿರಿ. **13**

**2:13** ಶಿಷ್ಯರು ಮದ್ಯಪಾನ ಮಾಡಿದ್ದಾರೆ ಎಂಬ ಆರೋಪವು ಬಹಳ ಅರ್ಥವುಳ್ಳದ್ದಾಗಿದೆ.

“ಮದ್ಯಪಾನ ಮಾಡಿದ್ದಾರೆ” ಎಂದರೆ ಮದ್ಯದ ಅಮಲು ಅಥವಾ ನಿಯಂತ್ರಣದಲ್ಲಿರುವದಾಗಿದೆ. ಶಿಷ್ಯರಾದರೋ ದೇವರಾತ್ಮನ ಪ್ರಭಾವ ಮತ್ತು ನಿಯಂತ್ರಣದಲ್ಲಿದ್ದರು. ಅವರ ನಡವಳಿಕೆಯು ಸಹಜ ಮತ್ತು ಸಾಮಾನ್ಯ ಜನರ ಹಾಗೆ ಇರಲಿಲ್ಲ ಎಂಬದನ್ನು ಸೇರಿ ಬಂದಿದ್ದ ಜನರೆಲ್ಲರೂ ನೋಡಿದ್ದರು. ಎಫೆ 5:18 ರೊಂದಿಗೆ ಹೋಲಿಸಿ ನೋಡಿರಿ. ಪವಿತ್ರಾತ್ಮಭರಿತತೆಯು ಜನರು ಅಂದುಕೊಳ್ಳುವ ಸಹಜ ರೀತಿಗಿಂತಲೂ ಮಾನವರನ್ನು ಉನ್ನತ ಸ್ಥಿತಿಗೆ ನಡೆಸುತ್ತದೆ. **14**

**2:14** ಪೇತ್ರನು ಯೇಸು ಕ್ರಿಸ್ತನು ಭೂಲೋಕದಲ್ಲಿ ಇರುವ ಸಮಯದಲ್ಲಿ ಇತರರ ಪರವಾಗಿ ಮಾತನಾಡುವ ವ್ಯಕ್ತಿಯಾಗಿದ್ದ ಹಾಗೆಯೇ ಈಗಲೂ ಹನ್ನೆರಡು ಮಂದಿ ಅಪೊಸ್ತಲರ ಪರವಾಗಿ ಮಾತನಾಡಿದನು. ಇಲ್ಲಿ ಈ ಹೊಸ ಯುಗದ ಮೊದಲನೆಯ ಪ್ರಸಂಗ ಪ್ರಾರಂಭವಾಯಿತು. ಅದರ ಧ್ಯೇಯ ಪವಿತ್ರಾತ್ಮನು ಮತ್ತು ಕರ್ತನಾದ ಯೇಸು ಕ್ರಿಸ್ತನ ಮರಣ, ಪುನರುತ್ಥಾನ ಹಾಗೂ ಸ್ವರ್ಗಾರೋಹಣವಾಗಿತ್ತು. **15**

**2:15** ದೇವರಿಗೆ ಭಯಪಡುವವರಾಗಿದ್ದ ಯೆಹೂದ್ಯರು ಮುಂಜಾನೆ ಮದ್ಯವನ್ನು ಕುಡಿದಿರಲಿಲ್ಲ. ಅವರು ಮಾಂಸಾಹಾರದೊಂದಿಗೆ ಮಾತ್ರವೇ ಮದ್ಯವನ್ನು ಕುಡಿಯುತ್ತಿದ್ದರು ಮತ್ತು ಮಾಂಸವನ್ನು ಸಂಜೆಯ ಹೊತ್ತಿನಲ್ಲಿ ಮಾತ್ರವೇ ತಿನ್ನುತ್ತಿದ್ದರು. **16**

**2:16** 17-21 ವಚನಗಳನ್ನು ಯೋವೇಲ 2:28-32 ರಿಂದ ತೆಗೆದುಕೊಳ್ಳಲಾಗಿದೆ (32ನೇ ವಚನದ ಕಡೆಯ ಭಾಗವನ್ನು ತೆಗೆದುಹಾಕಲಾಗಿದೆ). “ಪ್ರವಾದಿಯ ಮೂಲಕ ಹೇಳಿಸಿದ ಸಂಗತಿ ಏನೆಂದರೆ” ಪಂಚಶತ್ತಮ ದಿನದಂದು ನನ್ನ ಆತ್ಮವನ್ನು ಕಳುಹಿಸುತ್ತೇನೆ ಎಂದು ಮಾಡಿದ ವಾಗ್ದಾನವನ್ನು ದೇವರು ನೆರವೇರಿಸುವನು. **17**

**2:17** “ಕಡೇ ದಿವಸಗಳಲ್ಲಿ . . . ದೇವರು ಹೇಳುತ್ತಾನೆ” – ಎಂಬ ಪದಗಳು ಇಬ್ರಿಯ ಆವೃತ್ತಿಯ ಯೋವೇಲ 2:28ರಲ್ಲಿ ಇಲ್ಲ ಬದಲಾಗಿ “ಮತ್ತು ಆದಾದ ನಂತರ” ಎಂಬ ಅರ್ಥದ ಪದಗಳು ಮಾತ್ರವೇ ಇವೆ. ಕೆಲವೊಮ್ಮೆ ಹೊಸ ಒಡಂಬಡಿಕೆಯಲ್ಲಿ “ಕಡೆಯ ದಿವಸಗಳು” ಅಥವಾ “ಕಡೆಯ ಸಮಯ” ಎಂದರೆ ಯೇಸು ಕ್ರಿಸ್ತನ ಬರೋಣದ ಪ್ರಾರಂಭ ಮತ್ತು ಆತನ ಎರಡನೇ ಬರೋಣದ ತನಕದ ದಿವಸಗಳನ್ನು ಸೂಚಿಸುತ್ತದೆ – ಇಬ್ರಿ 1:3; ಯಾಕೋಬ 5:2; 1 ಪೇತ್ರ 1:20; 2 ಪೇತ್ರ 3:3; 1 ಯೋಹಾನ 2:18 (“ಕಡೇ ಗಳಿಗೆ”); ಯೂದ 18. ದೇವರು “ಎಲ್ಲಾ ಜನರ” ಮೇಲೆ ತನ್ನ ಆತ್ಮವನ್ನು ಸುರಿಸುವದಾಗಿ ವಾಗ್ದಾನ ಮಾಡಿದನು. ಪಂಚಾಶತ್ತಮವು ಆ ವಾಗ್ದಾನದ ಅರ್ಧ ನೆರವೇರುವಿಕೆ ಮಾತ್ರವೇ ಆಗಿದೆ, ಯಾಕಂದರೆ ಯೆಹೂದ್ಯರು ಮತ್ತು ಯೆಹೂದ್ಯರಲ್ಲಿ ಯೇಸು ಕ್ರಿಸ್ತನನ್ನು ಅಂಗೀಕರಿಸಿಕೊಂಡವರು ಮಾತ್ರವೇ ಅಂದು ಪವಿತ್ರಾತ್ಮನನ್ನು ಪಡೆದುಕೊಂಡರು. ಹೆಚ್ಚಿನ ನೆರವೇರುವಿಕೆಯನ್ನು ನಾವು ಅಪೊ 8:17; 10:44-45; 19:6 ರಲ್ಲಿ ನೋಡುತ್ತೇವೆ. ಯೇಸು ಕ್ರಿಸ್ತನ ಸುವಾರ್ತೆಯು ಲೋಕದಾದ್ಯಂತ ಹರಡಿಕೊಂಡಾಗ ಹೆಚ್ಚೆಚ್ಚು ದೇಶಗಳ ಜನರು

ಪವಿತ್ರಾತ್ಮನನ್ನು ಹೊಂದಿದರು ಮತ್ತು ಈ ವಿಧಾನವು ಈ ಯುಗದ ಕೊನೆಯ ತನಕ ಸಾಗುತ್ತಿರುವದು (ವ 20). "ಗಂಡಸರು" ಮತ್ತು "ಹೆಂಗಸರು", "ಯೌವನಸ್ಥರು" ಮತ್ತು "ವೃದ್ಧರು"–ಯಾವುದೇ ವ್ಯತ್ಯಾಸವಿಲ್ಲದೆ ದೇವರಾತ್ಮನನ್ನು ಹೊಂದುವರು. ಪ್ರವಾದಿಯ ಕುರಿತಾದ ನೋಟ್ಸ್ ಸಂಖ್ಯಾ 11:25 ರಲ್ಲಿ ನೋಡಿರಿ. ದರ್ಶನಗಳು ಮತ್ತು ಕನಸುಗಳ ಬಗ್ಗೆ ತಿಳಿಯಲು 18:9-10; ಆದಿ 15:1; ಸಂಖ್ಯಾ 15:6 ನೋಡಿರಿ. **18**

**2:18** *"ನನ್ನ ದಾಸದಾಸಿಯರು"*– ದೇವರು ತನ್ನ ಆತ್ಮನನ್ನು ಹುದುವಾಗಿ ಲೋಕದ ಜನರಿಗೆ ಕೊಡುವದಿಲ್ಲ ಬದಲಾಗಿ ಆತನಲ್ಲಿ ಭರವಸೆಯನ್ನಿಡುವ ಮೂಲಕ ಅತನ ದಾಸದಾಸಿಯರಾಗಿರುವವರಿಗೆ ಕೊಡುತ್ತಾನೆ. ಯೋಹಾನ 14:17 ನೋಡಿರಿ. **19-20**

**2:19-20** ಕರ್ತನ ದಿನವು ಈ ಯುಗದ ಸಮಾಪ್ತಿಯಲ್ಲಿ ಪ್ರಾರಂಭಗೊಳ್ಳುತ್ತದೆ ಮತ್ತು ಯೇಸು ಕ್ರಿಸ್ತನ ಎರಡನೇ ಬರೋಣವನ್ನು ಒಳಗೊಂಡಿರುತ್ತದೆ. ಯೆಶಾಯ 13:6-13; ಯೋವೇಲ 1:15; 1 ಥೆಸ 5:2; 2 ಥೆಸ 2:2; 2 ಪೇತ್ರ 3:10 ರ ನೋಟ್ಸ್ ನೋಡಿರಿ. ಬೇರೆ ವಾಕ್ಯಗಳಲ್ಲಿ ನೋಡುವಾಗ ಸೂರ್ಯ ಮತ್ತು ಚಂದ್ರನಲ್ಲಾಗುವ ಗುರುತುಗಳು ಆ ದಿನಕ್ಕೆ ಸಂಬಂಧಿಸಿದವುಗಳಾಗಿವೆ (ಯೆಶಾಯ 13:9-10; ಮತ್ತಾಯ 24:29-30; ಪ್ರಕ 6:12-17). 19ನೇ ವಚನದಲ್ಲಿ ಸೂಚಿಸಲಾಗಿರುವ ಗುರುತುಗಳನ್ನು ಪ್ರಕ 8:7-8,10; 9:2,17,18; 16:3-4,8ರಲ್ಲಿಯೂ ನೋಡಬಹುದಾಗಿದೆ. ಅಪೊಸ್ತಲರ ಕೃತ್ಯಗಳಲ್ಲಿರುವ ಈ ಸಂದರ್ಭದ ಮೂಲಕ 17, 18ನೇ ವಚನಗಳಲ್ಲಿ ವಿವರಿಸಲಾಗಿರುವ ದೇವರಾತ್ಮ ಕಾರ್ಯಗಳು ಕರ್ತನ ದಿನವು ಪ್ರಾರಂಭವಾಗುವ ತನಕ ಮುಂದುವರೆಯುವವು ಎಂದು ನಾವು ಹೇಳಬಹುದು. **21**

**2:21** ಯೆಶಾಯ 55:6-7; ರೋಮಾ 10:12-13; 1 ಕೊರಿಂಥ 1:2 ನೋಡಿರಿ. ಕರ್ತನ ನಾಮವನ್ನು ಹೇಳಿಕೊಳ್ಳುವದೆಂದರೆ ಆತನಿಂದ ರಕ್ಷಣೆಯನ್ನು ಬೇಡಿಕೊಳ್ಳುವದು, ಪಶ್ಚಾತ್ತಾಪಪಟ್ಟು ನಂಬಿಕೆಯಿಂದ ಆತನ ಕಡೆಗೆ ತಿರುಗಿಕೊಳ್ಳುವದಾಗಿದೆ. ತಾನು ಕರ್ತನು ಎಂದು ಯಾರನ್ನು ಕರೆಯುತ್ತಿದ್ದಾನೆ ಎಂಬದನ್ನು ಪೇತ್ರನು ಬೇಗನೇ ಪ್ರಕಟಿಸಿದನು. ಯೋವೇಲನ ಪುಸ್ತಕದಲ್ಲಿ ಇಬ್ರಿಯದಲ್ಲಿ ಯೆಹೋವ ಎಂದು ಬರೆಯಲಾಗಿದೆ. ಇಲ್ಲಿ ಪೇತ್ರನು ಕರ್ತನಾದ ಯೇಸು ಕ್ರಿಸ್ತನ ಬಗ್ಗೆ ಮಾತನಾಡುತ್ತಿದ್ದಾನೆ (ವ 38). ಯೆಹೋವನೇ ಯೇಸು ಕ್ರಿಸ್ತನಾಗಿ ಬಂದನು ಎಂಬದಕ್ಕೆ ಹೊಸ ಒಡಂಬಡಿಕೆಯಲ್ಲಿರುವ ಪುರಾವೆಗಳಲ್ಲಿ ಇದೂ ಒಂದು ಪುರಾವೆಯಾಗಿದೆ. ಇತರೆ ಪುರಾವೆಗಳನ್ನು ಲೂಕ 2:11ರಲ್ಲಿ ನೋಡಿರಿ. **22**

**2:22** 12,13 ವಚನಗಳಲ್ಲಿ ಕಾಣಿಸಿಕೊಳ್ಳುವ ಪ್ರಶ್ನೆಯ ಕುರಿತಾದ ವಿವರಣೆಯನ್ನು 14-21 ವಚನಗಳಲ್ಲಿ ನಾವು ನೋಡಬಹುದಾಗಿದೆ. ಇಲ್ಲಿ ಪೇತ್ರನು ತನ್ನ ಸಂದೇಶದ ಮುಖ್ಯ ವಿಷಯಕ್ಕೆ ಬಂದಿದ್ದಾನೆ. ಯೇಸು ಕ್ರಿಸ್ತನು ಅವನನ್ನು ಸಾಕ್ಷಿಯಾಗಿ ನೇಮಿಸಿದನು (1:8) ಮತ್ತು ಈ ಕಾರ್ಯಕ್ಕಾಗಿ ಪವಿತ್ರಾತ್ಮನು ಅವನನ್ನು ಬಲಪಡಿಸಿದನು (2:4). ಈಗ ಅವನು ಸಾಕ್ಷಿ ಕೊಡುತ್ತಿದ್ದಾನೆ ಮತ್ತು ಅವನ ಮಾತುಗಳು ಸಂಪೂರ್ಣವಾಗಿ ಕ್ರಿಸ್ತನ ಕುರಿತಾಗಿಯಾಗಿವೆ.

ನಜರೇತಿನ ಯೇಸು ಕ್ರಿಸ್ತನು ದೇವರ "ಸಮ್ಮತಿಯುಳ್ಳವನಾಗಿದ್ದನು" (ಯೋಹಾನ 5:36; 10:37-38 ನೋಡಿರಿ. ಸೂಚಕಕಾರ್ಯಗಳು ಮತ್ತು ಅದ್ಭುತಕಾರ್ಯಗಳ ನೋಟ್ಸ್ ಯೋಹಾನ 2:11; ಮತ್ತಾಯ 8:1 ರಲ್ಲಿ ನೋಡಿರಿ). **23**

**2:23** ಮಾನವರ ಪಾಪಗಳ ಪರಿಹಾರವಾಗಿ ಶಿಲುಬೆಯ ಮೇಲೆ ಪ್ರಾಣ ಕೊಡಬೇಕು ಎಂಬ ನಿರ್ದಿಷ್ಟವಾದ ಉದ್ದೇಶದಿಂದಲೇ ದೇವರು ಯೇಸು ಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿದನು (ಮತ್ತಾಯ 20:28; 26:27-28; ಯೋಹಾನ 1:29; 3:14-16; 6:51; 10:11). ಆದರೆ ದುಷ್ಟರು ಆತನು ಶಿಲುಬೆಗೆ ಹಾಕಿಸಿದರು ಮತ್ತು ಅದರ ನಿಮಿತ್ತ ಅಪರಾಧಿಗಳಾದರು. **24**

**2:24** ಮತ್ತಾಯ 28:6. ಕರ್ತನಾದ ಯೇಸು ಕ್ರಿಸ್ತನನ್ನು ತಡೆಯಲು ಮರಣಕ್ಕೆ ಅಸಾಧ್ಯವಾಗಿತ್ತು ಯಾಕಂದರೆ ಅದು ತಡೆಯಬಾರದೆಂಬದು ದೇವರ ಉದ್ದೇಶವಾಗಿತ್ತು. ದೇವರು ಆತನಿಗೆ ಮರಣದ ಮೇಲೆಯೂ ಅಧಿಕಾರ ಕೊಟ್ಟಿದ್ದನು (ಯೋಹಾನ 10:17-18). **25-29**

**2:25-29** ಯೇಸು ಕ್ರಿಸ್ತನ ಪುನರುತ್ಥಾನವು ಕೀರ್ತನೆ 16:8-11 (ಇದರ ನೋಟ್ಸ್ ನೋಡಿರಿ) ವಾಕ್ಯಗಳ ನೆರವೇರುವಿಕೆಯಾಗಿದೆ ಎಂಬದನ್ನು ಪೇತ್ರನು ಇಲ್ಲಿ ತೋರಿಸಿದ್ದಾನೆ. ಒಂದುವೇಳೆ ಕ್ರಿಸ್ತನು ಎದ್ದು ಬಂದಿರಲಿಲ್ಲವೆಂದರೆ, ವಾಕ್ಯಗಳು ಸುಳ್ಳಾಗುತ್ತಿದ್ದವು, ಇದು ಅಸಾಧ್ಯವಾದ ಕಾರ್ಯವಾಗಿದೆ. (ಯೋಹಾನ 10:35; ಮತ್ತಾಯ 5:17-18). **27**

**2:27** "*ಪಾತಾಳ*"– ಗ್ರೀಕ್ ಭಾಷೆಯಲ್ಲಿ "ಅಧೋಲೋಕ", ಇಬ್ರಿಯ ಭಾಷೆಯಲ್ಲಿ "ಮೃತ್ಯು ಲೋಕ" – ಆದಿ 37:35ರ ನೋಟ್ಸ್ ನೋಡಿರಿ. **29**

**2:29** ಕೀರ್ತನೆ 16:8-11 ದಾವೀದನ ವಿಷಯದಲ್ಲಿ ನೆರವೇರಲಿಲ್ಲ ಎಂಬದನ್ನು ಪೇತ್ರನು ತೋರಿಸಿದ್ದಾನೆ (1 ಅರಸು 2:10-12). ದಾವೀದನು ಪುನರುತ್ಥಾನಗೊಳ್ಳಲಿಲ್ಲ. **30**

**2:30** 2 ಸಮು 7:8-16; ಕೀರ್ತನೆ 89:3-4,20-37. ದಾವೀದನು ದೊಡ್ಡ ಪ್ರವಾದಿಯಾಗಿದ್ದನು ಮತ್ತು ದೇವರಾತ್ಮನ ಪ್ರೇರಣೆಯ ಮೂಲಕ ತನ್ನ ಕೀರ್ತನೆಗಳಲ್ಲಿ ಯೇಸು ಕ್ರಿಸ್ತನ ಬಗ್ಗೆ ಅನೇಕ ವಿಷಯಗಳನ್ನು ಪ್ರವಾದಿಸಿದ್ದಾನೆ (ಲೂಕ 24:44). ಪ್ರವಾದಿಯ ಕುರಿತಾದ ನೋಟ್ಸ್ ಗಾಗಿ ಆದಿ 20:7 ನೋಡಿರಿ. **31**

**2:31** "*ಕ್ರಿಸ್ತನು*"– ಮತ್ತಾಯ 1:1.

"*ಪಾತಾಳ*"– ಗ್ರೀಕ್ ಭಾಷೆಯಲ್ಲಿ "ಅಧೋಲೋಕ." **32**

**2:32** "*ಸಾಕ್ಷಿ*"– 1:8. **33**

**2:33** ಎಫೆ 1:19-21; ಫಿಲಿಪ್ಪಿ 2:9-11. "ಬಲಗಡೆ" ಗೌರವದ ಸ್ಥಳವಾಗಿದೆ.

"*ಪವಿತ್ರಾತ್ಮನು*"– ಯೋಹಾನ 14:16-17,26. ಕರ್ತನಾದ ಯೇಸು ಕ್ರಿಸ್ತನು ಈಗಲೂ ಎಲ್ಲಿ ಬೇಕಾದರೂ ತನ್ನ ಬಯಕೆಗನುಸಾರವಾಗಿ ತನ್ನ ಆತ್ಮವನ್ನು "ಸುರಿಸುತ್ತಾನೆ." ಆತನು ಪೂರ್ಣ ಅಧಿಕಾರವುಳ್ಳವನಾಗಿದ್ದಾನೆ (ಮತ್ತಾಯ 28:18; ಯೋಹಾನ 17:2). **34-35**

**2:34-35** ಇದು ಯೇಸು ಕ್ರಿಸ್ತನ ವಿಷಯವಾಗಿ ಬರೆಯಲ್ಪಟ್ಟಿರುವ ಮತ್ತೊಂದು ಪ್ರಸಿದ್ಧ ಕೀರ್ತನೆಯ ವಚನಭಾಗವಾಗಿದೆ – ಕೀರ್ತನೆ 110:1. ಪೇತ್ರನ ಸಂಕ್ಷಿಪ್ತವಾದ ಸಂದೇಶದಲ್ಲಿ ಇದು ಮೂರನೆಯ ವಚನಭಾಗವಾಗಿದೆ. ಯೇಸು ಕ್ರಿಸ್ತನು ತನ್ನ ಶಿಷ್ಯರ ತಿಳುವಳಿಕೆಯನ್ನು ತೆರೆದಿದ್ದನು ಮತ್ತು ಅವರಿಗೆ ವಾಕ್ಯಗಳನ್ನು ಕಲಿಸಿದನು (ಲೂಕ 24:44-45). **36**

**2:36** ಪೇತ್ರನು ಉಪಯೋಗಿಸಿದ ಹಳೆಯ ಒಡಂಬಡಿಕೆಯ ವಚನಭಾಗಗಳು ಯೇಸು ಕ್ರಿಸ್ತನೇ, ಇಸ್ರಾಯೇಲ್ಯರ ಮೆಸ್ಸೀಯನು ಎಂಬದನ್ನು ತೋರಿಸುತ್ತವೆ, "ಕರ್ತನು" ಎಂದರೆ "ಯಜಮಾನನು" ಅಥವಾ "ಒಡೆಯನಾಗಿದ್ದಾನೆ" (ಕೀರ್ತನೆ 110:1 ರ ಅರ್ಥ ಇದುವೇ ಆಗಿದೆ). ತನ್ನ ಸ್ವಭಾವದವನೇ (ಯೋಹಾನ 1:1) ಆಗಿರುವ ತನ್ನ ಸ್ವಂತ ಮಗನನ್ನು ದೇವರು ಮೆಸ್ಸೀಯನು ಹಾಗೂ ಕರ್ತನನ್ನಾಗಿ ನೇಮಿಸಿದನು. ಯೇಸು ಕ್ರಿಸ್ತನನ್ನು ನಿರಾಕರಿಸಿ ಶಿಲುಬೆಗೇರಿಸಿದ ಜನಾಂಗದವರಿಗೆ ಪೇತ್ರನು ಅಮೋಘವಾದ ಈ ಸಂದೇಶವನ್ನು ತಿಳಿಸಿದನು (ಯೋಹಾನ 1:11; 19:6). **37**

**2:37** 16:29-30 ನೋಡಿರಿ. ಈ ಯೆಹೂದ್ಯರ ಹೃದಯಗಳು ಮತ್ತು ಮನಸ್ಸುಗಳಲ್ಲಿ ಕಾರ್ಯಮಾಡುತ್ತಿರುವ ಪವಿತ್ರಾತ್ಮನು ಈ ಫಲಿತಾಂಶಕ್ಕೆ ಕಾರಣನಾಗಿದ್ದಾನೆ. ಆತನು ಇಂದಿಗೂ ಅದೇ ರೀತಿಯಲ್ಲಿ ಕಾರ್ಯಮಾಡುತ್ತಿದ್ದಾನೆ ಮತ್ತು ಆತನು ಮಾತ್ರವೇ ಇದನ್ನು ಸಾಧ್ಯವಾಗಿದೆ. ಯೋಹಾನ 16:7-11 ರೊಂದಿಗೆ ಹೋಲಿಸಿ ನೋಡಿರಿ. ಅವರ ಮಾತುಗಳು ಪಶ್ಚಾತ್ತಾಪವನ್ನು ಸೂಚಿಸುತ್ತವೆ. **38**

**2:38** ಪಶ್ಚಾತ್ತಾಪ ಮತ್ತು ದೀಕ್ಷಾಸ್ನಾನದ ಕುರಿತಾದ ನೋಟ್ಸ್ ಗಳಿಗಾಗಿ ಮತ್ತಾಯ 3:2,6; ಮಾರ್ಕ 16:16; ಲೂಕ 13:3 ನೋಡಿರಿ. ಯೋಹಾನನು ಕೊಡುತ್ತಿದ್ದ ದೀಕ್ಷಾಸ್ನಾನದಂತಲ್ಲದೆ ಕ್ರೈಸ್ತೀಯ ದೀಕ್ಷಾಸ್ನಾನವನ್ನು ಯೇಸು ಕ್ರಿಸ್ತನ ಹೆಸರಿನಲ್ಲಿ ಕೊಡಲಾಗುತ್ತದೆ ಮತ್ತು ಪವಿತ್ರಾತ್ಮನ ವರದಾನವು ಅದರಲ್ಲಿ ಸೇರಿರುತ್ತದೆ. ಹಾಗೆಯೇ 19:5 ನೋಡಿರಿ. ಪಾಪಕ್ಷಮಾಪಣೆ ಹೊಂದಲು ದೀಕ್ಷಾಸ್ನಾನ ಪ್ರಾಮುಖ್ಯವಾಗಿದೆ ಎಂದು ಪೇತ್ರನು ಬೋಧಿಸುತ್ತಿಲ್ಲ. ಪಾಪ ಕ್ಷಮಾಪಣೆಯು ಮಾನವರು ಮಾಡುವ ಯಾವುದೇ ಕಾರ್ಯಗಳು ಅಥವಾ ಆಚಾರಗಳ ಮೇಲೆ ಆಧಾರವಾಗಿಲ್ಲ ಎಂಬದು ಅವನಿಗೆ ಚೆನ್ನಾಗಿ ಗೊತ್ತಿತ್ತು. ಅದು ದೇವರ ಕೃಪೆಯಿಂದ ಬರುತ್ತದೆ ಮತ್ತು ನಂಬಿಕೆಯಿಂದ ಅದನ್ನು ಪಡೆದುಕೊಳ್ಳಬಹುದಾಗಿದೆ. ಮತ್ತಾಯ 16:12; 9:5-7; 12:31; 18:23-35; ಎಫೆ 1:7; 1 ಯೋಹಾನ 1:9; ಯೆಶಾಯ 55:7 ರಲ್ಲಿ ಕ್ಷಮಾಪಣೆಯ ಕುರಿತಾದ ನೋಟ್ಸ್ ನೋಡಿರಿ.

*"ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ"*– ಕೆಲವರು ಈ ವಾಕ್ಯವನ್ನು ಈ ರೀತಿಯಾಗಿ ಭಾಷಾಂತರ ಮಾಡಿದ್ದಾರೆ – "ಆದ್ದರಿಂದ ನಿಮ್ಮ ಪಾಪಗಳು ಪರಿಹಾರವಾಗಬೇಕಾದರೆ" (NIV, 1978 ಆವೃತ್ತಿ) – ಇದು ಒಳ್ಳೆಯ ಭಾಷಾಂತರವಲ್ಲ. ಈ ಪದಗಳು ಸೂಚಿಸುವದೇನೆಂದರೆ ಪಾಪ ಕ್ಷಮಾಪಣೆಗೂ ಮೊದಲೇ ದೀಕ್ಷಾಸ್ನಾನ ಬರುತ್ತದೆ ಮತ್ತು

ಪಶ್ಚಾತ್ತಾಪಪಡುವ ಯೆಹೂದ್ಯರು ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಮೂಲಕ ಪಾಪ ಕ್ಷಮಾಪಣೆ ಹೊಂದುವರು ಎಂಬದಾಗಿ ಸೂಚಿಸುತ್ತದೆ. ಆದರೆ ಇದು ಹೊಸ ಒಡಂಬಡಿಕೆಯ ಬೋಧನೆಯಲ್ಲ. ಪಶ್ಚಾತ್ತಾಪಪಡುವ ಯಾವುದೇ ಪಾಪಿಗಾದರೂ, ಮೊದಲು ಕ್ಷಮಾಪಣೆ ದೊರೆಯುತ್ತದೆ, ನಂತರ ದೀಕ್ಷಾಸ್ನಾನ ಬರುತ್ತದೆ. "ಆಗುವದಕ್ಕಾಗಿ" ಎಂದು ಭಾಷಾಂತರ ಮಾಡಲಾಗಿರುವ ಗ್ರೀಕ್ ಪದ "ಈಸ್" ಎಂಬದಾಗಿದೆ. ಇದಕ್ಕೆ ವ್ಯಾಪಕವಾದ ಅರ್ಥಗಳಿವೆ – "ಆದರೆ", "ಆಗಲು", "ಆಗುವ ನಿಮಿತ್ತ", "ಆಗುವದಕ್ಕೋಸ್ಕರ", "ಆಗುವ ಸಲುವಾಗಿ" ಇತ್ಯಾದಿ (ಆದರೆ "ಆಗಬೇಕಾದರೆ" ಎಂಬದು ಸೂಕ್ತವಾದ ಪದವಲ್ಲ). ಇಲ್ಲಿ ಇದನ್ನು ಹೊಸ ಒಡಂಬಡಿಕೆಯ ಹುದುವಾದ ಬೋಧನೆಗನುಸಾರ ಪಾಪ ಕ್ಷಮಾಪಣೆ, ದೀಕ್ಷಾಸ್ನಾನ ಮತ್ತು ರಕ್ಷಣೆಯ ವಿಷಯಗಳಿಗೆ ಹೊಂದಿಕೆಯಾಗುವ ಹಾಗೆ ಭಾಷಾಂತರ ಮಾಡಬೇಕು. ಆದ್ದರಿಂದ ಒಳ್ಳೆಯ ಭಾಷಾಂತರ "ಪಾಪ ಕ್ಷಮಾಪಣೆ ಕುರಿತು" ಎಂಬದಾಗಿದೆ. 2:25 ರಲ್ಲಿ (ಈಸ್) ಎಂಬ ಗ್ರೀಕ್ ಪದವನ್ನು "ಕುರಿತು" ಎಂಬದಾಗಿಯೇ ಭಾಷಾಂತರ ಮಾಡಲಾಗಿದೆ (NIV ಯಲ್ಲಿ "ಬಗ್ಗೆ"). ಕ್ಷಮಾಪಣೆ ಮತ್ತು ದೀಕ್ಷಾಸ್ನಾನ ಒಂದಕ್ಕೊಂದು ಸಂಬಂಧಿಸಿವೆ, ಆದರೆ ಪಾಪ ಕ್ಷಮಾಪಣೆ ಹೊಂದಲು ದೀಕ್ಷಾಸ್ನಾನದ ಅವಶ್ಯಕತೆಯಿಲ್ಲ. ಪೇತ್ರನ ಅರ್ಥ ಇಲ್ಲಿ ಬಹಳ ಸ್ಪಷ್ಟವಾಗಿದೆ – ಯೇಸು ಕ್ರಿಸ್ತನು ಯಾರು ಎಂಬ ವಿಷಯದಲ್ಲಿ ನಿಮ್ಮ ಮನಸ್ಸು ಬದಲಾಯಿಸಿಕೊಳ್ಳಿರಿ, ದೇವಕುಮಾರನು, ಇಸ್ರಾಯೇಲಿನ ಮೆಸ್ಸೀಯನು ಮತ್ತು ಪರಲೋಕದಿಂದ ಬಂದ ಕರ್ತನಾಗಿರುವ ಆತನ ವಿಷಯದಲ್ಲಿ ನಿಮಗಿರುವ ದುಷ್ಟವಾದ ತಿರಸ್ಕಾರವನ್ನು ಬದಲಾಯಿಸಿಕೊಳ್ಳಿರಿ. ಆತನ ಸ್ವಭಾವ, ಕಾರ್ಯ ಮತ್ತು ಅಧಿಕಾರದ ("ಹೆಸರು") ಪ್ರಕಾರ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ ಎಂಬದು ಆತನಲ್ಲಿ ನಿಮಗಿರುವ ನಂಬಿಕೆಗೆ ಮುಕ್ತವಾದ ಪ್ರಕಟನೆಯಾಗಿದೆ ಮತ್ತು ತನ್ನ ನಂಬಿಕೆಯಿಡುವವರಿಗೆ ಆತನು ಉಚಿತವಾಗಿ ಕೊಡುವ ಗುರುತು ಪಾಪ ಕ್ಷಮಾಪಣೆಯಾಗಿದೆ." ಪಾಪ ಕ್ಷಾಮಪಣೆಗಾಗಿ ದೀಕ್ಷಾಸ್ನಾನ ಮಾಡಿಸಿಕೊಂಡರು ಎಂದರೆ ಪಾಪ ಕ್ಷಮಾಪಣೆ ಹೊಂದಲು ದೀಕ್ಷಾಸ್ನಾನ ಮಾಡಿಸಿಕೊಂಡರು ಎಂಬ ಅರ್ಥವಲ್ಲ. ಈ ವಾಕ್ಯವನ್ನ ಮತ್ತಾಯ 3:11 ರೊಂದಿಗೆ ಹೋಲಿಗೆ ಮಾಡಿ ನೋಡಿರಿ. ಅಲ್ಲಿ (ಈಸ್) ಎಂಬ ಗ್ರೀಕ್ ಪದವನ್ನೇ ಉಪಯೋಗಿಸಲಾಗಿದೆ ಮತ್ತು "ಅದಕ್ಕೆ" ಎಂದು ಭಾಷಾಂತರ ಮಾಡಲಾಗಿದೆ. ಜನರು ಪಶ್ಚಾತ್ತಾಪಪಡಲಿ ಎಂದು ಯೋಹಾನನು ಅವರಿಗೆ ದೀಕ್ಷಾಸ್ನಾನ ಮಾಡಿಸಲಿಲ್ಲ ಬದಲಾಗಿ ಅವರು ಆಗಲೇ ಪಶ್ಚಾತ್ತಾಪಪಟ್ಟಿದ್ದರಿಂದ ಅವರಿಗೆ ದೀಕ್ಷಾಸ್ನಾನ ಮಾಡಿಸಿದನು ಎಂಬದು ಇಲ್ಲಿ ಸ್ಪಷ್ಟವಾಗಿದೆ (ವ 6). ಈಗಲೂ ಸಹ ಪಶ್ಚಾತ್ತಾಪಪಟ್ಟು ಪಾಪ ಕ್ಷಮಾಪಣೆ ಹೊಂದಿರುವ ಹೊಸ ವಿಶ್ವಾಸಿಗಳಿಗೆ ಮಾತ್ರವೇ ದೀಕ್ಷಾಸ್ನಾನ ಕೊಡಬೇಕು. ಅಪೊ 10:44-48 ನೋಡಿರಿ – ಕೊರ್ನೇಲ್ಯನು ಮತ್ತು ಅವನ ಸಂಗಡವಿದ್ದವರು ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಮೊದಲೇ ಪವಿತ್ರಾತ್ಮನನ್ನು (ಮತ್ತು ಪಾಪ ಕ್ಷಮಾಪಣೆಯನ್ನು) ಹೊಂದಿದರು. "ಕರ್ತನಾದ ಯೇಸು ಕ್ರಿಸ್ತನ ನಾಮದಲ್ಲಿ"

ದೀಕ್ಷಾಸ್ನಾನ ಎಂದರೆ ಕರ್ತನು ಮತ್ತು ಕ್ರಿಸ್ತನು ಆಗಿರುವ ಆತನ ಅಧಿಕಾರದಲ್ಲಿ ಎಂಬದಾಗಿದೆ (ವ 36). ಜನರು ದೀಕ್ಷಾಸ್ನಾನ ಮಾಡಿಸಿಕೊಳ್ಳುವಾಗ ಏನು ಹೇಳಬೇಕು ಎಂಬದಕ್ಕೆ ಪೇತ್ರನು ಯಾವುದೇ ಸೂತ್ರವನ್ನು ಇಲ್ಲಿ ಕೊಟ್ಟಿಲ್ಲ. ಮತ್ತಾಯ 28:19 ರೊಂದಿಗೆ ಹೋಲಿಸಿ ನೋಡಿರಿ. ದೇವರು ಪವಿತ್ರಾತ್ಮನನ್ನು "ವರವಾಗಿ" ಕೊಡುತ್ತಾನೆ ಎಂಬದನ್ನು ಗಮನಿಸಿರಿ. ಯೋಹಾನ 7:37-39; 14:16-17; ಗಲಾ 3:2 ರೊಂದಿಗೆ ಹೋಲಿಸಿ ನೋಡಿರಿ. ಈ ವಾಕ್ಯಗಳಲ್ಲಿ ಪೇತ್ರನು ಯೇಸು ಕ್ರಿಸ್ತನನ್ನು ರಕ್ಷಕನನ್ನಾಗಿ ವ್ಯಕ್ತಪಡಿಸುತ್ತಿಲ್ಲ ಬದಲಾಗಿ ಕರ್ತನು ಹಾಗೂ ಕ್ರಿಸ್ತನು ಎಂಬದಾಗಿ ವ್ಯಕ್ತಪಡಿಸುತ್ತಿರುವದನ್ನು ಗಮನಿಸಿರಿ (ವ 36), ಅಲ್ಲದೆ ಅವರು ಆತನನ್ನು ನಿರಾಕರಿಸಿದ್ದಕ್ಕಾಗಿ ಪಶ್ಚಾತ್ತಾಪಪಡಬೇಕು ಎಂಬದಾಗಿಯೂ ಹೇಳುತ್ತಿದ್ದಾನೆ. 22:10 ರ ನೋಟ್ ನೋಡಿರಿ. **39**

**2:39** ದೇವರಾತ್ಮನ ವಾಗ್ದಾನವನ್ನು ಮೊದಲು ಯೆಹೂದ್ಯರಿಗೆ ಮಾತ್ರವೇ ಕೊಡಲಾಗಿತ್ತು, ಆದರೆ ಅದು ಎಲ್ಲಾ ಭಾಗಗಳಲ್ಲಿರುವ ಎಲ್ಲಾ ಜನಗಳಿಗಾಗಿದೆ. ದೇವರೆ ಕರೆಯ ಬಗ್ಗೆ ತಿಳಿಯಲು ಮತ್ತಾಯ 9:13; ರೋಮಾ 1:6; 8:28-30; 1 ಕೊರಿಂಥ 1:9,24,26; ಗಲಾ 5:13; ಎಫೆ 4:1,4; ಕೊಲೊ 3:15; 2 ಥೆಸ 2:14; 1 ತಿಮೊ 6:12; ಇಬ್ರಿ 9:15; 1 ಪೇತ್ರ 2:9,21; 2 ಪೇತ್ರ 1:3-8 ನೋಡಿರಿ. **40**

**2:40** ನಂಬಿಗಸ್ತನೂ, ದೇವರಾತ್ಮಭರಿತನೂ ಆಗಿರುವ ದೇವರ ವಾಕ್ಯದ ಮನುಷ್ಯನ ಕೆಲಸವನ್ನು ಇಲ್ಲಿ ಗಮನಿಸಿರಿ. ಯೇಸು ಕ್ರಿಸ್ತನ ಕುರಿತಾದ ಸತ್ಯ ಸಂಗತಿಗಳನ್ನು ಮೇಲ್ನೋಟಕ್ಕೆ ಮಾತ್ರವೇ ತಿಳಿಸಲು ಪೇತ್ರನು ಬಯಸಲಿಲ್ಲ. ಆತನನ್ನು ನಿರಾಕರಿಸುವದರಿಂದ ಎದುರಾಗುವ ಅಪಾಯಗಳ ಬಗ್ಗೆ ಅವನು ಜನರಿಗೆ ಎಚ್ಚರಿಕೆಗಳನ್ನು ಕೊಟ್ಟನು ಮತ್ತು ಆತನನ್ನು ಅಂಗೀಕರಿಸಿಕೊಳ್ಳುವಂತೆ ಅವರಲ್ಲಿ ಮನವಿ ಮಾಡಿಕೊಂಡನು. ಪ್ರತಿಯೊಂದು ಸಂತತಿಯು ವಕ್ರಬುದ್ಧಿಯುಳ್ಳ ಸಂತತಿಯಾಗಿದೆ (ಬಹುಶಃ ಆ ಸಂತತಿಯು ಎಲ್ಲವುಗಳಿಗಿಂತ ಬಹಳ ಘೋರವಾಗಿದ್ದಿರಬಹುದು – ಮತ್ತಾಯ 23:33-36; ಫಿಲಿಪ್ಪಿ 2:15) ಆದ್ದರಿಂದ ಜನರಿಗೆ ಎಚ್ಚರಿಸುವ ಮತ್ತು ಮನವಿ ಮಾಡಿಕೊಳ್ಳುವ ಅವಶ್ಯಕತೆಯು ಯಾವಾಗಲೂ ಇದ್ದೇ ಇರುತ್ತದೆ. **41**

**2:41** ಪೇತ್ರನ ಸಂದೇಶವನ್ನು ಅಂಗೀಕರಿಸಿಕೊಳ್ಳುವದೆಂದರೆ ಅವರು ಕರ್ತನಾದ ಯೇಸುವನ್ನು ನಂಬಿದರು ಮತ್ತು ಆತನನ್ನು ಕರ್ತನನ್ನಾಗಿ ಹಾಗೂ ಕ್ರಿಸ್ತನನ್ನಾಗಿ ಮತ್ತು ಪಾಪಗಳಿಂದ ಬಿಡಿಸುವ ರಕ್ಷಕನನ್ನಾಗಿ ಅಂಗೀಕರಿಸಿಕೊಂಡರು ಎಂಬದಾಗಿದೆ (ವ 36, 38). ನಂಬಿಕೆಯುಳ್ಳವರಾದ್ದರಿಂದ, ಕ್ಷಮಾಪಣೆ ಮತ್ತು ನಿತ್ಯಜೀವವನ್ನು ಪಡೆದುಕೊಂಡರು (ಯೋಹಾನ 3:16,36; 5:24; 6:47) ಅವರು ನಂಬಿದ್ದೇವೆಂಬದನ್ನು ಸಾರ್ವಜನಿಕವಾಗಿ ಪ್ರಕಟಿಸುತ್ತಾ, ಗುರುತಾಗಿ ದೀಕ್ಷಾಸ್ನಾನ ಮಾಡಿಸಿಕೊಂಡರು. ದೀಕ್ಷಾಸ್ನಾನ ಮಾಡಿಸಿಕೊಂಡ 3000 ಜನರು ಯೇಸು ಕ್ರಿಸ್ತನನ್ನು ನಿರಾಕರಿಸಿ ಶಿಲುಬೆಗೆ ಹಾಕಿಸಿದ ಯೆಹೂಸಲೇಮಿನ

ನಾಯಕರ ನಡುವೆ ಜೀವಿಸುವವರಾಗಿದ್ದರು. ಯೇಸು ಕ್ರಿಸ್ತನ ಪುನರುತ್ಥಾನದ ಪುರಾವೆಯು ಬಹಳ ಸಂಪೂರ್ಣವಾಗಿತ್ತು, ಪವಿತ್ರಾತ್ಮ ಭರಿತರಾಗಿದ್ದ ಅಪೊಸ್ತಲರ ಸಾಕ್ಷಿಯು ಪರಿಣಾಮಕಾರಿಯಾದ್ದರಿಂದ, ಅಪಾಯಗಳು ಮತ್ತು ಭವಿಷ್ಯದಲ್ಲಿ ಎದುರಾಗುವ ಸಮಸ್ಯೆಗಳ ಹೊರತಾಗಿಯೂ ಅವರು ನಂಬಿಕೆಯನ್ನಿಟ್ಟರು. **42**

**2:42** *"ನಿರತರಾಗಿದ್ದರು"*– ಈ ಗ್ರೀಕ್ ಪದದ ಅರ್ಥವೇನೆಂದರೆ "ಆ ವಿಷಯದಲ್ಲಿ ಬಲವಾಗಿದ್ದರು", ಮತ್ತು "ಸ್ಥಿರಚಿತ್ತರಾಗಿ ಮುಂದುವರೆದರು" –ಎಂಬದಾಗಿದೆ. ಅವರ ನಂಬಿಕೆ ಯಥಾರ್ಥವಾದದ್ದಾಗಿತ್ತು ಎಂಬದಕ್ಕೆ ಇದುವೇ ಪುರಾವೆಯಾಗಿದೆ. ಮತ್ತಾಯ 7:17-27; ಯೋಹಾನ 15:1-8; 1 ಕೊರಿಂಥ 15:1-2; ಕೊಲೊ 1:23; ಇಬ್ರಿ 3:6,14 ರ ನೋಟ್ಸ್ ನೋಡಿರಿ. ಈ ವಿಶ್ವಾಸಿಗಳು ತಮ್ಮನ್ನು ಒಪ್ಪಿಸಿಕೊಟ್ಟಿದ್ದ ನಾಲ್ಕು ವಿಷಯಗಳನ್ನು ಗಮನಿಸಿರಿ. ಕೇವಲ ಸುವಾರ್ತೆ ಕೇಳಿ ಸುಮ್ಮನೆ ಕೂರಲು, ನಾವು ನಂಬಿದ್ದೇವೆ ಎಂದು ಹೇಳಲು ಮತ್ತು ತಮ್ಮ ಮಾರ್ಗಗಳನ್ನು ಹಿಡಿದು ಹೋಗಲು ಅವರು ಬಯಸಲಿಲ್ಲ. ಅವರು ಹಾಗೆ ಮಾಡುವದನ್ನು ಅಪೊಸ್ತಲರು ಸಹ ಬಯಸಲಿಲ್ಲ. ಯೇಸು ಕ್ರಿಸ್ತನು ಅವರಿಗೆ ಶಿಷ್ಯರನ್ನು ಮಾಡಿರಿ ಮತ್ತು ಉಪದೇಶ ಮಾಡಿರಿ ಎಂದು ಹೇಳಿದನು (ಮತ್ತಾಯ 28:18-20). ಅವರು ಆ ಕಾರ್ಯವನ್ನು ಮಾಡುವದನ್ನು ಇಲ್ಲಿ ನಾವು ನೋಡಬಹುದು. ಅವರು ಈ ವಿಶ್ವಾಸಿಗಳನ್ನು ಸ್ಥಳೀಯ ಸಭೆಯನ್ನಾಗಿ ರೂಪಿಸುತ್ತಿದ್ದರು ಮತ್ತು ಕರ್ತನಾದ ಯೇಸು ಕ್ರಿಸ್ತನ ಕೃಪೆ ಹಾಗೂ ತಿಳುವಳಿಕೆಯಲ್ಲಿ ಬೆಳೆಯಲು ಅವರಿಗೆ ಎಲ್ಲಾ ರೀತಿಯ ಅವಕಾಶವನ್ನು ಒದಗಿಸಿಕೊಡುತ್ತಿದ್ದರು (2 ಪೇತ್ರ 2:18). "ಅಪೊಸ್ತಲರ ಬೋಧನೆಯನ್ನು" ಕಲಿಸಬೇಕೆಂದು ಕ್ರಿಸ್ತನು ಅವರಿಗೆ ಹೇಳಿದ್ದಾನೆ. ಇಡೀ ಹೊಸ ಒಡಂಬಡಿಕೆಯು ಅದರ ದಾಖಲೆಯಾಗಿದೆ. ಅನ್ಯೋನ್ಯತೆಯು ಕ್ರೈಸ್ತೀಯ ಬೆಳವಣಿಗೆ ಮತ್ತು ಸೇವೆಗೆ ಅತ್ಯಂತ ಪ್ರಾಮುಖ್ಯವಾದ ಸಂಗತಿಯಾಗಿದೆ – ಆದ್ದರಿಂದ ಕ್ರಿಸ್ತನೊಂದಿಗೆ ಮತ್ತು ಆತನ ಜನರೊಂದಿಗೆ ನಾವು ಅನ್ಯೋನ್ಯವಾಗಿರಬೇಕು (1 ಕೊರಿಂಥ 1:9; ಫಿಲಿಪ್ಪಿ 2:1; 3:10; 1 ಯೋಹಾನ 1:3,6,7). ಇದರ ಅರ್ಥ ಇತರರಿಗೆ ಹೃದಯ ಮತ್ತು ಮನಸ್ಸು ತೆರೆಯುವದಾಗಿದೆ ಹಾಗೂ ಸೇವೆ, ಕಷ್ಟಗಳು, ಸಮಸ್ಯೆಗಳು ಮತ್ತು ಸಂತೋಷಗಳಲ್ಲಿ ಹಂಚಿಕೊಳ್ಳುವದಾಗಿದೆ (ರೋಮಾ 12:15-16). ಇದರ ಅರ್ಥ ಯೇಸು ಕ್ರಿಸ್ತನು ನಮ್ಮನ್ನು ಪ್ರೀತಿಸಿದ ಹಾಗೆ ಇತರರನ್ನು ಪ್ರೀತಿಸುವದಾಗಿದೆ (ಯೋಹಾನ 13:34). ಇದರ ಅರ್ಥ ಯೇಸು ಕ್ರಿಸ್ತನ ಕಾರ್ಯಗಳನ್ನು ಇತರರೊಂದಿಗೆ ಮಾತನಾಡುವದಾಗಿದೆ (ಎಫೆ 5:19).

*"ರೊಟ್ಟಿ ಮುರಿಯುವದು"*– ಬಹುಶಃ ವಿಶ್ವಾಸಿಗಳು ಒಟ್ಟಾಗಿ ಊಟ ಮಾಡುವದು ಕರ್ತನ ಭೋಜನವನ್ನು ಸೂಚಿಸುತ್ತದೆ (ವ 46; 1 ಕೊರಿಂಥ 11:17-26). ಆತ್ಮೀಕ ಜೀವಿತವನ್ನು ಕಾಪಾಡಿಕೊಳ್ಳಲು ಪ್ರಾರ್ಥನೆ ಮಾಡುವದಕ್ಕಿಂತ ಹೆಚ್ಚು ಪ್ರಾಮುಖ್ಯವಾದದ್ದು ಯಾವುದೂ ಇಲ್ಲ (ಲೂಕ 18:1; ಎಫೆ 6:18; ಫಿಲಿಪ್ಪಿ 4:6-7; 1 ಥೆಸ 5:17-18; ಯೂದ 20

ನೋಡಿರಿ). **43**

**2:43** *"ಎಲ್ಲರಿಗೂ"*– ವಿಶ್ವಾಸಿಗಳ ಹೊಸ ಅನ್ಯೋನ್ಯತೆಗೆ ಸೇರದೆ ಇರುವವರು ಸಹ ಇದರಲ್ಲಿ ಸೇರಿದ್ದಾರೆ. ದೇವರು ತನ್ನ ಜನರೊಂದಿಗೆ ಅದ್ಭುತವಾದ ರೀತಿಯಲ್ಲಿ ನೆಲೆಸಿದ್ದನು ಮತ್ತು ಇದು ಸಹಜವಾಗಿ ಜನರಲ್ಲಿ ಒಂದು ರೀತಿಯ ಭಯ ಹಾಗೂ ಹೆದರಿಕೆಯನ್ನು ಉಂಟು ಮಾಡುತ್ತದೆ. ಅಪೊಸ್ತಲರು ಬೋಧಿಸುತ್ತಿದ್ದ ಸತ್ಯವನ್ನು ದೃಢಪಡಿಸಲು ದೇವರು ಅನೇಕ ಅದ್ಭುತಕಾರ್ಯಗಳು ಮತ್ತು ಸೂಚಕ ಕಾರ್ಯಗಳನ್ನು ನಡೆಸಿದನು (ಇಬ್ರಿ 2:3-4). ಭೂಲೋಕದಲ್ಲಿ ಇರುವಾಗ ಅನೇಕ ಕಾರ್ಯಗಳನ್ನು ಮಾಡಿದ ಯೇಸು ಕ್ರಿಸ್ತನು ಈಗಲೂ ಅಸ್ತಿತ್ವದಲ್ಲಿದ್ದಾನೆ ಮತ್ತು ತನ್ನ ಅಪೊಸ್ತಲರ ಮೂಲಕ ಕಾರ್ಯಮಾಡುತ್ತಿದ್ದಾನೆ ಎಂಬದಕ್ಕೆ ಅವುಗಳು ಗುರುತುಗಳಾಗಿದ್ದವು (1:1-2). ಮತ್ತಾಯ 8:1 ಮತ್ತು ಯೋಹಾನ 2:11 ರಲ್ಲಿ ಅದ್ಭುತಕಾರ್ಯಗಳು ಹಾಗೂ ಸೂಚಕಕಾರ್ಯಗಳ ಕುರಿತಾದ ನೋಟ್ಸ್ ನೋಡಿರಿ. **44-45**

**2:44-45** ಇದು ಸ್ವೇಚ್ಛಾನುಸಾರವಾದ ಪ್ರೀತಿಯ ಭಾವನೆಯಾಗಿದೆ (4:32-35). ಯಾರೂ ಇದನ್ನು ಆಜ್ಞಾಪಿಸಲಿಲ್ಲ. 5:1-4 ರೊಂದಿಗೆ ಹೋಲಿಸಿ ನೋಡಿರಿ. ಖಂಡಿತವಾಗಿಯೂ, ರಾಜಕೀಯ ವಿಷಯಗಳಿಗೂ ಇದಕ್ಕೂ ಯಾವುದೇ ಸಂಬಂಧವಿಲ್ಲ (ಜನರ ಅಭಿಪ್ರಾಯ ಅಥವಾ ಬಯಕೆಯ ಬಗ್ಗೆ ವಿಚಾರಿಸದೆ ಕೆಲವು ನಾಯಕರು ತಾವಾಗಿಯೇ ಜನರ ಮೇಲೆ ಇವುಗಳನ್ನು ಹೊರಿಸಿದ್ದಾರೆ). ಕ್ರಿಸ್ತನಲ್ಲಿದ್ದ ಈ ವಿಶ್ವಾಸಿಗಳು ದೇವರಾತ್ಮನು ಸೃಷ್ಟಿಸಿರುವ ಐಕ್ಯತೆಯನ್ನು ತೋರಿಸುತ್ತಿದ್ದರು (ಯೋಹಾನ 17:20-23; 1 ಕೊರಿಂಥ 12:12-13). **46**

**2:46** ಅವರು ಸಭಾ ಕಟ್ಟಡಗಳು ಇರಲಿಲ್ಲ ಆದ್ದರಿಂದ ಸಾಧ್ಯವಾಗುವ ಕಡೆ ಭೇಟಿಯಾಗುತ್ತಿದ್ದರು. ವಾರದಲ್ಲಿ ಒಮ್ಮೆ ಸೇರಿಬರುವದು ಆಸಕ್ತರಾಗಿದ್ದ ಈ ವಿಶ್ವಾಸಿಗಳಿಗೆ ಸಾಕಾಗುತ್ತಿರಲಿಲ್ಲ. ಅವರು ದೇವರ ವಾಕ್ಯಗಳನ್ನು ಹೆಚ್ಚಾಗಿ ಕೇಳಿಸಿಕೊಳ್ಳುವದನ್ನು, ಪ್ರಾರ್ಥನೆ ಮಾಡುವದನ್ನು ಮತ್ತು ಒಟ್ಟಾಗಿ ಅನ್ಯೋನ್ಯತೆಯಲ್ಲಿರುವದನ್ನು ಇಷ್ಟಪಡುತ್ತಿದ್ದರು. ಇವೆಲ್ಲವೂ ಹೃದಯದ ಪರಿಸ್ಥಿತಿಯ ಮೇಲೆ ಆಧಾರವಾಗಿದ್ದು – ಸಂತೋಷಕರ ಹಾಗೂ ಯಥಾರ್ಥವಾಗಿದ್ದವು. **47**

**2:47** ಅವರ ಹೃದಯಗಳ ಸ್ಥಿತಿಯ ನಿಮಿತ್ತ ದೇವರನ್ನು ಸ್ತುತಿಸುವದು ಉಸಿರಾಡುವಷ್ಟೇ ಸಹಜವಾಗಿತ್ತು. ಕೀರ್ತನೆ 33:1-3 ರಲ್ಲಿ ಸ್ತುತಿಯ ಕುರಿತಾದ ನೋಟ್ಸ್ ನೋಡಿರಿ. ಸಭೆಯ ಹೊರಗಿದ್ದ ಜನರು ಅವರ ಯಥಾರ್ಥತೆ ಹಾಗೂ ಪ್ರೀತಿಯನ್ನು ನೋಡುತ್ತಿದ್ದರು ಮತ್ತು ಅವರ ಮೇಲೆ ದಯೆಯುಳ್ಳವರಾಗಿದ್ದರು, ಆದರೆ ಇಸ್ರಾಯೇಲಿನ ಧಾರ್ಮಿಕ ನಾಯಕರು ಅವರನ್ನು ಇಷ್ಟಪಡುತ್ತಿರಲಿಲ್ಲ (4:1-3). ಪ್ರತಿದಿನ ಜನರು ಕರ್ತನಾದ ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುತ್ತಿದ್ದರು ಮತ್ತು ಮಂಡಲಿಗೆ ಸೇರುತ್ತಿದ್ದರು ಎಂಬದರಲ್ಲಿ ಏನಾದರೂ ಆಶ್ಚರ್ಯವಿದೆಯೇ? ಒಂದುವೇಳೆ ನಾವು ಆದಿ ಕ್ರೈಸ್ತರ ಹಾಗೆ ನಡೆದುಕೊಂಡರೆ ನಮ್ಮ

ಸಮಯದಲ್ಲಿಯೂ ಈ ಕಾರ್ಯಗಳು ನಡೆಯುತ್ತವೆ ಅಲ್ಲವೇ?

# 3[1]

**3:1** ಮಧ್ಯಾಹ್ನ ಮೂರು ಗಂಟೆಗೆ ಯೆಹೂದ್ಯ ಯಾಜಕರು ದೇವಾಲಯದಲ್ಲಿ ತಮ್ಮ ಸಂಜೆಯ ಪ್ರಾರ್ಥನೆಗಳು ಹಾಗೂ ಯಜ್ಞಗಳನ್ನು ನಡೆಸುತ್ತಿದ್ದರು. **4**

**3:4** ಅವರು ಆ ವ್ಯಕ್ತಿಯನ್ನು ವಿಶಿಷ್ಟವಾದ ಕಾರ್ಯಕ್ಕಾಗಿ ಸಿದ್ಧಪಡಿಸಲು ಪ್ರಯತ್ನಿಸುತ್ತಿದ್ದರು. **6**

**3:6** ಇಲ್ಲಿ ನಾವು ಕರ್ತನಾದ ಯೇಸು ಕ್ರಿಸ್ತನ ಅಪೊಸ್ತಲರ ಬೌತಿಕ ಬಡತನದ ಬಗ್ಗೆ ನೋಡಬಹುದಾಗಿದೆ. ಮತ್ತಾಯ 4:18-22; 19:27; ಲೂಕ 6:20 ರೊಂದಿಗೆ ಹೋಲಿಸಿ ನೋಡಿರಿ. ಇದರಲ್ಲಿ ಅವರು ತಮ್ಮ ಯಜಮಾನನ ಹಾಗಿದ್ದರು – ಮತ್ತಾಯ 8:20. ಆದರೆ ಆತ್ಮೀಕ ಅಧಿಕಾರದಲ್ಲಿ ಅವರು ಐಶ್ವರ್ಯವಂತರಾಗಿದ್ದರು. ಸಹಜವಾಗಿ ವಿಶ್ವಾಸಿಗಳ ಆಸ್ತಿ ಮತ್ತು ಐಶ್ವರ್ಯ ಹೆಚ್ಚಾಗುವಾಗ ಅವರ ಆತ್ಮೀಕ ಶಕ್ತಿ ಕುಂದಿಹೋಗುವ ಹಾಗೆ ಅನ್ನಿಸುತ್ತದೆ. ಕರ್ತನು ಮತ್ತಾಯ 6:19-21 ರಲ್ಲಿ ಪರಿಪೂರ್ಣವಾದ ಮಾದರಿಯನ್ನು ಕೊಟ್ಟಿದ್ದಾನೆ. “ಆತನ ಹೆಸರಿನಲ್ಲಿ” ಎಂದರೆ ಕ್ರಿಸ್ತನ ಶಕ್ತಿ ಮತ್ತು ಅಧಿಕಾರದಲ್ಲಿ ಎಂಬದಾಗಿದೆ. ಪೇತ್ರನು ಯೇಸು ಕ್ರಿಸ್ತನ ಪ್ರತಿನಿಧಿಯಾಗಿ ನಡೆದುಕೊಂಡನು – ಯೋಹಾನ 14:13-14; 20:21. **7**

**3:7** ಪೇತ್ರನ ಕ್ರಿಯೆ ಅವನ ಮಾತುಗಳೊಂದಿಗೆ ಕಾರ್ಯ ಮಾಡುತ್ತಾ ಆ ವ್ಯಕ್ತಿಯೊಳಗೆ ನಂಬಿಕೆ ಹಾಗೂ ಸ್ವಸ್ಥತೆಯನ್ನು ಉಂಟು ಮಾಡಿತು. **8**

**3:8** ಆದಿ ಶಿಷ್ಯರು ಅನೇಕ ಜನರನ್ನು ಗುಣಪಡಿಸಿದರು (5:15-16; 8:7; 14:8-10; 19:11-12; 28:8-9). ಆದರೆ ಅವರು ಸ್ವಸ್ಥತೆಗಾಗಿ ವಿಶೇಷ ಕೂಟಗಳನ್ನು ಏರ್ಪಡಿಸುತ್ತಿದ್ದರು ಎಂದು ನಾವು ಎಲ್ಲಿಯೂ ಓದುವದಿಲ್ಲ. ಅವರು ಕೆಲವೊಮ್ಮೆ ತಮಗೆ ಕೆಲಸದ ಸ್ಥಳದಲ್ಲಿ ಎದುರಾಗುವವರನ್ನು ಅಥವಾ ಅವರು ಬೋಧಿಸುವ ಹಾಗು ಉಪದೇಶಿಸುವ ಸೇವೆಯಲ್ಲಿರುವಾಗ ಅವರ ಬಳಿಗೆ ಬಂದವರನ್ನು ಗುಣಪಡಿಸುತ್ತಿದ್ದರು. ಕುಂಟನಾಗಿದ್ದವನು ಇಲ್ಲಿ ಪೇತ್ರನನ್ನು ಸ್ತುತಿಸಲಿಲ್ಲ ಬದಲಾಗಿ ದೇವರನ್ನು ಸ್ತುತಿಸಿದನ್ನು ಗಮನಿಸಿರಿ. ಸ್ವಸ್ಥತೆ ಕೊಟ್ಟಿರುವವು ಪೇತ್ರನಲ್ಲ ಬದಲಾಗಿ ದೇವರೇ ಎಂಬದು ಅವನಿಗೆ ಗೊತ್ತಿತ್ತು. **10**

**3:10** 2:7,12; 10:45; 12:16; 13:12; ಮತ್ತಾಯ 8:27; 9:8,33; 12:23 ನೋಡಿರಿ. ದೇವರಾತ್ಮನ ಶಕ್ತಿ ನಮ್ಮಲ್ಲಿ ಕಾರ್ಯಮಾಡುವದರಿಂದ ನಾವು ಮಾಡುವದನ್ನು ಅಥವಾ ಹೇಳುವದನ್ನು ಕೇಳಿ ಜನರು ಎಂದಾದರು ಆಶ್ಚರ್ಯಪಟ್ಟಿದ್ದಾರೆಯೇ? **11**

**3:11** ಸೊಲೊಮೊನನ ಮೊಗಸಾಲೆ ಅಥವಾ ಕಂಬಸಾಲು ದೇವಾಲಯದ ಹೊರಗಿನ ಪ್ರಾಕಾರದ ಪೂರ್ವ ದಿಕ್ಕಿನಲ್ಲಿತ್ತು. **12**

**3:12** ದೇವರ ಕುರಿತಾದ ಸತ್ಯವನ್ನು ಬೋಧಿಸಲು ಪೇತ್ರನು ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡನು. ಅವನು ಜನರನ್ನು ತನ್ನ ಕಡೆಗೆ ಸೆಳೆದುಕೊಳ್ಳಲು ಅಥವಾ ಈ ಘಟನೆಯ ಮೂಲಕ ತನ್ನ ಹೆಸರನ್ನು ಪ್ರಸಿದ್ಧಿಪಡಿಸಿಕೊಳ್ಳಲು ಅವನು ಪ್ರಯತ್ನಿಸಲಿಲ್ಲ. ಈ ಅದ್ಭುತವನ್ನು ಮಾಡಲು ದೇವರು ನನ್ನನ್ನು ಬಲಪಡಿಸಿದ್ದಾನೆ ಆದ್ದರಿಂದ ದೇವರನ್ನು ಮಾತ್ರವೇ ಘನಪಡಿಸಬೇಕು ಎಂಬದನ್ನು ಅವನು ಬಲ್ಲವನಾಗಿದ್ದನು. ಹಾಗೆಯೇ 14:8-15 ನೋಡಿರಿ. **13**

**3:13** ಅಬ್ರಹಾಮ, ಇಸಾಕ ಮತ್ತು ಯಾಕೋಬನ ದೇವರು ಎಂಬದು ಇಸ್ರಾಯೇಲಿನಲ್ಲಿ ಒಬ್ಬನೇ ನಿಜವಾದ ದೇವರ ಹುದುವಾದ ಹೆಸರಾಗಿತ್ತು (ವಿಮೋ 3:6). ಇದಕ್ಕೆ ಕಾರಣವನ್ನು ಆದಿಕಾಂಡ 12-50 ಅಧ್ಯಾಯಗಳಲ್ಲಿ ನಾವು ನೋಡಬಹುದು. ದೇವರು ಯೇಸು ಕ್ರಿಸ್ತನನ್ನು ಆತನ ಪುನರುತ್ಥಾನ ಮತ್ತು ಸ್ವರ್ಗಾರೋಹಣದ ಮೂಲಕ ಘನಪಡಿಸಿದನು.

*"ನೀವಂತು ಆತನನ್ನು ಹಿಡಿದುಕೊಟ್ಟಿರಿ ಮತ್ತು ಬೇಡವೆಂದಿರಿ"*– ಅವರನ್ನು ಪಶ್ಚಾತ್ತಾಪಕ್ಕೆ ನಡೆಸಬೇಕೆಂಬ ಉದ್ದೇಶದಿಂದ ಪೇತ್ರನು ಅವರಿಗೆ ಗೊತ್ತಿದ್ದ ವಿಷಯವನ್ನೇ ಮತ್ತೆ ಜ್ಞಾಪಕಪಡಿಸುತ್ತಿದ್ದಾನೆ. **14**

**3:14** *"ಪರಿಶುದ್ಧನು ಮತ್ತು ನೀತಿವಂತನು"*– ಮೆಸ್ಸೀಯನ ಶೀರ್ಷಿಕೆ (7:52; 22:14; 4:27,30; ಮಾರ್ಕ 1:24; ಯಾಕೋಬ 5:6; 1 ಯೋಹಾನ 2:20). ಇದು ಯೇಸು ಕ್ರಿಸ್ತನ ದೈವೀಕತೆಯನ್ನೂ ಸೂಚಿಸುತ್ತದೆ (ಪ್ರಕ 15:3-4. ಯೇಸು ಕ್ರಿಸ್ತನು ಮಾತ್ರವೇ ಸಂಪೂರ್ಣವಾಗಿ ಪರಿಶುದ್ಧನಾಗಿದ್ದಾನೆ). ಯೇಸು ಕ್ರಿಸ್ತನು ದೇವರ ಸೇವಕನಾಗಿದ್ದನು ಮತ್ತು ಮಾನವನಾಗಿ ಜನಿಸಿ ಬಂದ ದೇವರಾಗಿದ್ದನು (ಫಿಲಿಪ್ಪಿ 2:6; ಲೂಕ 2:11 ರಲ್ಲಿ ರೆಫರೆನ್ಸ್ ನೋಡಿರಿ). ಯೆಹೂದ್ಯರು ಆತನನ್ನು ಯಾರೆಂದು ಕರೆಯುತ್ತಿದ್ದರು ಎಂದು ನೋಡಿರಿ (ಮಾರ್ಕ 15:6-15). **15**

**3:15** *"ಜೀವ ನಾಯಕನು"*– ಗ್ರೀಕ್ ಪದವು ಇಲ್ಲಿ ಪ್ರಾರಂಭಿಸಿದವನು, ಸ್ಥಾಪಕನು, ಗ್ರಂಥಕರ್ತನು ಹಾಗೆಯೇ ಅರಸನು ಅಥವಾ ನಾಯಕನನ್ನು ಸೂಚಿಸುತ್ತದೆ. ಯೇಸು ಕ್ರಿಸ್ತನು "ಜೀವನಾಯಕನಾಗಿದ್ದಾನೆ." –ಇದು ಯೇಸು ಕ್ರಿಸ್ತನು ದೈವೀಕತೆಯನ್ನು ಸಹ ಸೂಚಿಸುತ್ತದೆ. ಯೋಹಾನ 5:19-27 ನೋಡಿರಿ.

*"ಸಾಕ್ಷಿಗಳು"*– ಅಪೊಸ್ತಲರು ತಮ್ಮನ್ನು ಏನೆಂದು ಕರೆದುಕೊಳ್ಳುತ್ತಿದ್ದರು ಮತ್ತು ಏನು ಸಾಕ್ಷಿ ಕೊಡುತ್ತಿದ್ದರು ಎಂಬದನ್ನು ಮತ್ತೊಮ್ಮೆ ಗಮನಿಸಿರಿ (1:8; 2:32). **16**

**3:16** ಅವರ ಆದ್ಯತೆಯೆಲ್ಲವೂ ಯೇಸು ಕ್ರಿಸ್ತನ ಮೇಲೆ – ಆತನ ಹೆಸರು ಮತ್ತು ಶಕ್ತಿಯ ಮೇಲೆಯೇ ಇತ್ತು. ಅವರ ಮಾದರಿಯನ್ನು ಅನುಸರಿಸೋಣ. **17**

- **3:17** ಯೋಹಾನ 15:21; 1 ಕೊರಿಂಥ 2:7-8; 2 ಕೊರಿಂಥ 4:4; ಎಫೆ 4:18. **18**
- **3:18** ಲೂಕ 24:25-27,44-47. **19**

**3:19** *“ಪಶ್ಚಾತ್ತಾಪ”*– 2:38; ಮತ್ತಾಯ 3:2; ಲೂಕ 13:3-5; ಅಪೊ 17:30. ಯಾರ ಪಾಪಗಳು “ಅಳಿಸಲಾಗಿರುತ್ತವೆಯೋ” – ಅಂದರೆ ದಾಖಲೆಯಿಂದ ತೆಗೆದು ಹಾಕಲಾಗಿರುತ್ತದೆಯೋ ಅವರಿಗೆ ಇದು ಪ್ರಾಮುಖ್ಯವಾಗಿದೆ. **20**

**3:20** ಈ ವಚನವು ಹಿಂದಿನ ವಚನದೊಂದಿಗೆ ದೇವರು ಕ್ರಿಸ್ತನನ್ನು ಇಸ್ರಾಯೇಲ್ಯರಿಗೆ ಮೆಸ್ಸೀಯನನ್ನಾಗಿ ನೇಮಿಸಿದ್ದಾನೆ ಎಂಬದನ್ನು ಸೂಚಿಸುತ್ತದೆ (2:36) ಮತ್ತು ಇಸ್ರಾಯೇಲ್ಯರು ಪಶ್ಚಾತ್ತಾಪಪಟ್ಟು ಆತನನ್ನು ಅಂಗೀಕರಿಸಿಕೊಳ್ಳಲು ಬಯಸುವ ತನಕ ಕ್ರಿಸ್ತನು ಅವರ ಅರಸನಾಗಿ ಹಿಂದಿರುಗುವದಿಲ್ಲ ಎಂಬದನ್ನು ಸೂಚಿಸುತ್ತದೆ. **21**

**3:21** ದೇವರು ಎಲ್ಲದಕ್ಕೂ ಸಮಯವನ್ನು ನೇಮಿಸಿದ್ದಾನೆ ಮತ್ತು ಆತನ ಸಮಯ ಬರುವ ತನಕ ಯಾವುದೂ ನಡೆಯುವದಿಲ್ಲ (1:7).

*“ಸಮಸ್ತವನ್ನು ಸರಿಮಾಡುವ ಕಾಲ”*– 1:6; ಮತ್ತಾಯ 19:28; ರೋಮಾ 8:18-23; ಯೆಶಾಯ 11:1-16; ಯೆಹೆಜ್ಕೇಲ 37:1-28. **22-23**

**3:22-23** ಧರ್ಮೋ 18:15,18,19. ವಾಗ್ದಾನ ಮಾಡಲ್ಪಟ್ಟಿರುವ ಈ ಪ್ರವಾದಿಯು ಯೇಸು ಕ್ರಿಸ್ತನೇ ಎಂಬದು ಪೇತ್ರನ ಮಾತುಗಳ ಅರ್ಥವಾಗಿದೆ. ನೆರವೇರುವದು ಎಂಬ ಪದ ಗ್ರೀಕ್ ಭಾಷೆಯಲ್ಲಿ ಇಲ್ಲ. **24**

**3:24** ಪೇತ್ರನು (ಯೇಸು ಕ್ರಿಸ್ತನು ತಾನಾಗಿಯೇ ಮಾಡಿದ ಹಾಗೆ) ಪ್ರಾಮುಖ್ಯವಾಗಿ ಹೇಳುವದೇನೆಂದರೆ ಯೇಸು ಕ್ರಿಸ್ತನ ಬರೋಣವು ಹಳೆಯ ಒಡಂಬಡಿಕೆಯಲ್ಲಿ ದೇವರು ಮಾಡಿರುವ ವಾಗ್ದಾನದನುಸಾರವಾಗಿದೆ (ಮತ್ತಾಯ 5:17; ಲೂಕ 24:25-27,44-47; ಯೋಹಾನ 5:39). **25**

**3:25** *“ನೀವು”*–ಎಂದು ಇಲ್ಲಿ ಪೇತ್ರನು ಯೆಹೂದ್ಯರಿಗೆ ಹೇಳುತ್ತಿದ್ದಾನೆ. ರೋಮಾ 9:4-5 ರೊಂದಿಗೆ ಹೋಲಿಸಿ ನೋಡಿರಿ. ಅವರು ಅಬ್ರಹಾಮನ ಶಾರೀರಿಕ ಬಾಧ್ಯಸ್ಥರಾಗಿದ್ದರು, ದೇವರು ಅವರಿಗೆ ವಾಗ್ದಾನದ ಆಶೀರ್ವಾದಗಳನ್ನು ಕೊಟ್ಟಿದ್ದನು (ಆದಿ 12:3). **26**

**3:26** *“ಆತನ ಕುಮಾರನಾದ ಯೇಸು”*– ಅಬ್ರಹಾಮನ ಮೂಲಕ ವಾಗ್ದಾನ ಮಾಡಲಾಗಿರುವ ಆಶೀರ್ವಾದವನ್ನು ಕರ್ತನಾದ ಯೇಸು ಕ್ರಿಸ್ತನು ಮಾನವರಿಗೆ ದೊರಕಿಸಿದ್ದಾನೆ ಎಂಬದನ್ನು ಪೇತ್ರನು ದೃಢಪಡಿಸುತ್ತಿದ್ದಾನೆ. ಹಾಗೆಯೇ ಗಲಾ 3:6-9,14 ನೋಡಿರಿ. ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸುವ ಮೂಲಕ ಇದನ್ನು ವ್ಯಕ್ತಪಡಿಸಿದನು. ನಂತರ ಆತನು ಆತನನ್ನು ತಾನಾದುಕೊಂಡ ಜನರಾದ ಇಸ್ರಾಯೇಲ್ಯರ ಬಳಿಗೆ ಮೊದಲು ಕಳುಹಿಸಿದನು (13:46; ರೋಮಾ 1:16). ಆತನು ಆತನನ್ನು ಕಳುಹಿಸಿದ ರೀತಿ ಹೇಗೆಂದರೆ ಆತನ ಅಪೊಸ್ತಲರ ಮೂಲಕ ಮಾತನಾಡಲು ತನ್ನ ಆತ್ಮನನ್ನು ಕಳುಹಿಸಿದನು.

*“ನಿಮ್ಮನ್ನು ಆಶೀರ್ವದಿಸಲು”*– ದೇವರು ಇದನ್ನು ಮಾಡಲು ಇಷ್ಟಪಡುತ್ತಾನೆ ಮತ್ತು ಈ ಕಾರಣದಿಂದಲೇ ತನ್ನ ಮಗನನ್ನು ಈ ಲೋಕಕ್ಕೆ ಕಳುಹಿಸಿದನು. ದೇವರ ಆಶೀರ್ವಾದ ಎಂದರೆ

ಏನು ಎಂಬದನ್ನು ಇಲ್ಲಿ ಗಮನಿಸಿರಿ – ಎಲ್ಲಾ ರೀತಿಯ ಪಾಪ ಮತ್ತು ದುಷ್ಟತನಗಳನ್ನು ತ್ಯಜಿಸುವದಾಗಿದೆ. ಆಶೀರ್ವಾದ ಮತ್ತು ಆಶೀರ್ವಾದ ಹೊಂದುವದರ ಬಗ್ಗೆ ನೋಟ್ಸ್ ಗಾಗಿ ಆದಿ 12:1-3; ಸಂಖ್ಯಾ 6:22-27; ಧರ್ಮೋ 28:3-14; ಕೀರ್ತನೆ 1:1; 119:1; ಮತ್ತಾಯ 5:3-12; ಲೂಕ 11:28; ಗಲಾ 3:9,14; ಎಫೆ 1:3 ನೋಡಿರಿ.

# 4 1

**4:1** ಯೇಸು ಕ್ರಿಸ್ತನು ಈ ಲೋಕದಲ್ಲಿದ್ದಾಗ ದೇವಾಲಯದ ಯಾಜಕರು ಆತನ ಅತ್ಯಂತ ಘೋರವಾದ ವೈರಿಗಳಾಗಿದ್ದರು (ಮತ್ತಾಯ 16:21; 20:18; 21:15,23,46; 27:1,12,41,62). ಅಪೊಸ್ತಲರು ಸಹ ತಮ್ಮ ವೈರಿಗಳನ್ನು ಎದುರಿಸಬೇಕಾಯಿತು.

*"ಸದ್ದುಕಾಯರು"*– ಮತ್ತಾಯ 3:7. **2**

**4:2** ಸತ್ತವರು ಪುನರುತ್ಥಾನಗೊಳ್ಳುತ್ತಾರೆ ಎಂಬದನ್ನು ಸದ್ದುಕಾಯರು ನಂಬುತ್ತಾ ಇರಲಿಲ್ಲ (23:8). **3**

**4:3** ಆ ಸಮಯದಲ್ಲಿ ಇಸ್ರಾಯೇಲ್ ಎಂಥಾ ಜನಾಂಗವಾಗಿತ್ತು ಎಂಬದರ ಬಗ್ಗೆ ಇದು ತಿಳಿಸುತ್ತದೆ – ಲೋಕವು ಹಿಂದೆಂದೂ ಕೇಳಿರದ ಉತ್ತಮವಾದ ಸಂದೇಶವನ್ನು ಸಾರುತ್ತಿದ್ದ ಜನರನ್ನು ಸೆರೆಮನೆಗೆ ಹಾಕುತ್ತಿದ್ದರು, ಮರಣ ದಂಡನೆ ವಿಧಿಸುತ್ತಿದ್ದರು (5:17-18; 12:1-4). ಲೋಕದ ಕೆಲವು ಜನಾಂಗಗಳಲ್ಲಿ ಇದು ಈಗಲೂ ನಡೆಯುತ್ತಿದೆ. **4**

**4:4** 2:41 ನೋಡಿರಿ. **6**

**- 4:6** ಮತ್ತಾಯ 26:3,57; ಲೂಕ 3:2; ಯೋಹಾನ 18:13,24. **7**

**4:7** ಅವರಿಗೆ ನಿಸ್ಸಂದೇಹವಾಗಿ ಅವರ ಪ್ರಶ್ನೆಗೆ ಉತ್ತರ ತಿಳಿದಿತ್ತು, ಆದರೂ ಅವರ ಮೇಲೆ ಆರೋಪ ಹೊರಿಸಲು ಮಾರ್ಗಗಳನ್ನು ಹುಡುಕುತ್ತಿದ್ದರು. **8**

**4:8** ಯೇಸು ಕ್ರಿಸ್ತನ ಬಗ್ಗೆ ಬೋಧಿಸಲು ಪೇತ್ರನು ಈ ಪ್ರಶ್ನೆಯನ್ನೇ ಅವಕಾಶವಾಗಿ ಉಪಯೋಗಿಸಿಕೊಂಡನು. ಮತ್ತಾಯ 10:16-20 ರೊಂದಿಗೆ ಹೋಲಿಸಿ ನೋಡಿರಿ. **9**

**4:9** ಅವರ ಸ್ವಭಾವವನ್ನು ಆತನು ಅವರಿಗೆ ಯಾವ ರೀತಿ ಮನವರಿಕೆ ಮಾಡಿಸುತ್ತಿದ್ದಾನೆ ಎಂಬದನ್ನು ಗಮನಿಸಿರಿ – ಕುಂಟರಿಗೆ ಕರುಣೆ ತೋರಿಸುವವರನ್ನು ದೂಷಿಸುವಂಥ ಜನ ಅವರಾಗಿದ್ದರು! **10**

**4:10** 3:6,12 ನೋಡಿರಿ. ಒಂದೇ ಸಲ ಯೇಸು ಕ್ರಿಸ್ತನ ಕಾಟವನ್ನು ತಪ್ಪಿಸಿಕೊಳ್ಳಬಹುದು ಎಂಬದಾಗಿ ಈ ನಾಯಕರು ನಿರೀಕ್ಷಿಸಿದ್ದರು (ಮತ್ತಾಯ 27:65-66; 27:22-23,62-64). **11**

**- 4:11** ಕೀರ್ತನೆ 118:22; ಮತ್ತಾಯ 21:42-44. **12**

**4:12** ಅಪೊಸ್ತಲರು ಇದನ್ನು ಇತರರಿಗೆ ಕಲಿಸಿದರು ಯಾಕಂದರೆ ಯೇಸು ಕ್ರಿಸ್ತನು ಇದನ್ನು

ಅವರಿಗೆ ಕಲಿಸಿದ್ದನು. ಯೋಹಾನ 14:6; 10:7-8; 3:16-19,36 ನೋಡಿರಿ. ರಕ್ಷಣೆ ಹೊಸ ಒಡಂಬಡಿಕೆಯ ಪ್ರಾಮುಖ್ಯವಾದ ಪದಗಳಲ್ಲಿ ಒಂದಾಗಿದೆ. ಇದರಲ್ಲಿ ಪಾಪ ಕ್ಷಮಾಪಣೆ (ಲೂಕ 24:47), ಹೊಸ ಜನನ (ಯೋಹಾನ 1:12-13; 3:3-8), ಪಾಪದ ಬಂಧನದಿಂದ ಬಿಡುಗಡೆ (ಯೋಹಾನ 8:32-36), ದೇವರಿಂದ ನೀತಿವಂತರೆಂದು ಎಣಿಸಲ್ಪಡುವದು (ರೋಮಾ 1:16; 3:21-28; 4:7-8) ಮತ್ತು ದೇವರ ಪ್ರಸನ್ನತೆಯಲ್ಲಿ ಶಾಶ್ವತವಾಗಿ (ಯೋಹಾನ 14:3) ದೊರೆಯುವ ನಿತ್ಯಜೀವವನ್ನು (ಯೋಹಾನ 3:16) ಒಳಗೊಂಡಿದೆ. **13**

**4:13** ಯೇಸು ಕ್ರಿಸ್ತನು ಪುನರುತ್ಥಾನಗೊಂಡಿದ್ದಾನೆ ಮತ್ತು ನಾವು ಪವಿತ್ರಾತ್ಮಭರಿತರಾಗಿದ್ದೇವೆ ಎಂಬ ಅವರ ತಿಳುವಳಿಕೆಯ ಫಲಿತಾಂಶವೇ ಅವರ ಧೈರ್ಯವಾಗಿದೆ. ಬೇರೆ ಯಾವುದೂ ಸಮಂಜಸವಾದ ವಿವರಣೆಯಾಗಲು ಸಾಧ್ಯವಿಲ್ಲ. ಯೇಸು ಕ್ರಿಸ್ತನ ಮರಣದ ನಂತರ ಅವರುಬಹಳವಾಗಿ ಹೆದರಿಕೊಂಡು ಧೈರ್ಯವಿಲ್ಲದವರಾಗಿದ್ದರು (ಯೋಹಾನ 20:19). ಒಬ್ಬ ಸೇವಕ ಹುಡುಗಿಯ ಮುಂದೆ ನಿಲ್ಲಲು ಸಹ ಪೇತ್ರನಿಗೆ ಧೈರ್ಯವಿರಲಿಲ್ಲ (ಮತ್ತಾಯ 26:69-70). ಈಗಲಾದರೋ ಇಸ್ರಾಯೇಲಿನ ದುಷ್ಟ ನಾಯಕರ ಕೋಪವನ್ನು ಮತ್ತು ಮರಣವನ್ನು ಎದುರಿಸಲು ಸಹ ಅವನು ಧೈರ್ಯವುಳ್ಳವನಾಗಿದ್ದನು (ವ 29; 5:29-33,41,42). ಯೇಸು ಕ್ರಿಸ್ತನು ಇದನ್ನೇ ಮಾಡುವವನಾಗಿದ್ದಾನೆ ಮತ್ತು ಸಾಧಾರಣ ಜನರೊಂದಿಗೆ ಹೀಗೆ ನಡೆದುಕೊಳ್ಳುವವನಾಗಿದ್ದಾನೆ. ಮತ್ತು ಈ ನಾಯಕರು ಅವರ ಬೋಧನೆ ಮತ್ತು ಧೈರ್ಯಕ್ಕೆ ಮುಖ್ಯ ಕಾರಣ ಯೇಸು ಕ್ರಿಸ್ತನೇ ಎಂಬದನ್ನು ಅರಿತುಕೊಂಡರು. **16**

**4:16** ಈ ಜನರ ಹೃದಯ ಕಾಠಿಣ್ಯತೆಯನ್ನು ನೋಡಿರಿ. ಅಧ್ಬುತಕಾರ್ಯವು ನಡೆದಿದೆ ಎಂಬದು ಅವರಿಗೆ ಗೊತ್ತಿತ್ತು, ಆದರೆ ತನ್ನ ಶಿಷ್ಯರ ಮೂಲಕ ಅದನ್ನು ಮಾಡಿದ ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡಲು ನಿರಾಕರಿಸಿದರು. ಯೋಹಾನ 15:24 ರೊಂದಿಗೆ ಹೋಲಿಸಿ ನೋಡಿರಿ. **17**

**4:17** "*ಆ ಹೆಸರು*"– ಯೇಸು ಕ್ರಿಸ್ತನ ಹೆಸರು, ಅವರಿಗೆ ಆತನ ಹೆಸರನ್ನು ಉಚ್ಚರಿಸಲು ಸಹ ಇಷ್ಟವಿರಲಿಲ್ಲ. **18**

**4:18** ಆತ್ಮಭರಿತರಾಗಿದ್ದ ಶಿಷ್ಯರಿಗೆ ಇದು ನಿರರ್ಥಕವಾದ ಆಜ್ಞೆಯಾಗಿತ್ತು! ಕೈಯಿಂದ ಗಾಳಿಯನ್ನು ಹಿಡಿಯಲು ಸಾಧ್ಯವೇ? **19**

**4:19** 5:29 ನೋಡಿರಿ. ಕ್ರೈಸ್ತರು ಎಲ್ಲಾ ವಿಷಯಗಳಲ್ಲಿ ತಮ್ಮ ಅಧಿಕಾರಿಗಳಿಗೆ ವಿಧೇಯರಾಗಬೇಕು ಆದರೆ ಅವರ ಆಜ್ಞೆಗಳು ದೇವರ ವಾಕ್ಯಗಳಿಗೆ ವಿರುದ್ಧವಾಗಿದ್ದರೆ ಅಧೀನರಾಗಬಾರದು (ರೋಮಾ 13:1-2). ಅಂಥ ಪರಿಸ್ಥಿತಿಯಲ್ಲಿ ಅವರು ದೇವರಿಗೆ ವಿಧೇಯರಾಗಬೇಕು ಮತ್ತು ಎದುರಾಗುವ ಪರಿಸ್ಥಿತಿಗಳನ್ನು ಎದುರಿಸಬೇಕು. **20**

**4:20** ಆತ್ಮಭರಿತನಾಗಿರುವ ಯೇಸು ಕ್ರಿಸ್ತನ ಶಿಷ್ಯನು ಉಸಿರಾಡುವದನ್ನು ಬಿಡುವನೇ

ಹೊರತು ಆತನಿಗಾಗಿ ಮಾತನಾಡುವದನ್ನು ಬಿಡುವದೇ ಇಲ್ಲ. 2 ಕೊರಿಂಥ 5:14; ಯೆರೆ 20:9 ರೊಂದಿಗೆ ಹೋಲಿಸಿ ನೋಡಿರಿ. **21-22**

**4:21-22** ಇದೇ ಘಟನೆ ಕೆಲವರು ಜೀವ ಬೆದರಿಕೆ ಹಾಕುವಂತೆ ಮತ್ತು ಕೆಲವರು ದೇವರನ್ನು ಸ್ತುತಿಸುವಂತೆ ಮಾಡಿತು. **23**

**4:23** *"ಸ್ವಂತ ಜನರು"*– ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಟ್ಟಿದ್ದ ಜನರ ಗುಂಪು. **24**

**4:24** ಒಬ್ಬನೇ ದೇವರಾಗಿರುವ, ಸರ್ವಲೋಕದ ಸೃಷ್ಟಿಕರ್ತನಿಗೆ (ಆದಿ 1; ಯೋಹಾನ 1:1-3; ಇಬ್ರಿ 1:1-2) ಅವರು ಪ್ರಾರ್ಥನೆ ಮಾಡಿದರು. **25-26**

**4:25-26** ದೇವರಾತ್ಮನು ದಾವೀದನ ಮೂಲಕ ಮಾತನಾಡಿದನು ಎಂಬ ಅವರ ಮನವರಿಕೆಯನ್ನು ಗಮನಿಸಿರಿ. ಅವರು ಈ ಬೋಧನೆಯನ್ನು ಕರ್ತನಾದ ಯೇಸು ಕ್ರಿಸ್ತನಿಂದ ಕೇಳಿದ್ದರು (ಮತ್ತಾಯ 15:3,6; 22:43; ಯೋಹಾನ 10:35; ಲೂಕ 24:45). ಈ ಹೇಳಿಕೆಯನ್ನು ಕೀರ್ತನೆ 2:1-2 ರಿಂದ ತೆಗೆದುಕೊಳ್ಳಲಾಗಿದೆ. ಅಲ್ಲಿಯೇ ನೋಟ್ಸ್ ನೋಡಿರಿ. **27**

**- 4:27** ಲೂಕ 23:6-13. **28**

**4:28** 2:23 ನೋಡಿರಿ. "ಮೊದಲು ನೇಮಿಸಿದ್ದು" ಗ್ರೀಕ್ ಭಾಷೆಯಲ್ಲಿ ಇದೇ ಪದವಾಗಿದ್ದು ರೋಮಾ 8:29-30 ರಲ್ಲಿ "ಮೊದಲೇ ತಿಳುಕೊಂಡನು" ಎಂಬದಾಗಿ ಮತ್ತು 1 ಕೊರಿಂಥ 2:7 ರಲ್ಲಿ "ಮೊದಲೇ ನೇಮಿಸಿದನು" ಎಂಬದಾಗಿ ಭಾಷಾಂತರ ಮಾಡಲಾಗಿದೆ – ಈ ಪದ ಗ್ರೀಕ್ ಭಾಷೆಯಲ್ಲಿ ಕೇವಲ ಹೊಸ ಒಡಂಬಡಿಕೆಯಲ್ಲಿ ಮಾತ್ರವೇ ಬರೆಯಲ್ಪಟ್ಟಿದೆ. **29**

**4:29** ವಚನ 13. **30**

**4:30** ಅವರಿಗೆ ಅಧಿಕ ತೊಂದರೆಯಾಯಿತು ಎಂಬದು ಇದರ ಅರ್ಥವಾಗಿದೆಯಾದರೂ, ದೇವರು ಇಲ್ಲಿಯ ತನಕ ಅವರ ಮೂಲಕ ಮಾಡುತ್ತಿರುವ ಕಾರ್ಯವನ್ನು ಮುಂದುವರೆಸಬೇಕೆಂದು ಅವರು ಪ್ರಾರ್ಥನೆ ಮಾಡಿದರು. ಯೇಸು ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದಿದ್ದಾನೆ ಮತ್ತು ಆತನ ದೇಹವನ್ನು ಸಮಾಧಿಯೊಳಗಿಂದ ತೆಗೆಯುವದರಲ್ಲಿ ಅವರು ಏನೂ ಮಾಡಿಲ್ಲ ಎಂಬದು ಅವರಿಗೆ ಗೊತ್ತಿದೆ ಎಂಬದಕ್ಕೆ ಬಲವಾದ ಸಾಕ್ಷಿಗಳಾಗಿವೆ (ಮತ್ತಾಯ 27:64; 28:6). **31**

**4:31** 2:2-4 ನೋಡಿರಿ. ಅವರು ಮತ್ತೊಮ್ಮೆ ಪವಿತ್ರಾತ್ಮಭರಿತರಾದರು. ದೇವರಾತ್ಮನ ತುಂಬಲ್ಪಡುವಿಕೆಯು ಒಂದು ಸಾರಿಯಾಗಿತ್ತು ಪುನಃ ಆಗದಿರುವಂಥದ್ದಲ್ಲ. ನಾವು ಪ್ರತಿದಿನ ದೇವರಾತ್ಮಭರಿತರಾಗಬಹುದು. **32-35**

**4:32-35** 2:44-45 ನೋಡಿರಿ. ಅವರು ಈ ಕಾರ್ಯವನ್ನು ಮಾಡಿದರು, ಯಾಕಂದರೆ, ಗಮನಿಸಿರಿ, ಅವರ ಹೃದಯವೂ ಪ್ರಾಣವೂ ಒಂದೇ ಆಗಿತ್ತು. ಯೇಸು ಕ್ರಿಸ್ತನು ಮತ್ತು ಆತನ ಕೆಲಸದ ಬಗ್ಗೆ ಅವರ ಆಲೋಚನೆ ಹಾಗೂ ಉದ್ದೇಶಗಳು ಒಂದೇ ಆಗಿದ್ದವು ಮತ್ತು

ತಮ್ಮನ್ನು ಪ್ರೀತಿಸುವಂತೆಯೇ ಅವರು ತಮ್ಮ ಜೊತೇ ವಿಶ್ವಾಸಿಗಳನ್ನು ಪ್ರೀತಿಸುತ್ತಿದ್ದರು. **33**

**4:33** ಇಸ್ರಾಯೇಲಿನ ಧಾರ್ಮಿಕ ನಾಯಕರ ಬೆದರಿಕೆಗಳು ವಿಪರೀತವಾಗಿದ್ದವು. ಯೇಸು ಕ್ರಿಸ್ತನ ಪುನರುತ್ಥಾನವು ಅವರ ಸಂದೇಶದ ಮುಖ್ಯ ವಿಷಯವಾಗಿತ್ತು ಎಂಬದನ್ನು ಮತ್ತೊಮ್ಮೆ ಗಮನಿಸಿರಿ – 1:22; 2:24,32; 3:15,26; 4:2,10; 5:30; 10:40; 13:20; 17:18,31; 23:6. **36**

**4:36** 9:27; 11:22-25,30; 12:25; 13:1-2 ನೋಡಿರಿ.

*"ಲೇವಿಯನು"*– ಎಂದರೆ ಲೇವಿ ಕುಲದವನು, ದೇವಾಲಯದ ಸೇವೆಗಾಗಿ ದೇವರು ಇಸ್ರಾಯೇಲಿನ ಈ ಕುಲವನ್ನು ಬೇರ್ಪಡಿದ್ದನು (ಸಂಖ್ಯಾ 3:5-10). ಲೆಬನೋನಿನ ಪಶ್ಚಿಮದಲ್ಲಿರುವ ಮೆಡಿಟರೇನಿಯನ್ ಸಮುದ್ರದಲ್ಲಿ ಕುಪ್ರದ್ವೀಪ ಇತ್ತು.

# 5 1-2

**5:1-2** ದೇವರ ಸಭೆಯು ನಡತೆಯಲ್ಲಿ ಪರಿಶುದ್ಧತೆಯುಳ್ಳದ್ದಾಗಿತ್ತು, ಪವಿತ್ರಾತ್ಮಭರಿತವಾಗಿತ್ತು ಮತ್ತು ಸಾಕ್ಷಿ ಕೊಡುವದಾಗಿತ್ತು. ಪಾಪದ ಕಾರ್ಯಗಳನ್ನು ಬಿಟ್ಟರೆ ಅದರ ಕಾರ್ಯ ಮತ್ತು ಅಭಿವೃದ್ಧಿಯನ್ನು ತಡೆಯಲು ಯಾವುದರಿಂದಲೂ ಸಾಧ್ಯವಿಲ್ಲ. ಇಲ್ಲಿ ಸೈತಾನನು ಸಭೆಯೊಳಗೆ ಪಾಪದ ಕಾರ್ಯಗಳ ಪರಿಚಯಿಸಲು ಪ್ರಯತ್ನಿಸುವದನ್ನು ನಾವು ನೋಡಬಹುದು. ಇದಕ್ಕೆ ಪೂರಕವಾಗಿ, ಅನನೀಯನು ಮತ್ತು ಅವನ ಹೆಂಡತಿ ನಾವು ನಮಗೆ ಬಂದ ಹಣವನ್ನು ಪೂರ್ತಿಯಾಗಿ ಕೊಡುತ್ತಿದ್ದೇವೆ ಎಂದು ಹೇಳಿದರು (ವ 8). ಅವರು ಉದಾರಿಗಳಾಗದಿದ್ದರೂ ಉದಾರಿಗಳೆಂಬ ಹೆಸರು ಪಡೆಯಲು ಬಯಸಿದರು. ಅವರು ನಿಜವಾಗಿಯೂ ಆತ್ಮೀಕರಾಗಿರಲಿಲ್ಲ ಆದರೂ ಇತರರು ಅವರನ್ನು ಆತ್ಮೀಕರೆಂದು ತಿಳಿದುಕೊಳ್ಳಬೇಕೆಂಬದಾಗಿ ಬಯಸಿದರು. ಇದು ಕಪಟತನವಾಗಿದೆ. ಮತ್ತಾಯ 6:2-4; 23:5-7 ರೊಂದಿಗೆ ಹೋಲಿಸಿ ನೋಡಿರಿ. **3-4**

**5:3-4** ಅವರು ತಮ್ಮ ಹೊಲವನ್ನು ಮಾರುವ ಮತ್ತು ಅದರ ಹಣವನ್ನು ಸಭೆಗೆ ಕೊಡುವ ಅವಶ್ಯಕತೆಯೇ ಇರಲಿಲ್ಲ (2:44-45). ಅನನೀಯನು ಹೇಳಿದ ಸುಳ್ಳು ಸೈತಾನನಿಂದ ಬಂದದ್ದಾಗಿತ್ತು ಎಂಬದನ್ನು ಗಮನಿಸಿರಿ. ಯೋಹಾನ 8:44 ನೋಡಿರಿ. ಸೈತಾನನು ಆ ಸಲಹೆಯನ್ನು ಕೊಟ್ಟನು ಮತ್ತು ಅನನೀಯನು ಅದನ್ನು ಪಾಲಿಸಿದನು. ದೇವಜನರಿಗೆ ಸುಳ್ಳು ಹೇಳುವದು ದೇವರಿಗೇ ಸುಳ್ಳು ಹೇಳುವದಕ್ಕೆ ಸಮಾನವಾಗಿದೆ ಎಂಬದನ್ನು ಗಮನಿಸಿರಿ. 9:4-5; ಮತ್ತಾಯ 25:34-46; ಮಾರ್ಕ 9:37 ನೋಡಿರಿ. ಸುಳ್ಳು ಹೇಳುವದರ ಕುರಿತಾದ ನೋಟ್ಸ್ ಮತ್ತು ರೆಫರೆನ್ಸ್ ಗಳಿಗಾಗಿ ವಿಮೋ 20:16; ಕೀರ್ತನೆ 5:6; 15:2; 51:6; ಜ್ಞಾನೋ 6:16-19; 12:22; ಎಫೆ 4:15,25; ಕೊಲೊ 3:9; ಪ್ರಕ 21:8,27; 22:15 ನೋಡಿರಿ. ಸುಳ್ಳು ಹೇಳುವ ಶೋಧನೆಗೆ ಒಳಗಾಗುವವರು ಮೇಲಿನ ವಿಷಯಗಳ ಕಡೆಗೆ ಗಮನ ಕೊಡಿರಿ.

ಸುಳ್ಳು ಹೇಳುವದು ಅತ್ಯಂತ ಮೂರ್ಖತನವಾಗಿದೆ, ದುಷ್ಟತನವಾಗಿದೆ ಮತ್ತು ಅಪಾಯಕಾರಿ ಕಾರ್ಯವಾಗಿದೆ. **5**

**5:5** ಅನನೀಯನ ಮರಣವು ದೇವರು ಅವನಿಗೆ ವಿಧಿಸಿದ ನ್ಯಾಯತೀರ್ಪಾಗಿದೆಯೇ ಹೊರತು, ಪೇತ್ರನು ಮಾಡಿದ ಯಾವುದೇ ಕಾರ್ಯಗಳ ಫಲಿತಾಂಶವಲ್ಲ. ಸುಳ್ಳು ಹೇಳುವದು ಮತ್ತು ಕಪಟತನ ಮರಣಕರ ವಿಷಕ್ಕೆ ಸಮಾನವಾಗಿವೆ. ಅನನೀಯನ ಪಾಪವು ಸಭೆಯ ಜೀವಿತಕ್ಕೆ ಗಂಭೀರವಾದ ಅಪಾಯವಾಗಿತ್ತು ಮತ್ತು ಆ ಪರಿಸ್ಥಿತಿ ಕಠಿಣವಾದ ಪರಿಹಾರವನ್ನು ಬಯಸುವದಾಗಿತ್ತು.

"*ಭಯ*"– ದೇವರನ್ನು ವಿರೋಧಿಸಬಾರದೆಂಬ ಭಯ ಮತ್ತು ಕಪಟತನ ಹಾಗೂ ಸುಳ್ಳು ಹೇಳುವಿಕೆಗೆ ದೊರೆಯುವ ಶಿಕ್ಷೆ ಆರೋಗ್ಯಕರವಾದ ಸಂಗತಿಗಳಾಗಿವೆ. ದೇವರ ಭಯ ಕುರಿತಾದ ನೋಟ್ಸ್ ಗಾಗಿ ಆದಿ 20:11; ಯೋಬ 28:28; ಕೀರ್ತನೆ 34:11-14; 111:10; ಜ್ಞಾನೋ 1:7 ನೋಡಿರಿ. **9**

**5:9** ದೇವರು ತನ್ನ ನ್ಯಾಯತೀರ್ಪು ಆಕೆಯ ಮೇಲೆಯೂ ಬರುವದು ಎಂಬದನ್ನು ಪೇತ್ರನಿಗೆ ಪ್ರಕಟಿಸಿದನು. ಪೇತ್ರನು ಆಕೆಗೆ ತನ್ನ ಕತೆಯನ್ನು ಬದಲಾಯಿಸುವ ಮತ್ತು ಪಶ್ಚಾತ್ತಾಪಪಡುವ ಅವಕಾಶವನ್ನು ಕೊಟ್ಟನು, ಆದರೆ ಅವಳು ಅವನೆದುರಿಗೇ ಸುಳ್ಳು ಹೇಳಿದಳು. ಅವರ ಪಾಪವು ದೇವರಾತ್ಮನನ್ನು ಪರೀಕ್ಷಿಸುವದಾಗಿತ್ತು ಎಂಬದನ್ನು ಗಮನಿಸಿರಿ. ಧರ್ಮೋ 6:16; ಮತ್ತಾಯ 4:7; ವಿಮೋ 17:7; ಕೀರ್ತನೆ 95:7-11 ನೋಡಿರಿ. **11**

**5:11** ಕ್ರೈಸ್ತರು ಪಾಪ ಮಾಡಲು ಹೆದರಿಕೊಳ್ಳುವಾಗ ಸಭೆಯು ಪರಿಶುದ್ಧವಗಿರುತ್ತದೆ ಮತ್ತು ತನ್ನ ಕೆಲಸದಲ್ಲಿ ಸುಗಮವಾಗಿ ಮುಂದೆ ಸಾಗುತ್ತದೆ. ಕೃಪೆ ಮತ್ತು ಪವಿತ್ರಾತ್ಮನ ಈ ಯುಗದ ಪ್ರಾರಂಭದಲ್ಲಿ, ಕೃಪೆ ಎಂದರೆ ಪಾಪವನ್ನು ನಿರ್ಲಕ್ಷಿಸುವದು ಮತ್ತು ಶಿಕ್ಷಿಸದೆ ಬಿಡುವದಲ್ಲ ಎಂಬದನ್ನು ಪ್ರಾರಂಭಿಸಿದನು. ಸಭೆಯಲ್ಲಿ ಕಪಟತನ, ವಂದನೆ ಮತ್ತು ಸುಳ್ಳು ಹೇಳುವದರ ಬಗ್ಗೆ ಆತನು ಏನು ಯೋಚಿಸುತ್ತಾನೆ ಎಂಬದಕ್ಕೆ ಆತನು ಎಲ್ಲಾ ಕಾಲಕ್ಕೂ ಸಲ್ಲುವ ಮಾದರಿಯನ್ನು ತೋರಿಸಿದ್ದಾನೆ - ದೇವರ ದೃಷ್ಟಿಯಲ್ಲಿ ಮೇಲಿನ ಕಾರ್ಯಗಳೆಲ್ಲವೂ ಮರಣದಂಡನೆಯನ್ನು ಕೊಡುವವುಗಳಾಗಿವೆ. ಇದರ ಅರ್ಥ ಈ ರೀತಿಯ ಅಪರಾಧ ಮಾಡಿದ ಎಲ್ಲರನ್ನೂ ದೇವರು ಸಾಯಿಸುವನು ಎಂಬದಲ್ಲ. ಇಡೀ ವಿಶ್ವಾಸಿಗಳಲ್ಲಿ ಭಯವನ್ನು ನೆಲೆಗೊಳಿಸಲು ಒಂದು ಉದಾಹರಣೆ ಸಾಕಾಗಿದೆ. ನಮಗೂ ಇದು ಅನ್ವಯಿಸುತ್ತದೆ. ದೇವರು ಎಲ್ಲಾ ರೀತಿಯ ಸುಳ್ಳುಗಳನ್ನು ಮತ್ತು ವಂಚನೆಗಳನ್ನು ದ್ವೇಷಿಸುತ್ತಾನೆ ಹಾಗೂ ಇಂಥ ಕಾರ್ಯಗಳನ್ನು ಅಭ್ಯಾಸಿಸುವವರು ಘೋರವಾದ ಅಪಾಯದಲ್ಲಿದ್ದಾರೆ ಎಂಬದನ್ನು ನಮಗೆ ಕಲಿಸಲು ಇನ್ನೇನು ಬೇಕು? ಧರ್ಮಶಾಸ್ತ್ರವನ್ನು ಕೊಡುವಾಗ ಧರ್ಮಶಾಸ್ತ್ರಕ್ಕೆ ಯಾವುದು ಅವಿಧೇಯತೆಯಾಗಿದೆ ಎಂದು ತಾನು ಪರಿಗಣಿಸುವೆನು ಎಂಬದನ್ನು ಆತನು ಸಂಖ್ಯಾ 15:32-36 ರಲ್ಲಿ ತೋರಿಸಿದ್ದಾನೆ. ಕಾನಾನ್

ದೇಶವನ್ನು ವಶಪಡಿಸಿಕೊಳ್ಳುವ ಸಮಯದ ಪ್ರಾರಂಭದಲ್ಲಿಯೂ ದೇವರು ಒಂದು ಉದಾಹರಣೆಯನ್ನು ತೋರಿಸಿದ್ದಾನೆ. ಯೆಹೋಶುವ 7 ನೇ ಅಧ್ಯಾಯ ನೋಡಿರಿ. ಸ್ಥಳೀಯ ಸಭೆಯಲ್ಲಿ ಒಂದುವೇಳೆ ಪಾಪವನ್ನು ಸಹಿಸಿಕೊಂಡರೆ ಅದು ಆ ಸಭೆಗೆ ದೊಡ್ಡ ಅಪಾಯವಾಗಿದೆ. ಅದು ಕ್ಯಾನ್ಸರ್ ನಂತೆ ಕಡೆಯಲ್ಲಿ ಇಡೀ ದೇಹವನ್ನೇ ಕೊಲ್ಲುತ್ತದೆ. ಈ ವಾಕ್ಯದಲ್ಲಿ "ಸಭೆ" ಎಂಬದಾಗಿ ಬರೆಯಲ್ಪಟ್ಟಿರುವ ಪದ ಕ್ರಿಸ್ತನ ಜನರಾಗಲು ಸುತ್ತಮುತ್ತಲ ಜನರ ಮಧ್ಯದಿಂದ ಕರೆಯಲ್ಪಟ್ಟಿರುವ ವಿಶ್ವಾಸಿಗಳ ಸಂಘವನ್ನು ಸೂಚಿಸುತ್ತದೆ. ಮತ್ತಾಯ 16:18 ರಲ್ಲಿ ನೋಟ್ ನೋಡಿರಿ. **12**

**5:12** 2:43; 3:11 ನೋಡಿರಿ. **13**

**5:13** ವಚನ 11. **14**

**5:14** ಪರಿಶುದ್ಧವಾಗಿರುವ, ಸಾಕ್ಷಿ ಕೊಡುವ ಸಭೆ ಪಾಪಿಗಳು ಕ್ರಿಸ್ತನ ಕಡೆಗೆ ತಿರುಗಿಕೊಳ್ಳುವದನ್ನು ನೋಡುತ್ತದೆ. ಅನನೀಯ ಮತ್ತು ಅವನ ಹೆಂಡತಿಗೆ ನ್ಯಾಯತೀರ್ಪಾದ ನಂತರ ಸಭೆ ಮತ್ತೊಮ್ಮೆ ಹೊಸ ಜಯಗಳೆಡೆಗೆ ಸಾಗಿತು. ಯೆಹೋಶುವ 8 ನೇ ಅಧ್ಯಾಯವನ್ನು ಹೋಲಿಸಿ ನೋಡಿರಿ. **15**

**5:15** ಪೇತ್ರನಿಗಾಗಲಿ ಅಥವಾ ಅವನ ನೆರಳಿಗಾಗಲಿ ಗುಣಪಡಿಸುವ ಶಕ್ತಿ ಇರಲಿಲ್ಲ (3:12). ಜನರ ದೃಷ್ಟಿಯಲ್ಲಿ ಅಪೊಸ್ತಲರನ್ನು ಘನಪಡಿಸಲು ಮತ್ತು ಅವರ ಬೋಧನೆಯ ಸತ್ಯವನ್ನು ಸ್ಥಾಪಿಸಲು ದೇವರು ಈ ಮಾರ್ಗವನ್ನು ಆರಿಸಿಕೊಂಡನು. ಈಗ ಅವರ ಬೋಧನೆ ಬಹು ಕಾಲದ ಹಿಂದೆಯೇ ಸ್ಥಾಪಿಸಲ್ಪಟ್ಟಿದೆ ಮತ್ತು ನಮಗೆ ಹೊಸ ಒಡಂಬಡಿಕೆಯನ್ನು ಕೊಡಲಾಗಿದೆ. ಈಗ ಬೇರೊಬ್ಬರ ಮೂಲಕ ಸತ್ಯವನ್ನು ಮತ್ತೊಮ್ಮೆ ಸ್ಥಾಪಿಸುವ ಅಥವಾ ಅದನ್ನು ಮಾಡಲು ಸೂಚಕಕಾರ್ಯಗಳನ್ನು, ಅದ್ಭುತಕಾರ್ಯಗಳನ್ನು ಮತ್ತು ಮಹತ್ಕಾರ್ಯಗಳನ್ನು ನಡೆಸುವ ಅವಶ್ಯಕತೆ ಇಲ್ಲ. **16**

**5:16** ಇಲ್ಲಿ ಯೇಸು ಕ್ರಿಸ್ತನ ಸುವಾರ್ತೆಯು ಯೆರೂಸಲೇಮಿನಿಂದ ಹೊರಗೆ ಹಬ್ಬಲು ಪ್ರಾರಂಭಿಸುವದನ್ನು ನಾವು ನೋಡಬಹುದು.

*"ಅಶುದ್ಧ ಆತ್ಮಗಳು"*– ಮತ್ತಾಯ 4:24 ರಲ್ಲಿ ನೋಟ್ ನೋಡಿರಿ. **17**

**5:17** *"ಸದ್ದುಕಾಯರು"*– ಮತ್ತಾಯ 3:7. ಮತ್ತಾಯ 27:18; ಜ್ಞಾನೋ 27:4; ಗಲಾ 5:26 ರಲ್ಲಿ ಹೊಟ್ಟೆಕಿಚ್ಚು ಮತ್ತು ಅಸೂಯೆಯ ಕುರಿತಾದ ನೋಟ್ ನೋಡಿರಿ. **18**

**5:18** 4:3 ನೋಡಿರಿ. **19**

**5:19** *"ಕರ್ತನ ದೂತನು"*– ಮತ್ತಾಯ 1:20; ಆದಿ 16:7 ರ ನೋಟ್ಸ್ ನೋಡಿರಿ. ದೇವರು ತನ್ನ ದೂತನನ್ನು ತನ್ನ ಜನರೊಂದಿಗೆ ಮಾತನಾಡಲು ಕಳುಹಿಸುತ್ತಾನೆ (ಇಬ್ರಿ 1:14). ಅವರೇನು ಮಾಡುವರು ಎಂಬದಕ್ಕೆ ಇಲ್ಲೊಂದು ಉದಾಹರಣೆಯನ್ನು ಕೊಡಲಾಗಿದೆ. ಆದರೆ ಅವರು ಯಾವಾಗಲೂ ವಿಶ್ವಾಸಿಗಳನ್ನು ಕಷ್ಟಗಳಿಂದ ತಪ್ಪಿಸುವದಿಲ್ಲ (12:1-2; 24:27; 2

ಕೊರಿಂಥ 11:23-27). **20**

**5:20** ಅವರು ಭಯದಿಂದ ತಮ್ಮ ಮನೆಗಳಿಗೆ ಹಿಂದಿರುಗಲು ಮತ್ತು ಮೌನವಾಗಿರಲು ಅವರನ್ನು ಬಿಡುಗಡೆ ಮಾಡಲಿಲ್ಲ. ಇಲ್ಲಿ ಸುವಾರ್ತೆಯನ್ನು "ಸಜ್ಜೀವವಾಕ್ಯ" ಎಂದು ಕರೆಯಲಾಗಿದೆ – ಅದ ಜನರಿಗೆ ಹೊಸ ಜೀವವನ್ನು ಕೊಡುತ್ತದೆ (ಯೋಹಾನ 3:16; 5:24), ಮತ್ತು ಅವರು ಹೊಸ ಮಾರ್ಗದಲ್ಲಿ ಜೀವಿಸಲು ಸಹಾಯ ಮಾಡುತ್ತದೆ. **21**

**5:21** ವಿಧೇಯತೆಯು ಅವರ ನಂಬಿಕೆಯ ಗುರುತಾಗಿತ್ತು – ಯಾವುದೇ ಪರಿಸ್ಥಿತಿಯಲ್ಲಿಯೂ ಅವರು ವಿಧೇಯರಾಗಲು ಸಿದ್ಧರಾಗಿದ್ದರು.

*"ಹಿರೀಸಭೆ"*– ಹಿರಿಯರು – ಮತ್ತಾಯ 5:22. **26**

**5:26** ಮತ್ತಾಯ 21:46; ಲೂಕ 22:2. ಈ ಧಾರ್ಮಿಕ ನಾಯಕರು ಇಷ್ಟಾದರೂ ನೀತಿಯ ಬಗ್ಗೆ ಚಿಂತಿಸುವವರಾಗಿರಲಿಲ್ಲ. ಅವರು ಆಳ್ವಿಕೆ ಮಾಡಲು ಬಯಸಿದರು ಆದರೆ ತಾವೇ ಹೊಟ್ಟೆಕಿಚ್ಚು, ಹಗೆತನ ಮತ್ತು ಭಯದ ಆಳ್ವಿಕೆಗೆ ಒಳಗಾಗಿದ್ದರು. **28**

**5:28** *"ಆ ಹೆಸರು"*, *"ಆ ಮನುಷ್ಯನು"*– ಯೇಸು ಕ್ರಿಸ್ತನು. 4:17 ರ ನೋಟ್ ನೋಡಿರಿ. ಅವರು ಮೂರ್ಖತನದಿಂದ ನಿಷ್ಕಾರಣವಾಗಿ ಅಪೊಸ್ತಲರ ಮೇಲೆ ಆರೋಪ ಹೊರಿಸಿದರು. ಅವರು ತಾವೇ ಸಂಪೂರ್ಣವಾಗಿ ಅಪರಾಧಿಗಳಾಗಿದ್ದರು. ಮತ್ತಾಯ 27:24-25 ನೋಡಿರಿ. **29**

**5:29** 4:19 ನೋಡಿರಿ. ದೇವರ ಆಜ್ಞೆ ಮತ್ತು ಮನುಷ್ಯರ ಆಜ್ಞೆಯ ನಡುವೆ ಹೋರಾಟಗಳು ಕಾಣಿಸಿಕೊಳ್ಳುವಾಗ ಕ್ರಿಸ್ತನಲ್ಲಿರುವ ಪ್ರತಿಯೊಬ್ಬ ವಿಶ್ವಾಸಿಯ ಮೇಲೆ ಆಳ್ವಿಕೆ ಮಾಡುವ ತತ್ವವನ್ನು ನಾವು ಇಲ್ಲಿ ನೋಡಬಹುದು. ಅವರಿಗೆ ವಿಧೇಯತೆ ಎಂದರೆ ಹಿಂಸೆ, ಸೆರೆವಾಸ ಮತ್ತು ಕಡೆಯಲ್ಲಿ ಮರಣವಾಗಿತ್ತು, ಆದರೆ ಅವರು ಈ ತತ್ವವನ್ನು ದೃಢವಾಗಿ ಹಿಡಿದುಕೊಂಡಿದ್ದರು. **30**

**5:30** 2:23; 4:10 ನೋಡಿರಿ. ಪೇತ್ರನು ಶಿಲುಬೆಯನ್ನು "ಮರ" ಎಂದು ಕರೆದಿದ್ದಾನೆ (ಹಾಗೆಯೇ 10:39; ಗಲಾ 3:13; 3:29; 1 ಪೇತ್ರ 2:24 ನೋಡಿರಿ). ಧರ್ಮೋ 21:22 ರೊಂದಿಗೆ ಹೋಲಿಸಿ ನೋಡಿರಿ. **31**

**5:31** 2:33-36 ನೋಡಿರಿ. ಇಲ್ಲಿ "ನಾಯಕ" ಎಂದರೆ "ಮುಖ್ಯಸ್ಥನು." ಮತ್ತೊಂದು ಗಮನಿಸಿರಿ ಪಶ್ಚಾತ್ತಾಪ ಮತ್ತು ಕ್ಷಮಾಪಣೆ ಒಟ್ಟಾಗಿ ಸಾಗುತ್ತದೆ ಮತ್ತು ಇವೆರೆಡೂ ಯೇಸು ಕ್ರಿಸ್ತನು ಕೊಡುವ ವರದಾನಗಳಾಗಿವೆ (2:38; ಲೂಕ 24:47; 2 ತಿಮೊ 2:25). **32**

**5:32** 1:8; 2:32; 3:15; 4:33 ನೋಡಿರಿ. ಅಪೊಸ್ತಲರ ಮೂಲಕ ಅದ್ಭುತಗಳನ್ನು ಮಾಡುವದು, ಅಪೊಸ್ತಲರಿಗೆ ಅವರ ಸಾಕ್ಷಿಯಲ್ಲಿ ಅಧಿಕಾರ ಮತ್ತು ಶಕ್ತಿಯನ್ನು ಕೊಡುವದು ಮತ್ತು ಅದನ್ನು ಕೇಳಿಸಿಕೊಳ್ಳುವವರ ಹೃದಯದಲ್ಲಿ ಮಾತನಾಡುವ ಮೂಲಕ ಪವಿತ್ರಾತ್ಮನು ಸಾಕ್ಷಿಯಾಗಿದ್ದನು. ವಿಧೇಯತೆ ಮತ್ತು ದೇವರಾತ್ಮನನ್ನು ಪಡೆಯುವದರ ನಡುವೆಯಿರುವ

ಸಂಪರ್ಕವನ್ನು ಗಮನಿಸಿರಿ. ಬೇಡಿಕೊಳ್ಳುವಾಗ ದೇವರಾತ್ಮನು ಬರುತ್ತಾನೆ (ಲೂಕ 11:13) ಮತ್ತು ನಂಬಿಕೆಯಿಂದ ನಾವು ಆತನನ್ನು ಪಡೆಯಬಹುದು ಎಂದು ಇತರೆ ಸ್ಥಳಗಳಲ್ಲಿ ನಮಗೆ ಹೇಳಲಾಗಿದೆ. ಪೇತ್ರನು ಕರ್ತನಾದ ಯೇಸು ಕ್ರಿಸ್ತನಲ್ಲಿರುವ ನಂಬಿಕೆಯ ವಿಧೇಯತೆಯ ಬಗ್ಗೆ ಮಾತನಾಡುತ್ತಿದ್ದಾನೆ. ಯೋಹಾನ 6:29; ರೋಮಾ 1:5 ನೋಡಿರಿ. ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವದೆಂದರೆ ದೇವರ ಚಿತ್ತಕ್ಕೆ ವಿಧೇಯರಾಗುವದಾಗಿದೆ. ಕ್ರಿಸ್ತನಿಗೆ ಒಪ್ಪಿಸಿಕೊಡುವ ತೀರ್ಮಾನ ಮತ್ತು ಆತನಿಗೆ ವಿಧೇಯರಾಗುವ ಬಯಕೆ ಇರುವ ಸಮಯದಲ್ಲಿ ಮಾತ್ರವೇ ನಂಬಿಕೆಯು ಸಾಧ್ಯವಾಗಿರುತ್ತದೆ. ದೇವರಿಗೆ ಒಪ್ಪಿಸಿಕೊಡದಿರುವ ಪ್ರತಿರೋಧವುಳ್ಳುವ ಹೃದಯದಲ್ಲಿ ನಂಬಿಕೆಯು ಬೆಳೆಯಲು ಆಗುವದಿಲ್ಲ. ತನ್ನನ್ನು ನಂಬುವ ಮತ್ತು ತನ್ನಲ್ಲಿ ಭರವಸೆಯನ್ನಿಡುವ ಹಾಗೂ ತನ್ನಲ್ಲಿ ಭಯಭಕ್ತಿಯುಳ್ಳವರಾಗಿದ್ದು ತನ್ನ ಆಜ್ಞೆಗಳಿಗೆ ವಿಧೇಯರಾಗುವವರಿಗೆ ದೇವರು ತನ್ನ ಆತ್ಮನನ್ನು ಕೊಡುತ್ತಾನೆ. ಹಾಗೆಯೇ ಮತ್ತಾಯ 7:21; ರೋಮಾ 10:9-10 ನೋಡಿರಿ. **33**

**5:33** ಇದು ಬೆಳಕಿಗಿಂತ ಹೆಚ್ಚಾಗಿ ಕತ್ತಲೆಯನ್ನೇ ಪ್ರೀತಿಸಿದ ಜನರ ನಿಷ್ಕಾರಣವಾದ ಪ್ರತಿಕ್ರಿಯೆಯಾಗಿದೆ (ಯೋಹಾನ 3:19-20; 10:31; 12:10-11; 15:18-20). **34**

**5:34** *"ಫರಿಸಾಯರು"*– ಮತ್ತಾಯ 3:7. ತಾರ್ಸದ ಸೌಲನು ಅಪೊಸ್ತಲನಾದ ಪೌಲನಾಗುವ ಮೊದಲು ಗಮಾಲಿಯೇಲನು ಅವನ ಗುರುವಾಗಿದ್ದನು (22:3). **36-37**

**5:36-37** ಈ ಘಟನೆಗಳು ಸತ್ಯವೇದದಲ್ಲಿ ಬರೆಯಲ್ಪಟ್ಟಿಲ್ಲ. **38-39**

**5:38-39** ಯೆಹೂದ್ಯ ನಾಯಕರ ಕೋಪವನ್ನು ಶಾಂತಪಡಿಸಲು ಮತ್ತು ಆ ಸಮಯದಲ್ಲಿ ಅಪೊಸ್ತಲರನ್ನು ಮರಣದಿಂದ ತಪ್ಪಿಸಲು ದೇವರು ಈ ಸಲಹೆಯನ್ನು ಉಪಯೋಗಿಸಿಕೊಂಡನು. ಆದರೆ ನಿಜವಾಗಿಯೂ ನೋಡುವದಾದರೆ ಗಮಾಲಿಯೇಲನ ಮೊದಲನೆಯ ಹೇಳಿಕೆಯು ತಪ್ಪಾದದ್ದಾಗಿದೆ. ಮಾನವ ಆಲೋಚನೆ ಮತ್ತು ಧರ್ಮದ ಅನೇಕ ಪದ್ಧತಿಗಳು ಹಾಗೂ ಸೈತಾನನ ಅನೇಕ ಕಾರ್ಯಗಳು ಶತಮಾನಗಳಿಂದ ನಡೆಯುತ್ತಲೇ ಅವೆ ಮತ್ತು ಯಶಸ್ವಿಯಾಗುತ್ತಿರುವಂತೆ ಹಾಗೂ ಹೆಚ್ಚಾಗುತ್ತಿರುವಂತೆ ಅನ್ನಿಸುತ್ತವೆ. ಆದರೆ ಗಮಾಲಿಯೇಲನು ನಿತ್ಯತ್ವದ ದೃಷ್ಟಿಕೋನದಲ್ಲಿ ಸರಿಯಾಗಿದ್ದನು. ಸಾಧಾರಣ ಮನುಷ್ಯನ ಆಲೋಚನೆಗಳ ಮೇಲೆ ನೆಲೆಯಾಗುವ ಕಾರ್ಯಗಳು ಕ್ರಮೇಣವಾಗಿ ಕ್ಷೀಣಿಸುತ್ತವೆ (ಯೆಶಾಯ 2:10-22 ರೊಂದಿಗೆ ಹೋಲಿಸಿ ನೋಡಿರಿ). 29ನೇ ವಚನದ ಗಮಾಲಿಯೇಲನ ಮಾತುಗಳು ಯಾವಾಗಲೂ ಸತ್ಯವಾಗಿವೆ ಮತ್ತು ಆಗ ಬಹುತೇಕರು ಏನು ಮಾಡಿದರು (ಈಗಲೂ ಮಾಡುತ್ತಿದ್ದಾರೆ) – "ದೇವರಿಗೆ ವಿರುದ್ಧವಾಗಿ ಹೋರಾಡಿದರು" ಎಂಬದನ್ನು ಅವನು ಯುಕ್ತವಾಗಿ ವಿವರಿಸಿದನು. **40**

**5:40** ಇದು ಘೋರವಾದ ಶಿಕ್ಷೆಯಾಗಿದೆ. ಅವರು ಅವರ ಬೆನ್ನ ಮೇಲೆ 39 ಚಡಿ ಏಟುಗಳನ್ನು ಹೊಡೆದರು (ಮತ್ತಾಯ 27:26; 2 ಕೊರಿಂಥ 11:24). **41**

**5:41** ದೇವರೊಂದಿಗೆ ಸರಿಯಾದ ಸಂಬಂಧವುಳ್ಳವರಾಗಿರುವದು ಮತ್ತು ಕರ್ತನಾದ ಯೇಸು ಕ್ರಿಸ್ತನನ್ನು ಪ್ರೀತಿಸುವದು ದೊಡ್ಡ ವ್ಯತ್ಯಾಸವನ್ನುಂಟು ಮಾಡುತ್ತದೆ! ಅಂಥವರು ನಾಚಿಕೆ ಮತ್ತು ಅವಮಾನವನ್ನು ಸಂತೋಷವೆಂದು ಪರಿಗಣಿಸುತ್ತಾರೆ (ಯೋಹಾನ 16:33; ಮತ್ತಾಯ 5:11-12; ಯಾಕೋಬ 1:2; 1 ಪೇತ್ರ 4:12-16). ಇಲ್ಲಿ ಆ ಅಪೊಸ್ತಲರು ಅವಮಾನಕ್ಕಿಂತಲೂ ಹೆಚ್ಚಿನದಾಗಿ ಯೋಚಿಸುವವರಾಗಿದ್ದರು ಮತ್ತು ಅವಮಾನಕ್ಕೆ ಹೆಚ್ಚಾಗಿ ಅದರಿಂದ ದೊರೆಯುವ ಗೌರವವನ್ನು ಯೋಚಿಸುತ್ತಿದ್ದರು. **42**

**5:42** ಮರಣ ಬೆದರಿಕೆ, ಘೋರವಾದ ಶಿಕ್ಷೆ, ಸೆರೆಮನೆವಾಸ – ಇವುಗಳಿಂದ ಆತ್ಮಭರಿತರಾಗಿರುವ ಯೇಸು ಕ್ರಿಸ್ತನ ಸೇವಕರನ್ನು ತಡೆಯಲು ಸಾಧ್ಯವಾಗಲಿಲ್ಲ (4:20; 8:1,4; 14:19-20; 16:22-31).

# 6 1

**6:1** ಆದಿ ಸಭೆಯಲ್ಲಿರುವವರನ್ನು ಶಿಷ್ಯರೆಂದು ಕರೆಯಲಾಗುತ್ತಿತ್ತು ಎಂಬದನ್ನು ಗಮನಿಸಿರಿ. ಮತ್ತಾಯ 10:1; 28:19 ರ ನೋಟ್ಸ್ ನೋಡಿರಿ. ಅವರು ಸಂಪೂರ್ಣತೆಯುಳ್ಳ ಜನರಾಗಿದ್ದರು ಎಂದು ನಾವು ಯೋಚಿಸಬಾರದು. ಇಲ್ಲಿ ಅವರನ್ನು ಗುಂಪುಗಳಾಗಿ ವಿಭಾಗಿಸಲಾಗಿರುವದನ್ನು ನಾವು ನೋಡಬಹುದು. ಗ್ರೀಕ್ ಯೆಹೂದ್ಯರು ಇಲ್ಲಿ ಅರೆಮಾಯ ಭಾಷೆಗೆ ಬದಲಾಗಿ ಗ್ರೀಕ್ ಭಾಷೆ ಮಾತನಾಡುವ ಕ್ರೈಸ್ತರಾಗಿದ್ದರು ಮತ್ತು ಅವರು ಬೇರೆ ದೇಶಗಳಲ್ಲಿ ಒಂದು ಸಮಯದಲ್ಲಿ ಹುಟ್ಟಿದವರು ಅಥವಾ ಜೀವಿಸಿದವರು ಆಗಿರಬಹುದು. ಅರೆಮಾಯ ಭಾಷೆ ಯೆರೂಸಲೇಮಿನಲ್ಲಿ ಸಹಜವಾಗಿ ಮಾತನಾಡಲಾಗುತ್ತಿದ್ದ ಭಾಷೆಯಾಗಿತ್ತು. ಅದು ಇಬ್ರಿಯ ಭಾಷೆಗೆ ಸಮಾನವಾದ ಭಾಷೆಯಾಗಿತ್ತು. ಇದನ್ನು ಮಾತನಾಡುತ್ತಿದ್ದ ಕ್ರೈಸ್ತರು ಗ್ರೀಕ್ ಹಿನ್ನಲೆಯವರನ್ನು ನಿರ್ಲಕ್ಷ್ಯ ಮಾಡುತ್ತಿದ್ದರು. ಕೆಲವು ವಿಶ್ವಾಸಿಗಳು ಒಮ್ಮೆ ಅನುಭವಿಸುತ್ತಿದ್ದ ಐಕ್ಯತೆಯನ್ನು ಮರೆತು ಹೋಗುತ್ತಿದ್ದರು (2:44-47) ಮತ್ತು ತಮ್ಮ ಹಳೆಯ ಸ್ವಭಾವವನ್ನೇ ಅನುಸರಿಸುತ್ತಿದ್ದರು (1 ಕೊರಿಂಥ 3:1-4 ರೊಂದಿಗೆ ಹೋಲಿಸಿ ನೋಡಿರಿ). ಭಾಷೆ, ಬಣ್ಣ, ಕುಲ, ದೇಶ, ಸಮಾಜಿಕ ಅಥವಾ ಆರ್ಥಿಕ ಸ್ಥಿತಿ, ಅಥವಾ ಬೇರೆ ಯಾವುದೇ ವಿಷಯಗಳ ಆಧಾರದ ಮೇರೆಗೆ ಇತರೆ ಕ್ರೈಸ್ತರೊಂದಿಗೆ ತಾರತಮ್ಯ ಮಾಡುವದು ತಪ್ಪಾಗಿದೆ. ಅದು ಮಾನವನ ಪಾಪ ಸ್ವಭಾವದಿಂದ ಬರುತ್ತದೆ. ಕ್ರೈಸ್ತನಲ್ಲಿ ಈ ಯಾವ ಕಾರ್ಯಗಳಿಗೂ ಪ್ರಾಮುಖ್ಯತೆ ಇಲ್ಲ (1 ಕೊರಿಂಥ 12:13; ಗಲಾ 3:28; ಕೊಲೊ 3:11). ಜೊತೆಯಲ್ಲಿರುವ ವಿಶ್ವಾಸಿಗಳೊಂದಿಗೆ ಬೇಧಭಾವ ಮಾಡಲು ಮತ್ತು ತಮ್ಮ ಸ್ವಂತ ಹಿನ್ನಲೆಯವರ ಪರವಾಗಿ ನಡೆದುಕೊಳ್ಳಲು ಇವುಗಳು ಕಾರಣವಾದರೆ, ಈ ಎಲ್ಲಾ ಬೇಧಭಾವಗಳನ್ನು ತೆಗೆದುಹಾಕಿ ನಮ್ಮೆಲ್ಲರಿಗೂ ಪ್ರೀತಿ ಹಾಗೂ ಐಕ್ಯತೆಯನ್ನು ಆಜ್ಞಾಪಿಸಿರುವ ಕ್ರಿಸ್ತನಿಗೆ ವಿರುದ್ಧವಾಗಿ ಪಾಪ ಮಾಡುವವರಾಗಿರುತ್ತೇವೆ (ಯೋಹಾನ 13:34;

ಎಫೆ 4:3). **2**

**6:2** *"ಹನ್ನೆರಡು"*– ಹನ್ನೊಂದು ಮಂದಿ ಮೂಲ ಅಪೊಸ್ತಲರೌ ಮತ್ತು ಮತ್ತೀಯನು (1:26). ನಾವೇ ಊಟ ಬಡಿಸಿದರೆ ಎಲ್ಲರಿಗೂ ನ್ಯಾಯವಾಗಿ ಬಡಿಸಲು ಸಾಧ್ಯವಾಗುತ್ತದೆ ಎಂದು ಅವರಿಗೆ ಗೊತ್ತಿತ್ತು, ಆದರೆ ದೇವರು ಅವರಿಗೆ ಬೇರೆ ಸೇವೆಯನ್ನು ಕೊಟ್ಟಿದ್ದನು, ಆದ್ದರಿಂದ ಅವರು ಅದನ್ನು ಬಿಡುವ ಧೈರ್ಯ ಮಾಡಲಿಲ್ಲ (ರೋಮಾ 12:3-8 ರೊಂದಿಗೆ ಹೋಲಿಸಿ ನೋಡಿರಿ). **3**

**6:3** ಸಭೆಯಲ್ಲಿರುವವರೇ ಈ ವ್ಯಕ್ತಿಗಳನ್ನು ಆರಿಸಬೇಕಾದದ್ದನ್ನು ಗಮನಿಸಿರಿ; ಅಪೊಸ್ತಲರು ತಾವಾಗಿಯೇ ನೇಮಕ ಮಾಡಲಿಲ್ಲ. ಆದರೆ "ಊಟವನ್ನು ಬಡಿಸಲು" "ಪವಿತ್ರಾತ್ಮಭರಿತರಾಗಿರುವದು ಮತ್ತು ಜ್ಞಾನವುಳ್ಳವರಾಗಿರುವದು" ಅವಶ್ಯವೇ? ಹೌದು, ದೇವರು ಬಯಸಿದ ಹಾಗೆ ಮಾಡಬೇಕೆಂದರೆ ಖಂಡಿತವಾಗಿಯೂ ಅವಶ್ಯ. ಇವುಗಳಿಲ್ಲದೆ ಯಾರೊಬ್ಬರೂ ಒಂದು ತಾಸು ಸಹ ಬದುಕಲು ಆಗುವದಿಲ್ಲ ಯಾಕಂದರೆ ದೇವರು ಹೀಗೆಯೇ ಬದುಕಬೇಕೆಂದು ಬಯಸುತ್ತಾನೆ. ಆದ್ದರಿಂದ ಎಫೆ 5:18; ಯಾಕೋಬ 1:5 ನೋಡಿರಿ. **4**

**6:4** ಬೋಧನೆ ಮಾಡಲು ದೇವರು ಯಾರನ್ನು ಕರೆದಿದ್ದಾನೋ ಅವರೆಲ್ಲರಿಗೆ ಪ್ರಾರ್ಥನೆ ಮತ್ತು ದೇವರ ವಾಕ್ಯ ಪ್ರಮುಖವಾದ ವಿಷಯಗಳಾಗಿವೆ. ಇವೆರೆಡರಲ್ಲಿ ಯಾವುದನ್ನೇ ಬಿಟ್ಟು ಸೇವೆ ಮಾಡಿದರೂ ಆ ಸೇವೆ ಅಪೂರ್ಣವಾಗಿರುತ್ತದೆ. **5**

**6:5** *"ನಂಬಿಕೆಯಿಂದ ತುಂಬಿದವನು"*–ಎಂದರೆ ಅವನು ಮೊದಲೆಯದಾಗಿ ಯೆಹೂದ್ಯ ಧರ್ಮಕ್ಕೆ ಸೇರಿದನು ನಂತರ ಕ್ರೈಸ್ತನಾದನು ಎಂಬದಾಗಿದೆ. **6**

**6:6** ಜನರ ಆಯ್ಕೆಯನ್ನು ಅಪೊಸ್ತಲರು ಈ ರೀತಿಯಾಗಿ ಸಮ್ಮತಿಸಿದರು ಮತ್ತು ಅವರನ್ನು ಸೇವೆಗಾಗಿ ಬೇರ್ಪಡಿಸಿದರು. **7**

**6:7** ಒಂದುವೇಳೆ ಯೆಹೂದ್ಯ ಯಾಜಕರು ಯೇಸು ಕ್ರಿಸ್ತನ ಹಿಂಬಾಲಕರಾಗಲು ಬಯಸಿದರೆ ಆತನ ಕುರಿತು ಅವರಿಗೆ ಹಿಂದೆ ಇದ್ದ ದೃಷ್ಟಿಕೋನಗಳನ್ನು ಬಿಡಬೇಕು ಮತ್ತು ಈಗಲೂ ಆತನನ್ನು ವಿರೋಧಿಸುವ ಮಹಾಯಾಜಕನ ದೃಷ್ಟಿಕೋನಗಳನ್ನು ನಿರಾಕರಿಸಬೇಕು. ಅವರು ಹಾಗೆ ಮಾಡಿದ್ದು ಯೇಸು ಕ್ರಿಸ್ತನ ಪುನರುತ್ಥಾನ ಮತ್ತು ದೇವರಾತ್ಮನ ಬರೋಣದ ವಿಷಯದಲ್ಲಿದ್ದ ಪುರಾವೆ ಎಷ್ಟು ಪರಿಣಾಮಕಾರಿಯಾಗಿತ್ತು ಎಂದು ಸೂಚಿಸುತ್ತದೆ. **8**

**6:8** *"ಬಡಿಸಲು"*–ಆಯ್ಕೆ ಮಾಡಲ್ಪಟ್ಟ ವ್ಯಕ್ತಿ ಬಹುಬೇಗನೇ ತನಗಿರುವ ಇತರೆ ವರಗಳನ್ನು ಗುರುತಿಸಿಕೊಂಡನು. ಸಾಧಾರಣವಾದ ಕೆಲಸಗಳಲ್ಲಿ ನಂಬಿಗಸ್ತನಾಗಿರುವ ವ್ಯಕ್ತಿಯನ್ನು ದೇವರು ಅಮೋಘವಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುತ್ತಾನೆ ಮತ್ತು ದೇವರಾತ್ಮಭರಿತನಾಗಿರುವ ವ್ಯಕ್ತಿಯ ಅಂತಿಮ ಸೇವೆ ಏನಾಗಿರುವದು ಎಂಬದನ್ನು ಹೇಳಲು ಆಗುವದಿಲ್ಲ. **9**

**6:9** ಇವರು ಯೆಹೂದ್ಯರಾಗಿದ್ದು, ಒಮ್ಮೆ ಅನ್ಯಭಾಗಗಳಲ್ಲಿ ಜೀವಿಸುವವರಾಗಿದ್ದರು.

*"ಲಿಬೆರ್ತೀನರು"*– ಎಂದು ಹೇಳುವದಕ್ಕಿಂತ ಸ್ವತಂತ್ರರು ಎಂದು ಹೇಳುವದು ಉತ್ತಮ ಭಾಷಾಂತರವಾಗಿದೆ. ಇದರ ಗ್ರೀಕ್ ಪದದ ಅರ್ಥ ದಾಸತ್ವದಿಂದ ಬಿಡುಗಡೆಯಾಗಿರುವ ಜನರು. "ಲಿಬೆರ್ತೀನ" ಎಂಬ ಪದದ ಸಹಜವಾದ ಅರ್ಥ ಲೈಂಗಿಕ ಅನೈತಿಕತೆ ಮತ್ತು ಬೆರಕೆಯುಳ್ಳವನಾಗಿದ್ದು ಯಾವುದೇ ಸಂಯಮ ಇಲ್ಲದೆ ನಡೆದುಕೊಳ್ಳುವವನಾಗಿದ್ದಾನೆ. ವಾದಗಳಲ್ಲಿ ಸೋತುಹೋದರೆ ಸಹಜವಾಗಿ ದುಷ್ಟರು ಉಪಯೋಗಿಸುವ ತಂತ್ರಗಳನ್ನು ಇವರು ಉಪಯೋಗಿಸುತ್ತಿದ್ದರು (ಮತ್ತಾಯ 26:59; ಯೋಹಾನ 8:48,59). **12**

**6:12** *"ಹಿರೀಸಭೆ"*– ಹಿರಿಯರು – ಮತ್ತಾಯ 5:22. **14**

**6:14** ಮತ್ತಾಯ 26:61 ರೊಂದಿಗೆ ಹೋಲಿಸಿ ನೋಡಿರಿ. **15**

**6:15** ಸ್ತೆಫೆನನು ಅಮಾಯಕನು, ಯಥಾರ್ಥನು ಮತ್ತು ಶಕ್ತಿಯುಳ್ಳವನು ಎಂಬದು ಅವರೆಲ್ಲರಿಗೂ ಸ್ಪಷ್ಟವಾಗಿ ತಿಳಿದಿತ್ತು. ಆದರೆ ಸತ್ಯವನ್ನು ದ್ವೇಷಿಸುವವರಾದ ಇವರು ಹೇಗಾದರೂ ಅವನಿಂದ ಬಿಡಿಸಿಕೊಳ್ಳುವದರ ಬಗ್ಗೆ ಯೋಚಿಸುತ್ತಿದ್ದರು. ಆದಿ 16:7 ರಲ್ಲಿ ದೇವದೂತರ ಕುರಿತಾದ ನೋಟ್ ನೋಡಿರಿ.

# 7 1

**7:1** ಮುಂಬರುವ ಸಂಭಾಷಣೆಯಲ್ಲಿ ಸ್ತೆಫೆನನು ನೇರವಾಗಿ ಅವರ ಆರೋಪಗಳ ಬಗ್ಗೆ ಮಾತನಾಡುವದಿಲ್ಲ. ಬದಲಾಗಿ ಅವನು ಇಸ್ರಾಯೇಲಿನ ಚರಿತ್ರೆಯನ್ನು ಮೂಲಪಿತೃವಾದ ಅಬ್ರಹಾಮನ ವಿಷಯಗಳಿಂದ ಪ್ರಾರಂಭಿಸುತ್ತಾನೆ ಮತ್ತು ಮೋಶೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದ್ದಾನೆ, ದೇವರು ಅವನ ಮೂಲಕವಾಗಿ ಧರ್ಮಶಾಸ್ತ್ರವನ್ನು ಕೊಟ್ಟನು. ದೇವರು, ಮೋಶೆ, ಧರ್ಮಶಾಸ್ತ್ರ ಮತ್ತು ದೇವಾಲಯದ ವಿಷಯವಾಗಿ ಅವನ ಮೇಲೆ ಮಾಡಿದ ಆರೋಪಗಳಿಗೆ ಅವನು ಹೀಗೆ ಉತ್ತರಿಸಿದನು (6:11,13,14) – ತನ್ನ ಬೋಧನೆಯು ಹಳೆಯ ಒಡಂಬಡಿಕೆಯ ಮೇಲೆ ಆಧಾರವಾಗಿದೆ ಎಂಬದನ್ನು ಅವನು ತೋರಿಸಿದನು. ಎಲ್ಲದರೊಂದಿಗೆ ಅವನು ಒಂದು ದೃಷ್ಟಿಕೋನವುಳ್ಳವನಾಗಿದ್ದನು – ಆ ಜನಾಂಗವು ದೇವರು ನೇಮಿಸಿದ ನಾಯಕರಿಗೆ ಯಾವಾಗಲೂ ವಿರುದ್ಧವಾಗಿತ್ತು ಮತ್ತು ಅವರ ಎದುರುಬೀಳುವ ಸ್ವಭಾವವು ಕರ್ತನಾದ ಯೇಸು ಕ್ರಿಸ್ತನನ್ನು ಸಾಯಿಸುವದರಲ್ಲಿ ಸಂಪೂರ್ಣವಾಗಿ ವ್ಯಕ್ತವಾಯಿತು ಎಂದು ತೋರಿಸುವದು ಅವನ ಉದ್ದೇಶವಾಗಿತ್ತು. ಯೇಸು ಕ್ರಿಸ್ತನಿಗೆ ಮರಣ ದಂಡನೆಯನ್ನು ವಿಧಿಸಿದ ಯೆಹೂದ್ಯರ ಧಾರ್ಮಿಕ ಸಭೆಯ ಮುಂದೆ ಈ ರೀತಿಯಾಗಿ ಮಾತನಾಡಲು ಸ್ತೆಫೆನನು ಧೈರ್ಯ ಮಾಡಿದನು. ಅವನ ಧೈರ್ಯದ ಬಗೆಗಿನ ವಿವರಣೆಯನ್ನು6:5 ರಲ್ಲಿ ನೋಡಬಹುದು. **2**

**7:2** *"ದೇವರ ಮಹಿಮೆ"*– ಕೀರ್ತನೆ 29:3 ರಲ್ಲಿ ಇದನ್ನು ನಾವು ನೋಡಬಹುದು. ಅಬ್ರಹಾಮನ ಕಥೆಯು ಆದಿಕಾಂಡ 11-25 ಅಧ್ಯಾಯಗಳಲ್ಲಿ ಬರೆಯಲ್ಪಟ್ಟಿದೆ. **5**

- **7:5** ಆದಿ 12:7; 15:2-6; 17:8. **6-7**
- **7:6-7** ಆದಿ 15:13-16. **8**
- **7:8** ಆದಿ 17:9-14; 21:1-5; 25:26; 35:23-26.

*"ಮೂಲಪಿತೃಗಳು"*– ಯಾಕೋಬನ ಮಕ್ಕಳು, ಇಸ್ರಾಯೇಲಿನ ಹನ್ನೆರೆಡು ಕುಲಗಳ ಪೂರ್ವಜರು. **9**

- **7:9** ಆದಿ 37:4,11,28. **10**
- **7:10** ಆದಿ 41:39-43. **11-12**
- **7:11-12** ಆದಿ 41:53—42:3. **13**
- **7:13** ಆದಿ 43:15; 45:1-2,16. **14**

**7:14** ಆದಿ 46:26 ರೊಂದಿಗೆ ಹೋಲಿಸಿ ನೋಡಿರಿ. ಯಾಕೋಬನ ಮಕ್ಕಳ ಹೆಂಡತಿಯರನ್ನು ಹೊರತುಪಡಿಸಿ, ಕಾನಾನ್ ದೇಶದಲ್ಲಿದ್ದ ಯಾಕೋಬನ ಕುಟುಂಬದವರ ಸಂಖ್ಯೆ ಅರವತ್ತಾರು ಎಂದು ಹೇಳಲಾಗಿದೆ. ಕಾನಾನ್ ದೇಶದಲ್ಲಿಯೇ ಇನ್ನೂ ಜೀವಿಸುತ್ತಿದ್ದ ಯಾಕೋಬನ ಮಕ್ಕಳ ಒಂಭತ್ತು ಜನ ಹೆಂಡತಿಯರನ್ನು ಲೆಕ್ಕಿಸಿದರೆ ಸಂಖ್ಯೆ ಎಪ್ಪತ್ತೈದಾಗುತ್ತದೆ. (ಯೆಹೂದನ ಹೆಂಡತಿ ಮೃತಪಟ್ಟಿದ್ದಳು – ಆದಿ 38:12, ಮತ್ತು, ಸಂಪ್ರದಾಯದ ಪ್ರಕಾರ, ಸಿಮೆಯೋನನ ಹೆಂಡತಿಯೂ ಮೃತಪಟ್ಟಿದ್ದಳು). **15**

- **7:15** ಆದಿ 46:5-7. **16**
- **7:16** ಆದಿ 23:14-18. **17-19**
- **7:17-19** ವಿಮೋ 1:6-14. **20-22**
- **7:20-22** ವಿಮೋ 2:1-10. **23-29**
- **7:23-29** ವಿಮೋ 2:11-15,21,22; 18:3. **25**

**7:25** ಸ್ತೆಫೆನನು ಈ ಧ್ಯೇಯಕ್ಕೆ ಪ್ರಾಮುಖ್ಯತೆ ಕೊಡಲು ಈಗ ಪ್ರಾರಂಭಿಸಿದನು – ಇಸ್ರಾಯೇಲ್ ಜನರು ತಮ್ಮ ಚರಿತ್ರೆಯಲ್ಲಿ ಪ್ರಕಟಪಡಿಸಿರುವದೇನೆಂದರೆ ಅವರು ದೇವರ ಯೋಜನೆಗಳ ವಿಷಯದಲ್ಲಿ ಯಾವಾಗಲೂ ಮುಗ್ಧರಾಗಿದ್ದರು ಮತ್ತು ದೇವರು ಅವರಿಗಾಗಿ ನೇಮಿಸಿದ ನಾಯಕರನ್ನು ತಿರಸ್ಕರಿಸಿದರು. **30-34**

- **7:30-34** ವಿಮೋ 3:1-10. **35**

**7:35** ಈ ದೇವದೂತನ ಕುರಿತಾದ ನೋಟ್ ಆದಿ 16:7; ವಿಮೋ 3:2 ರಲ್ಲಿ ನೋಡಿರಿ. **36**

**7:36** ಈ ವಾಕ್ಯವು ವಿಮೋಚನಕಾಂಡ 7 ನೇ ಅಧ್ಯಾಯದಿಂದ 17 ನೇ ಅಧ್ಯಾಯದ ವಿಷಯಗಳನ್ನು ಮತ್ತು ಅರಣ್ಯಕಾಂಡ 14 ರಿಂದ 21 ನೇ ಅಧ್ಯಾಯದ ತನಕ ಕೆಲವು ಭಾಗಗಳನ್ನು ತಿಳಿಸುತ್ತದೆ. **37**

**7:37** ಧರ್ಮೋ 18:15 – ಕರ್ತನಾದ ಯೇಸು ಕ್ರಿಸ್ತನೇ ಈ ಪ್ರವಾದಿಯಾಗಿದ್ದಾನೆ. **38**

**7:38** ಮೋಶೆಗೆ ವಿರುದ್ಧವಾಗಿ ಮಾತನಾಡಲಿಲ್ಲ (6:11) ಬದಲಾಗಿ ಸ್ತೆಫೆನನು ಅವನನ್ನು ಗೌರವಿಸಿದನು. ಮತ್ತು ಅವನು ಧರ್ಮಶಾಸ್ತ್ರವನ್ನು "ಜೀವಕರವಾದ ದೇವೋಕ್ತಿ" ಎಂದು ಕರೆದನು – ಯೋಹಾನ 6:63; ಯಾಜಕ 18:5 ರೊಂದಿಗೆ ಹೋಲಿಸಿ ನೋಡಿರಿ. **39**

**7:39** ವಚನ 1,25 ರ ನೋಟ್ಸ್ ನೋಡಿರಿ. ಇಸ್ರಾಯೇಲ್ಯರು ಮೋಶೆಯೊಂದಿಗೆ ನಡೆದುಕೊಂಡ ಹಾಗೆಯೇ, ಮೋಶೆಯು ಮುಂದಾಗಿ ತಿಳಿಸಿದ ಪ್ರವಾದಿಯೊಂದಿಗೂ ನಡೆದುಕೊಂಡದ್ದನ್ನು ಸ್ತೆಫೆನನು ತೋರಿಸುವನು (ವ 37). ಇಸ್ರಾಯೇಲ್ ಜನರು ಐಗುಪ್ತ ದೇಶದಿಂದ ಹೊರಗೆ ಬಂದರಾದರೂ ಅವರ ಆಲೋಚನೆಗಳು ಮತ್ತು ಬಯಕೆಗಳು ಇನ್ನೂ ಅಲ್ಲಿಯೇ ಇದ್ದವು (ವಿಮೋ 16:1-3; ಸಂಖ್ಯಾ 14:1-4). **40-41**

- **7:40-41** ವಿಮೋ 32:1-6. **42-43**

**7:42-43** ಇಬ್ರಿಯದಲ್ಲಿ ಬರೆಯಲ್ಪಟ್ಟಿರುವ ಆಮೋಸ 5:25-27 ವಚನಗಳ ಗ್ರೀಕ್ ಭಾಷಾಂತರವನ್ನು ಸ್ತೆಫೆನನು ಸೂಚಿಸುತ್ತಿದ್ದಾನೆ, ಆದರೆ ನಿಖರವಾದ ಹೇಳಿಕೆಯನ್ನು ತಿಳಿಸಿಲ್ಲ. ಅವನ ಉದ್ದೇಶವೇನೆಂದರೆ ದೇವರು ಇಸ್ರಾಯೇಲ್ಯರನ್ನು ಸುಳ್ಳು ಆರಾಧನೆಗೆ ಒಪ್ಪಿಸಲು ಕಾರಣ ಅವರ ಅವಿಧೇಯತೆ ಮತ್ತು ಎದುರುಬೀಳುವಿಕೆ ಎಂಬದನ್ನು ಸರಳವಾಗಿ ತೋರಿಸುವದಾಗಿದೆ. ನಕ್ಷತ್ರಗಳ ಆರಾಧನೆಯ ಕುರಿತಾದ ನೋಟ್ಸ್ ಗಾಗಿ ಧರ್ಮೋ 4:19; 17:3-5; ಯೆಹೆಜ್ಕೇಲ 8:16-18; ಆದಿ 1:14-18 ನೋಡಿರಿ. **44**

- **7:44** ವಿಮೋ 25:1-9. **45**

**7:45** ಯೆಹೋ 3; 18:1; 1 ಸಮು 2:22; 2 ಸಮು 6:17. **46**

**7:46** 2 ಸಮು 7:1-5. "ಯಾಕೋಬನ ದೇವರು" ಕುರಿತಾದ ನೋಟ್ ಗಾಗಿ ಕೀರ್ತನೆ 146:5 ನೋಡಿರಿ. **47**

- **7:47** 1 ಅರಸು 6. **48-50**

**7:48-50** ಯೆಹೂದ್ಯರು ಯೆರೂಸಲೇಮಿನ ದೇವಾಲಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ಕೊಡುತ್ತಿದ್ದರು. ಅವರು ಸ್ತೆಫೆನನಿಗೆ ವಿರುದ್ಧವಾಗಿ ಮಾಡಿದ ಆರೋಪಗಳಲ್ಲಿ ದೇವಾಲಯಕ್ಕೆ ವಿರುದ್ಧವಾಗಿ ಮಾತನಾಡಿದ್ದಾನೆ ಎಂಬದೂ ಒಂದಾಗಿತ್ತು (6:13-14). ಪುರಾವೆಯ ಪ್ರಕಾರ, ಅವನು ಮಾತನಾಡುತ್ತಿದ್ದ ರೀತಿ ಸೂಚಿಸುವದೇನೆಂದರೆ ದೇವಾಲಯವು ಪ್ರಾಮುಖ್ಯವಲ್ಲ ಬದಲಾಗಿ ಅದರಲ್ಲಿರುವ ದೇವರ ನಾಮ ಮತ್ತು ಪರಿಶುದ್ಧತೆ ಹಾಗೂ ವಿಧೇಯತೆಯ ಜೀವಿತ ಆಚಾರ ಹಾಗೂ ಸಂಪ್ರದಾಯಗಳಿಗಿಂತ ಪ್ರಾಮುಖ್ಯವಾಗಿವೆ (ಯೆಶಾಯ 1:12-20 ರೊಂದಿಗೆ ಹೋಲಿಸಿ ನೋಡಿರಿ). ಅವನ ಆಲೋಚನೆಗಳು ಹಳೆಯ ಒಡಂಬಡಿಕೆಯ ಮೇಲೆ ಆಧಾರವಾಗಿವೆ ಎಂಬದನ್ನು ತೋರಿಸಲು ಅವನು ಯೆಶಾಯ 66:1-2 ವಾಕ್ಯಗಳನ್ನು ಉಪಯೋಗಿಸಿದ್ದಾನೆ. ಆ ವಾಕ್ಯಗಳು ಈ ಪದಗಳೊಂದಿಗೆ ಮುಕ್ತಾಯಗೊಳ್ಳುತ್ತವೆ "ನಾನು ಕಟಾಕ್ಷಿಸುವವನು ಎಂಥವನೆಂದರೆ ದೀನನೂ ಮನಮುರಿದವನೂ ನನ್ನ ಮಾತಿಗೆ ಭಯಪಡುವವನೂ

ಆಗಿರುವವನೇ." ಸ್ತೆಫನನು ಈ ಪದಗಳನ್ನು ಹೇಳಿಲ್ಲ, ಆದರೆ ಬಹುಶಃ ಇವುಗಳು ಅವನ ಮನಸ್ಸಿನಲ್ಲಿದ್ದಿರಬಹುದು. ಆ ಪದಗಳಲ್ಲಿ ಉಪಯೋಗಿಸಲಾಗಿರುವ ವ್ಯಕ್ತಿ ಮತ್ತು ತನ್ನೆದುರಿನಲ್ಲಿದ್ದ ಯೆಹೂದ್ಯ ನಾಯಕರ ನಡುವೆ ಆತನಿಗೆ ದೊಡ್ಡ ವ್ಯತ್ಯಾಸ ಕಾಣಿಸಲಿಲ್ಲವೇ? ಇದು (ಮತ್ತು ದೇವರಾತ್ಮನು ಅವನ ಹೃದಯದಲ್ಲಿ ಕೊಟ್ಟ ಪ್ರೇರಣೆ) ಮುಂದಿನ ವಾಕ್ಯದಲ್ಲಿ ಕೂಡಲೇ ಅವರ ಮೇಲೆ ಸಿಡಿಯುವಂತೆ ಮಾಡಿರಬಹುದು. **51**

**7:51** ಪರಿಣಾಮಗಳು ಏನೇ ಎದುರಾದರೂ ಚಿಂತಿಸದೆ ಸ್ತೆಫನನು ಕರ್ತನಾದ ಯೇಸು ಕ್ರಿಸ್ತನ ಹಾಗೆ ಸತ್ಯವನ್ನು ಮಾತನಾಡಲು ಮುಂದಾದನು. ಚಂಡಿಗಳೇ ಎಂದರೆ ಮೊಂಡರು ಮತ್ತು ಎದುರುಬೀಳುವವರಾಗಿದ್ದಾರೆ.

*"ಹೃದಯ ಮತ್ತು ಕಿವಿಗಳಲ್ಲಿ ಸುನ್ನತಿಯಿಲ್ಲದವರಾಗಿದ್ದರು"*– ಯಾಜಕ 26:41; ಧರ್ಮೋ 10:16; ಯೆರೆ 4:4 ನೋಡಿರಿ. ಅವರ ಹೃದಯಗಳು ನೂತವಾಗಿರಲಿಲ್ಲ, ಆದ್ದರಿಂದ ದೇವರ ವಾಕ್ಯಗಳನ್ನು ಕೇಳಲು ಮತ್ತು ಅವುಗಳಿಗೆ ವಿಧೇಯರಾಗಲು ಅವರಿಂದ ಆಗುತ್ತಿರಲಿಲ್ಲ (ಯೆರೆ 6:10; ಮತ್ತಾಯ 13:14-15). ಅವರು ಅವರ ಪಿತೃಗಳಂತೆಯೇ (ಪೂರ್ವಿಕರಂತೆಯೇ) ಇದ್ದಾರೆ ಎಂದು ಹೇಳುವದು ಅವರನ್ನು ಕಟುವಾಗಿ ಟೀಕಿಸುವದಾಗಿದೆ (ವ 39-43; ಮತ್ತಾಯ 23:32). ದೇವರ ಆತ್ಮನನ್ನು ತಡೆಯುವ ಆರೋಪ ಅವರ ಮೇಲೆ ಮಾಡಲಾಗಿರುವದು ಕೀರ್ತನೆ 106:33 ವಾಕ್ಯವನ್ನು ನೆನಪಿಸುತ್ತದೆ. ಇದು ಯಾವಾಗಲೂ ಇಸ್ರಾಯೇಲ್ಯರ ದೊಡ್ಡ ಪಾಪವಾಗಿತ್ತು ಮತ್ತು ಈ ಯೆಹೂದ್ಯ ನಾಯಕರಿಗೆ ಇದು ಗೊತ್ತಿತ್ತು – ಆದರೆ ಅವರು ಈ ಸತ್ಯವನ್ನು ತಮಗೆ ಅಳವಡಿಸಿಕೊಳ್ಳಲು ಬಯಸಲಿಲ್ಲ. **52**

**7:52** ಮತ್ತಾಯ 23:33-39. ನೀತಿವಂತನು ಎಂಬದಾಗಿ ಹೇಳಿರುವದು ಯೇಸು ಕ್ರಿಸ್ತನಾಗಿದ್ದಾನೆ (3:14). **53**

**7:53** ಅವನು ಧರ್ಮಶಾಸ್ತ್ರಕ್ಕೆ ವಿರುದ್ಧವಾಗಿ ಮಾತನಾಡುತ್ತಾನೆ ಎಂಬ ಆರೋಪವನ್ನು ಅವರು ಅವನ ಮೇಲೆ ಹೊರಿಸಿದರು (6:13), ಆದರೆ, ನಾವು ಧರ್ಮಶಾಸ್ತ್ರವನ್ನು ಗೌರವಿಸುತ್ತೇವೆ ಎಂದು ಹೇಳುತ್ತಾ, ಅದನ್ನು ಮತ್ತೆಮತ್ತೆ ಉಲ್ಲಂಘನೆ ಮಾಡುತ್ತಿದ್ದರು, ತಮ್ಮ ಕಾಲಕೆಳಗೆ ಹಾಕಿ ತುಳಿಯುವ ಹಾಗೆ ಧರ್ಮಶಾಸ್ತ್ರದ ವಿಷಯದಲ್ಲಿ ನಡೆದುಕೊಳ್ಳುತ್ತಿದ್ದರು (ಮತ್ತಾಯ 23:1-3; 15:3-9; ರೋಮಾ 2:17-24). **54**

**7:54** ಆತನು ಅವರಿಗೆ ಇನ್ನೂ ಅನೇಕ ವಿಷಯಗಳನ್ನು ಹೇಳಲು ಬಯಸಿದನು ಆದರೆ ಅವುಗಳನ್ನು ಕೇಳಿಸಿಕೊಳ್ಳಲು ಅವರು ಕಾಯಲಿಲ್ಲ. 5:33; ಕೀರ್ತನೆ 35:16; ಯೋಹಾನ 3:20 ರೊಂದಿಗೆ ಹೋಲಿಸಿ ನೋಡಿರಿ. ದೇವರ ಸೇವಕರಿಗೆ ವಿರುದ್ಧವಾಗಿ ಹಲ್ಲು ಕಡಿಯುವವರು ಒಂದುದಿನ ಬೇರೊಂದು ಕಾರಣಕ್ಕಾಗಿ ಅವರನ್ನು ಕಡಿಯುವರು (ಮತ್ತಾಯ 8:12; 13:42). **55**

**7:55** ದೇವರಾತ್ಮನ ಪರಿಪೂರ್ಣತೆಯು ಸ್ತೆಫನನನ್ನು ಹೆದರಿಕೆಯಿಲ್ಲದ ದೇವರ

ಮನುಷ್ಯನನ್ನಾಗಿ ಮಾಡಿತು ಮತ್ತು ಅವನು ಆ ರೀತಿಯಾಗಿ ಮಾತನಾಡಲು ಶಕ್ತಿಯನ್ನು ನೀಡಿತು (6:5,8,10). ಅವನು ಹಿಂಸೆ ಮತ್ತು ಮರಣವನ್ನು ಎದುರಿಸುವ ಸಮಯದಲ್ಲಿ ದೇವರು ಅವನಿಗೆ ವಿಶೇಷವಾದ ದರ್ಶನವನ್ನು ಕೊಟ್ಟನು. **56**

**7:56** *"ನೋಡಿರಿ"*– ತಾನು ನೋಡುತ್ತಿರುವದು ಇತರರಿಗೂ ಕಾಣಿಸುತ್ತಿದೆ ಎಂಬದಾಗಿ ಅವನಿಗೆ ಅನ್ನಿಸಿರಬಹುದೇ (ಯಾಕಂದರೆ ಅವನು ನೋಡುವದು ವಾಸ್ತವವಾಗಿತ್ತು)? ಪರಲೋಕವು ಬಹಳ ಹತ್ತಿರದಲ್ಲಿಯೇ ಇರುವ ಹಾಗೆ ಅನ್ನಿಸುತ್ತದೆ ಆದ್ದರಿಂದ ಒಂದುವೇಳೆ ದೇವರು ಏನಾದರೂ ಸಾಮರ್ಥ್ಯ ಕೊಟ್ಟರೆ ಮಾನವರು ನೇರವಾಗಿಯೇ ಅದನ್ನು ನೋಡಬಹುದು (1:9).

*"ಮನುಷ್ಯ ಕುಮಾರನು"*– ಮತ್ತಾಯ 8:20. ಸ್ತೆಫೆನನ ಮಾತುಗಳನ್ನು ಮತ್ತು ಇದೇ ಹಿರೀಸಭೆಯ ಮುಂದೆ ಯೇಸು ಕ್ರಿಸ್ತನು ಹೇಳಿದ ಮಾತುಗಳನ್ನು ಹೋಲಿಸಿ ನೋಡಿರಿ (ಮತ್ತಾಯ 26:64). **57**

**7:57** ಕಲಿತಿರುವ, ಧಾರ್ಮಿಕ ಜನರು ಅನಾವಶ್ಯಕವಾದ ಸತ್ಯವನ್ನು ಕೇಳುವಾಗ ಉಳಿದವರಿಗಿಂತ ಹೆಚ್ಚು ಕ್ರೂರವಾಗ, ಅಕ್ರಮವಾಗಿ ಮತ್ತು ಅನ್ಯಾಯವಾಗಿ ನಡೆದುಕೊಳ್ಳುತ್ತಾರೆ. ಯೇಸುವನ್ನು ದ್ವೇಷಿಸುತ್ತಿದ್ದ ಇವರಿಗೆ ಆತನನ್ನು ಸ್ತುತಿಸುವ ಮಾತುಗಳನ್ನು ಕೇಳಿಸಿಕೊಳ್ಳಲು ಆಗಲಿಲ್ಲ (ಯೋಹಾನ 15:18-25). ಆದ್ದರಿಂದ ಅವರು ಕೇಳಿಸಿಕೊಳ್ಳಬೇಕಾಗಿದ್ದ ಮತ್ತು ನಂಬಬೇಕಾಗಿದ್ದ ವಿಷಯವನ್ನೇ ಅವನು ನಿರಾಕರಿಸಿದರು. **58**

**7:58** ರೋಮನ್ ಆಳ್ವಿಕೆಯ ಅಡಿಯಲ್ಲಿ ಯಾರಿಗೂ ಮರಣ ದಂಡನೆ ವಿಧಿಸುವ ಹಕ್ಕು ಅವರಿಗೆ ಇರಲಿಲ್ಲ (ಯೋಹಾನ 18:31), ಆದರೆ ತಮ್ಮ ಉಗ್ರತೆಯ ನಿಮಿತ್ತ ಅವರು ಅದನ್ನು ನಿರ್ಲಕ್ಷಿಸಿದರು. ಸ್ತೆಫೆನನು ದೇವದೂಷಕನು ಆದ್ದರಿಂದ ಅವನನ್ನು ಕೊಲ್ಲುವದು ತಮ್ಮ ಕರ್ತವ್ಯ ಎಂಬದಾಗಿ ಅವರು ಅಂದುಕೊಂಡರು (ಅಥವಾ ಅಂದುಕೊಳ್ಳುವ ಯೋಚನೆ ಮಾಡಿದರು) (ಯೋಹಾನ 16:2; ಯಾಜಕ 24:13-16). "ಸಾಕ್ಷಿಗಳು" ಎಂದರೆ ಅವನ ಮಾತುಗಳನ್ನು ಕೇಳಿಸಿಕೊಂಡವರು ಮತ್ತು ಅವನ ಮೇಲೆ ಆರೋಪ ಮಾಡಿದವರು. ಇಲ್ಲಿ ನಾವು ಸೌಲನನ್ನು ಅವರ ಶಿಬಿರದಲ್ಲಿ ನೋಡಬಹುದು, ಆದರೆ ತಾನು ದ್ವೇಷಿಸುತ್ತಿದ್ದ ಸತ್ಯವನ್ನೇ ಸಾರುವ ಮಾರ್ಪಾಡು ಕೂಡಲೇ ಅವನಲ್ಲಿ ಕಾಣಿಸಿಕೊಂಡಿತು. **59**

**7:59** ಲೂಕ 23:46. ಅವನು ಸ್ಪಷ್ಟವಾಗಿ ಯೇಸು ಕ್ರಿಸ್ತನ ದೈವೀಕತೆಯನ್ನು ನಂಬಿದನು. ದೇವರೇ ಅವನ ಆತ್ಮವನ್ನು ಸ್ವೀಕರಿಸಿಕೊಳ್ಳುವವನಾಗಿದ್ದಾನೆ ಹೊರತು ಬೇರೆ ಯಾರೂ ಅಲ್ಲ (ಕೀರ್ತನೆ 31:5; ಪ್ರಸಂಗಿ 12:7). **60**

**7:60** ಲೂಕ 23:34. ಅವನೊಳಗಿದ್ದ ದೇವರಾತ್ಮನ ಪರಿಪೂರ್ಣತೆಯು ಈ ವಿಷಯದಲ್ಲಿಯೂ ಅವನನ್ನು ಕರ್ತನಾದ ಯೇಸು ಕ್ರಿಸ್ತನನ್ನಾಗಿ ಮಾಡಿತು. ಮತ್ತಾಯ 5:43-48 ರಲ್ಲಿ ಯೇಸು ಕ್ರಿಸ್ತನು ಕಲಿಸಿರುವ ಪ್ರೀತಿಯ ಧರ್ಮವನ್ನು ಆತನು ನೆರವೇರಿಸಿದನು.

ಅತ್ಯಂತ ಕಡಿಮೆ ಸಮಯದಲ್ಲಿ ಸ್ತೆಫೆನನು ಅನೇಕ ವಿಧಗಳಲ್ಲಿ ಕರ್ತನಾದ ಯೇಸು ಕ್ರಿಸ್ತನಂತಾದನು ಎಂಬದು ನಮ್ಮೆಲ್ಲರಿಗೂ ಪ್ರೋತ್ಸಾಹದಾಯಕ ವಿಷಯವಾಗಿದೆ. 2 ಕೊರಿಂಥ 3:18 ರ ಸತ್ಯಕ್ಕೆ ಅವನು ಅಮೋಘವಾದ ಮಾದರಿಯಾಗಿದ್ದಾನೆ. "ನಿದ್ದೆಯನ್ನು" ಸತ್ಯವೇದದಲ್ಲಿ ಕೆಲವೊಮ್ಮೆ ಮರಣಕ್ಕೆ ಹೋಲಿಸಲಾಗಿದೆ – ದೇಹವು ನಿದ್ದೆ ಮಾಡುತ್ತದೆ, ಆತ್ಮವು ದೇವರ ಬಳಿಗೆ ಹೋಗುತ್ತದೆ (ಯೋಹಾನ 11:11,14; 1 ಕೊರಿಂಥ 15:51; 1 ಥೆಸ 4:14).

# 8[1]

**8:1** ಯೆಹೂದ್ಯ ನಾಯಕರು ಗಮಾಲಿಯೇಲನ ಸಲಹೆಯನ್ನು ವಿರೋಧಿಸಿದರು (5:38-39) ಮತ್ತು ಯೇಸು ಕ್ರಿಸ್ತನ ಸುವಾರ್ತೆ ಹಬ್ಬದಂತೆ ಒತ್ತಾಯದಿಂದ ಮಾತ್ರವೇ ನಿಲ್ಲಿಸಲು ಸಾಧ್ಯ ಎಂಬದಾಗಿ ತೀರ್ಮಾನಿಸಿದರು. ಸೌಲನು, ಗಮಾಲಿಯೇಲನ ವಿದ್ಯಾರ್ಥಿಯಾಗಿದ್ದರಿಂದ (22:3), ಇದಾದ ನಂತರ ಕಾಣಿಸಿಕೊಳ್ಳುವ ಹಿಂಸೆಯ ಪ್ರಮುಖ ಸಾಧನವಾಗಿದ್ದನು (ವ 3; 9:1-2). ಸ್ತೆಫೆನನ ಮರಣಕ್ಕೆ ಸೌಲನು "ಸಮ್ಮತಿ" ಸೂಚಿಸಿದ್ದರ ಅರ್ಥ ಅವನು ಯೆಹೂದ್ಯರ ಹಿರೀಸಭೆಯ ಸದಸ್ಯನು ಎಂಬ ಅರ್ಥವಲ್ಲ. ಅವನು ತನ್ನ ಹೃದಯದಲ್ಲಿ ಅದನ್ನು ಸಂಪೂರ್ಣವಾಗಿ ಬೆಂಬಲಿಸುವವನಾಗಿದ್ದನು ಎಂಬದಕ್ಕಿಂತ ಹೆಚ್ಚಿನ ಸಂಗತಿ ಇದರಲ್ಲಿ ಏನೂ ಇಲ್ಲ. ಅಪೊಸ್ತಲರು ಯೆರೂಸಲೇಮಿನಲ್ಲಿಯೇ ಉಳಿದರು ಎಂಬದು ಆಸಕ್ತಿಕರವಾದ ಸಂಗತಿಯಾಗಿದೆ. ಆದರೆ ಯೇಸು ಕ್ರಿಸ್ತನ ವೈರಿಗಳು, ಆತನ ಕುರಿಮರಿಗಳನ್ನು ಹಾಳುಮಾಡಲು ತುದಿಗಾಲಲ್ಲಿ ನಿಂತಿದ್ದರಾದರೂ, ಅವರಿಗಾಗಿ ಆತನು ನೇಮಿಸಿದ್ದ ಕುರುಬರ ಮೇಲೆ ಬೀಳಲು ಹೆದರುತ್ತಿದ್ದರು. **3**

**8:3** *"ಮನೆಮನೆಗಳಿಗೆ ಹೊಕ್ಕು"*– 20:20-21 ರೊಂದಿಗೆ ಹೋಲಿಸಿ ನೋಡಿರಿ. **4**

**8:4** ಕಷ್ಟಗಳೆಂಬ ಬಿರುಗಾಳಿ ಸಭೆಯೊಳಗೆ ಕಾಣಿಸಿಕೊಂಡಿರುವ ಬೆಂಕಿಯನ್ನು ಆರಿಸಿಬಿಡುತ್ತದೆ ಎಂಬದಾಗಿ ನಾಯಕರು ಅಂದುಕೊಂಡರೇ? ಹಾಗಾಗಲಿಲ್ಲ, ಬದಲಾಗಿ ಅದು ಕಿಡಿಗಳನ್ನು ಚದುರಿಸಿತು ಮತ್ತು ಆ ಕಿಡಿಗಳು ದೇಶದ ಅನೇಕ ಭಾಗಗಳಲಿ ಬೆಳಗಲಾರಂಭಿಸಿದವು. ಹಿಂಸೆಗಳು ಕ್ರಿಸ್ತನ ಸಾಕ್ಷಿಗಳನ್ನು ನಿಲ್ಲಿಸಲಾರವು ಬದಲಾಗಿ ಸುವಾರ್ತೆ ಹರಡಲು ಸಹಕರಿಸುತ್ತವೆ ಎಂಬದನ್ನು ನಾವು ಸಭೆಯ ಚರಿತ್ರೆಯಲ್ಲಿ ನೋಡಬಹುದು. ಸಂತೋಷವಾಗಿ ಹಿಂಸೆಯನ್ನು ಸಹಿಸಿಕೊಂಡದ್ದು ವಿಶ್ವಾಸಿಗಳ ಯಥಾರ್ಥತೆಯನ್ನು, ಅವರ ನಂಬಿಕೆಯ ವಾಸ್ತವ ಹಾಗೂ ಯೇಸು ಕ್ರಿಸ್ತನಲ್ಲಿರುವ ಜೀವಿತವನ್ನು ಪ್ರಕಟಪಡಿಸುತ್ತದೆ (5:40-42). **5**

**8:5** ಈ ಫಿಲಿಪ್ಪನು ಅಪೊಸ್ತಲನಾದ ಫಿಲಿಫನಲ್ಲ ಬದಲಾಗಿ "ಊಟ ಬಡಿಸಲು" (6:1-6) ಸ್ತೆಫೆನನ ಸಂಗಡ ಆರಿಸಲ್ಪಟ್ಟ ಫಿಲಿಪ್ಪನಾಗಿದ್ದಾನೆ. 6:8 ರಲ್ಲಿ ಸ್ತೆಫೆನನ ಬಗ್ಗೆ ಕೊಡಲಾಗಿರುವ ನೋಟ್ ಇವನಿಗೂ ಅನ್ವಯವಾಗುತ್ತದೆ. ಸಮಾರ್ಯದ ಕುರಿತು ನೋಟ್ಸ್

ಮತ್ತಾಯ 10:5; ಯೋಹಾನ 4:4; 2 ಅರಸು 17:24 ನೋಡಿರಿ. ಕರ್ತನಾದ ಯೇಸು ಕ್ರಿಸ್ತನು ಸಮಾರ್ಯಕ್ಕೆ ಹೋದ್ದರಿಂದ ಇದಕ್ಕಾಗಿ ಸಮಾರ್ಯದವರನ್ನು ಸಿದ್ಧಪಡಿಸಿದ್ದನು (ಯೋಹಾನ 4:4-42). ಸುವಾರ್ತೆ ಪ್ರಚುರಗೊಳ್ಳುವಲ್ಲಿ ಇದು ದೊಡ್ಡ ಹಂತವಾಗಿದೆ – (ನಮಗೆ ತಿಳಿದಿರುವ ಪ್ರಕಾರ) ಇದೇ ಮೊದಲನೆಯ ಸಲ ಯೇಸು ಕ್ರಿಸ್ತನ ಶಿಷ್ಯರು ಯೆಹೂದ್ಯ ಸಮುದಾಯವನ್ನು ಬಿಟ್ಟು ಹೊರಗಿನವರಿಗೆ ಸುವಾರ್ತೆ ಸಾರಿದರು.ಈ ರೀತಿಯಾಗಿ ಅಪೊ 1:8 ನೆರವೇರಿಸಿದರು. **6**

**8:6** *"ಸೂಚಕಕಾರ್ಯಗಳ"*–ಕುರಿತಾದ ನೋಟ್ ಗಾಗಿ ಯೋಹಾನ 2:11 ನೋಡಿರಿ. ದೇವರು ಬಯಸಿದ ಫಲಿತಾಂಶ ಅವರಿಗೆ ಸಮಾರ್ಯದಲ್ಲಿ ದೊರೆಯಿತು – ಸುವಾರ್ತೆ ಸಾರುವಾಗ ಜನರು ಅದನ್ನು ಆಸಕ್ತಿಯಿಂದ ಕೇಳುವಂತೆ ಮಾಡುವಲ್ಲಿ ಅವರು ಸಫಲರಾಗಿದ್ದರು. **7**

**8:7** ಅಶುದ್ಧ ಆತ್ಮಗಳ ಕುರಿತು ತಿಳಿಯಲು ಮತ್ತಾಯ 4:24 ನೋಟ್ ನೋಡಿರಿ. **9-11**

**8:9-11** ಸೀಮೋನನು ಬಹುತೇಕ ಭಾರತದಲ್ಲಿ ಸ್ವಘೋಷಿತ ದೇವಮಾನವರೆಂದು ಹೇಳಿಕೊಳ್ಳುತ್ತಿರುವವರಿಗೆ ಸಮಾನನಾಗಿದ್ದನು. ಮುಂದಿನ ವಿಷಯಗಳ ಬಗ್ಗೆ ಆಲೋಚಿಸಿರಿ. ಅವನು ಮಾಯ ತಂತ್ರಗಳನ್ನು ನಡೆಸುತ್ತಿದ್ದನು ಮತ್ತು ಆಶ್ಚರ್ಯಕಾರ್ಯಗಳನ್ನು ಹಾಗೂ ಅದ್ಭುತಕಾರ್ಯಗಳನ್ನು ಮಾಡುತ್ತಿದ್ದನು (ಅಥವಾ ಮಾಡುವ ಹಾಗೆ ತೋರ್ಪಡಿಸಿಕೊಳ್ಳುತ್ತಿದ್ದನು) (ಮತ್ತಾಯ 24:24; ವಿಮೋ 7:22; 8:7 ರೊಂದಿಗೆ ಹೋಲಿಸಿ ನೋಡಿರಿ). ಅವನು ತನ್ನನ್ನು ಪ್ರಸಿದ್ಧನೆಂಬದಾಗಿ ತೋರ್ಪಡಿಸಿಕೊಳ್ಳುತ್ತಿದ್ದನು. ದೇವರಿಗೆ ಸಲ್ಲಬೇಕಾಗಿರುವ ಗೌರವವನ್ನು ತಾನೇ ಸ್ವೀಕರಿಸಿಕೊಳ್ಳುತ್ತಿದ್ದನು. ಉನ್ನತ ಸ್ಥಾನದಲ್ಲಿರುವವರನ್ನೂ ಸೇರಿ ಎಲ್ಲಾ ರೀತಿಯ ಮನುಷ್ಯರ ಮೇಲೆ ಪ್ರಭಾವ ಬೀರುತ್ತಿದ್ದನು ಹಾಗೂ ಅಚ್ಚರಿಪಡಿಸುತ್ತಿದ್ದನು. ಇವನ ಹಾಗೂ ಫಿಲಿಪ್ಪನ ನಡುವೆ ದೊಡ್ಡ ವ್ಯತ್ಯಾಸಗಳಿದ್ದವು. ಇವನು ತನ್ನನ್ನು ಪ್ರಚುರಪಡಿಸಿಕೊಳ್ಳುತ್ತಿದ್ದನು, ಫಿಲಿಪ್ಪನು ಕ್ರಿಸ್ತನನ್ನು ಪ್ರಚುರಪಡಿಸುತ್ತಿದ್ದನು (ವ 3,12). ಇವನು ತನ್ನ ಆಲೋಚನೆಗಳನ್ನು ಬೋಧಿಸುತ್ತಿದ್ದನು, ಫಿಲಿಪ್ಪನು ದೇವರ ವಾಕ್ಯಗಳನ್ನು ಬೋಧಿಸುತ್ತಿದ್ದನು (ವ 14). ಅವನು "ಪ್ರಸಿದ್ಧನಾಗಲು" ಬಯಸಿದನು. ಫಿಲಿಪ್ಪನು ತನಗೆ ಯಾವುದೇ ಪ್ರಸಿದ್ಧಿಯನ್ನು ಬಯಸಲಿಲ್ಲ ಬದಲಾಗಿ ಕ್ರಿಸ್ತನು ಪ್ರಸಿದ್ಧನಾಗಬೇಕೆಂದು ಬಯಸಿದನು (ಮತ್ತಾಯ 20:25-28; ಯೆರೆ 45:5). ಮತ್ತೊಂದು ವ್ಯತ್ಯಾಸವೇನೆಂದರೆ ಫಿಲಿಪ್ಪನು ಮಾಡಿದ ಕಾರ್ಯಗಳು ನಿಜವಾದ ಅದ್ಭುತಗಳಾಗಿರಲಿಲ್ಲ ಬದಲಾಗಿ ಕೇವಲ ಮಾಯಗಾರನ ತಂತ್ರಗಳಾಗಿದ್ದವು ಮತ್ತು ನಿಸ್ಸಂದೇಹವಾಗಿ ಇತರರನ್ನು ಬೆರಗುಗೊಳಿಸುವ ಉದ್ದೇಶವುಳ್ಳವುಗಳಾಗಿದ್ದವು. ಫಿಲಿಪ್ಪನು ನಿಜವಾದ ಅದ್ಭುತಕಾರ್ಯಗಳನ್ನು ಮಾಡಿದನು ಅವು ದೇವರ ಶಕ್ತಿಯನ್ನು ಪ್ರದರ್ಶಿಸುವವುಗಳಾಗಿದ್ದವು ಮತ್ತು ಅನಾರೋಗ್ಯದಲ್ಲಿರುವವರು

ಹಾಗೂ ನಿರಾಸೆಯಲ್ಲಿರುವವರಿಗೆ ಸಹಾಯ ಮಾಡುವ ಉದ್ದೇಶವುಳ್ಳವುಗಳಾಗಿದ್ದವು (ವ 7). ಸೀಮೋನನಿಗೇ ಈ ವ್ಯತ್ಯಾಸಗಳು ತಿಳಿಯುತ್ತಿದ್ದವು (ವ 13). **12**

**8:12** "ಅವರು ಫಿಲಿಪ್ಪನನ್ನು ನಂಬಿದರು" ಎಂಬದಾಗಿ ಹೇಳಲಾಗಿದೆಯೇ ಹೊರತು "ಕ್ರಿಸ್ತನಲ್ಲಿ ನಂಬಿಕೆಯಿಟ್ಟರು" –ಎಂದು ಹೇಳಲಾಗದಿರುವದನ್ನು ಗಮನಿಸಿರಿ. ಫಿಲಿಪ್ಪನು ದೇವರ ಮನುಷ್ಯನಾಗಿದ್ದಾನೆ ಮತ್ತು ಸತ್ಯವನ್ನು ಬೋಧಿಸುತ್ತಾನೆ ಎಂದು ಅವರು ನಂಬಿದರು ಹಾಗೂ ಯೇಸು ಕ್ರಿಸ್ತನ ಹಿಂಬಾಲಕರನ್ನು ಸೇರಿಕೊಳ್ಳಲು ಬಯಸಿದರು. ಆ ಸಮಯದಲ್ಲಿ ಅವರು ಕರ್ತನಾದ ಯೇಸು ಕ್ರಿಸ್ತನಲ್ಲಿ ಜೀವವುಳ್ಳ ನಂಬಿಕೆಯನ್ನಿಟ್ಟರೋ ಎಂಬದನ್ನು ಸ್ಪಷ್ಟವಾಗಿ ಪ್ರಕಟಪಡಿಸಲಾಗಿಲ್ಲ. ಆದರೆ ಅವರಿನ್ನೂ ಪವಿತ್ರಾತ್ಮನನ್ನು ಸ್ವೀಕರಿಸಿಕೊಂಡಿರಲಿಲ್ಲ ಎಂಬದು ಮಾತ್ರ ನಮಗೆ ಗೊತ್ತು (ವ 16). **13**

**8:13** ಸೀಮೋನನು ಸಹ "ಯೇಸು ಕ್ರಿಸ್ತನಲ್ಲಿ" ನಂಬಿಕೆಯಿಟ್ಟನು ಎಂಬದಾಗಿ ಹೇಳಲಾಗಿಲ್ಲ. 20-23 ವಚನಗಳನ್ನು ಓದಿದರೆ ಅವನು ನಂಬಿಕೆಯಿಡಲಿಲ್ಲ ಎಂಬದು ಸ್ಪಷ್ಟವಾಗಿ ತಿಳಿಯುತ್ತದೆ. ಫಿಲಿಪ್ಪನು ಪ್ರದರ್ಶಿಸುತ್ತಿದ್ದ ದೇವರ ಶಕ್ತಿಯ ಮೇಲೆ ಮಾತ್ರವೇ ಅವನು ಮನಸ್ಸಿಟ್ಟಿದ್ದನು. ದೀಕ್ಷಾಸ್ನಾನ ತೆಗೆದುಕೊಳ್ಳುವವರೆಲ್ಲರೂ ಯೇಸು ಕ್ರಿಸ್ತನ ನಿಜವಾದ ವಿಶ್ವಾಸಿಗಳಾಗಿರುವದಿಲ್ಲ. ದೇವರ ಮನುಷ್ಯನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳುವವರು ದೇವರ ಮನುಷ್ಯರಾಗುವದಿಲ್ಲ ಅಥವಾ ಕೆಲವೊಮ್ಮೆ ವಿಶ್ವಾಸಿಗಳೂ ಆಗುವದಿಲ್ಲ. **14**

**8:14** ಸಮಾರ್ಯದಲ್ಲಿ ನಡೆಯುತ್ತಿರುವ ಕಾರ್ಯಗಳ ನಿಜಸ್ಥಿತಿಯನ್ನು ಅರಿಯಲು ಮತ್ತು ನಿಜವಾಗಿಯೂ ದೇವರ ಕಾರ್ಯಗಳು ನಡೆಯುತ್ತಿರುವದಾದರೆ ಅವುಗಳಿಗೆ ಮುದ್ರೆ ಹಾಕಲು ಅಪೊಸ್ತಲರು ಬಯಸಿದರು. **15-17**

**8:15-17** ಪೇತ್ರನು ಪರಲೋಕ ರಾಜ್ಯದ "ಬೀಗದ ಕೈಗಳನ್ನು" ಉಪಯೋಗಿಸುವದು ಮತ್ತು ಪಂಚಾಶತ್ತಮ ದಿನದಲ್ಲಿ ಯೆಹೂದ್ಯರಿಗೆ ಹಾಗೂ 10 ನೇ ಅಧ್ಯಾಯದಲ್ಲಿ ಅನ್ಯರಿಗೆ ಬಾಗಿಲನ್ನು ತೆರೆದ ಹಾಗೆ ಸಮಾರ್ಯದವರಿಗೂ ಒಮ್ಮೆಲೇ ಬಾಗಿಲನ್ನು ತೆರೆದ ಘಟನೆಯನ್ನು ಇಲ್ಲಿ ನೋಡಬಹುದು. ಮತ್ತಾಯ 16:19 ರಲ್ಲಿ ನೋಟ್ ನೋಡಿರಿ. ಯೇಸು ಕ್ರಿಸ್ತನ ಮೂಲ ಅಪೊಸ್ತಲರು ನಿಜವಾದ ಸುವಾರ್ತೆ ಸಾರುವವರಾಗಿ ಸ್ಥಾಪನೆಯಾಗುವದು ಬಹಳ ಪ್ರಾಮುಖ್ಯವಾಗಿತ್ತು. ದೇವರು ಅದನ್ನು ಮಾಡಲು ಈ ಮಾರ್ಗವನ್ನು ಆರಿಸಿಕೊಂಡನು – ಅವರು ತಮ್ಮ ಕೈಗಳನ್ನಿಡುವಾಗ ಪವಿತ್ರಾತ್ಮ ವರ ದೊರೆಯುತ್ತಿತ್ತು (ಸೂಚಕಕಾರ್ಯಗಳು, ಮಹತ್ಕಾರ್ಯಗಳು ಮತ್ತು ಅದ್ಭುತಕಾರ್ಯಗಳು ಇನ್ನೊಂದು ಮಾರ್ಗವಾಗಿತ್ತು – ಇಬ್ರಿ 2:4). ಈಗ ಅಪೊಸ್ತಲರ ಅಧಿಕಾರವನ್ನು ಸ್ಥಾಪಿಸಿ ಬಹಳ ಕಾಲವಾಗಿದೆ, ಸುವಾರ್ತೆಯನ್ನು ಪೂರ್ತಿಯಾಗಿ ಪ್ರಕಟಪಡಿಸಲಾಗಿದೆ ಮತ್ತು ಎಲ್ಲಾ ಕಾಲದ ಜನರಿಗೆ ಅನ್ವಯವಾಗುವ ಹಾಗೆ ಬರೆಯಲ್ಪಟ್ಟಿದೆ ಹಾಗೂ ದೇವರ ರಾಜ್ಯವು ಎಲ್ಲಾ ರೀತಿಯ ಜನರಿಗೆ ಒಮ್ಮೆಲೇ

ಬರೆಯಲ್ಪಟ್ಟಿದೆ. ಅಪೊಸ್ತಲರು ತಮ್ಮ ಅಧಿಕಾರವನ್ನು ಅಭ್ಯಾಸ ಮಾಡಿದರು, ಹೊಸ ಒಡಂಬಡಿಕೆಯ ಸಭೆಯನ್ನು ಸ್ಥಾಪಿಸಿದರು ಮತ್ತು ಸಭೆಗಾಗಿ ನಮಗೆ ದೇವರ ವಾಕ್ಯವನ್ನು ಕೊಟ್ಟಿದ್ದಾರೆ. ಈ ಕಾರ್ಯಕ್ಕಾಗಿ ಅವರು ಮಾತ್ರವೇ ದೇವರಾದುಕೊಂಡ ಸಾಧನವಾಗಿದ್ದಾರೆ ಮತ್ತು ಇದನ್ನು ಪ್ರದರ್ಶಿಸಲು ದೇವರು ಅವರೊಂದಿಗೆ ವಿಶೇಷವಾದ ರೀತಿಯಲ್ಲಿ ಕಾರ್ಯಮಾಡಿದನು. ಅವರಿಗೆ ಒಂದು ಜವಾಬ್ದಾರಿಕೆ ಕೊಡಲ್ಪಟ್ಟಿತ್ತು, ಅದನ್ನು ಅವರು ಮಾಡಿ ಮುಗಿಸಿದರು. ಅದನ್ನು ಮತ್ತೆ ಮಾಡುವ ಅವಶ್ಯಕತೆಯಿಲ್ಲ ಮತ್ತು ಅದನ್ನು ಮತ್ತೆ ಮಾಡಲು ಆಗುವದಿಲ್ಲ. 2 ಕೊರಿಂಥ 12:12 ರ ನೋಟ್ಸ್ ಸಹ ನೋಡಿರಿ. ಈಗ ಅಧಿಕಾರವುಳ್ಳ ಮತ್ತು ಪ್ರೇರಣೆಯುಳ್ಳ ಅಪೊಸ್ತಲರು ಇಲ್ಲ ಹಾಗೂ ದೇವರಾತ್ಮನನ್ನು ಪಡೆಯಲು ಯಾರೂ ಯಾರ ಮೇಲೆಯೂ ತಮ್ಮ ಕೈಗಳನ್ನಿಡುವ ಅವಶ್ಯಕತೆಯಿಲ್ಲ. ಒಬ್ಬ ವ್ಯಕ್ತಿ ಯೇಸು ಕ್ರಿಸ್ತನನ್ನು ನಂಬಿಕೆಯಿಂದ ಅಂಗೀಕರಿಸಿಕೊಳ್ಳುವಾಗ ದೇವರಾತ್ಮನನ್ನು ನೇರವಾಗಿ ಅಂಗೀಕರಿಸಿಕೊಳ್ಳಬಹುದಾಗಿದೆ (1 ಕೊರಿಂಥ 12:12-13; ಎಫೆ 1:13; ಗಲಾ 3:14). ಒಂದುವೇಳೆ ಯಾವನಾದರೂ ತನ್ನಲ್ಲಿ ದೇವರ ಆತ್ಮನು ಇಲ್ಲ ಎಂದು ಹೆದರಿಕೊಂಡಿರುವದಾದರೆ ಅವನು ಇದರ ವಿಷಯವಾಗಿ ನೇರವಾಗಿ ದೇವರೊಂದಿಗೆ ಮಾತನಾಡಬೇಕು (ಲೂಕ 11:13). ಆಗ ಅಪೊಸ್ತಲರಿಗೆ ಇದ್ದ ಹಾಗೆಯೇ ಈಗ ಎಲ್ಲಾ ವಿಶ್ವಾಸಿಗಳಿಗೂ ದೇವರ ಸಮೀಪಕ್ಕೆ ಹೋಗುವ ಅವಕಾಶವಿದೆ (ರೋಮಾ 5:1-2). **18-19**

**8:18-19** ಸೀಮೋನನು ಇಲ್ಲಿ ಹಣ ಕೊಡುವದಾಗಿ ಹೇಳಿರುವದರಿಂದ, ಒಂದುವೇಳೆ ತನಗೆ ಈ ಶಕ್ತಿ ದೊರೆತರೆ ಅದರಿಂದ ಹಣ ಮಾಡಬಹುದು ಎಂದು ಅವನು ನೆನೆಸಿರಬಹುದು. ಜನರ ಮೇಲೆ ಹೆಚ್ಚು ಅಧಿಕಾರ ಪಡೆಯಬಹುದು ಮತ್ತು ಇನ್ನಷ್ಟು ಪ್ರಖ್ಯಾತನಾಗಬಹುದು ಎಂದು ಅವನು ಅಂದುಕೊಂಡಿರಬಹುದು. ಈ ವ್ಯಕ್ತಿಯಿಂದ ಇವನ ಮನವಿಯಲ್ಲಿ ಒಂದು ಪದ ವ್ಯಕ್ತವಾಗಿರುವದನ್ನು ನಾವು ನೋಡಬಹುದು. ಅದೇನೆಂದರೆ "ಧರ್ಮಾಧಿಕಾರದ ಮಾರಾಟ" ಇದರ ಅರ್ಥ ಸಭೆಯಲ್ಲಿರುವ ಉನ್ನತ ಸ್ಥಾನವನ್ನು ಕೊಳ್ಳುವದು ಅಥವಾ ಮಾರುವದು, ಅದು ಪ್ರಭಾವ ಅಥವಾ ಅಧಿಕಾರ ಅಥವಾ ಹಣ ಸಂಪಾದನೆ ಮಾಡುವ ಸಾಧನವಾಗಿರಬಹುದು. ಕೆಲವು ಕ್ರೈಸ್ತ ರಂಗಗಳಲ್ಲಿ ಈಗ ನಡೆಯುತ್ತಿರುವ ಕಾರ್ಯಗಳಿಗೆ ಅದು ಸಮಾನವಾಗಿದೆ – ಸಭೆಯ ನಾಯಕತ್ವದ ಸ್ಥಾನಕ್ಕೆ ಆಗುವ ಸಲುವಾಗಿ ತಮಗೇ ಮತ ಚಲಾಯಿಸುವಂತೆ ಜನರು ಇತರರಿಗೆ ಲಂಚ ಕೊಡುತ್ತಾರೆ. ಇದು ಸಂಪೂರ್ಣವಾಗಿ ಭ್ರಷ್ಟವಾದ ಕಾರ್ಯವಾಗಿದ್ದು ದೇವರ ಆಶೀರ್ವಾದ ಪಡೆಯಲು ಎಂದಿಗೂ ಆಗುವದಿಲ್ಲ. **20-23**

**8:20-23** ಸೀಮೋನನ ಪಾಪಮಯವಾದ ಬಯಕೆಯು ಎಷ್ಟು ಘೋರವಾಗಿತ್ತು ಎಂಬದನ್ನು ಕಠಿಣವಾದ ಈ ಮಾತುಗಳೇ ಸೂಚಿಸುತ್ತವೆ. ಅವನಿನ್ನೂ ಪಶ್ಚಾತ್ತಾಪಪಟ್ಟಿಲ್ಲ, ಕ್ರಿಸ್ತನಲ್ಲಿ ಭರವಸೆಯನ್ನಿಟ್ಟಿಲ್ಲ ಮತ್ತು ದೇವರೊಂದಿಗೆ ಎಲ್ಲವನ್ನೂ ಸರಿಪಡಿಸಿಕೊಂಡಿಲ್ಲ ಎಂಬದನ್ನು ಇವು ತೋರಿಸುತ್ತವೆ. ನಿಜವಾದ ವಿಶ್ವಾಸಿಗಳು ತಮ್ಮ ಹಣದೊಂದಿಗೆ

ಹಾಳಾಗುವದಿಲ್ಲ (ಯೋಹಾನ 10:28) ಮತ್ತು ಹೊಸ ವಿಶ್ವಾಸಿಗಳು ಪೇತ್ರನು ಸೀಮೋನನನ್ನು ವಿವರಿಸಿರುವ ಹಾಗೆ ನಡೆದುಕೊಳ್ಳುವದಿಲ್ಲ. **24**

**8:24** ಈ ವಾಕ್ಯವು ಸೀಮೋನನು ಪಶ್ಚಾತ್ತಾಪಪಟ್ಟನು ಎಂದು ಹೇಳುವದಿಲ್ಲ. ಅವನು ಶಿಕ್ಷೆಯನ್ನು ನೆನೆಸಿ ಹೆದರಿಕೊಂಡನು ಆದರೆ ಇದು ಪಶ್ಚಾತ್ತಾಪಕ್ಕೆ ಸಮಾನವಲ್ಲ (ಮತ್ತಾಯ 3:2,8). **25**

**8:25** ಮತ್ತಾಯ 10:5 ರೊಂದಿಗೆ ಹೋಲಿಸಿ ನೋಡಿರಿ. ಹೊಸ ದಿನವು ಉದಯವಾಯಿತು. **26**

**8:26** "*ದೇವದೂತನು*"– 5:19; ಮತ್ತಾಯ 10:20; ಲೂಕ 1:11,26. ಗಾಜಾ ಯೆರೂಸಲೇಮಿನ ದಕ್ಷಿಣ ಪಶ್ಚಿಮದಲ್ಲಿರುವ ಮೆಡಿಟರೇನಿಯನ್ ಕಡಲ ತೀರದಲ್ಲಿದೆ. **27**

**8:27** ಫಿಲಿಪ್ಪನು ಸಮಾರ್ಯದಲ್ಲಿ ಅಭಿವೃದ್ಧಿಯಾಗುತ್ತಿದ್ದ ದೇವರ ಸೇವೆಯನ್ನು ಬಿಟ್ಟು ಕರ್ತನು ತನ್ನನ್ನು ಕಳುಹಿಸುವ ಯಾವ ಕಡೆಗೆ ಬೇಕಾದರೂ ಹೋಗಲು ಸಿದ್ಧನಾಗಿರುವದನ್ನು ಗಮನಿಸಿರಿ. ಐಥಿಯೊಪ್ಯದವರು ಈಗಿರುವದಕ್ಕಿಂತ ಉತ್ತರದಲ್ಲಿರುವ ಭಾಗವನ್ನು ಆಕ್ರಮಿಸಿಕೊಂಡಿದ್ದಾರೆ ಎಂದು ಜನರು ಹೇಳುತ್ತಿದ್ದರು. ಅದರಲ್ಲಿ ದಕ್ಷಿಣದ ಐಗುಪ್ತ ಮತ್ತು ಉತ್ತರದ ಸುಡಾನ್ ಸಹ ಸೇರಿತ್ತು. ಆಗಿನ ಕಾಲದಲ್ಲಿ ರಾಷ್ಟ್ರಗಳು ಕಂಚುಕಿಯರನ್ನು ಖಜಾನೆಯ ಮೇಲ್ವಿಚಾರಕರನ್ನಾಗಿ ಉಪಯೋಗಿಸಿಕೊಳ್ಳುತ್ತಿದ್ದವು. ಈ ಕಂಚುಕಿಯು ನಿಜವಾದ ದೇವರನ್ನು ಮತ್ತು ಯೆರೂಸಲೇಮಿನಲ್ಲಿರುವ ಆತನ ದೇವಾಲಯವನ್ನು ಬಲ್ಲವನಾಗಿದ್ದು ಆತನನ್ನು ಆರಾಧಿಸಲು ದೂರ ದೇಶದಿಂದ ಬಂದವನಾಗಿದ್ದನು (ಮತ್ತಾಯ 2:1-2 ರೊಂದಿಗೆ ಹೋಲಿಸಿ ನೋಡಿರಿ). ಅವನು ಅನ್ಯದೇಶದವನಾಗಿದ್ದರೂ, ಯೆಹೂದ್ಯ ಧರ್ಮಕ್ಕೆ ಸೇರಿಕೊಂಡಿರುವ ಸಾಧ್ಯತೆ ಅಧಿಕವಾಗಿದೆ. ಈ ರೀತಿ ಲೋಕದ ಅನೇಕ ಭಾಗಗಳಲ್ಲಿ ತಮ್ಮ ದೇವತೆಗಳನ್ನು ಹಾಗೂ ವಿಗ್ರಹಗಳನ್ನು ತ್ಯಜಿಸಿ, ಇಸ್ರಾಯೇಲಿನ ದೇವರ ಕಡೆಗೆ ತಿರುಗಿಕೊಂಡಿದ್ದ ಬಹುತೇಕ ಜನರಿದ್ದರು (2:11 ರೊಂದಿಗೆ ಹೋಲಿಸಿ ನೋಡಿರಿ). ಒಂದುವೇಳೆ ಈ ಕಂಚುಕಿಯು ಅಂಥ ವ್ಯಕ್ತಿಯಲ್ಲವಾದರೆ ಅಷ್ಟು ದೂರ ಪ್ರಯಾಣ ಮಾಡಿ ಯೆರೂಸಲೇಮಿಗೆ ಯಾಕೆ ಬರುತ್ತಿದ್ದನು? ಅವನು ಯೆಹೂದ್ಯ ಮತಕ್ಕೆ ಸೇರಿಕೊಂಡಿದ್ದನು ಎಂಬದಾಗಿ ಆಲೋಚಿಸಲು ಮತ್ತೊಂದು ಕಾರಣವಿದೆ – ಅನ್ಯರಿಗೆ ದೇವರ ರಾಜ್ಯವನ್ನು ತೆರೆಯುವ "ಬೀಗದ ಕೈಗಳನ್ನು" ಫಿಲಿಪ್ಪನಿಗೆ ಕೊಡಲಾಗಿರಲಿಲ್ಲ ಬದಲಾಗಿ ಪೇತ್ರನಿಗೆ ಕೊಡಲಾಗಿತ್ತು ಅದನ್ನು ಅವನು ಉಪಯೋಗಿಸಿಕೊಂಡದ್ದನ್ನು 10 ನೇ ಅಧ್ಯಾಯದಲ್ಲಿ ಬರೆಯಲಾಗಿದೆ. **28**

**8:28** ಸತ್ಯವನ್ನು ಹಾರೈಸುತ್ತಿದ್ದ ಈ ವ್ಯಕ್ತಿಯ ಬಯಕೆಗಳನ್ನು ತೃಪ್ತಿಪಡಿಸಲು ಆರಾಧನೆಯಿಂದ ಮಾತ್ರ ಸಾಧ್ಯವಾಗಲಿಲ್ಲ. **29**

**8:29** ಇಲ್ಲಿ ದೇವರಾತ್ಮನು ಎಂದರೆ ಪವಿತ್ರಾತ್ಮನು. ಆತನು ಮಾತನಾಡುತ್ತಿರುವದು ಆತನ

ವ್ಯಕ್ತಿತ್ವಕ್ಕೆ ಸೂಚನೆಯಾಗಿದೆ. ಯೋಹಾನ 14:16-17 ರಲ್ಲಿ ನೋಟ್ಸ್ ನೋಡಿರಿ. ತನಗೆ ಅಧೀನರಾಗುವವರು ಮತ್ತು ವಿಧೇಯರಾಗುವವರನ್ನು ಆತನು ಹೇಗೆ ಮುನ್ನಡೆಸುತ್ತಾನೆ ಎಂಬದನ್ನು ನಾವು ಸ್ಪಷ್ಟವಾಗಿ ನೋಡಬಹುದು. **31**

**8:31** ಇವನು ಅನ್ಯದೇಶದವನಾಗಿದ್ದು ಹಳೆಯ ಒಡಂಬಡಿಕೆಯ ಬೋಧನೆಗಳು ಮತ್ತು ಯೇಸು ಕ್ರಿಸ್ತನ ಬರೋಣದ ಬಗ್ಗೆ ಹೆಚ್ಚು ತಿಳುವಳಿಕೆಯಿಲ್ಲದವನಾಗಿದ್ದನು. ಮಾನವರಿಗೆ ಈಗಲೂ ದೇವರ ವಾಕ್ಯಗಳನ್ನು ವಿವರಿಸಿ ಹೇಳುವ ಇತರರ ಅವಶ್ಯಕತೆಯಿದೆ. **32-33**

**8:32-33** ಯೆಶಾಯ 53:7-8 ನೋಟ್ಸ್ ನೋಡಿರಿ. ಇದರಲ್ಲಿ ನಾವು ಖಂಡಿತವಾಗಿಯೂ ದೇವರ ಹಸ್ತ ಇರುವದನ್ನು ನೋಡಬಹುದು. ಇಡೀ ಹಳೆಯ ಒಡಂಬಡಿಕೆಯಲ್ಲಿ ಯೇಸು ಕ್ರಿಸ್ತನ ಬರೋಣದ ಕಾರಣದ ಬಗ್ಗೆ ಸ್ಪಷ್ಟವಾಗಿ ಮಾತನಾಡುವ ಭಾಗವನ್ನೇ ಅವನು ಓದುತ್ತಿದ್ದನು. **34-35**

**8:34-35** ಪವಿತ್ರಾತ್ಮಭರಿತನಾದ (6:3-5), ಫಿಲಿಪ್ಪನು, ಅಪೊಸ್ತಲರ ಬೋಧನೆಯನ್ನು ಕೇಳಿದ್ದನು (2:42), ಯೆಶಾಯನು ಯಾರ ಬಗ್ಗೆ ಮಾತನಾಡುತ್ತಿದ್ದಾನೆ ಎಂಬದನ್ನು ಚೆನ್ನಾಗಿ ಬಲ್ಲವನಾಗಿದ್ದನು. ಲೂಕ 24:26-27,45,46. **36-38**

**8:36-38** 2:38; ಮತ್ತಾಯ 3:6; 28:19; ಮಾರ್ಕ 16:16 ರಲ್ಲಿ ದೀಕ್ಷಾಸ್ನಾನದ ಕುರಿತಾದ ನೋಟ್ಸ್ ನೋಡಿರಿ. **39**

**8:39** ದೇವರಾತ್ಮನ ಈ ಕಾರ್ಯವನ್ನು 1 ಅರಸು 18:21; 2 ಅರಸು 2:16; ಯೆಹೆಜ್ಕೇಲ 3:14; 8:3 ರೊಂದಿಗೆ ಹೋಲಿಸಿ ನೋಡಿರಿ. ಫಿಲಿಪ್ಪನು ಮತ್ತು ಐಥಿಯೊಪ್ಯದವನ ಇಡೀ ಘಟನೆಗಳಲ್ಲಿ ಮಾನವನ ಮಾರ್ಗಗಳಿಗಿಂತ ದೇವರ ಮಾರ್ಗಗಳು ಎಷ್ಟು ಭಿನ್ನವಾಗಿವೆ ಎಂಬದನ್ನು ಗಮನಿಸಿರಿ (ಯೆಶಾಯ 55:8-9). ಕೆಲವು ಅಪೊಸ್ತಲರು ಮತ್ತು ಅನೇಕ ವಿಶ್ವಾಸಿಗಳು ಜೀವಿಸುತ್ತಿದ್ದ ಯೆರೂಸಲೇಮಿನಿಂದ ಐಥಿಯೊಪ್ಯದವನು ಆಗ ತಾನೇ ಬಂದಿದ್ದನು. ಆದರೂ ಅವನಿಗೆ ಕಲಿಸಲು ದೇವರು ಅವರಲ್ಲಿ ಯಾರನ್ನೂ ಉಪಯೋಗಿಸಿಕೊಳ್ಳಲಿಲ್ಲ. ಬದಲಾಗಿ ಸಮಾರ್ಯದಲ್ಲಿದ್ದ ಫಿಲಿಪ್ಪನನ್ನು ಅಲ್ಲಿಗೆ ಕರೆದುಕೊಂಡು ಬಂದನು ಮತ್ತು ಕೂಡಲೇ ಅವನನ್ನು ಬೇರೊಂದು ಸ್ಥಳಕ್ಕೆ ಒಯ್ದನು. ಆದರೆ ಇಲ್ಲಾಗಲಿ ಅಥವಾ ಅಲ್ಲಾಗಲಿ, ಫಿಲಿಪ್ಪನನ್ನಾಗಲಿ ಅಥವಾ ಬೇರೆಯವರನ್ನಾಗಲಿ, ಸತ್ಯವನ್ನು ತಿಳಿದುಕೊಳ್ಳಲು ಯಾರು ಬಯಸುತ್ತಾರೋ ಅವರಿಗೆ ಸತ್ಯ ತಲುಪವಂತೆ ದೇವರು ಖಂಡಿತವಾಗಿಯೂ ಮಾಡುತ್ತಾನೆ.

# 9 1

- **9:1** 8:1,3; 22:9-11; ಫಿಲಿಪ್ಪಿ 3:6 ನೋಡಿರಿ. **2**

**9:2** *"ಮಾರ್ಗ"*– ಯೇಸು ಕ್ರಿಸ್ತನ ಮಾರ್ಗ (ಯೋಹಾನ 14:6). ದಮಸ್ಕ ಸಿರಿಯಾದ

ರಾಜಧಾನಿ, ಪ್ರಾಚೀನ ಪಟ್ಟಣವಾಗಿದ್ದು ಯೆರೂಸಲೇಮಿನಿಂದ 200 ಕಿಲೊಮೀಟರ್ ದೂರ ಉತ್ತರಪೂರ್ವದಲ್ಲಿ ಇತ್ತು. ಯೇಸು ಕ್ರಿಸ್ತನ ಸುವಾರ್ತೆ ಆಗಲೇ ಅಲ್ಲಿ ಪ್ರಚುರವಾಗಿತ್ತು ಎಂಬದಕ್ಕೆ ಪುರಾವೆಗಳಿವೆ (2:5 ರೊಂದಿಗೆ ಹೋಲಿಸಿ ನೋಡಿರಿ). ಯೇಸು ಕ್ರಿಸ್ತನ ಸಭೆ ಎಲ್ಲೇ ಇದ್ದರೂ ಅದನ್ನು ಹಾಳುಮಾಡಬೇಕೆಂದು ಸೌಲನು ತೀರ್ಮಾನಿಸಿಕೊಂಡಿದ್ದನು. **3**

**9:3** ಸಭೆಯ ದೊಡ್ಡ ವೈರಿಯನ್ನು, ಸಭೆಯ ದೊಡ್ಡ ಬೋಧಕನನ್ನಾಗಿ ದೇವರು ಮಾರ್ಪಡಿಸುವ ಸಮಯ ಬಂದಿತು. ಇದು ದೇವರ ಕೃಪೆ, ಕರುಣೆ ಮತ್ತು ಪ್ರೀತಿಯ ಅಮೋಘವಾದ ಪ್ರದರ್ಶನವಾಗಿದೆ. 1 ತಿಮೊ 1:12-16; 2 ತಿಮೊ 1:9 ನೋಡಿರಿ. ಪೌಲನ ಇಡೀ ಜೀವಿತ ಒಂದೇ ಒಂದು ಪ್ರಕಾಶಮಾನ ಘಳಿಗೆಯಲ್ಲಿ ಬದಲಾಯಿತು. **4**

**9:4** ಯೇಸು ಕ್ರಿಸ್ತನ ವಿಶ್ವಾಸಿಗಳನ್ನು ಹಿಂಸಿಸುವದು ಆತನನ್ನೇ ಹಿಂಸಿಸುವದಕ್ಕೆ ಸಮಾನವಾಗಿದೆ. ನಿಜವಾಗಿ ಹೇಳುವದಾದರೆ, ಅವರಿಗೆ ವಿರುದ್ಧವಾಗಿ ಅಥವಾ ಅವರಿಗೆ ನೇರವಾಗಿ ಏನೇ ಅಮಡಿದರೂ ಆತನಿಗೆ ವಿರುದ್ಧವಾಗಿ ಮತ್ತು ಆತನಿಗೇ ನೇರವಾಗಿ ಮಾಡುವವರಾಗಿದ್ದೇವೆ. ಅವರು ದೇಹವಾಗಿದ್ದು ಅದಕ್ಕೆ ಆತನೇ ಶಿರಸ್ಸಾಗಿದ್ದಾನೆ (1 ಕೊರಿಂಥ 12:12-13; ಎಫೆ 1:22-23; ಕೊಲೊ 1:18). "ಶಿರಸ್ಸಿಗೆ" ಹಿಂಸೆಯನ್ನು ಕೊಡದೆ "ದೇಹಕ್ಕೆ" ಅಥವಾ ದೇಹದ ಇತರೆ ಭಾಗಗಳಿಗೆ ಹಿಂಸೆ ಕೊಡಲು ಆಗುವದೇ ಇಲ್ಲ. ಮತ್ತಾಯ 10:40; 18:5; 25:34-46; ಲೂಕ 9:48; ಯೋಹಾನ 17:20-23 ರೊಂದಿಗೆ ಹೋಲಿಸಿ ನೋಡಿರಿ. **5**

**9:5** *"ಕರ್ತನೇ, ನೀನಾರು"*– ತನ್ನೊಂದಿಗೆ ಮಾತನಾಡುತ್ತಿರುವವನು ಯಾರೇ ಆಗಿದ್ದರೂ ತಾನೇನು ಮಾಡಬೇಕೆಂದು ಹೇಳುವ ಅಧಿಕಾರ ಆತನಿಗಿದೆ ಎಂಬದನ್ನು ಪೌಲನು ಬಲ್ಲವನಾಗಿದ್ದನು. 22:10 ರ ನೋಟ್ಸ್ ನೋಡಿರಿ. ಯೇಸು – ಎಂಬ ಉತ್ತರ ತನ್ನ ಪ್ರಶ್ನೆಗೆ ಎದುರಾದ ಕೂಡಲೇ ಪೌಲನು ಹೇಗಾಗಿರಬಹುದು ಯೋಚಿಸಿರಿ! ಒಂದೇ ಕ್ಷಣದಲ್ಲಿ ಅವನ ಆಲೋಚನೆಗಳೆಲ್ಲವೂ ಹೇಗೆ ಬುಡಮೇಲಾಗಿರಬಹುದು! **6**

**9:6** ಪೌಲನು ಒಂದು ಪ್ರಶ್ನೆಯನ್ನು ಕೇಳಿದನು ಅದರ ಬಗ್ಗೆ 22:10 ರಲ್ಲಿ ನಮಗೆ ಹೇಳಿದ್ದಾನೆ (ಅಲ್ಲಿ ನೋಟ್ ನೋಡಿರಿ). ಕರ್ತನಿಗೆ ಅಧೀನನಾಗುವ ಮತ್ತು ವಿಧೇಯನಾಗುವ ಪೌಲನ ಬಯಕೆಯನ್ನು ಆ ಪ್ರಶ್ನೆಯು ಸೂಚಿಸುತ್ತದೆ. 26:16-18 ರಲ್ಲಿ ಅವನು ಏನು ಮಾಡುವನು ಎಂಬದರ ಬಗ್ಗೆ ಕರ್ತನಿಗೆ ಅವನಿಗೆ ಹೇಳಿದ್ದನ್ನು ಪೌಲನು ಪ್ರಕಟಪಡಿಸಿದ್ದಾನೆ. **7**

**9:7** 22:9 ನೋಡಿರಿ. **8**

**9:8** ಆಶ್ಚರ್ಯಕರವಾದ ಬೆಳಕು ಅವನನ್ನು ಶಾರೀರಿಕವಾಗಿ ಕುರುಡನನ್ನಾಗಿ ಮಾಡಿತು; ದೊಡ್ಡ ಬೆಳಕು ಅವನ ಹೃದಯದೊಳಗೆ ಪ್ರಕಾಶಿಸಿತು ಮತ್ತು ಅವನಿಗೆ ಆತ್ಮೀಕ ದೃಷ್ಟಿಯನ್ನು ಕೊಟ್ಟಿತು – 2 ಕೊರಿಂಥ 4:6. **10**

**9:10** ಅನನೀಯಾ ಎಂದರೆ "ಯೆಹೋವನು ಕೃಪೆಯುಳ್ಳವನು" (ಇಬ್ರಿಯದಲ್ಲಿ, "ಹನನ್ಯ"). ಅವನು ಯೆಹೂದ್ಯನಾಗಿದ್ದು ಕ್ರಿಸ್ತನಲ್ಲಿ ನಂಬಿಕೆಯನ್ನಿಟ್ಟಿದ್ದನು – 22:12. ಆದಿ 15:1 ರಲ್ಲಿ ದರ್ಶನಗಳ ಕುರಿತಾದ ನೋಟ್ ನೋಡಿರಿ. **11**

**9:11** ತಾರ್ಸ ಒಂದು ಪ್ರದೇಶದ ಪಟ್ಟಣವಾಗಿತ್ತು, ಆ ಪ್ರದೇಶವನ್ನು ಈಗ ಟರ್ಕಿ ಎಂದು ಕರೆಯಲಾಗುತ್ತದೆ. ಅದು ಸೌಲನ ಸ್ವಂತ ಊರಾಗಿತ್ತು (9:30; 11:25; 21:39; 22:3). ಕರ್ತನು ತನಗೆ ಕಾಣಿಸಿಕೊಂಡಾಗಿನಿಂದ ಪೌಲನು ಏನು ಮಾಡುತ್ತಿದ್ದನು ಎಂಬದನ್ನು ನಾವು ಈ ವಾಕ್ಯದಲ್ಲಿ ನೋಡುತ್ತೇವೆ. ಅವನು ಪ್ರಾರ್ಥನೆ ಮಾಡುತ್ತಿದ್ದನು. ಅವನು ಏನನ್ನು ಪ್ರಾರಂಭಿಸಿದನೋ ಅದರಲ್ಲಿಯೇ ತನ್ನ ಜೀವನಪರ್ಯಂತರ ಮುಂದುವರೆದನು ಮತ್ತು ನಾವು ಹೇಗೆ ಪ್ರಾರ್ಥನೆ ಮಾಡಬೇಕು ಮತ್ತು ಯಾವುದಕ್ಕೆ ಪ್ರಾರ್ಥನೆ ಮಾಡಬೇಕು ಎಂಬದಕ್ಕೆ ನಮ್ಮೆಲ್ಲರಿಗೂ ಮಾದರಿಯಾದನು (16:25; 20:36; 22:17; ಎಫೆ 1:15-23; 3:14-21; ಫಿಲಿಪ್ಪಿ 1:3-11; ಕೊಲೊ 1:9-12). **12**

**9:12** ಕರ್ತನಾದ ಯೇಸು ಕ್ರಿಸ್ತನು ಸೌಲನಿಗೆ ಅಪೊಸ್ತಲರು ವಾಸವಾಗಿದ್ದ ಯೆರೂಸಲೇಮಿನ ಹತ್ತಿರ ಕಾಣಿಸಿಕೊಳ್ಳದೆ ದಮಸ್ಕದಲ್ಲಿ ಕಾಣಿಸಿಕೊಂಡದ್ದು ಮತ್ತು ಅಪೊಸ್ತಲರಲ್ಲಿ ಒಬ್ಬರನ್ನು ಉಪಯೋಗಿಸಿಕೊಳ್ಳುವ ಬದಲು ಅಪರಿಚಿತನಾಗಿದ್ದ ವಿಶ್ವಾಸಿಯನ್ನು ಉಪಯೋಗಿಸಿಕೊಂಡದ್ದು ಆಸಕ್ತಿಕರವಾದ ಸಂಗತಿಯಾಗಿದೆ. ಯೆಶಾಯ 55:8-9 ನೋಡಿರಿ. **13**

**9:13** "ದೇವಜನರು"– ಇಲ್ಲಿ ಉಪಯೋಗಿಸಲಾಗಿರುವ ಪದದ ಅರ್ಥ "ಪರಿಶುದ್ಧರು" –ದೇವರು ಉಳಿದ ಮಾನವರಿಂದ ಇವರನ್ನು ತನಗಾಗಿ ಬೇರ್ಪಡಿಸಿಕೊಂಡಿದ್ದಾನೆ. ಇದು ವಿಶ್ವಾಸಿಗಳಿಗಿರುವ ಇನ್ನೊಂದು ಹೆಸರಾಗಿದೆ – ರೋಮಾ 1:7. **15-16**

**9:15-16** ಈ ಎರಡು ವಾಕ್ಯಗಳಲ್ಲಿ ಕರ್ತನು ಪೌಲನ ಜೀವಿತದ ಪ್ರಾಮುಖ್ಯತೆ ಮತ್ತು 13-28 ಅಧ್ಯಾಯಗಳಲ್ಲಿ ವಿವರಿಸಲಾಗಿರುವ ಅವನ ಸೇವೆಯ ಬಗ್ಗೆ ತಿಳಿಸಿದ್ದಾನೆ. ಅವನು "ಆರಿಸಲ್ಪಟ್ಟ ಸಾಧನವಾಗಿದ್ದನು." 26:16-18; ಗಲಾ 1:15; ಎಫೆ 3:2,7,8; ಕೊಲೊ 1:25; 1 ತಿಮೊ 1:12; 2 ತಿಮೊ 1:1 ನೋಡಿರಿ. ಯೇಸು ಕ್ರಿಸ್ತನಿಗಾಗಿ ಶ್ರಮೆಗಳನ್ನು ಅನುಭವಿಸುವದು ಅವನ ಎಲ್ಲಾ ಸೇವೆಗಳ ಪ್ರಮುಖ ವಿಷಯವಾಗಿತ್ತು ಮತ್ತು ಅವುಗಳಲ್ಲಿ ಸಂತೋಷಿಸುವದನ್ನು ಅವನು ಕಲಿತುಕೊಂಡನು – 2 ತಿಮೊ 1:12; 1 ಥೆಸ 3:3-4; ಕೊಲೊ 1:24; 2 ಕೊರಿಂಥ 7:4; 4:16-18; ರೋಮಾ 5:3. ಭೂಲೋಕದಲ್ಲಿರುವ ದೇವರ ಸದ್ಯದ ರಾಜ್ಯದಲ್ಲಿ ಅರಸನ ನಿಮಿತ್ತ ಶ್ರಮೆಗಳನ್ನು ಅನುಭವಿಸಲು ಅನುಮತಿ ಹೊಂದಿರುವದು ಆತನ ಮಹಾ ದಯೆಯ ಗುರುತಾಗಿದೆ ಎಂಬದನ್ನು ಅವನು ಮನವರಿಕೆ ಮಾಡಿಕೊಂಡನು – ಮತ್ತಾಯ 5:10-12; ರೋಮಾ 8:17; ಫಿಲಿಪ್ಪಿ 1:29. **17**

**9:17** ಅನನೀಯನು ಸೌಲನ ಮೇಲೆ ಕೈಗಳನ್ನಿಟ್ಟಾಗ ಅವನು ಪವಿತ್ರಾತ್ಮನನ್ನು

ಸ್ವೀಕರಿಸಿಕೊಂಡನು ಎಂಬದಾಗಿ ಈ ವಾಕ್ಯಗಳಿಂದ ಅನ್ನಿಸುತ್ತದೆ (ಆದರೆ ಉಪಯೋಗಿಸಲಾಗಿರುವ ಭಾಷೆ ಇದನ್ನು ಸಂಪೂರ್ಣವಾಗಿ ದೃಢಪಡಿಸುವದಿಲ್ಲ). ದೇವರಾತ್ಮನನ್ನು ಪೂರ್ಣವಾಗಿ ಜನರು ಪಡೆದುಕೊಂಡ ವಿವಿಧ ರೀತಿಗಳನ್ನು ಅಪೊಸ್ತಲರ ಕೃತ್ಯಗಳಲ್ಲಿ ಬರೆಯಲಾಗಿದೆ – ದೇವರಿಂದ ನೇರವಾಗಿ (2:1-4; 10:44-45), ಅಪೊಸ್ತಲರು ಜನರ ಮೇಳೆ ತಮ್ಮ ಕೈಗಳನ್ನಿಡುವಾಗ (8:17; 19:6) ಮತ್ತು ಇಲ್ಲಿನ ಪರಿಸ್ಥಿತಿಯಲ್ಲಿ, ಒಬ್ಬ ಸಾಧಾರಣ ಶಿಷ್ಯನು ತನ್ನ ಕೈಯನ್ನಿಡುವಾಗ ದೇವರಾತ್ಮನು ಬಂದಿದ್ದಾನೆ. ಕೆಲವೊಮ್ಮೆ ಇದು ನೀರಿನಲ್ಲಿ ಮುಳುಗಿ ದೀಕ್ಷಾಸ್ನಾನ ತೆಗೆದುಕೊಳ್ಳುವ ಮೊದಲು ನಡೆಯುತ್ತಿತ್ತು, ಕೆಲವೊಮ್ಮೆ ನಂತರ ನಡೆಯುತ್ತಿತ್ತು. ದೇವರಾತ್ಮನು ತನಗೆ ಇಷ್ಟವಾಗುವ ರೀತಿ ಕಾರ್ಯಮಾಡುತ್ತಿದ್ದನು ಮತ್ತು ಆತನು ಯಾವ ರೀತಿ ಕಾರ್ಯಮಾಡುತ್ತಾನೆ ಎಂಬದನ್ನು ಹೇಳಲು ಯಾರಿಂದಲೂ ಆಗುತ್ತಿರಲಿಲ್ಲ. ಕರ್ತನು ಅನನೀಯನಿಗೆ ತಾನು ಹೇಳಿದಂತೆಯೇ ಮಾಡಬೇಕೆಂದು ಸ್ಪಷ್ಟವಾಗಿ ಹಾಗೂ ನಿರ್ದಿಷ್ಟವಾಗಿ ಆಜ್ಞಾಪಿಸಿದ್ದನ್ನು ನಾವು ಗಮನಿಸಬೇಕು. ಕರ್ತನಿಂದ ನೇರವಾದ ಸೂಚನೆ ದೊರೆಯದೆ ಹೋದರೆ ಯಾರೊಬ್ಬರೂ ಇಂಥ ಕಾರ್ಯವನ್ನು ಮಾಡಲು ಮುಂದಾಗಬಾರದು. ಅವನು ಸೌಲನನ್ನು "ಸಹೋದರನೇ" ಎಂದು ಕರೆದದ್ದನ್ನು ಗಮನಿಸಿರಿ, ಹಾಗೆ ಕರೆಯುವ ಮೂಲಕ ಅವನನ್ನು ವಿಶ್ವಾಸಿಗಳ ಅನ್ಯೋನ್ಯತೆ ಅಂಗೀಕರಿಸಿಕೊಂಡನು. **18**

**9:18** *"ದೀಕ್ಷಾಸ್ನಾನ ಮಾಡಿಸಿಕೊಂಡನು"*– 2:38; ಮತ್ತಾಯ 3:6; ಮಾರ್ಕ 16:16 ನೋಡಿರಿ. **20-22**

**9:20-22** ಗಮಾಲಿಯೇಲನ ಬಳಿ ಅಧ್ಯಯನ ಮಾಡಿದಾಗ (22:3; ಗಲಾ 1:14) ದೊರೆಯದ ತಿಳುವಳಿಕೆ, ಕರ್ತನ ದರ್ಶನವನ್ನು ಕಂಡು, ಪವಿತ್ರಾತ್ಮಭರಿತನಾದಾಗ ಪೌಲನಿಗೆ ಹಳೆಯ ಒಡಂಬಡಿಕೆಯ ತಿಳುವಳಿಕೆ ಉಂಟಾಯಿತು. **21**

**9:21** *"ಈ ಹೆಸರು"*– 4:17; 5:28 ನೋಡಿರಿ. **23-25**

**9:23-25** 2 ಕೊರಿಂಥ 11:33 ನೋಡಿರಿ. ಸೌಲನನ್ನು ತಡೆಯಲು ಯೆಹೂದ್ಯರು ಮಾಡಿದ ಅನೇಕ ಪ್ರಯತ್ನಗಳಲ್ಲಿ ಇದು ಮೊದಲನೆಯದಾಗಿದೆ (ವ 29; 13:45; 14:5,19; 17:5,13; 18:16; 21:27-31). ಅವನ ಜೀವಿತದ ಭಾಗವಾಗಬೇಕಿರುವ ಶ್ರಮೆಗಳು (ವ 16) ಪ್ರಾರಂಭವಾದವು. **26**

**9:26** ಗಲಾ 1:15-19. ಅವರು ಸುಮಾರು ಮೂರು ವರ್ಷಗಳ ಕಾಲ ಸೌಲನನ್ನು ನೋಡಿರಲಿಲ್ಲ ಮತ್ತು ಅವನ ಬಗ್ಗೆ ಗಾಳಿ ಸುದ್ದಿಯನ್ನು ಮಾತ್ರವೇ ಕೇಳಿದ್ದರು. ಅವರ ಹೆದರಿಕೆ ಸಹಜವಾಗಿತ್ತು. **27**

**9:27** ಬಾರ್ನಬನು ತನ್ನ ಹೆಸರಿಗೆ ತಕ್ಕಂತೆ ನಡೆದುಕೊಂಡನು (4:36. ಹಾಗೆಯೇ 11:22-24 ನೋಡಿರಿ). ಆ ಸಮಯದಲ್ಲಿ ಯೆರೂಸಲೇಮಿನಲ್ಲಿ ಕೇವಲ ಇಬ್ಬರನ್ನು ಮಾತ್ರವೇ

ಅಪೊಸ್ತಲರೆಂದು ಕರೆಯಲಾಗುತ್ತಿತ್ತು ಎಂಬದಾಗಿ ಅನ್ನಿಸುತ್ತದೆ (ಗಲಾ 1:18-19 – ಆದರೆ ಪೌಲನು ಗಲಾತ್ಯ ಪತ್ರಿಕೆಯಲ್ಲಿ ಬೇರೊಂದು ಸಮಯದ ಬಗ್ಗೆ ಮಾತನಾಡುತ್ತಿದ್ದಾನೆ ಎಂಬದಾಗಿ ಅನ್ನಿಸುತ್ತದೆ). **28**

**9:28** ಧೈರ್ಯ ಪವಿತ್ರಾತ್ಮಭರಿತರಾಗಿರುವವರ ಗುರುತಾಗಿದೆ (4:13,31). **29**

**9:29** ವಚನ 23. **30**

**9:30** ವಚನ 11. **31**

**9:31** ಹಿಂಸೆಗಳಿಂದ ಸಭೆಯನ್ನು ಹಾಳುಮಾಡಲು ಅಥವಾ ಅದರ ಸಾಕ್ಷಿಯನ್ನು ತಡೆಯಲು ಆಗುವದಿಲ್ಲ ಎಂಬದನ್ನು ಯೆಹೂದ್ಯ ನಾಯಕರು ಅರಿತುಕೊಂಡಿದ್ದರು ಮತ್ತು ಹಿಂಸೆಪಡಿಸುತ್ತಿದ್ದ ಮುಖ್ಯಸ್ಥನೇ ಯೇಸು ಕ್ರಿಸ್ತನ ಶಿಷ್ಯನಾದಾಗ ಅವರಿಗೆ ದೊಡ್ಡ ಆಶ್ಚರ್ಯವಾಗಿರಬಹುದು. ಆದಿ 20:11; ಯೋಬ 28:28; ಕೀರ್ತನೆ 34:11-14; 111:10; ಜ್ಞಾನೋ 1:7 ರಲ್ಲಿ ದೇವರ ಭಯದ ಕುರಿತಾದ ನೋಟ್ಸ್ ನೋಡಿರಿ. **32**

**9:32** ಲುದ್ದವು ಯೊಪ್ಪದ ಹತ್ತಿರ ಯೆರೂಸಲೇಮಿನಿಂದ ಸುಮಾರು 40 ಕಿಲೊ ಮೀಟರ್ ದೂರದಲ್ಲಿದ್ದ ಪಟ್ಟಣವಾಗಿತ್ತು. **34**

**9:34** "ಸೀಮೋನ ಪೇತ್ರನು ನಿನ್ನನ್ನು ವಾಸಿಮಾಡುತ್ತಾನೆ" –ಎಂದು ಅವನು ಹೇಳಲಿಲ್ಲ. 3:6,12 ನೋಡಿರಿ. **35**

**9:35** ಅದ್ಭುತಕಾರ್ಯಗಳಿಂದ ಮಾತ್ರವೇ ನಂಬಿಕೆಯನ್ನು ಹುಟ್ಟಿಸಲು ಆಗುವದಿಲ್ಲ (ಲೂಕ 16:31) ಆದರೆ ದೇವರು ತಾನು ಹತ್ತಿರವಾಗಿರುವದನ್ನು ಮತ್ತು ಸಕ್ರಿಯನಾಗಿರುವದನ್ನು ಜನರಿಗೆ ಮನವರಿಕೆ ಮಾಡಿಸಲು ಅವುಗಳನ್ನು ಉಪಯೋಗಿಸಿಕೊಳ್ಳುವನು. ಮತ್ತಾಯ 8:1; ಯೋಹಾನ 2:11 ರಲ್ಲಿ ಅದ್ಭುತಕಾರ್ಯಗಳ ಕುರಿತಾದ ನೋಟ್ಸ್ ನೋಡಿರಿ. **36**

**9:36** ಯೊಪ್ಪಾ ಯೆರೂಸಲೇಮಿನಿಂದ ಸುಮಾರು 55 ಕಿಲೊ ಮೀಟರ್ ದೂರ ಮೆಡಿಟೆರೇನಿಯನ್ ಸಮುದ್ರದ ಬಂದರಾಗಿತ್ತು. ತಬಿಥಾ ಅರಾಮಿಕ್, ದೊರ್ಕಾ ಗ್ರೀಕ್. ಇವೆರೆಡ ಅರ್ಥ "ಜಿಂಕೆ." ಪ್ರತಿಯೊಬ್ಬ ಕ್ರೈಸ್ತರು ಬಡವರಿಗೆ ಯಾವ ರೀತಿ ಸಹಾಯ ಮಾಡಬೇಕು ಎಂಬದಕ್ಕೆ ಈಕೆ ಸೂಕ್ತ ಮಾದರಿಯಾಗಿದ್ದಾಳೆ. ದುರಾದೃಷ್ಟವೆಂದರೆ ಕೆಲವರು ಮಾತ್ರವೇ ಈಕೆಯ ಮಾದರಿಯನ್ನು ಅನುಸರಿಸುತ್ತಿದ್ದಾರೆ. ಬಡವರಿಗೆ ಸಹಾಯ ಮಾಡುವದರ ಬಗ್ಗೆ ತಿಳಿಯಲು ಗಲಾ 2:10; ಮತ್ತಾಯ 19:21; 2 ಕೊರಿಂಥ 9:9 ನೋಡಿರಿ. **38**

**9:38** ಪೇತ್ರನು ದೊರ್ಕಳನ್ನು ಬದುಕಿಸುವನು ಎಂಬದು ಅವರ ನಿರೀಕ್ಷೆಯಾಗಿತ್ತು ಎಂಬದಾಗಿ ಅನ್ನಿಸುತ್ತದೆ. **40-41**

**9:40-41** ಮಾರ್ಕ 5:21-24,35-43; ಯೋಹಾನ 14:12-13 ರೊಂದಿಗೆ ಹೋಲಿಸಿ ನೋಡಿರಿ. ಅಪೊಸ್ತಲರ ಕೃತ್ಯಗಳಲ್ಲಿ ಬರೆಯಲ್ಪಟ್ಟಿರುವ ಸತ್ತವರನ್ನು ಎಬ್ಬಿಸಿದ ಎರಡು ಪ್ರಸಂಗಗಳಲ್ಲಿ ಇದು ಒಂದಾಗಿದೆ. ಇನ್ನೊಂದನ್ನು ತಿಳಿಯಬೇಕೆಂದರೆ 20:7-12 ನೋಡಿರಿ.

ಕರ್ತನು ಅಪರೂಪಕ್ಕೆ ಈ ಅದ್ಭುತವನ್ನು ಮಾಡಿದನಾದರೂ ಇನ್ನೊಂದಕ್ಕಿಂತ ಇದು ಆತನಿಗೆ ಹೆಚ್ಚು ಕಷ್ಟಕರವಾಗಿರಲಿಲ್ಲ. **42**

**9:42** ಸತ್ತವರನ್ನು ಬದುಕಿಸಿದ್ದು ಪೇತ್ರನಲ್ಲ ಬದಲಾಗಿ ಕರ್ತನಾದ ಯೇಸು ಕ್ರಿಸ್ತನು ಎಂಬದನ್ನು ಅವರು ಮನವರಿಕೆ ಮಾಡಿಕೊಂಡರು. 3:12 ನೋಡಿರಿ. **43**

**9:43** ಚರ್ಮ ಸಂಸ್ಕರಣ ಮಾಡುವದು ಅಶುದ್ಧ ಕಾರ್ಯ ಎಂಬದಾಗಿ ಯೆಹೂದ್ಯ ನಾಯಕರು ಪರಿಗಣಿಸುತ್ತಿದರು, ಆದರೆ ಅವರ ಪರಿಗಣನೆಗೆ ಪೇತ್ರನು ಚಿಂತೆಮಾಡಲಿಲ್ಲ.

# 10 1

**10:1** ದೊರ್ಕಳನ್ನು ಮರಣದಿಂದ ಎಬ್ಬಿಸಿದ ಸಂಗತಿಯನ್ನು ತಿಳಿಸಲು ಲೂಕನು ಏಳು ವಚನಗಳನ್ನು ತೆಗೆದೆಕೊಂಡಿದ್ದಾನೆ. ಕೊರ್ನೇಲ್ಯನು ಮತ್ತು ಅವನ ಕುಟುಂಬದವರ ಕಥೆಗೆ ಮತ್ತಷ್ಟು ವಚನಗಳನ್ನು ತೆಗೆದುಕೊಂಡಿದ್ದಾನೆ – 10:1—11:8 (ಅರವತ್ತಾರು ವಚನಗಳು). ಅದರ ಪ್ರಾಮುಖ್ಯತೆಯನ್ನು ಇದುವೇ ತೋರಿಸುತ್ತದೆ. ಅಪೊಸ್ತಲರು ಅನ್ಯರ ಬಗ್ಗೆ ಮಾತನಾಡಲು ಮುಂದಾಗಿರುವದು ಇದೇ ಮೊದಲನೆಯ ಸಲವಾಗಿದೆ (ವ 45. ಸಮಾರ್ಯದವರನ್ನು ಮಿಶ್ರ ಜನಾಂಗ ಮತ್ತು ವ್ಯತ್ಯಸ್ಥ ದರ್ಜೆಯ ಜನರು ಎಂದು ಪರಿಗಣಿಸಲಾಗುತಿತ್ತು). ಮತ್ತು ಪೇತ್ರನು ಮೂರನೆಯ ಸಲ "ದೇವರ ರಾಜ್ಯದ ಬೀಗದ ಕೈಯನ್ನು" ಉಪಯೋಗ ಮಾಡುತ್ತಿದ್ದಾನೆ (ಮತ್ತಾಯ 16:19). ಕೈಸರಿಯ ಮೆಡಿಟರೇನಿಯನ್ ಸಮುದ್ರದ ಬಂದರಾಗಿತ್ತು, ಯೆರೂಸಲೇಮಿನಿಂದ ಉತ್ತರ ಪಶ್ಚಿಮಕ್ಕೆ 100 ಕಿಲೊ ಮೀಟರ್ ದೂರದಲ್ಲಿತ್ತು. ರೋಮ್ ಚಕ್ರವರ್ತಿಯಾದ ಅಗಸ್ಟಸ್ ಕೈಸರ್ ಹೆಸರನ್ನು ಅದಕ್ಕೆ ಇಡಲಾಗಿತ್ತು (ಲೂಕ 2:1). ಕೊರ್ನೇಲ್ಯನು ಪಟಾಲಮಿನ ಶತಾಧಿಪತಿಯಾಗಿದ್ದನು. **2**

**10:2** ಅವನು ರೋಮ್ ನ ಅನೇಕ ದೇವತೆಗಳ ಆರಾಧನೆ ಮಾಡುತ್ತಿರಲಿಲ್ಲ ಎಂಬದು ಸ್ಪಷ್ಟವಾಗಿದೆ. ಯಾವುದೋ ಒಂದು ಮೂಲದಿಂದ ಅವನು ನಿಜವಾದ ದೇವರ ಬಗ್ಗೆ ತಿಳಿದುಕೊಂಡಿದ್ದನು ಮತ್ತು ಆತನ ವಿಷಯದಲ್ಲಿ ಆಸಕ್ತನಾಗಿದ್ದನು. ಅವನು ಬಹಳ ಧಾರ್ಮಿಕ ವ್ಯಕ್ತಿಯಾಗಿದ್ದನು ಮತ್ತು ಒಳ್ಳೆಯ ಕಾರ್ಯಗಳ ಮೂಲಕ ತನ್ನ ಯಥಾರ್ಥತೆಯನ್ನು ತೋರ್ಪಡಿಸುತ್ತಿದ್ದನು. ಆದರೆ ರಕ್ಷಣೆ ಹೊಂದಿರಲಿಲ್ಲ (11:13-14). ರಕ್ಷಣೆ ಧಾರ್ಮಿಕ ಕಾರ್ಯಗಳು ಅಥವಾ ಯಥಾರ್ಥತೆ, ಅಥವಾ ಒಳ್ಳೆಯ ಕಾರ್ಯಗಳು, ಅಥವಾ ಪ್ರಾರ್ಥನೆಯಿಂದಲ್ಲ ಬದಲಾಗಿ ಕರ್ತನಾದ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವದರಿಂದ ದೊರೆಯುತ್ತದೆ ಎಂಬದನ್ನು ಈ ಕಥೆ ನಮಗೆ ಮತ್ತೊಮ್ಮೆ ಕಲಿಸುತ್ತದೆ (16:31; ಯೋಹಾನ 1:12; 3:16,36; ಎಫೆ 2:8-9; ತೀತ 3:4-7). **3**

**10:3** ಆದಿ 15:1; 16:7 ರಲ್ಲಿ ದರ್ಶನಗಳು ಮತ್ತು ದೇವದೂತರ ಕುರಿತಾದ ನೋಟ್ಸ್

ನೋಡಿರಿ. **4-6**

**10:4-6** ದೇವರು ಕೊರ್ನೇಲ್ಯನಲ್ಲಿ ಕಾರ್ಯಮಾಡುತ್ತಾ ಸುವಾರ್ತೆ ಕೇಳಲು ಮತ್ತು ನಂಬಲು ಅವನನ್ನು ಸಿದ್ಧಮಾಡುತ್ತಿದ್ದನು. ಅವನ ಪ್ರಾರ್ಥನೆಗಳು ಮತ್ತು ಕಾರ್ಯಗಳು, ಅವನ ಯಥಾರ್ಥತೆಯ ಬಗ್ಗೆ ದೇವರಿಗೆ "ನೆನಪಿಸುವವುಗಳಾಗಿದ್ದವು" ಹಾಗೆಯೇ ಅವನು ಹೆಚ್ಚು ಸತ್ಯವನ್ನು ತಿಳಿಯಲು ಬಯಸುವದನ್ನು ವ್ಯಕ್ತಪಡಿಸುತ್ತಿದ್ದವು. ಆದ್ದರಿಂದ ಅವನಿಗೆ ಕಡಿಮೆಯಾಗಿದ್ದ ಸತ್ಯವನ್ನು ಅವನು ತಿಳಿದುಕೊಳ್ಳುವ ಸಲುವಾಗಿ ದೇವರು ನಿರ್ದಿಷ್ಟವಾದ ಸೂಚನೆಗಳನ್ನು ಕೊಟ್ಟನು. ದೇವರು ಕೊಡುವ ಬೆಳಕನ್ನು ಜನರು ಹಿಂಬಾಲಿಸುವಾಗ ದೇವರು ಅದನ್ನು ಗಮನಿಸುತ್ತಾನೆ ಮತ್ತು ಅವರು ಯೇಸು ಕ್ರಿಸ್ತನ ಕುರಿತಾದ ಪೂರ್ಣ ಸತ್ಯವನ್ನು ತಿಳಿದುಕೊಳ್ಳುವ ತನಕ ಅವರಿಗೆ ಬೆಳಕನ್ನು ಕೊಡುತ್ತಾನೆ. ಯಾರೆಲ್ಲಾ ಬೆಳಕನ್ನು ನಿರಾಕರಿಸುತ್ತಾರೋ ಅವರು ಆಳವಾದ ಕತ್ತಲೆಗೆ ಒಳಗಾಗುತ್ತಾರೆ – ಯೋಹಾನ 3:19-21; 8:12; 9:39. **9-16**

**10:9-16** ಸತ್ಯವನ್ನು ಕೇಳಿಸಿಕೊಳ್ಳಲು ದೇವರು ಕೊರ್ನೇಲ್ಯನನ್ನು ಸಿದ್ಧಪಡಿಸಿದ್ದನು. ಈಗ ಅವನಿಗೆ ಸತ್ಯವನ್ನು ತಿಳಿಯಪಡಿಸಲು ತನ್ನ ಸಂದೇಶಕನನ್ನು ಸಿದ್ಧಪಡಿಸುತ್ತಿದ್ದಾನೆ. ದೇವರು ಎಡಬಿಡದೆ ಲೋಕದಲ್ಲಿ ಮಾಡುತ್ತಿರುವ ಈ ಎರಡು ಕಾರ್ಯಗಳು ಅತ್ಯಂತ ಪ್ರಾಮುಖ್ಯವಾದ ಸ್ಥಾನವನ್ನು ಹೊಂದಿವೆ. ಅದರಲ್ಲಿ ಭಾಗಿಯಾಗುವವರು ಧನ್ಯರಾಗಿದ್ದಾರೆ. **13-14**

**10:13-14** ಪೇತ್ರನು ಯೆಹೂದ್ಯನಾಗಿ ಯಾವಾಗಲೂ "ಶುದ್ಧ" ಮತ್ತು "ಅಶುದ್ಧವಾದವುಗಳ" ಬಗ್ಗೆ ಹಳೆಯ ಒಡಂಬಡಿಕೆಯ ಸೂಚನೆಗಳನ್ನು ತಪ್ಪದೆ ಪಾಲಿಸುತ್ತಿದ್ದನು. ಯಾಜಕಕಾಂಡ 11ನೇ ಅಧ್ಯಾಯ ನೋಡಿರಿ. ಆ ಸೂಚನೆಗಳಿಗೆ ಅವಿಧೇಯನಾಗುವ ಆಜ್ಞೆಯನ್ನು ಕೂಡಲೇ ಅಂಗೀಕರಿಸಿಕೊಳ್ಳಲು ಅಥವಾ ಅರ್ಥಮಾಡಿಕೊಳ್ಳಲು ಅವನು ಸಿದ್ಧನಿರಲಿಲ್ಲ. ಈಗ ಅವನು ಅನುಭವವುಳ್ಳ ಅಪೊಸ್ತಲನಾಗಿದ್ದು ಪವಿತ್ರಾತ್ಮಭರಿತನಾಗಿದ್ದನು, ಆದರೆ ಈಗಲೂ ಅವನು ಕರ್ತನಿಗೆ "ಇಲ್ಲ" ಎಂಬದಾಗಿ ಹೇಳುವದನ್ನು ಗಮನಿಸಿರಿ. ಮತ್ತಾಯ 16:22; ಯೋಹಾನ 13:8 ರೊಂದಿಗೆ ಹೋಲಿಸಿ ನೋಡಿರಿ. **15**

**10:15** ಮತ್ತಾಯ 15:11; ಮಾರ್ಕ 7:18-19 ಮತ್ತು ನೋಟ್ಸ್; ರೋಮಾ 6:14; 7:4; 1 ತಿಮೊ 4:3-5 ನೋಡಿರಿ. ಹಳೆಯ ಒಡಂಬಡಿಕೆಯಲ್ಲಿ "ಅಶುದ್ಧ" ಎಂದು ಪರಿಗಣಿಸಲಾಗುತ್ತಿದ್ದ ಕೆಲವು ಆಹಾರ ಪದಾರ್ಥಗಳನ್ನು ಹೊಸ ಒಡಂಬಡಿಕೆಯಲ್ಲಿ ದೇವರು ರದ್ದುಪಡಿಸಿದ್ದಾನೆ. **16**

**10:16** *"ಮೂರು ಸಲ"*– ಯೋಹಾನ 13:38; 21:15-17 ರೊಂದಿಗೆ ಹೋಲಿಸಿ ನೋಡಿರಿ. **17-18**

**10:17-18** ದೇವರು ತನ್ನ ಸಮಯದಲ್ಲಿ ನಡೆಸುವ ಕಾರ್ಯಗಳೆಲ್ಲವೂ

ಪರಿಪೂರ್ಣವಾಗಿರುತ್ತವೆ. **19**

**10:19** ದೇವರಾತ್ಮನು ಮಾತನಾಡುವದರ ಬಗ್ಗೆ ತಿಳಿಯಲು 8:29 ನೋಡಿರಿ. **20**

**10:20** ಅವರೊಂದಿಗೆ ಹೋಗಲು ಪೇತ್ರನು ಯೋಚಿಸುವನು ಎಂಬದು ದೇವರಾತ್ಮನಿಗೆ ತಿಳಿದಿತ್ತು, ಆದ್ದರಿಂದ ಯಾವುದೇ ನಿರಾಕರಣೆಯಿಲ್ಲದೆ ಅವರ ಜೊತೆ ಹೋಗುವಂತೆ ನಿರ್ದಿಷ್ಟವಾದ ಸೂಚನೆಯನ್ನು ಕೊಟ್ಟನು. ಯೆಹೂದ್ಯರು ಕೆಲವು ಆಹಾರ ಪದಾರ್ಥಗಳನ್ನು "ಅಶುದ್ಧವೆಂದು" ಪರಿಗಣಿಸುತ್ತಿದ್ದ ಹಾಗೆ ಅನ್ಯರನ್ನು "ಅಶುದ್ಧರೆಂದು" ಪರಿಗಣಿಸುತ್ತಿದ್ದರು (ಯಾಜಕ 11:1). ಪೇತ್ರನು ಕಂಡ ದರ್ಶನದ ಆತ್ಮೀಕ ಅರ್ಥವೇನೆಂದರೆ ಅವನ ಮನೋಭಾವನೆಯು ಸಹ ಬದಲಾಗಬೇಕು (ವ 28). ಜನರ ಜಾತಿ, ದೇಶ ಅಥವಾ ಹಿನ್ನಲೆಯ ನಿಮಿತ್ತ ಅವರ ಬಗ್ಗೆ ಪೂರ್ವಾಪರತೆಯುಳ್ಳ ಮನಸ್ಥಿತಿ ಸಭೆಯಲ್ಲಿ ಕಾಣಿಸಿಕೊಳ್ಳುವದನ್ನು ದೇವರಾತ್ಮನು ಸಹಿಸುವದಿಲ್ಲ (6:1 ರಲ್ಲಿ ನೋಟ್ ನೋಡಿರಿ). **23**

**10:23** ದೇವರು ಕಲಿಸುತ್ತಿದ್ದ ಪಾಠವನ್ನು ಪೇತ್ರನು ಕಲಿತುಕೊಂಡನು ಎಂಬದನ್ನು ಇದು ತೋರಿಸುತ್ತದೆ. ಅನ್ಯರ ಸಹವಾಸ ಮಾಡಿದರೆ ತಾವೂ ಅಶುದ್ಧರಾಗುವೆವು ಎಂಬದಾಗಿ ಯೆಹೂದ್ಯರು ಯೋಚಿಸುತ್ತಿದ್ದರು (ವ 28; 11:2-3). ಆದರೆ ಕೈಸರಿಯಾದಿಂದ ಐವತ್ತು ಕಿಲೋ ಮೀಟರ್ ಪ್ರಯಾಣಿಸಿ ಬಂದವರು ವಿಶ್ರಾಂತಿ ಬಯಸಿದರು ಹಾಗೂ ಪೇತ್ರನು ಅವರನ್ನು ಬರಮಾಡಿಕೊಂಡನು. **24**

**10:24** ಪೇತ್ರನು ಪ್ರಾಮುಖ್ಯವಾದ ಸಂಗತಿಗಳ ಬಗ್ಗೆ ಮಾತನಾಡುವನು ಎಂಬದಾಗಿ ಅವನು ಮನವರಿಕೆ ಮಾಡಿಕೊಂಡನು ಆದ್ದರಿಂದ ಅವನ ಸಂದೇಶವನ್ನು ಕೇಳಿಸಿಕೊಳ್ಳಲು ತನ್ನ ಪ್ರೀತಿಪಾತ್ರರೆಲ್ಲರನ್ನೂ ಕರೆಸಿಕೊಂಡನು (ವ 33). **26**

**10:26** *"ಪೇತ್ರನು ಅವನನ್ನು ಎತ್ತಿದನು"*– ಮಾನವನಿಗೆ ಅಷ್ಟೊಂದು ಮರ್ಯಾದೆ ಕೊಡುವದು ಸರಿಯಲ್ಲ ಎಂಬದು ಕೊರ್ನೇಲ್ಯನಿಗೆ ಗೊತ್ತಿರಲಿಲ್ಲ ಆದರೆ ಪೇತ್ರನಿಗೆ ಗೊತ್ತಿತ್ತು, ಆದ್ದರಿಂದ ಅದನ್ನು ನಿರಾಕರಿಸಿದನು – ದೇವಸೇವಕರೆಲ್ಲರೂ ಹೀಗೆಯೇ ಮಾಡಬೇಕು. ಮಾನವರು ಎಷ್ಟೇ ಪ್ರಸಿದ್ಧರಾಗಿರಲಿ ಮತ್ತು ಘನತೆಯುಳ್ಳವರಾಗಿರಲಿ ನಾವು ಯಾರೂ ಬೇರೆಯವರ ಕಾಲುಗಳಿಗೆ ಬೀಳಬಾರದು. ಹಾಗೆಯೇ ಯಾರೇ ಆದರೂ ನಮ್ಮ ಕಾಲಿಗೆ ಬೀಳಲು ಬರುವಾಗ ನಾವು ಅವರನ್ನು ತಡೆಯಬೇಕು. ದೇವರು ಮಾತ್ರವೇ ಅಂಥ ಮರ್ಯಾದೆಗೆ ಯೋಗ್ಯನಾಗಿದ್ದಾನೆ. ಪ್ರಕ 22:8-9 ರೊಂದಿಗೆ ಹೋಲಿಸಿ ನೋಡಿರಿ. **28-29**

**10:28-29** ವಚನ 15,20. ಕಾರ್ಯಗಳ ಕುರಿತಾದ ಹಳೆಯ ನಿಯಮಗಳು ರದ್ದಾಗುತ್ತಲಿದ್ದವು. ಯೇಸು ಕ್ರಿಸ್ತನ ಹಿಂಬಾಲಕರಾಗಿದ್ದ ಯೆಹೂದ್ಯರು ಇತರೆ ಜನಾಂಗದವರೊಂದಿಗೆ ನಮಗೆ ಯಾವುದೇ ಸಂಬಂಧವಿಲ್ಲ ಎಂಬದಾಗಿ ಯೋಚಿಸಬಾರದು. **35**

**10:35** *"ದೇವರು ಪಕ್ಷಪಾತಿಯಲ್ಲ"*– ರೋಮಾ 2:11; ಎಫೆ 6:9; ಕೊಲೊ 3:25; ಯಾಕೋಬ 2:1; 1 ಪೇತ್ರ 1:17 ನೋಡಿರಿ.

*"ನೀತಿಯನ್ನು ನಡೆಸಿರಿ"*– ರಕ್ಷಣೆಯು ಕ್ರಿಯೆಗಳಿಂದ ದೊರೆಯುತ್ತದೆ ಎಂದು ಪೇತ್ರನು ಕಲಿಸುತ್ತಿರಲಿಲ್ಲ. ಎಲ್ಲಾ ಅಪೊಸ್ತಲರ ಹಾಗೆ ನಂಬಿಕೆಯ ಮೂಲಕ ಕೃಪೆಯಿಂದ ದೇವರು ಮಾನವರನ್ನು ರಕ್ಷಿಸುತ್ತಾನೆ ಎಂಬದು ಅವನಿಗೆ ಚೆನ್ನಾಗಿ ಗೊತ್ತಿತ್ತು (15:11 ರಲ್ಲಿ ಆತನು ಏನು ಹೇಳುತ್ತಾನೆಂದು ನೋಡಿರಿ). ತಮಗೆ ಕೊಡಲಾಗಿರುವ ಸತ್ಯಕ್ಕೆ ಪ್ರತಿಕ್ರಿಯಿಸುವವರಾಗಿ ಅದನ್ನು ಅನುಸರಿಸುವವರು ಯಾರೇ ಆದರೂ ಎಲ್ಲೇ ಇದ್ದರೂ ಆತನು ಅವರನ್ನು ಅಂಗೀಕರಿಸಿಕೊಳ್ಳುತ್ತಾನೆ ಮತ್ತು ಅವರನ್ನು ಹೆಚ್ಚಿನ ಸತ್ಯಕ್ಕೆ ನಡೆಸುತ್ತಾನೆ (ವ 4-6) ಎಂಬದೂ ಅವನಿಗೆ ಗೊತ್ತಿತ್ತು. ಒಬ್ಬ ವ್ಯಕ್ತಿ ದೇವರ ಕಡೆಗೆ ಒಂದು ಹೆಜ್ಜೆ ಮುಂದೆ ಇಡುವಾಗ, ದೇವರು ಸಹ ತನ್ನ ಹತ್ತಿರಕ್ಕೆ ಬರುತ್ತಿರುವದು ಅವನಿಗೆ ಗೊತ್ತಾಗುತ್ತದೆ (ಲೂಕ 15:17-20; ಯಾಕೋಬ 4:8 ರೊಂದಿಗೆ ಹೋಲಿಸಿ ನೋಡಿರಿ. ನಂತರದಲ್ಲಿ ಆ ಒಂದು ಹೆಜ್ಜೆ ಮುಂದೆ ಇಡುವಂತೆ ತನ್ನನ್ನು ಬಲಪಡಿಸಿದವನು ಸಹ ದೇವರೇ ಎಂಬದೂ ಅವನಿಗೆ ಗೊತ್ತಾಗುವದು). **36**

**10:36** *"ಸಮಾಧಾನ"*– ಲೂಕ 1:79; 2:1; ಯೋಹಾನ 14:27; 16:33; 2 ಕೊರಿಂಥ 5:18-21 ನೋಡಿರಿ.

*"ಎಲ್ಲಾ ಜನಗಳಿಗೂ ಕರ್ತನು"*– ಕರ್ತನಾದ ಯೇಸು ಕ್ರಿಸ್ತನು ಎಲ್ಲಾ ಜನಗಳಿಗೂ ಕರ್ತನಾಗಿದ್ದಾನೆ - ಆದರೆ ಕೆಲವರು ಮಾತ್ರವೇ ಇದನ್ನು ಅರಿತುಕೊಂಡಿದ್ದಾರೆ ಮತ್ತು ಆತನನ್ನು ಕರ್ತನಾಗಿ ಅಂಗೀಕರಿಸಿಕೊಂಡಿದ್ದಾರೆ (2:36; ರೋಮಾ 10:9; 1 ಕೊರಿಂಥ 8:6; ಎಫೆ 1:20-23; ಫಿಲಿಪ್ಪಿ 2:9-11). **37**

- **10:37** ಮತ್ತಾಯ 3:1-6. **38**

- **10:38** ಮತ್ತಾಯ 3:16-17; 4:23-24; 9:34; ಲೂಕ 4:16-21. **39**

**10:39** ಅಪೊ 1:8. ಪೇತ್ರನು ಶಿಲುಬೆಗೆ "ಮರ" ಎಂದು ಕರೆದಿದ್ದಾನೆ (5:30). **10**

**10:10** 2:32; 3:15 ನೋಡಿರಿ. **41**

- **10:41** ಯೋಹಾನ 15:27; 20:19-20; 21:9-14; 1 ಕೊರಿಂಥ 15:5-8.

*"ಅನ್ನಪಾನಗಳನ್ನು ತಕ್ಕೊಂಡೆವು"*– ಲೂಕ 24:42-43. **42**

- **10:42** ಮತ್ತಾಯ 28:18-20; ಮಾರ್ಕ 16:15.

*"ನ್ಯಾಯಾಧಿಪತಿ"*– 17:31; ಯೋಹಾನ 5:22-23,27; ಮತ್ತಾಯ 25:31-33. **43**

- **10:43** ಲೂಕ 24:26-27,45-48.

*"ಪಾಪ ಕ್ಷಮಾಪಣೆ"*– ಮತ್ತಾಯ 6:12; 9:5-7; 12:31; 18:23-25; ಎಫೆ 1:7; 1 ಯೋಹಾನ 1:9; ಯೆಶಾಯ 55:7. **44**

**10:44** ಒಬ್ಬ ಪ್ರಸಂಗವನ್ನು ಅಡ್ಡಿಪಡಿಸಲು ಇದು ಸೂಕ್ತವಾದ ಮಾರ್ಗವಾಗಿದೆ. "ಕೇಳಿದವರೆಲ್ಲರ ಮೇಲೆ ಇಳಿಯಿತು" ಪದಗಳನ್ನು 1:5,8; 2:4 ರೊಂದಿಗೆ ಹೋಲಿಸಿ

ನೋಡಿರಿ. **45**

**10:45** *"ಸುನ್ನತಿ ಮಾಡಿಸಿಕೊಂಡಿದ್ದ ವಿಶ್ವಾಸಿಗಳು"*– ಇದರ ಅರ್ಥ ಕ್ರೈಸ್ತರಾದ ಯೆಹೂದ್ಯರು.

*"ಪವಿತ್ರಾತ್ಮ ದಾನ"*– 2:38; 5:32; 15:8. **46**

**10:46** *"ಅನ್ಯಭಾಷೆಗಳಲ್ಲಿ ಮಾತನಾಡಿದರು"*– ಇದರಿಂದಾಗಿ ಆ ಅನ್ಯರಿಗೂ ಪವಿತ್ರಾತ್ಮನನ್ನು ಕೊಡಲಾಗಿದೆ ಎಂದು ಯೆಹೂದ್ಯ ವಿಶ್ವಾಸಿಗಳು ತಿಳಿದುಕೊಂಡರು. ತಕ್ಷಣದ ಈ ಹೊರಗಿನ ಪುರಾವೆಯು ದೇವರು ಯೆಹೂದ್ಯರಲ್ಲದೆ ಇತರರ ಮೇಲೆಯೂ ತನ್ನ ಆತ್ಮವನ್ನು ಸುರಿಸಿದ್ದಾನೆ ಎಂಬದನ್ನು ಅವರು ನಂಬಲು ಅವಶ್ಯವಾಗಿತ್ತು – ಈ ಕಾರ್ಯ ಇದಕ್ಕೂ ಮೊದಲು ನಡೆದಿರಲಿಲ್ಲ. ಪರಿಸ್ಥಿತಿಗಳು ಅತ್ಯಂತ ಅಸಹಜವಾಗಿದ್ದವು ಆದ್ದರಿಂದ ಅದು ಸಂಭವಿಸಿದೆ ಎಂದು ಸೂಚಿಸಲು ದೇವರು ಅವರಿಗೆ ತಕ್ಷಣವೇ ಗುರುತನ್ನು ಕೊಟ್ಟನು, ಯಾಕಂದರೆ ಅನ್ಯರಾಗಿರುವ ಈ ವಿಶ್ವಾಸಿಗಳನ್ನು ಯೆಹೂದ್ಯ ವಿಶ್ವಾಸಿಗಳು ಅಂಗೀಕರಿಸಿಕೊಳ್ಳಬೇಕೆಂದು ದೇವರು ಬಯಸಿದನು. ಇಲ್ಲಿ ಅನ್ಯಭಾಷೆಗಳಲ್ಲಿ ಮಾತನಾಡುತ್ತಿರುವದು 2:4-11 ರಲ್ಲಿ ನಡೆದ ಸಮಾನವಾಗಿರಬೇಕು – ಅಂದರೆ, ಅವರು ತಮಗೆ ಗೊತ್ತಿಲ್ಲದ್ದ ಅನ್ಯಾಭಾಷೆಯಲ್ಲಿ ಮಾತನಾಡಿದರು. ಪಂಚಾಶತ್ತಮ ದಿನದಂದು ಅಪೊಸ್ತಲರು ಮಾಡಿದ ಕಾರ್ಯಗಳಿಗೂ ವ್ಯತ್ಯಾಸಗಳಿದ್ದವು ಎಂಬದಕ್ಕೆ ಯಾವುದೇ ಸೂಚನೆಗಳಿಲ್ಲ. ಕೊರ್ನೇಲ್ಯನು ಮತ್ತು ಅವನ ಸಂಬಂಧಿಕರು ರೋಮನ್ನರಾಗಿದ್ದರು ಹಾಗೂ ಅವರ ಸ್ಥಳೀಯ ಭಾಷೆ ಲ್ಯಾಟಿನ್ ಆಗಿತ್ತು. ಅವರಿಗೆ ಅರಾಮಿಕ್, ಇಬ್ರಿಯ ಮತ್ತು ಗ್ರೀಕ್ ನ ಕೆಲವು ಪದಗಳ ಮಾತ್ರವೇ ಗೊತ್ತಿದ್ದಿರಬಹುದು ಆದರೆ ಕೂಡಲೇ ಸರಾಗವಾಗಿ ಅವನು ಇವುಗಳಲ್ಲಿ ಯಾವುದಾದರೊಂದು ಭಾಷೆಯನ್ನು ಮಾತನಾಡಲು ಪ್ರಾರಂಭಿಸುವದು ಅಥವಾ ಯೆಹೂದ್ಯ ವಿಶ್ವಾಸಿಗಳಿಗೆ ತಿಳಿದಿದ್ದ ಬೇರೆ ಭಾಷೆಯಲ್ಲಿ ಮಾತನಾಡಿದ್ದು – ಅವರಿಗೆ ಅವಶ್ಯವಾಗಿದ್ದ ಪುರಾವೆಯಾಗಿತ್ತು. ಯೆಹೂದ್ಯ ವಿಶ್ವಾಸಿಗಳು ನಿಜವಾದ ಭಾಷೆ ಎಂದು ಗುರುತಿಸುತ್ತಿದ್ದ ಭಾಷೆಯಲ್ಲಿ ಅವರು ಮಾತನಾಡಿದ್ದಿರಬಹುದು ಅಥವಾ ಅಪೊಸ್ತಲರು ಅಭ್ಯಾಸಿಸುತ್ತಿದ್ದ ಸಾಮರ್ಥ್ಯದಲ್ಲಿಯೇ ಅವರು ಅನ್ಯಭಾಷೆ ಮಾತನಾಡುತ್ತಿರುವದನ್ನು ಗುರುತಿಸಲು ಅವರಿಂದ ಆಗುತ್ತಿರಲಿಲ್ಲ (2:11 ರ ನೋಟ್ ನೋಡಿರಿ). ಮಾನವ ಭಾಷೆಯೆಂದು ಗುರುತಿಸಲು ಆಗದ ಏನಾದರು ಶಬ್ದ ಅವರ ಬಾಯೊಳಗಿಂದ ಬಂದಿದ್ದರೆ ಅವರು ಬಯಸುತ್ತಿದ್ದಂಥ ಪುರಾವೆ ಅವರಿಗೆ ಸಿಗುತ್ತಿರಲಿಲ್ಲ. **47**

**10:47** ಈ ಜನರು ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಮೊದಲು ಪವಿತ್ರಾತ್ಮನನ್ನು ಪಡೆದುಕೊಂಡರು ಮತ್ತು ಯಾರೂ ಇವರ ಮೇಲೆ ಕೈ ಇಡಲಿಲ್ಲ ಎಂಬದನ್ನು ಗಮನಿಸಿರಿ. 9:17 ರಲ್ಲಿ ನೋಟ್ ನೋಡಿರಿ. **48**

**10:48** 2:38; 19:5 ರಲ್ಲಿ ಯೇಸು ಕ್ರಿಸ್ತನ ನಾಮದಲ್ಲಿ ದೀಕ್ಷಾಸ್ನಾನ

ಮಾಡಿಸಿಕೊಳ್ಳುವದರ ನೋಟ್ಸ್ ನೋಡಿರಿ.

# 11 2

**11:2** 10:23,28 ನೋಡಿರಿ. ಅನ್ಯರು ಯೇಸು ಕ್ರಿಸ್ತನನ್ನು ಕಂಡುಕೊಂಡ ವಿಷಯದಲ್ಲಿ ಸಂತೋಷಪಡದೆ, ಅನ್ಯರು ಯೇಸು ಕ್ರಿಸ್ತನನ್ನು ಕಂಡುಕೊಳ್ಳಲು ಕಾರಣವಾದ ದೇವರ ಸಾಧನವನ್ನು ಇವರು ಟೀಕಿಸಿದರು. ದೇವರ ಸೇವಕರ ಸೇವೆಯ ವಿಷಯದಲ್ಲಿ ಸಂತೋಷಪಡದೆ ಆರೋಪಗಳನ್ನು ಮಾಡುವದು ಬಹುತೇಕ ಕ್ರೈಸ್ತರ ಸಹಜವಾದ ಗುಣವಾಗಿದೆ. ಫಿಲಿಪ್ಪಿ 1:15-18 ರಲ್ಲಿ ಪೌಲನ ಮನಸ್ಥಿತಿಯೊಂದಿಗೆ ಹೋಲಿಸಿರಿ. **14**

**11:14** 10:2 ರ ನೋಟ್ ನೋಡಿರಿ. ಅವರ ದಯೆ ಮತ್ತು ಪ್ರಾರ್ಥನಾ ಜೀವಿತದ ನಡುವೆಯೂ ಅವರಿಗೆ ರಕ್ಷಣೆಯ ಅವಶ್ಯಕತೆಯಿತ್ತು – ರೋಮಾ 3:23. **15**

**11:15** 10:44; 2:4 ನೋಡಿರಿ. **16**

**11:16** 1:5 ನೋಡಿರಿ. **17**

**11:17** 10:45; 2:38-39 ನೋಡಿರಿ. **18**

**11:18** ಇತರೆ ದೇವಸೇವಕರ ನಡವಳಿಕೆಗಳಿಗೆ ಕಾರಣವನ್ನು ಅರ್ಥಮಾಡಿಕೊಳ್ಳುವಾಗ ಕೆಲವೊಮ್ಮೆ ಸರಿಯಾದ ಮನಸ್ಥಿತಿ ಹಾಗೂ ಹೃದಯ ಸ್ಥಿತಿ ನೆಲೆಯಾಗುತ್ತದೆ. ಈ ಪರಿಸ್ಥಿತಿ ಹೀಗೆಯೇ ಆಯಿತು.

"*ಜೀವ*"– ಅಂದರೆ ಆತ್ಮೀಕ ಜೀವ, ನಿತ್ಯಜೀವ – ಯೋಹಾನ 3:16. ಪಶ್ಚಾತ್ತಾಪವನ್ನು ಹುಟ್ಟಿಸುವವನೂ ದೇವರೇ ಎಂಬದನ್ನು ಗಮನಿಸಿರಿ – 5:31; 2 ತಿಮೊ 2:25. **19**

**11:19** 8:1,4 ನೋಡಿರಿ. ಫೊಯಿನಿಕವು ಇಸ್ರಾಯೇಲಿನ ಉತ್ತರ ಭಾಗದಲ್ಲಿದ್ದು ತೂರ್ ಮತ್ತು ಸೀದೋನ್ ಪಟ್ಟಣಗಳನ್ನು ಒಳಗೊಂಡಿದ್ದ ಮೆಡಿಟರೇನಿಯನ್ ಸಮುದ್ರದ ತೀರವು ಇದಕ್ಕೆ ಹತ್ತಿರವಾಗಿತ್ತು. ತೂರ್ ಮತ್ತು ಸೀದೋನಿನ ಉತ್ತರಪೂರ್ವ ಮೆಡಿಟರೇನಿಯನ್ ನಲ್ಲಿ ಕುಪ್ರವು ದೊಡ್ಡ ದ್ವೀಪವಾಗಿತ್ತು. ಅಂತಿಯೋಕ್ಯವು ಸಿರಿಯಾದ ದೊಡ್ಡ ಪಟ್ಟಣವಾಗಿದ್ದು ಕಡಲ ತೀರದಿಂದ ಸುಮಾರು 25 ಕಿಲೋ ಮೀಟರ್ ದೂರದಲ್ಲಿತ್ತು (ರೋಮನ್ ಸಾಮ್ರಾಜ್ಯದಲ್ಲಿ ರೋಮ್ ಮತ್ತು ಅಲೆಗ್ಸಾಂಡ್ರಿಯಾ ಪಟ್ಟಣದ ನಂತರ ಇದು ಮೂರನೇ ದೊಡ್ಡ ಪಟ್ಟಣವಾಗಿತ್ತು). ಮೊದಲನೆಯ ಶತಮಾನದಲ್ಲಿ ಇದು ಕ್ರೈಸ್ತತ್ವದ ಪ್ರಮುಖ ಕೇಂದ್ರವಾಗಿತ್ತು. ಈ ವಿಶ್ವಾಸಿಗಳು ಯೆಹೂದ್ಯರಿಗೆ ಮಾತ್ರವೇ ಸುವಾರ್ತೆಯನ್ನು ಹೇಳಿದ್ದಕ್ಕೆ ಕಾರಣ ದೇವರು ಇತರರಿಗೂ ರಕ್ಷಣೆಯ ಬಾಗಿಲು ತೆರೆದಿದ್ದಾನೆ ಎಂಬದು ಇವರಿಗೆ ಗೊತ್ತಿರಲಿಲ್ಲ. **20**

**11:20** ಇದು ಯಾವಾಗ ಆಯಿತು ಅಥವಾ ಇವರು ಗ್ರೀಕರಿಗೆ ಸುವಾರ್ತೆ ಸಾರಲು ಯಾಕೆ ತೀರ್ಮಾನಿಸಿದರು ಎಂಬದನ್ನು ಇದು ಹೇಳುವದಿಲ್ಲ. ಬಹುಶಃ ಅವರು 10 ನೇ ಅಧ್ಯಾಯದ

ಘಟನೆಗಳನ್ನು ಕೇಳಿಸಿಕೊಂಡ ನಂತರ ಇದಾಗಿರಬಹುದು ಅನ್ನಿಸುತ್ತದೆ. **21**

**11:21** ಬೋಧಕರಿಗೆ ಬೇಕಾಗಿರುವದು ಇದುವೇ ಆಗಿದೆ – ಕರ್ತನ ಹಸ್ತವು ಅವರೊಂದಿಗಿದ್ದು, ಅವರ ಪರವಾಗಿ ಕಾರ್ಯಮಾಡುತ್ತಿತ್ತು. **22**

**11:22** *"ಬಾರ್ನಬ"*– 4:36; 9:27. **23**

**11:23** *"ದೇವರ ಕೃಪಾಕಾರ್ಯವನ್ನು ನೋಡಿದರು"*–ಎಂದರೆ ಏನು? ದೇವರ ಕೃಪೆಯು ಆತ್ಮೀಕ ಫಲವನ್ನುಂಟು ಮಾಡಿರುವದನ್ನು ಆತನು ನೋಡಿದನು. ಯೋಹಾನ 15:1-6 ನೋಡಿರಿ. ಬಾರ್ನಬನಿಗೆ ಇತರರನ್ನು ಪ್ರೋತ್ಸಾಹಪಡಿಸುವ ಧೈರ್ಯ ಇತ್ತು (ರೋಮಾ 12:6-8 ರೊಂದಿಗೆ ಹೋಲಿಸಿ ನೋಡಿರಿ). ಬಾರ್ನಬನು ಅವರಿಗೆ ಏನು ಮಾಡಲು ಪ್ರೋತ್ಸಾಹಪಡಿಸಿದನು ಎಂಬದನ್ನು ನೋಡಿರಿ. ಒಂದುವೇಳೆ ನಾವು ನಮ್ಮ ಹೃದಯದಲ್ಲಿ ಕರ್ತನಿಗೆ ಹತ್ತಿರವಾಗಿಲ್ಲವೆಂದರೆ ನಾವು ಆತನಿಗೆ ಹತ್ತಿರವೇ ಆಗಿರುವದಿಲ್ಲ. **24**

**11:24** ದೇವರ ವಾಕ್ಯಗಳ ಬೋಧಕನು ಮತ್ತು ಉಪದೇಶಕನು (ಹಾಗು ಪ್ರತಿಯೊಬ್ಬ ವಿಶ್ವಾಸಿಯು) ಹೇಗಿರಬೇಕು ಎಂಬ ವಿವರಣೆಯನ್ನು ಇಲ್ಲಿ ಕೊಡಲಾಗಿದೆ. ಹೊಸ ಒಡಂಬಡಿಕೆಯಲ್ಲಿ "ಒಳ್ಳೆಯವರು" ಎಂಬದಾಗಿ ಕರೆಯಲ್ಪಟ್ಟಿರುವ ಇಬ್ಬರಲ್ಲಿ ಬಾರ್ನಬನು ಒಬ್ಬನಾಗಿದ್ದಾನೆ (ಇನ್ನೊಬ್ಬನಿಗಾಗಿ ಲೂಕ 23:50 ನೋಡಿರಿ). ಇದರ ಅರ್ಥ ಉಳಿದವರ್ಯಾರು ಒಳ್ಳೆಯವರಲ್ಲ ಎಂಬದಾಗಿಯಲ್ಲ. ಮತ್ತಾಯ 5:45; 7:17-18; 12:35; ಲೂಕ 8:15; ರೋಮಾ 15:14; 1 ಪೇತ್ರ 2:18 ನೋಡಿರಿ. ದೇವಜನರ ಒಳ್ಳೇತನವು ಸ್ವಾಭಾವಿಕವಾಗಿ ಅವರದ್ದಲ್ಲ (ಮತ್ತಾಯ 7:11; ರೋಮಾ 7:18 ನೋಡಿರಿ). ದೇವರು ಮಾತ್ರವೇ ಸಂಪೂರ್ಣವಾಗಿ ಒಳ್ಳೆಯವನಾಗಿದ್ದಾನೆ (ಮತ್ತಾಯ 19:17), ಮತ್ತು ಆತನು ಮಾತ್ರವೇ ಜನರನ್ನು ಒಳ್ಳೆಯವರನ್ನಾಗಿ ಮಾಡಲು ಶಕ್ತನಾಗಿದ್ದಾನೆ (ಗಲಾ 5:22; ಎಫೆ 5:9). ದೇವರಾತ್ಮನ ಪರಿಪೂರ್ಣತೆಯ ಬಗ್ಗೆ ತಿಳಿಯಲು 1:5; 2:4; ಎಫೆ 5:18 ನೋಡಿರಿ. ದೇವರಾತ್ಮನ ಪರಿಪೂರ್ಣತೆಯು ನಮ್ಮನ್ನು ಪರಿಪೂರ್ಣವಾದ ನಂಬಿಕೆಗೆ ನಡೆಸುತ್ತದೆ ಮತ್ತು ಅದರ ಫಲಿತಾಂಶ ಆತ್ಮೀಕ ಯಶಸ್ಸು ಹಾಗು ದೇವರ ಕೆಲಸದಲ್ಲಿ ಜಯ ದೊರೆಯುತ್ತದೆ. **25**

**11:25** 9:30. **26**

**11:26** 5:11; ಮತ್ತಾಯ 16:18 ರಲ್ಲಿ "ಸಭೆಯ" ಕುರಿತಾದ ನೋಟ್ಸ್ ನೋಡಿರಿ. ಯೇಸು ಕ್ರಿಸ್ತನ ಹಿಂಬಾಲಕರನ್ನು "ಕ್ರೈಸ್ತರೆಂದು" ಮೊದಲು ಹೊರಗಿನವರು ಕರೆದರು. ಅವರು ಹಾಗೆ ಕರೆದದ್ದು ಸ್ವಾಭಾವಿಕವಾಗಿತ್ತು. (ಶೀರ್ಷಿಕೆಯ ಬದಲು – ಮತ್ತಾಯ 1:1 ನೋಡಿರಿ) ಅವರು "ಕ್ರಿಸ್ತನು" ಎಂಬ ಹೆಸರು ಸೂಕ್ತ ಎಂದು ನೆನೆಸಿದರು, ಮತ್ತು ಅದಕ್ಕೆ ಅಂತ್ಯ ಪ್ರತ್ಯಯವನ್ನು ಸೇರಿಸಿ "ಕ್ರಿಸ್ಟಿಯೇನಸ್" ಎಂಬದಾಗಿ ಮಾಡಿದರು, ಇದರ ಅರ್ಥ ಯಾವುದಾದರೊಂದು ರೀತಿಯಲ್ಲಿ ಕ್ರಿಸ್ತನಿಗೆ ಸೇರಿದವರು. ಅಪೊಸ್ತಲರ ಕೃತ್ಯಗಳಲ್ಲಿ ಕ್ರಿಸ್ತನ ಜನರನ್ನು "ಶಿಷ್ಯರು" (6:1), ಅಥವಾ "ದೇವಜನರು" (9:13 ನೋಟ್ ನೋಡಿರಿ), ಅಥವಾ

“ಸಹೋದರರು: (9:30), ಅಥವಾ “ವಿಶ್ವಾಸಿಗಳು” (10:45) ಎಂದು ಕರೆಯಲಾಗಿದೆ. ಇಡೀ ಸತ್ಯವೇದದಲ್ಲಿ ಈ ಒಂದು ಸ್ಥಳವನ್ನು ಹೊರತುಪಡಿಸಿ, ಕೇವಲ ಅಗ್ರಿಪ್ಪ (26:28) ಮತ್ತು ಪೇತ್ರನು ಮಾತ್ರವೇ “ಕ್ರೈಸ್ತ” (1 ಪೇತ್ರ 4:16. ಪೇತ್ರನು ಈ ಪದವನ್ನು ಉಪಯೋಗಿಸಲು ಕಾರಣ ಇತರರು ಅವರನ್ನು ಹೀಗೆ ಕರೆಯುತ್ತಿದ್ದರೇ ಹೊರತು ಅವನ ಪದ್ಧತಿಯಾಗಿರಲಿಲ್ಲ) ಎಂಬ ಪದವನ್ನು ಉಪಯೋಗಿಸಿದ್ದಾರೆ. **27**

**11:27** ಆದಿ 20:7 ರಲ್ಲಿ ಪ್ರವಾದಿಗಳ ವಿಷಯದಲ್ಲಿ ನೋಟ್ಸ್ ಹಾಗೂ ರೆಫರೆನ್ಸ್ ಗಳನ್ನು ಕೊಡಲಾಗಿದೆ. **28**

**11:28** ದೇವರಾತ್ಮನು ಅಗಬನ ಭವಿಷ್ಯವನ್ನು ಪ್ರಕಟಿಸಿದನು. 21:10-11 ಸಹ ನೋಡಿರಿ. ಕ್ಲೌದಿಯನು ರೋಮನ್ ಚಕ್ರವರ್ತಿಯಾಗಿದ್ದನು ಕ್ರಿ.ಶ 41-54. **29**

**11:29** ಕ್ರೈಸ್ತರು ಹೆಸರಿನಲ್ಲಿ ಮಾತ್ರವೇ ಕ್ರೈಸ್ತರಾಗಿರದೆ “ಶಿಷ್ಯರಾಗಿರುವದು” ದೊಡ್ಡ ಸಂಗತಿಯಾಗಿದೆ. ಅವರ ಒಳ್ಳೆಯ ಕಾರ್ಯಗಳನ್ನು 2 ಕೊರಿಂಥ 8:1-5 ರೊಂದಿಗೆ ಹೋಲಿಸಿ ನೋಡಿರಿ. **30**

**11:30** ಅವರು ಆಜ್ಞೆಯನ್ನು ಹೊರಡಿಸುವದಕ್ಕಿಂತ ಹೆಚ್ಚಿನ ಕಾರ್ಯವನ್ನು ಮಾಡಿದರು. ಅವರು ಅದಕ್ಕನುಸಾರವಾಗಿ ನಡೆದುಕೊಂಡರು. 2 ಕೊರಿಂಥ 8:10-11; ಯಾಕೋಬ 2:15; 1 ಯೋಹಾನ 3:17-18; ಮತ್ತಾಯ 25:34-46 ರೊಂದಿಗೆ ಹೋಲಿಸಿ ನೋಡಿರಿ.

# 12 1

**12:1** ಈ ಹೆರೋದನು ಮತ್ತಾಯ 2:1 ರಲ್ಲಿ ಬರೆಯಲ್ಪಟ್ಟಿರುವ ಹೆರೋದನ ಮೊಮ್ಮಗನಾಗಿದ್ದಾನೆ. ಎಲ್ಲಾ ಹೆರೋದರ ಹಾಗೆ, ಇವನೂ ದೇವಭಯವಿಲ್ಲದವನಾಗಿದ್ದನು. **2-3**

**12:2-3** ಯಾಕೋಬನು ಮೂಲ ಅಪೊಸ್ತಲರಲ್ಲಿ ಒಬ್ಬನಾಗಿದ್ದಾನೆ (ಮತ್ತಾಯ 10:2). ಈ ಇಬ್ಬರು ಅಪೊಸ್ತಲರೊಂದಿಗೆ ಹೆರೋದನು ಯಾಕೆ ವ್ಯತ್ಯಸ್ಥವಾಗಿ ನಡೆದುಕೊಂಡನು ಎಂಬದಕ್ಕೆ ಯಾವುದೇ ಕಾರಣವನ್ನು ಕೊಡಲಾಗಿಲ್ಲ. ಇವೆಲ್ಲವುಗಳ ಅರ್ಥವನ್ನು ಎಲ್ಲರ ಮೇಲೆ ಆಳ್ವಿಕೆ ಮಾಡುವ ದೇವರ ರಹಸ್ಯವಾದ ಸಮಾಲೋಚನೆಗಳಲ್ಲಿ ಅಡಗಿಸಲಾಗಿದೆ. ಹೆರೋದನು ಎದೋಮ್ಯನಾಗಿದ್ದನು (ಏಸಾವನ ಸಂತತಿಯವನು – ಆದಿ 25:29-30). ಇವನು ಯೆಹೂದ್ಯರನ್ನು ಮೆಚ್ಚಿಸಲು ಬಯಸಿದನು ಯಾಕಂದರೆ ಅವರ ಮೇಲೆ ಯಶಸ್ವಿ ಆಳ್ವಿಕೆ ನಡೆಸಬೇಕು ಎಂಬದು ಆತನ ಬಯಕೆಯಾಗಿತ್ತು. ಹುದುವಾಗಿ ಹೇಳುವದಾದರೆ ಯೆಹೂದ್ಯರೆಲ್ಲರು ಹೆರೋದರನ್ನು ದ್ವೇಷಿಸುತ್ತಿದ್ದರು. ಹುಳಿಯಿಲ್ಲದ ರೊಟ್ಟಿಗಳ ಹಬ್ಬದ ಕುರಿತಾಗಿ ಯಾಜಕ 23:4-8 ರಲ್ಲಿ ನೋಟ್ಸ್ ನೋಡಿರಿ. **4**

**12:4** ಬಹುಶಃ ಅವನು ಪೇತ್ರನನ್ನು ಯಾವುದಾದರು ಸ್ವಕಲ್ಪಿತ ದೇವದೂಷಣೆಯ

ಆರೋಪದಲ್ಲಿ ಸಿಕ್ಕಿಸಲು ಬಯಸಿರಬಹುದು. **5**

**12:5** 15,16 ವಚನಗಳಲ್ಲಿ ಕಾಣಿಸುವ ಹಾಗೆ ನಂಬುವದಕ್ಕಿಂತ ಅವರ ಪ್ರಾರ್ಥನೆಗಳು ಹೆಚ್ಚು ಆಸಕ್ತಿಕರವಾಗಿದ್ದವು, ಅವರ ನಂಬಿಕೆಯು ಇನ್ನೂ ದುರ್ಬಲವಾಗಿರುವಾಗಲೇ, ದೇವರು ಅವರಿಗೆ ಉತ್ತರಿಸಿದನು. ನಿಜವಾದ ದೇವರಿಗೆ ಪ್ರಾರ್ಥನೆ ಮಾಡುವವರೆಲ್ಲರಿಗೂ ಇದು ನಿಜವಾಗಿಯೂ ಪ್ರೋತ್ಸಾಹದ ಸಂಗತಿಯಾಗಿದೆ. ಪ್ರಾರ್ಥನೆ ಮಾಡದೆಯೇ ಇರುವದಕ್ಕಿಂತ ಅಲ್ಪ ನಂಬಿಕೆಯುಳ್ಳವರಾಗಿ ಪ್ರಾರ್ಥನೆ ಮಾಡುವದು ಎಷ್ಟೋ ಉತ್ತಮವಾಗಿವೆ. **6**

**12:6** ಪೇತ್ರನು ತಪ್ಪಿಸಿಕೊಳ್ಳಬಾರದೆಂದು ಹೆರೋದನು ನಿಶ್ಚಯಿಸಿಕೊಂಡಿದ್ದನು. **7-11**

**12:7-11** 5:18-24 ರೊಂದಿಗೆ ಹೋಲಿಸಿ ನೋಡಿರಿ. ಪೇತ್ರನನ್ನು ಸೆರೆಮನೆಯಿಂದ ತಪ್ಪಿಸಿದ ದೇವದೂತನು ಯಾಕೋಬನನ್ನು ಕೂಡ ಅಷ್ಟೇ ಸುಲಭವಾಗಿ ಕತ್ತಿಯಿಂದ ತಪ್ಪಿಸಲು ಶಕ್ತನಾಗಿದ್ದನು. **12**

**12:12** ವಚನ 5. ಮಾರ್ಕನು ತನ್ನ ಹೆಸರಿನ ಶೀರ್ಷಿಕೆಯಿರುವ ಸುವಾರ್ತೆಯ ಬರಹಗಾರನಾದನು. ಅವನನ್ನು ಸೂಚಿಸುವ ಇತರೆ ವಾಕ್ಯಭಾಗಗಳು ಯಾವುವೆಂದರೆ ವ 25; 13:5-13; 15:37-39; ಕೊಲೊ 4:10; ಫಿಲೆ 24; 2 ತಿಮೊ 4:11; 1 ಪೇತ್ರ 5:13. **13-14**

**12:13-14** ದೇವರು ಅವರ ಪ್ರಾರ್ಥನೆಗೆ ಉತ್ತರ ಕೊಟ್ಟಿದ್ದಾನೆ ಎಂದು ಆಕೆ ನಂಬಿದಳು. **15-16**

**12:15-16** ದೇವರು ಅವರ ಪ್ರಾರ್ಥನೆಗೆ ಉತ್ತರ ಕೊಟ್ಟಿದ್ದಾನೆ ಎಂಬದಾಗಿ ಆಕೆ ನಂಬಿದ್ದು ಮತ್ತು ಅವರು ಬೆರಗಾಗಿದ್ದು ಅವರ ಅಪನಂಬಿಕೆ ಅಥವಾ ದುರ್ಬಲವಾದ ನಂಬಿಕೆಗೆ ಗುರುತಾಗಿದೆ. **15**

**12:15** *"ಆತನ ದೂತನು"*– ಮತ್ತಾಯ 18:10 ರೊಂದಿಗೆ ಹೋಲಿಸಿ ನೋಡಿರಿ. ದೇವದೂತನು ಮನುಷ್ಯರ ಹಾಗೆ ಜನರನ್ನು ಪ್ರತಿನಿಧಿಸುತ್ತಾನೆ ಎಂಬದಾಗಿ ಅವರು ಅಂದುಕೊಂಡರು ಮತ್ತು ಅವನ ವಿಷಯದಲ್ಲಿ ತಪ್ಪಾಗಿ ತಿಳಿದುಕೊಂಡರು. ಈ ನಂಬಿಕೆಗೆ ಸತ್ಯವೇದದಲ್ಲಿ ಯಾವುದೇ ಆಧಾರವಿಲ್ಲ. **17**

**12:17** ಈ ವಾಕ್ಯದಲ್ಲಿ ಬರೆಯಲ್ಪಟ್ಟಿರುವ ಯಾಕೋಬನು ಕರ್ತನಾದ ಯೇಸು ಕ್ರಿಸ್ತನ ಮಲ-ಸಹೋದರನಾಗಿದ್ದಾನೆ (1:14; ಮತ್ತಾಯ 13:55). ಅವನು ಯೆರೂಸಲೇಮಿನ ಸಭೆಯ ನಾಯಕನಾಗಿದ್ದನು. **19**

**12:19** ರೋಮನ್ ಪದ್ಧತಿಯ ಪ್ರಕಾರ, ಒಬ್ಬನು ತಪ್ಪಿಸಿಕೊಂಡರೆ ಅವನು ಅನುಭವಿಸಬೇಕಿದ್ದ ಶಿಕ್ಷೆಯನ್ನು ಅವನನ್ನು ಕಾಯುತ್ತಿದ್ದ ಕಾವಲುಗಾರರು ಅನುಭವಿಸಬೇಕಾಗಿತ್ತು. **20**

**12:20** ತೂರ್ ಮತ್ತು ಸೀದೋನ್ ಇಸ್ರಾಯೇಲಿನ ಉತ್ತರ ಭಾಗದಲ್ಲಿ ಮೆಡಿಟರೇನಿಯನ್ ಕಡಲ ತೀರದಲ್ಲಿತ್ತು. **22-23**

**12:22-23** ಹೆರೋದನಿಗೆ ಒಬ್ಬನೇ ದೇವರ ಕುರಿತಾದ ಹಳೆಯ ಒಡಂಬಡಿಕೆಯ ಬೋಧನೆ ಚೆನ್ನಾಗಿ ಗೊತ್ತಿತ್ತು ಮತ್ತು ದೈವೀಕ ಮರ್ಯಾದೆಯನ್ನು ಹೊಂದಿಕೊಳ್ಳುವ ಅಧಿಕಾರ ಯಾವ ಮನುಷ್ಯನಿಗೂ ಇಲ್ಲ ಎಂಬದೂ ಅವನಿಗೆ ತಿಳಿದಿತ್ತು (ವಿಮೋ 20:1-6). ತನ್ನ ಗರ್ವಕ್ಕೆ ತಕ್ಕ ಪ್ರತಿಫಲವನ್ನು ಅವನು ಅನುಭವಿಸಿದನು. 14:11-18 ರಲ್ಲಿ ಪೌಲ ಹಾಗೂ ಬಾರ್ನಬ ಮತ್ತು 3:12-16 ರಲ್ಲಿ ಪೇತ್ರನ ನಡುವಳಿಕೊಂದಿಗೆ ಇವನ ನಡವಳಿಕೆಯನ್ನು ಹೋಲಿಸಿ ನೋಡಿರಿ. ನಮಗೆ ದೇವರು ಮತ್ತು ನಮ್ಮ ವಿಷಯದಲ್ಲಿ ಸರಿಯಾದ ದೃಷ್ಟಿಕೋನವಿರಬೇಕು. ಇಲ್ಲವಾದರೆ ನಾವು ಹೆರೋದನು ಮಾಡಿದ ತಪ್ಪನ್ನೇ ಮಾಡುತ್ತೇವೆ ಮತ್ತು ಅವನಿಗಾದ ನ್ಯಾಯತೀರ್ಪೇ ನಮಗೂ ಆಗುವದು. **24**

**12:24** ಈ ಲೋಕದ ಹೆರೋದರು ಮತ್ತು ಸತ್ಯವನ್ನು ವಿರೋಧಿಸುವವರೆಲ್ಲರೂ ಬರುತ್ತಾರೆ ಹಾಗೂ ಹೋಗುತ್ತಾರೆ. ದೇವರ ವಾಕ್ಯವು ತನ್ನ ಕಾರ್ಯವನ್ನು ಮಾಡುತ್ತಲೇ ಹೋಗುತ್ತದೆ ಮತ್ತು ಶಾಶ್ವತವಾಗಿ ನಿಲ್ಲುತ್ತದೆ – ಮತ್ತಾಯ 5:18; 24:35; ಕೀರ್ತನೆ 37:35-36; ಯೆಶಾಯ 40:6-8. **25**

**12:25** ವಚನ 12; 11:29-30. ಅವರು ಅಂತಿಯೋಕ್ಯಕ್ಕೆ ಹಿಂದಿರುಗಿದರು.

# 13 1

**13:1** ಪ್ರವಾದನೆ ಮತ್ತು ಬೋಧನೆ ಮಾಡುವ ವರಗಳು ದೇವರು ಸಭೆಗೆ ಕೊಟ್ಟ ಅತ್ಯಂತ ದೊಡ್ಡ ವರಗಳಾಗಿವೆ – ರೋಮಾ 12:6-7; 1 ಕೊರಿಂಥ 12:28; 14:1; ಎಫೆ 4:11-13.

*"ಉಪರಾಜನಾದ ಹೆರೋದನು"*– ಮತ್ತಾಯ 14:1. **2**

**13:2** ಮತ್ತಾಯ 9:14-15 ರಲ್ಲಿ ಉಪವಾಸದ ಕುರಿತಾದ ನೋಟ್ಸ್ ನೋಡಿರಿ. ಇಲ್ಲಿ ಮತ್ತೊಮ್ಮೆ ಪವಿತ್ರಾತ್ಮನ ವ್ಯಕ್ತಿತ್ವವನ್ನು ಗಮನಿಸಿರಿ. 8:29; 10:19; ಯೋಹಾನ 14:16-17 ನೋಡಿರಿ. ದೇವರ ರಾಜ್ಯದಲ್ಲಿ ಆತನು ಮಾನವರನ್ನು ನಿರ್ದಿಷ್ಟವಾದ ಕಾರ್ಯಗಳಿಗೆ ಕರೆಯುತ್ತಾನೆ. ಅಂತಿಯೋಕ್ಯದಲ್ಲಿ ಮಿಷನರಿ ಸೇವೆಗೆ ಕರೆಯಲ್ಪಟ್ಟ ಇಬ್ಬರು ಬೋಧನೆ ಹಾಗೂ ಉಪದೇಶ ಮಾಡಲು ಅತ್ಯಧಿಕ ಅರ್ಹತೆಯುಳ್ಳವರಾಗಿದ್ದರು. ಪವಿತ್ರಾತ್ಮನು ತಮ್ಮನ್ನು ಯಾವ ಕಾರ್ಯಕ್ಕಾಗಿ ನೇಮಿಸಿದ್ದಾನೆ ಎಂದು ತಿಳಿದುಕೊಳ್ಳುವವರು ಧನ್ಯರಾಗಿದ್ದಾರೆ. ಪವಿತ್ರಾತ್ಮನು ಯಾರನ್ನು ವ್ಯಕ್ತಿಗತವಾಗಿ ಆಯ್ಕೆ ಮಾಡುತ್ತಾನೋ ಮತ್ತು ಸೇವೆಗಾಗಿ ಬೇರ್ಪಡಿಸುತ್ತಾನೋ ಅಂಥವರನ್ನು ಗುರುತಿಸಿಕೊಂಡು ಸಭೆ ಸಹಕರಿಸಬೇಕಾದದ್ದನ್ನು ಗಮನಿಸಿರಿ. **3**

**13:3** ಕೈಗಳನ್ನಿಡುವದು ಇಲ್ಲಿ ಅವರ ಪರಿಗಣನೆ ಮತ್ತು ಇವರಿಬ್ಬರಿಗೆ ದೊರೆತಿರುವ ಕರೆಯ ಸಮ್ಮತಿಯನ್ನು ಸೂಚಿಸುತ್ತದೆ ಹಾಗೂ ಅವುಗಳೊಂದಿಗೆ ಅವರು ತಮ್ಮನ್ನು ಗುರುತಿಸಿಕೊಂಡಿರುವದನ್ನೂ ಸೂಚಿಸುತ್ತದೆ. **4**

**13:4** ಸೇವೆಗಾಗಿ ಪವಿತ್ರಾತ್ಮನು ಜನರನ್ನು ಕಳುಹಿಸಲಿಲ್ಲವೆಂದರೆ ಸಭೆ ಅವರನ್ನು ಕಳುಹಿಸುವದು ಪ್ರಯೋಜನವಿಲ್ಲದ್ದಾಗಿರುತ್ತದೆ.

*"ಕುಪ್ರದ್ವೀಪ"*– 11:19. **5**

**13:5** ಸಲಮೀಸ್ ಈ ದ್ವೀಪದ ಮುಖ್ಯ ಪಟ್ಟಣವಾಗಿತ್ತು. ಅವರು ತಮ್ಮ ಪದ್ಧತಿಯ ಪ್ರಕಾರ ಮೊದಲು ಯೆಹೂದ್ಯರ ಬಳಿಗೆ ಹೋದರು – ವ 46; ರೋಮಾ 1:16. ಯೋಹಾನ ಎಂಬದು ಮಾರ್ಕನ ಇನ್ನೊಂದು ಹೆಸರಾಗಿತ್ತು – 12:12.

*"ಸಭಾಮಂದಿರಗಳು"*– ಮತ್ತಾಯ 4:23. **6**

**13:6** ಪಾಫೋಸ್ ಈ ದ್ವೀಪದ ರಾಜಧಾನಿ ಪಟ್ಟಣವಾಗಿತ್ತು. ಬಾರ್-ಯೇಸು ಎಂದರೆ "ಯೆಹೋಶುವನ ಮಗ" (ಯೇಸು ಎಂಬದು ಯೆಹೋಶುವ ಎಂಬ ಇಬ್ರಿಯ ಹೆಸರಿನ ಗ್ರೀಕ್ ರೂಪಕವಾಗಿದೆ). ಈ ಬಾರ್-ಯೇಸು ಭ್ರಷ್ಟನಾಗಿದ್ದ ಯೆಹೂದ್ಯನಾಗಿದ್ದನು – ಅವನು ನಿಜವಾದ ದೇವರ ಬೋಧನೆಯನ್ನು ನಿರಾಕರಿಸಿದ್ದನು. ಮಾಟಮಂತ್ರಗಳನ್ನು ಮಾಡುತ್ತಿದ್ದ ಯೆಹೂದ್ಯರನ್ನು ದೇವರು ತಳ್ಳಿಬಿಟ್ಟಿದ್ದನು. ಧರ್ಮೋ 18:10-13 ರಲ್ಲಿ ನೋಟ್ಸ್ ನೋಡಿರಿ. **7**

**13:7** *"ಸರ್ಗಿಪೌಲನು"*– ಅಂದರೆ ಈ ದ್ವೀಪದ ರೋಮನ್ ಚಕ್ರವರ್ತಿ. ಬುದ್ಧಿವಂತರೆಲ್ಲರೂ ಇವನ ಹಾಗೆ ದೇವರ ವಾಕ್ಯಗಳನ್ನು ಕೇಳಿಸಿಕೊಳ್ಳಲು ಬಯಸುತ್ತಾರೆ. **8**

**13:8** ಕರ್ತನಾದ ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡದಂತೆ ಜನರನ್ನು ತಡೆಯುವದು ಅತ್ಯಂತ ಘೋರವಾದ ಪಾಪಗಳಲ್ಲಿ ಒಂದಾಗಿದೆ. ಮತ್ತಾಯ 23:13 ನೋಡಿರಿ. "ಎಲುಮ" ಎಂಬದು "ಬಾರ್-ಯೇಸುವಿನ" ಇನ್ನೊಂದು ಹೆಸರಾಗಿದೆ. **9**

**13:9** ಸೌಲನ ಇನ್ನೊಂದು ಹೆಸರಾದ ಪೌಲ ಇದೇ ಮೊದಲ ಬಾರಿಗೆ ಇಲ್ಲಿ ಬರೆಯಲಾಗಿದೆ, ಇದಾದ ನಂತರ ಅವನನ್ನು ಇದೇ ಹೆಸರಿನಿಂದ ಕರೆಯಲಾಗಿದೆ.

*"ಪವಿತ್ರಾತ್ಮಭರಿತನಾಗಿದ್ದನು"*– 2:4; 4:31; 6:3,5; 11:24. **10**

**13:10** ಕೆಲವೊಮ್ಮೆ ದೇವರಾತ್ಮನು ಒಬ್ಬ ವ್ಯಕ್ತಿಯ ಸ್ವಭಾವವನ್ನು ಸ್ಪಷ್ಟವಾಗಿ ನೋಡಲು ಮತ್ತು ಗಂಭೀರವಾದ ಸತ್ಯವನ್ನು ಧೈರ್ಯವಾಗಿ ಮಾತನಾಡುವಂತೆ ಬಲಪಡಿಸುತ್ತಾನೆ.

*"ಸೈತಾನನ ಮಗನೇ"*– ಮತ್ತಾಯ 13:38; ಯೋಹಾನ 8:44 ನೋಡಿರಿ. ಎಲುಮನು ತನ್ನ ಮಾಟಮಂತ್ರಗಳಿಂದ ಕರ್ತನ ಮಾರ್ಗಗಳಿಗೆ ಬಹಳ ಸಮಯದಿಂದ ಅಡಚಣೆ ಮಾಡುತ್ತಿದ್ದನು. **11**

**13:11** ದೇವರು ನಮ್ಮನ್ನು ವಿರೋಧಿಸಿದರೆ ನಮಗೆ ಸಹಾಯ ಮಾಡುವವರು ಯಾರು? ರೋಮಾ 8:31 ರಲ್ಲಿ ಇದಕ್ಕೆ ವಿರುದ್ಧವಾಗಿರುವದನ್ನು ನೋಡಿರಿ. **12**

**13:12** 2:43; 5:12-14; 8:6,13; 9:34-35,41,42 ನೋಡಿರಿ. **13**

**13:13** ಪೆರ್ಗ ದಕ್ಷಿಣ ಕರಾವಳಿಯಿಂದ 20 ಕಿಲೊ ಮೀಟರ್ ದೂರದಲ್ಲಿತ್ತು ಅದನ್ನು ಈಗ ಟರ್ಕಿ ಎಂದು ಕರೆಯಲಾಗುತ್ತದೆ. ಯೋಹಾನನೆನಿಸಿಕೊಳ್ಳುವ ಮಾರ್ಕನು ಯಾಕೆ ಅವರನ್ನು ಬಿಟ್ಟು ಹೋದನು ಎಂಬದಕ್ಕೆ ಕಾರಣವನ್ನು ಕೊಡಲಾಗಿಲ್ಲ, ಆದರೆ ಅವನಲ್ಲಿ ಯುಕ್ತವಾದ ಯಾವ ಕಾರಣವೂ ಇರಲಿಲ್ಲ ಎಂಬದಾಗಿ ಪೌಲನು ಯೋಚಿಸಿದನು (15:38-39). ಅವರನ್ನು ಬಿಟ್ಟುಹೋದದ್ದರ ನಿಮಿತ್ತ ಪೌಲನ ಮೊದಲನೆಯ ಸುವಾರ್ತಾ ಪ್ರಯಾಣದಲ್ಲಿ ನಡೆದ ಕೆಲವು ಒಳ್ಳೆಯ ಕಾರ್ಯಗಳನ್ನು ತಪ್ಪಿಸಿಕೊಂಡನು ಮತ್ತು ಮುಂದಿನ ಪ್ರಯಾಣದಲ್ಲಿ ಜೊತೆ ಹೋಗುವ ಅವಕಾಶವೂ ಅವನಿಗೆ ತಪ್ಪಿತು. **14**

**13:14** ಈ ಅಂತಿಯೋಕ್ಯವು ಪ್ರಾಮುಖ್ಯವಾದ ಪಟ್ಟಣವಾಗಿದ್ದು ಸುಮಾರು 160 ಕಿಲೋ ಮೋಟರ್ ದೂರ ಪೆರ್ಗದ ಉತ್ತರದಲ್ಲಿತ್ತು.

"*ಸಭಾಮಂದಿರ*"– ಮತ್ತಾಯ 4:23. ಅಂತಿಯೋಕ್ಯದಲ್ಲಿ ಯೆಹೂದ್ಯರ ಬಡಾವಣೆಯಿತ್ತು ಎಂಬದನ್ನು ಇದು ಸೂಚಿಸುತ್ತದೆ. **15**

**13:15** ಲೂಕ 4:16-17; 14:1 ನೋಡಿರಿ. ಸಭಾಮಂದಿರದಲ್ಲಿ ಉಪದೇಶ ಮಾಡುವಂತೆ ಅಪರಿಚಿತರಿಗೆ ಹೇಳುವಂಥದ್ದು ಯೆಹೂದ್ಯರಲ್ಲಿ ಸಹಜವಾದ ಕಾರ್ಯವಾಗಿತ್ತು. **16**

**13:16** "*ದೇವರಲ್ಲಿ ಭಯಭಕ್ತಿಯುಳ್ಳವರೇ*"– ಬಹುಶಃ ಯೇಸು ಕ್ರಿಸ್ತನನ್ನು ಅಂಗೀಕರಿಸಿಕೊಂಡ ಅನ್ಯರಾಗಿರಬಹುದು. **17-19**

**13:17-19** ಮೂರು ವಾಕ್ಯಗಳಲ್ಲಿ ಪೌಲನು ಹಳೆಯ ಒಡಂಬಡಿಕೆಯ ಆರು ಪುಸ್ತಕಗಳಲ್ಲಿ (ಆದಿಕಾಂಡ – ಯೆಹೋಶುವ) ಬರೆಯಲ್ಪಟ್ಟಿರುವ 450 ವರ್ಷಗಳ ಯೆಹೂದ್ಯರ ಚರಿತ್ರೆಯಲ್ಲಿ ತಿಳಿಯಪಡಿಸಿದನು. **20**

**13:20** ಸಮುವೇಲನು ಕಡೆಯ ನ್ಯಾಯಸ್ಥಾಪಕನಾಗಿದ್ದನು ಮತ್ತು ಮೋಶೆಯ ನಂತರ ಪ್ರವಾದಿ ಎಂದು ಕರೆಯಲ್ಪಟ್ಟ ಮೊದಲನೆಯ ವ್ಯಕ್ತಿಯಾಗಿದ್ದನು.

"*ನ್ಯಾಯಾಧಿಪತಿಗಳು*"– ನ್ಯಾಯಸ್ಥಾಪಕರ ಪುಸ್ತಕದ ಪರಿಚಯವನ್ನು ನೋಡಿರಿ. **21**

- **13:21** 1 ಸಮು 8:5; 9:1-2; 10:1 ನೋಡಿರಿ. **22**

- **13:22** 1 ಸಮು 16:1,13; 2 ಸಮು 2:4; 5:1-5 ನೋಡಿರಿ. "ನನ್ನ ಹೃದಯಕ್ಕೆ ಒಪ್ಪುವವನು" ಕುರಿತಾದ ನೋಟ್ 1 ಸಮು 13:14 ನೋಡಿರಿ. **23**

**13:23** ಪೌಲನು ಇಸ್ರಾಯೇಲಿನ ಚರಿತ್ರೆಯನ್ನು ಸೂಚಿಸುತ್ತಿರುವದಕ್ಕೆ ಕಾರಣ ದೇವರು ತನಗೆ ಕೊಟ್ಟಿರುವ ಪ್ರಕಟನೆಯಲ್ಲಿ ತನಗಿರುವ ಸಂಪ್ರದಾಯಬದ್ಧ ನಂಬಿಕೆಯನ್ನು ತೋರಿಸುವದು ಮತ್ತು ತನ್ನ ಕೇಳುಗರು ಕರ್ತನಾದ ಯೇಸು ಕ್ರಿಸ್ತನ ಬಗ್ಗೆ ಆಲೋಚಿಸುವವರಾಗಬೇಕು ಎಂಬದಾಗಿತ್ತು. ಇಸ್ರಾಯೇಲ್ಯರು ಸುದೀರ್ಘಕಾಲದಿಂದ ಎದುರುನೋಡುತ್ತಿದ್ದ ಮೆಸ್ಸೀಯ ಯೇಸು ಕ್ರಿಸ್ತನೇ ಎಂಬದನ್ನು ಅನೇಕ ಮಾತುಗಳ ಮೂಲಕ ತಿಳಿಯಪಡಿಸುತ್ತಿದ್ದಾನೆ. ಆತನ ಕುರಿತಾದ ದೇವರ ವಾಗ್ದಾನಗಳು ಆದಿ 3:15 ರಲ್ಲಿ

ಪ್ರಾರಂಭಗೊಂಡು ಮಲಾಕಿ 3:1 ರ ತನಕ ಇರುವದನ್ನು ನಾವು ನೋಡಬಹುದು. **24-25**

**- 13:24-25** ಮತ್ತಾಯ 3:1-6; ಯೋಹಾನ 1:19-27. **26**

**13:26** ಅಬ್ರಹಾಮನು ಇಸ್ರಾಯೇಲ್ಯರ ಮೂಲಪಿತೃವಾಗಿದ್ದಾನೆ ಮತ್ತು ಯೆಹೂದ್ಯರೆಲ್ಲರೂ ಅವನ ಬಾಧ್ಯಸ್ಥರಾಗಿದ್ದಾರೆ. **27**

**13:27** 2:23; 3:17-18 ನೋಡಿರಿ. ಆಗಿನ ಕಾಲದಲ್ಲಿದ್ದ ಬಹುತೇಕ ಯೆಹೂದ್ಯರಿಗೆ ಹಳೆಯ ಒಡಂಬಡಿಕೆಯ ಪ್ರವಾದನಾ ಪುಸ್ತಕಗಳಲ್ಲಿ ತಾವು ಓದುತ್ತಿದ್ದ ವಿಷಯಗಳು ಅರ್ಥವಾಗುತ್ತಲೇ ಇರಲಿಲ್ಲ. ಆದರೆ ದೇವರು ಯೆಹೂದ್ಯ ನಾಯಕರಲ್ಲಿ ಪಾಪಿಗಳಾಗಿದ್ದವರನ್ನು ಸಹ ತನ್ನ ವಾಕ್ಯದ ನೆರವೇರುವಿಕೆಗೆ ಉಪಯೋಗಿಸಿಕೊಂಡನು. ಆದಿ 50:20 ರೊಂದಿಗೆ ಹೋಲಿಸಿ ನೋಡಿರಿ. **28**

**- 13:28** ಮತ್ತಾಯ 27:1-2,11-26. **29**

**- 13:29** ಲೂಕ 23:53; 24:26-27,46. **30**

**- 13:30** ಮತ್ತಾಯ 28:6. **31**

**- 13:31** 1:3-8; 1 ಕೊರಿಂಥ 15:3-8 ನೋಡಿರಿ. **32-35**

**13:32-35** ಪೌಲನು ಯೇಸು ಕ್ರಿಸ್ತನನ್ನು ಹಳೆಯ ಒಡಂಬಡಿಕೆಯನ್ನು ಪೂರೈಸುವವನನ್ನಾಗಿ ತೋರ್ಪಡಿಸಿದ್ದಾನೆ (ಮತ್ತಾಯ 5:17 ರೊಂದಿಗೆ ಹೋಲಿಸಿ ನೋಡಿರಿ). ಅವನು ಹಳೆಯ ಒಡಂಬಡಿಕೆಯ ಮೂರು ವಾಕ್ಯಗಳನ್ನು ಸೂಚಿಸಿದ್ದಾನೆ – ಆ ವಾಕ್ಯಗಳನ್ನು ಮತ್ತು ಅವುಗಳ ಕುರಿತಾದ ನೋಟ್ಸ್ ಗಳನ್ನು ನೋಡಿರಿ: ಕೀರ್ತನೆ 2:7; ಯೆಶಾಯ 55:3; ಕೀರ್ತನೆ 16:10. **34**

**13:34** *"ದಾವೀದನಿಗೆ ವಾಗ್ದಾನ ಮಾಡಿದ ಕೃಪಾವರಗಳು"*– ದೇವರು ದಾವೀದನಿಗೆ ವಾಗ್ದಾನ ಮಾಡಿದ ಕೃಪಾವರಗಳಲ್ಲಿ ಒಂದು ಅವನ ಬಾಧ್ಯಸ್ಥರಲ್ಲಿ ಒಬ್ಬನನ್ನು ದೇವರು ತನ್ನ ಕುಮಾರನೆಂದು ಕರೆಯುವನು ಆತನು ಅವನ ಸಿಂಹಾಸನದ ಮೇಳೆ ಕೂರುವನು ಮತ್ತು ಅವನ ಸಿಂಹಾಸನವು ಶಾಶ್ವತವಾಗಿರುವದು (2 ಸಮು 7:14 ನೋಡಿರಿ). ಪೌಲನ ವಾದವೇನೆಂದರೆ ಒಂದುವೇಳೆ ಇಸ್ರಾಯೇಲ್ಯರ ಮೆಸ್ಸೀಯನು (ಕ್ರಿಸ್ತನು) ಪುನರುತ್ಥಾನಗೊಳ್ಳದೆ ಹೋಗಿದ್ದರೆ, ದಾವೀದನಿಗೆ ವಾಗ್ದಾನ ಮಾಡಲಾಗಿದ್ದ ಆಶೀರ್ವಾದಗಳನ್ನು ಹೊಂದಲು ಅವನಿಂದ ಆಗುತ್ತಿರಲಿಲ್ಲ. **36-37**

**13:36-37** 2:25-32 ನೋಡಿರಿ. **36**

**13:36** *"ನಿದ್ರೆ ಹೋದರು"*– ಯೋಹಾನ 11:11-13. **38**

**- 13:38** 2:38; 26:18; ಲೂಕ 24:47 ನೋಡಿರಿ.

*"ಪಾಪಕ್ಷಮಾಪಣೆ"*– 10:43 ರಲ್ಲಿ ರೆಫರೆನ್ಸ್ ನೋಡಿರಿ. **39**

**13:39** ನೀತಿವಂತರಾಗಿ ಎಣಿಸಲ್ಪಡುವದು ಕ್ಷಮಿಸಲ್ಪಡುವದರ ಮತ್ತೊಂದು ಭಾಗವಾಗಿದೆ.

ಇದರ ಅರ್ಥ ದೇವರು ಎಲ್ಲಾ ಪಾಪಗಳ ವಿಷಯದಲ್ಲಿ ದೇವರು ಮಾನವರನ್ನು ನೀತಿವಂತರು ಮತ್ತು ಮುಗ್ಧರು ಎಂದು ಪರಿಗಣಿಸುತ್ತಾನೆ. ಪೌಲನು ನಂತರದಲ್ಲಿ ರೋಮಾ ಪತ್ರಿಕೆ ಹಾಗೂ ಗಲಾತ್ಯ ಪತ್ರಿಕೆಯಲ್ಲಿ ವ್ಯಕ್ತಪಡಿಸಿರುವ ಅದ್ಭುತವಾದ ಸತ್ಯವಾಗಿದೆ (ರೋಮಾ 3:20,24,28; 5:1,9; 8:30; ಗಲಾ 2:16; 3:11,24). ಕರ್ತನಾದ ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವ ಮೂಲಕ ಮಾತ್ರವೇ ನೀತಿವಂತರಾಗಬಹುದು ಎಂಬದಾಗಿ ಎಲ್ಲಾ ಕಡೆಗಳಲ್ಲಿಯೂ ಆತನು ಸೂಚಿಸಿದ್ದಾನೆ. ಮೋಶೆಯ ಧರ್ಮಶಾಸ್ತ್ರವು ನೀತಿವಂತರನ್ನಾಗಿಸುವದಿಲ್ಲ ಬದಲಾಗಿ ಅಪರಾಧಿಗಳೆಂದು ನಿರೂಪಿಸುತ್ತದೆ – ವಿಮೋ 19:21-25; ರೋಮಾ 3:19-20; ಗಲಾ 3:10. **40-41**

**13:40-41** ಯಾರೆಲ್ಲಾ ಸುವಾರ್ತೆಯನ್ನು ನಂಬುತ್ತಾರೋ ಅವರಿಗೆ ಮಾತ್ರವೇ ಸುವಾರ್ತೆಯು "ಶುಭವಾರ್ತೆಯಾಗಿದೆ." ಆದ್ದರಿಂದ ಪೌಲನು ಗಂಭೀರವಾದ ಎಚ್ಚರಿಕೆಯನ್ನು ಕೊಟ್ಟಿದ್ದಾನೆ. 2:40 ರೊಂದಿಗೆ ಹೋಲಿಸಿ ನೋಡಿರಿ. ಪೌಲನು ಅವರಿಗೆ ನಿಮ್ಮ ನಡವಳಿಕೆಯು ಹಬಕ್ಕೂಕ 1:5 ರ ಕಾಲದಲ್ಲಿ ಇದ್ದಂಥ ನಡವಳಿಕೆಯಾಗಿರಬಾರದು ಎಂಬದಾಗಿ ಎಚ್ಚರಿಸಿದ್ದಾನೆ. **43**

**13:43** *"ದೇವರ ಕೃಪೆ"*– ಪೌಲನು ಕೃಪೆ ಎಂಬ ಪದಕ್ಕೆ ಹೆಚ್ಚಿನ ಆದ್ಯತೆ ಕೊಟ್ಟಿದ್ದಾನೆ – 20:24,32; ರೋಮಾ 1:7; 3:24; 5:1-2,15,20,21; 6:14; ಎಫೆ 3:1; ತೀತ 2:11-15; 3:7. **44**

**13:44** ಇದರ ಅರ್ಥ ಜನರ ಗುಂಪಿನಲ್ಲಿ ಯೆಹೂದ್ಯರು ಹೆಚ್ಚಿನ ಸಂಖ್ಯೆಯವರಾಗಿದ್ದರು. **45**

**13:45** 5:17; 7:9; ಮತ್ತಾಯ 27:18; ಜ್ಞಾನೋ 27:4 ರೊಂದಿಗೆ ಹೋಲಿಸಿ ನೋಡಿರಿ. ಅಷ್ಟು ಜನರನ್ನು ಸೇರಿಸಲು ಅಥವಾ ಅಷ್ಟೊಂದು ಪರಿಣಾಮಕಾರಿಯಾಗಿ ಜನರ ಗಮನವನ್ನು ಸೆಳೆಯಲು ಯಾರಿಂದಲೂ ಆಗಿರಲಿಲ್ಲ, ಆದ್ದರಿಂದ ಅವರು ಪೌಲ ಮತ್ತು ಬಾರ್ನಬನನ್ನು ಅವರು ವಿರೋಧಿಸಿದರು, ಎದುರ್ಚಂಡಿಸಿದರು – ನಮ್ಮ ಕಾಲದಲ್ಲಿ ಈ ವಿಷಯ ಈಗ ಇಲ್ಲವಾಗಿದೆ. **46**

**13:46** 3:26; ರೋಮಾ 1:16 ನೋಡಿರಿ. ಯೋಹಾನ 3:16 ರಲ್ಲಿ ನಿತ್ಯಜೀವದ ನೋಟ್ಸ್ ನೋಡಿರಿ. **47**

**13:47** ಯೆಶಾಯ 49:6. "ನೀನು" ಯೇಸು ಕ್ರಿಸ್ತನನ್ನು ಸೂಚಿಸುತ್ತದೆ. **48**

**13:48** ದೇವರು ನಂಬಿಕೆಯ ಮೂಲಕ ನಿತ್ಯಜೀವವನ್ನು ನೇಮಕ ಮಾಡಿದ್ದಾನೆ. ಈ ಅನ್ಯರು ಯೇಸು ಕ್ರಿಸ್ತನಲ್ಲಿ ನಂಬಿಕೆಯನ್ನಿಡುವ ಮೂಲಕ ದೇವರು ನಮ್ಮನ್ನು ಆರಿಸಿಕೊಂಡಿದ್ದಾನೆ ಎಂದು ತೋರಿಸಿದರು. ಯೋಹಾನ 6:37,44; 17:2; ಎಫೆ 1:4 ನೋಡಿರಿ. **50**

**13:50** *"ತಮ್ಮ ಮತಕ್ಕೆ ಸೇರಿದವರು"*– ದೇವರ ನಿಜವಾದ ಸೇವಕರನ್ನು ಹಿಂಸಿಸಲು

ಕರ್ತನಾದ ಯೇಸು ಕ್ರಿಸ್ತನ ಬಗ್ಗೆ ಮತಾಭಿಮಾನಿಗಳು ಅಥವಾ ಭಯಭಕ್ತಿಯುಳ್ಳ ಜನರನ್ನು ಕೆಲವು ದುಷ್ಟ ಜನರು ಕೆರಳಿಸಿದರು. ಯೋಹಾನ 16:2-3 ನೋಡಿರಿ. **51**

**13:51** ಮತ್ತಾಯ 10:14 ರೊಂದಿಗೆ ಹೋಲಿಸಿ ನೋಡಿರಿ. ಇಕೋನ್ಯದ ಮುಖ್ಯ ಪಟ್ಟಣವು ಸುಮಾರು 130 ಕಿಲೋಮೀಟರ್ ದಕ್ಷಿಣ ಪೂರ್ವದ ಕಡೆಗಿತ್ತು. **52**

**13:52** ಕರ್ತನಾದ ಯೇಸು ಕ್ರಿಸ್ತನ ಸುವಾರ್ತೆಯನ್ನು ನಿಜವಾಗಿ ನಂಬುವಾಗ ಅದರ ಫಲಿತಾಂಶವಾಗಿ ಸಂತೋಷವು ದೊರೆಯುತ್ತದೆ (8:8; 16:34; ಲೂಕ 2:10; 24:52; ರೋಮಾ 14:17; 15:13; 1 ಪೇತ್ರ 1:8), ಮತ್ತು ದೇವರಾತ್ಮನನ್ನು ಸಂಪೂರ್ಣವಾಗಿ ಅನುಭವಿಸಲು ಮಾರ್ಗವನ್ನು ತೆರೆಯುತ್ತದೆ (2:4; ಎಫೆ 5:18).

# 14 1

**14:1** 13:14-15 ನೋಡಿರಿ. **2**

**- 14:2** ರೋಮಾ 8:7; 1 ಥೆಸ 2:14-16.

*"ಸಹೋದರರು"*– ಹೊಸ ಒಡಂಬಡಿಕೆಯಲ್ಲಿ ಕ್ರೈಸ್ತರಾದವರಿಗೆ ಸಹಜವಾಗಿ ಈ ಪದವನ್ನು ಬಳಸಲಾಗಿದೆ. ದೇವರ ಕುಟುಂಬದಲ್ಲಿರುವ ನಿಕಟವಾದ ಸಂಬಂಧವನ್ನು ಇದು ಸೂಚಿಸುತ್ತದೆ. ಯೇಸು ಕ್ರಿಸ್ತನ ವಿಶ್ವಾಸಿಗಳು ಒಂದೇ ಕುಟುಂಬದ ಸದಸ್ಯರಾಗಿದ್ದಾರೆ ಮತ್ತು ಎಲ್ಲರಿಗೂ ತಂದೆ ಒಬ್ಬನೇ ಆಗಿದ್ದಾನೆ. **3**

**14:3** ಮುಂದೆ ಹಿಂಸೆಗಳು ಎದುರಾಗುತ್ತವೆ ಎಂದು ಅವರಿಗೆ ಗೊತ್ತಿತ್ತು ಆದ್ದರಿಂದ ಅವರನ್ನು ಬಲಪಡಿಸಲು ಅಲ್ಲಿಯೇ ಉಳಿದುಕೊಂಡರು.

*"ಸೂಚಕಕಾರ್ಯಗಳು ಮತ್ತು ಅದ್ಭುತಕಾರ್ಯಗಳು"*– 2:43; 5:12; 8:6; ಯೋಹಾನ 2:11; ಇಬ್ರಿ 2:4. **4**

**- 14:4** ಮತ್ತಾಯ 10:34-36; ಯೋಹಾನ 7:43; 9:16; 10:19. **5-7**

**14:5-7** ಅವರು ತಮ್ಮಿಂದ ಸಾಧ್ಯವಾದಷ್ಟು ದಿನ ಅಲ್ಲಿಯೇ ಉಳಿದುಕೊಂಡರು ಮತ್ತು ತಕ್ಕ ಸಮಯದಲ್ಲಿ ಹೊರಟು ಹೋದರು. ಅವರ ಮರಣದಿಂದ ಯಾರಿಗೂ ಪ್ರಯೋಜನವಾಗುತ್ತಿರಲಿಲ್ಲ – ಆದರೆ ಅವರು ಮರಣಕ್ಕೆ ಹೆದರಿಕೊಳ್ಳುವವರಾಗಿರಲಿಲ್ಲ (ಫಿಲಿಪ್ಪಿ 1:21-24; ಇಬ್ರಿ 2:14-15). ಲುಸ್ತ್ರವು ದಕ್ಷಿಣಕ್ಕೆ 30 ಕಿಲೋಮೀಟರ್ ದೂರದಲ್ಲಿದ್ದ ಗ್ರೀಕ್ ಪಟ್ಟಣವಾಗಿತ್ತು, ಅದು ಇಕೋನ್ಯದ ಪಶ್ಚಿಮಕ್ಕೆ ಸಮೀಪವಾಗಿತ್ತು. **9-10**

**14:9-10** ಕೆಲವೊಮ್ಮೆ ಪವಿತ್ರಾತ್ಮನು ತನ್ನ ಸೇವಕರಿಗೆ ನಂಬಿಕೆಯು ಇತರರಲ್ಲಿ ಕಾರ್ಯಮಾಡುವದನ್ನು ಗುರುತಿಸಲು ಬಲಪಡಿಸುತ್ತಾನೆ. **11-12**

**14:11-12** ಗ್ರೀಕರು ಹುದುವಾಗಿ ಮಾಡುತ್ತಿದ್ದ ಹಾಗೆ ಇವರು ಅನೇಕ ದೇವತೆಗಳಲ್ಲಿ

ನಂಬಿಕೆ ಇಟ್ಟಿದ್ದರು. ಗ್ರೀಕರು ಪ್ರಮುಖ ದೇವರು ಎಂದು ಪರಿಗಣಿಸುತ್ತಿದ್ದ ದೇವರಿಗೆ ದೌಸ್ ಎಂದು ಕರೆಯುತ್ತಿದ್ದರು. ಹರ್ಮೆ ದೇವರನ್ನು ದೇವರ ದೂತನೆಂದು ಪರಿಗಣಿಸುತ್ತಿದ್ದರು. ಇಲ್ಲಿ KJV (ಆದರೆ ಗ್ರೀಕರಲ್ಲ) ಜೂಪಿಟರ್ ಮತ್ತು ಮರ್ಕುರಿ ಎಂದು ಬರೆಯಲಾಗಿದೆ. ರೋಮನ್ನರು ಆ ದೇವರುಗಳಿಗೆ ಈ ಹೆಸರುಗಳನ್ನು ಕೊಟ್ಟಿದ್ದರು. **13-14**

**14:13-14** 12:21-23 ರೊಂದಿಗೆ ಹೋಲಿಸಿ ನೋಡಿರಿ. ಅವರು ಮಾಡಬಾರದ ಕಾರ್ಯ (ಮನುಷ್ಯರ ಆರಾಧನೆ) ಮಾಡಲಾಗುವದನ್ನು ಗಮನಿಸಿದರು ಮತ್ತು ಅದನ್ನು ನಿಲ್ಲಿಸಲು ತಮ್ಮಿಂದಾಗುವ ಎಲ್ಲಾ ರೀತಿಯ ಪ್ರಯತ್ನಗಳನ್ನು ನಡೆಸಿದರು. ಬಟ್ಟೆಗಳನ್ನು ಹರಿದುಕೊಂಡು ಜನರಿಗೆ ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸಿದರು (2 ಸಮು 13:31; ಯೋಬ 1:20; ಮತ್ತಾಯ 26:65). ನಾವು ದೇವರಿಗೆ ಸಮಾನರು ಅಥವಾ ನಾವೇ ದೇವರು ಎಂದು ಎಲ್ಲಾ ಕಾಲಗಳಲ್ಲಿಯೂ ಯೋಚಿಸುವ ಜನರ ನಡುವೆ ದೇವರ ನಿಜವಾದ ಸೇವಕರು ವ್ಯತ್ಯಾಸವಾಗಿ ನಡೆದುಕೊಂಡರು. **15**

**14:15** 3:12; ಪ್ರಕ 22:8-9; ಮತ್ತಾಯ 4:10 ನೋಡಿರಿ. ಇಲ್ಲಿ ಪ್ರಾಮುಖ್ಯವಾದ ಪದಗಳನ್ನು ಕೊಡಲಾಗಿದೆ. ಅವರು ದೇವರು ಮತ್ತು ದೇವರುಗಳ ನಡುವೆಯಿರುವ ವ್ಯತ್ಯಾಸವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿದರು. ದೇವರು "ಜೀವಸ್ವರೂಪನು"; ಆತನು ಭೂಪರಲೋಕಗಳ ಸೃಷ್ಟಿಕರ್ತನು. ದೇವರುಗಳು ಮತ್ತು ಅವುಗಳಿಗೆ ಅರ್ಪಿಸುವ ಯಜ್ಞಗಳು "ಪ್ರಯೋಜನವಿಲ್ಲದವುಗಳು" ಮಾನವರು ಅವುಗಳನ್ನು ಬಿಟ್ಟುಬಿಡಬೇಕು (ಕೀರ್ತನೆ 115:2-8; ಯೆಶಾಯ 40:18-26; 44:9-20 ರೊಂದಿಗೆ ಹೋಲಿಸಿ ನೋಡಿರಿ). ಅವರು ಜನರಿಗೆ ತಿಳಿಯಪಡಿಸುತ್ತಿದ್ದ ಸುವಾರ್ತೆಯಲ್ಲಿ ಇದು ಪ್ರಮುಖವಾದ ವಿಷಯವಾಗಿತ್ತು. **16**

**14:16** 17:30 ನೋಡಿರಿ. "ಗತಿಸಿಹೋದ ಕಾಲದಲ್ಲಿ" ದೇವರು ಇಸ್ರಾಯೇಲ್ಯರಲ್ಲಿ ಕಾರ್ಯಮಾಡುತ್ತಿದ್ದನು ಮತ್ತು ಅವರಿಗೆ ತಮ್ಮ ಚಿತ್ತದ ಪ್ರಕಟನೆಯನ್ನು ತಿಳಿಸುತ್ತಿದ್ದನು. ಆ ಸಮಯದಲ್ಲಿ ಆತನು ಇತರೆ ಜನಾಂಗಗಳಿಗೆ ತಮ್ಮತಮ್ಮ ಮನಸ್ಸಿಗೆ ತೋಚಿದ ಮಾರ್ಗಗಳಲ್ಲಿ ನಡೆಯುವದಕ್ಕೆ ಬಿಟ್ಟನು, ಆದರೆ ಆ ಮಾರ್ಗಗಳು ಸರಿಯಾಗಿವೆ ಎಂಬದಕ್ಕಾಗಿಯಲ್ಲ (ರೋಮಾ 1:18-32 ರೊಂದಿಗೆ ಹೋಲಿಸಿ ನೋಡಿರಿ) ಬದಲಾಗಿ ಅವರಿಗೆ ಸುವಾರ್ತೆಯನ್ನು ಸಾರಲು ತನ್ನ ಸೇವಕರನ್ನು ಕಳುಹಿಸುವ ಸಮಯ ಇನ್ನೂ ಬಂದಿರಲಿಲ್ಲ (ಆದರೆ ಯೋನನಂಥ ಕೆಲವು ವಿಶೇಷ ಸನ್ನಿವೇಶಗಳೂ ಇದ್ದವು). **17**

**14:17** ಜನಾಂಗಗಳು ಸತ್ಯವೇದದಲ್ಲಿರುವ ದೇವರ ಪ್ರಕಟನೆಗಳು ಇಲ್ಲದೆ ಇದ್ದರೂ, ಪ್ರಕೃತಿಯ ಮೂಲಕ ದೇವರ ಒಳ್ಳೇತನದ ಪ್ರಕಟನೆಯನ್ನು ಹೊಂದಿದ್ದರು. ಕೀರ್ತನೆ 19:1-4; ರೋಮಾ 1:19-20 ನೋಡಿರಿ. **18-19**

**14:18-19** ಜನರ ಚಂಚಲತೆ, ಬದಲಾಯಿಸಲಾಗದ, ಮನಸ್ಥಿತಿಯನ್ನು ಗಮನಿಸಿರಿ. ಒಂದುದಿನ ಯಾರನ್ನು ಆರಾಧಿಸಲು ಮುಂದಾದರೋ ಮಾರಣೆಯ ದಿನ ಅವರನ್ನೇ ಕೊಲ್ಲಲು

ಕಲ್ಲುಗಳನ್ನು ತೆಗೆದುಕೊಂಡರು! ಯೆರೆ 17:5,9 ನೋಡಿರಿ. ಆದರೆ ಲುಸ್ತ್ರದ ಈ ಭೇಟಿಯಿಂದ ಅಲ್ಲಿ ಶಾಶ್ವತವಾದ ಫಲಿತಾಂಶಗಳು ಕಾಣಿಸಿಕೊಂಡವು – 16:1. **20**

**14:20** ಪವಿತ್ರಾತ್ಮಭರಿತರಾಗಿದ್ದವರ ಧೈರ್ಯ ಮತ್ತು ಸ್ಥಿರಚಿತ್ತವನ್ನು ಗಮನಿಸಿರಿ. ತನ್ನನ್ನು ಅತ್ಯಂತ ಕ್ರೂರವಾಗಿ ಕೊಲ್ಲಲು ಪ್ರಯತ್ನಿಸಿದ ಜನರ ನಡುವೆ ಅದೇ ಸ್ಥಳಕ್ಕೆ ಪೌಲನು ಮತ್ತೆ ಹೋದನು (ಹಾಗೆಯೇ ವ 21). 4:13; ಜ್ಞಾನೋ 8:1 ರೊಂದಿಗೆ ಹೋಲಿಸಿ ನೋಡಿರಿ. ದೆರ್ಬೆ ಇಕೋನ್ಯದ ದಕ್ಷಿಣಪೂರ್ವಕ್ಕೆ ಸುಮಾರು 80 ಕಿಲೋಮೀಟರ್ ದೂರದಲ್ಲಿತ್ತು. **22**

**14:22** ಕರ್ತನಾದ ಯೇಸು ಕ್ರಿಸ್ತನು ಮತ್ತು ಅಪೊಸ್ತಲರು ಈ ಲೋಕದಲ್ಲಿ ನಿಮಗೆ ಕಷ್ಟಸಮಸ್ಯೆಗಳು ಎದುರಾಗುವವು ಎಂದು ವಿಶ್ವಾಸಿಗಳಿಗೆ ಕಲಿಸಿದರು (ಯೋಹಾನ 16:33; 1 ಥೆಸ 3:3-4; 1 ಪೇತ್ರ 4:12), ಮತ್ತು ಹಿಂಸಿಸುವವರೊಂದಿಗೆ ಯಾವ ರೀತಿ ನಡೆದುಕೊಳ್ಳಬೇಕು ಎಂಬದನ್ನೂ ಅವರಿಗೆ ತಿಳಿಸಿದರು (ಮತ್ತಾಯ 5:10-12; 1 ಪೇತ್ರ 4:13). ನಮಗೆ ಕಷ್ಟಗಳು ಅಥವಾ ಹಿಂಸೆಗಳು ಅಥವಾ ವಿರೋಧಗಳು ಎದುರಾಗುವಾಗ ವಿಶ್ವಾಸಿಗಳಾದ ನಾವು "ಯಾಕೆ?" ಎಂದು ಕೇಳಬಾರದು. ಬದಲಾಗಿ ಇವುಗಳು ನಮಗೆ ಎದುರಾಗದಿದ್ದರೆ "ಯಾಕೆ ಬರುತ್ತಿಲ್ಲ?" ಎಂದು ಕೇಳಬೇಕು. ದೇವರ ರಾಜ್ಯವು ಭವಿಷ್ಯದಲ್ಲಿರುವ ಹಾಗೆ ಪೌಲನು ಇಲ್ಲಿ ಮಾತನಾಡುತ್ತಿದ್ದಾನೆ – ನೇರವಾಗಿ ಪ್ರಭಾವದಲ್ಲಿ ಬರುವ ರಾಜ್ಯದ ಬಗ್ಗೆ ಅವನು ತಿಳಿಸುತ್ತಿದ್ದಾನೆ. ಮತ್ತಾಯ 4:17 ರಲ್ಲಿ ನೋಟ್ಸ್ ನೋಡಿರಿ. **23**

**14:23** 13:2-3 ನೋಡಿರಿ. ಇಲ್ಲಿ "ಹಿರಿಯರು" ಅಂದರೆ ಸಭೆಯ ನಾಯಕತ್ವ ಮತ್ತು ದೂರದೃಷ್ಟಿ ಇರುವವರು (1 ಪೇತ್ರ 5:1-3). 6:5-6 ರಲ್ಲಿ ಮಾಡಿದ ಪ್ರಕಾರವೇ, ಇಲ್ಲಿಯೂ ವಿಶ್ವಾಸಿಗಳೊಂದಿಗೆ ಮಾತನಾಡಿಯೇ ಇವರನ್ನೂ ನೇಮಿಸಿರಬಹುದು. **24-25**

**14:24-25** 13:13 ನೋಡಿರಿ. ಆತಾಲ್ಯವು ಪಂಪುಲ್ಯ ಪ್ರಾಂತ್ಯದ ಪ್ರಮುಖ ಬಂದರಾಗಿದೆ. **26**

**14:26** 13:1-3 ನೋಡಿರಿ. **27**

**14:27** ದೇವರು ಅನ್ಯರ ಹೃದಯಗಳನ್ನು ಮಾರ್ಪಡಿಸಿದ್ದಾನೆ ಮತ್ತು ಅವರನ್ನು ನಂಬಿಕೆಗೆ ನಡೆಸಿದ್ದಾನೆ – ಇದರಲ್ಲಿ ಅವರ ಸಾಮರ್ಥ್ಯ ಏನೂ ಇಲ್ಲ ಎಂಬದನ್ನು ಅವನು ವಿವರಿಸಿದರು.

# 15 1

**15:1** ಇವರು ಯೆಹೂದ್ಯರಾಗಿದ್ದು ತಮ್ಮನ್ನು ಕ್ರೈಸ್ತರೆಂದು ಹೇಳಿಕೊಳ್ಳುತ್ತಿದ್ದರು ಆದರೆ ಅತ್ಯಂತ ಮೂಲಭೂತ ಹಾಗೂ ಪ್ರಾಮುಖ್ಯವಾದ ವಿಷಯದಲ್ಲಿ ತಪ್ಪು ತಿಳುವಳಿಕೆಯುಳ್ಳವರಾಗಿದ್ದರು. ಸಭೆಯು ಯೆಹೂದ್ಯ ಸಮುದಾಯಕ್ಕೆ ಬದಲಾಗಬೇಕು

ಮತ್ತು ಯೇಸು ಕ್ರಿಸ್ತನು ಕೊಡುವ ರಕ್ಷಣೆಯನ್ನು ಹೊಂದಬೇಕಾದರೆ ಇತರೆ ಜನರು ಯೆಹೂದ್ಯರಾಗಬೇಕು – ಅಂದರೆ, ಅವರು ಯೆಹೂದ್ಯರೂ ಆಗಿರಬೇಕು ಹಾಗೆಯೇ ಕ್ರೈಸ್ತರೂ ಆಗಿರಬೇಕು ಎಂದು ಹೇಳುತ್ತಿದ್ದರು. ಇದರ ಅರ್ಥ ಅವರು ಸುನ್ನತಿ ಮಾಡಿಸಿಕೊಳ್ಳಬೇಕು ಮತ್ತು ಮೋಶೆಯ ಧರ್ಮಶಾಸ್ತ್ರವನ್ನು ಪಾಲಿಸಬೇಕು ಎಂಬದಾಗಿತ್ತು. ಆದಿ 17:9-14 ರಲ್ಲಿ ಸುನ್ನತಿಯ ಕುರಿತಾದ ನೋಟ್ಸ್ ನೋಡಿರಿ. **2**

**15:2** ಪೌಲ ಮತ್ತು ಬಾರ್ನಬನು ಈ ಬೋಧನೆಯಲ್ಲಿರುವ ದೊಡ್ಡ ಅಪಾಯವನ್ನು ತಿಳಿದುಕೊಂಡರು ಮತ್ತು ಬಲವಾಗಿ ವಿರೋಧಿಸಿದರು. ಕರ್ತನಾದ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವ ಮೂಲಕ ಕೃಪೆಯಿಂದ ರಕ್ಷಣೆಯಾಗುತ್ತದೆಯೇ ಹೊರತು ಸಂಪ್ರದಾಯಗಳು ಹಾಗು ಧರ್ಮಶಾಸ್ತ್ರ ಪಾಲನೆಯಿಂದಲ್ಲ ಎಂಬದನ್ನು ಅವರು ಚೆನ್ನಾಗಿ ಬಲ್ಲವರಾಗಿದರು. ಪೌಲನು ರೋಮಾಪುರದವರಿಗೆ ಮತ್ತು ಗಲಾತ್ಯದವರಿಗೆ ಬರೆದಿರುವ ಪತ್ರಿಕೆಗಳಲ್ಲಿ ಈ ವಿಷಯದ ಬಗ್ಗೆ ಬಹಳ ಗಂಭೀರವಾಗಿ ಮಾತನಾಡಿದ್ದಾನೆ (ರೋಮಾ 3:27—4:25; ಗಲಾ 1:6-9; 2:1—6:15 ನೋಡಿರಿ). **4**

**15:4** 14:27 ನೋಡಿರಿ. **5**

**15:5** ವಚನ 1. ಈ ಫರಿಸಾಯರು ನಾವು ಕ್ರಿಸ್ತನ ಹಿಂಬಾಲಕರು ಎಂದು ಹೇಳುತ್ತಿದ್ದರು ಮತ್ತು ಸಭೆಯಲ್ಲಿ ಇರುತ್ತಿದ್ದರು.

"*ಫರಿಸಾಯರು*"– ಮತ್ತಾಯ 3:7 ರಲ್ಲಿ ನೋಟ್ಸ್ ನೋಡಿರಿ. **7**

**15:7** ಅಧ್ಯಾಯ 10. **8**

**15:8** 10:44-47 ನೋಡಿರಿ. ಗಲಾ 3:2-5 ರೊಂದಿಗೆ ಹೋಲಿಸಿ ನೋಡಿರಿ. **9**

**15:9** ಬೇರೆ ಮಾತುಗಳಲ್ಲಿ ಹೇಳುವದಾದರೆ, "ನೀವು ಸುನ್ನತಿ ಮಾಡಿಸಿಕೊಂಡು ಮೋಶೆಯ ಧರ್ಮಶಾಸ್ತ್ರವನ್ನು ಪಾಲಿಸದೆ ಹೋದರೆ ನಾನು ನಿಮಗೆ ಪವಿತ್ರಾತ್ಮನನ್ನು ಕೊಡುವದಿಲ್ಲ. ನಾನು ನಿಮ್ಮನ್ನು ರಕ್ಷಿಸುವದಿಲ್ಲ" ಎಂದು ದೇವರು ಅನ್ಯರಿಗೆ ಎಲ್ಲಿಯೂ ಹೇಳಿಲ್ಲ.

"*ಅವರ ಹೃದಯಗಳನ್ನು ನಂಬಿಕೆಯ ಮೂಲಕ ಶುದ್ಧೀಕರಿಸಿದನು*"– ದೇವರು ಅವರಿಗೆ ನಂಬಿಕೆಯನ್ನು ಕೊಟ್ಟನು ಮತ್ತು ಆ ನಂಬಿಕೆಯನ್ನು ಅವರ ಹೃದಯಗಳನ್ನು ಶುದ್ಧೀಕರಿಸುವ ಸಾಧನವನ್ನಾಗಿ ಉಪಯೋಗಿಸಿಕೊಂಡನು. ದೇವರಿಗೆ ತಮ್ಮನ್ನು ಮೆಚ್ಚಿಕೆಯುಳ್ಳವರನ್ನಾಗಿ ಮಾಡಲು ಅವರಿಗೆ ಬೇರೆ ಯಾವುದೂ ಬೇಡವಾಗಿತ್ತು. ಹೃದಯ ಶುದ್ಧಿಯ ಕುರಿತಾದ ನೋಟ್ ಗಾಗಿ ಮತ್ತಾಯ 5:8 ನೋಡಿರಿ. **10**

**15:10** ಪೇತ್ರನ ಮಾತುಗಳ ಅರ್ಥವೇನೆಂದರೆ ದೇವರು ತನ್ನ ಸ್ಪಷ್ಟವಾದ ಮುನ್ನಡೆಸುವಿಕೆಯೊಂದಿಗೆ ತನ್ನ ಚಿತ್ತವನ್ನು ಪ್ರಕಟಪಡಿಸಿರುವಾಗ, ಆತನ ಚಿತ್ತವನ್ನು ನಿರಾಕರಿಸುವದು ಮತ್ತು ಆತನ ಮಾರ್ಗಗಳ ವಿಷಯದಲ್ಲಿ ಆರೋಪ ಮಾಡುವದು ಆತನನ್ನು ಪರೀಕ್ಷಿಸುವದಕ್ಕೆ ಸಮಾನವಾಗಿದೆ. ಮತ್ತಾಯ 4:7; ವಿಮೋ 17:7 ನೋಡಿರಿ. ಗಲಾ 5:1 ರಲ್ಲಿ

ಪೌಲನು ಧರ್ಮಶಾಸ್ತ್ರವನ್ನು "ಬಂಧನದ ನೊಗ" ಎಂದು ಕರೆದಿದ್ದಾನೆ. ಈ ಇಬ್ಬರೂ ಅಪೊಸ್ತಲರಿಗೆ ಕ್ರಿಸ್ತನ "ನೊಗ" (ಮತ್ತಾಯ 11:29-30) ಸಾಕು ಮತ್ತು ಆತನ ನೊಗ ಬಂಧನಕ್ಕೆ ವಿರುದ್ಧವಾದದ್ದು ಎಂದು ಗೊತ್ತಿತ್ತು. **11**

**15:11** ಅತ್ಯಂತ ಪ್ರಾಮುಖ್ಯವಾದ ಈ ವಿಷಯದಲ್ಲಿ ಪೇತ್ರನು ಪೌಲನ ಮಾತುಗಳನ್ನು ಒಪ್ಪಿಕೊಂಡನು (11:13; 13:38-39; ರೋಮಾ 3:21-24; ಗಲಾ 2:16; ಎಫೆ 2:8-9). **12**

**15:12** ಮೋಶೆಯ ಧರ್ಮಶಾಸ್ತ್ರದಂತಲ್ಲದೆ, ತಮ್ಮಲ್ಲಿ ಕಾರ್ಯಮಾಡುತ್ತಿರುವ ಹಾಗೆಯೇ ದೇವರು ಅನ್ಯರಲ್ಲಿಯೂ ಕಾರ್ಯಮಾಡುತ್ತಿದ್ದಾನೆ ಎಂಬದನ್ನು ಯೆಹೂದ್ಯ ಕ್ರೈಸ್ತರಿಗೆ ಮನವರಿಕೆ ಮಾಡಿಸುವದೇ ಅವರ ಮುಖ್ಯ ಗುರಿಯಾಗಿತ್ತು. **13**

**15:13** 12:17; 21:18; ಗಲಾ 1:19 ನೋಡಿರಿ. ಈ ಯಾಕೋಬನು ಯೇಸು ಕ್ರಿಸ್ತನ ಮಲ ಸಹೋದರನಾಗಿದ್ದಾನೆ ಮತ್ತು ಯೆರೂಸಲೇಮಿನ ಸಭೆಯ ನಾಯಕನಾಗಿದ್ದಾನೆ. **14**

**15:14** *"ಸೀಮೋನನು"*– ಪೇತ್ರನ ಇನ್ನೊಂದು ಹೆಸರು.

*"ತನ್ನ ಹೆಸರಿಗಾಗಿ ಅವರೊಳಗಿಂದ ಒಂದು ಪ್ರಜೆಯನ್ನು ತೆಗೆದುಕೊಂಡಿದ್ದಾನೆ"*– ದೇವರು ಈ ಕಾರ್ಯವನ್ನು ಈಗಲೂ ಮಾಡುತ್ತಿದ್ದಾನೆ. ಮತ್ತಾಯ 16:18 ರಲ್ಲಿ "ಸಭೆಯ" ಅರ್ಥವನ್ನು ನೋಡಿರಿ. **15-18**

**15:15-18** ಯಾಕೋಬನು ಹೇಳಿರುವದೇನೆಂದರೆ ಹಳೆಯ ಒಡಂಬಡಿಕೆಯ ಪ್ರವಾದಿಗಳು ಅನ್ಯರು ಸಹ ದೇವರ ಕಡೆಗೆ ಬರುವದನ್ನು ಪ್ರವಾದಿಸಿದ್ದಾರೆ. ನಂತರ ಅವನು ಆಮೋಸ 9:11-12 ವಾಕ್ಯಗಳನ್ನು ಸೂಚಿಸಿದ್ದಾನೆ (ಅಲ್ಲಿಯೇ ನೋಟ್ಸ್ ನೋಡಿರಿ). ಆ ದಿನದಲ್ಲಿ ಕೆಲವು ಅನ್ಯರು ದೇವರ ಕಡೆಗೆ ತಿರುಗಿಕೊಂಡದ್ದರಿಂದ ದೇವರ ವಾಕ್ಯವು ಸಂಪೂರ್ಣವಾಗಿ ನೆರವೇರಿತು ಎಂಬದಾಗಿ ತೋರಿಸುವದು ಅವನ ಉದ್ದೇಶವಲ್ಲ ಬದಲಾಗಿ ಅನ್ಯರು ದೇವರ ಕಡೆಗೆ ತಿರುಗಿಕೊಳ್ಳುವದು ಆಶ್ಚರ್ಯದ ಸಂಗತಿಯೂ ಅಲ್ಲ, ದೇವರ ವಾಕ್ಯಗಳಿಗೆ ವಿರುದ್ಧವೂ ಅಲ್ಲ ಎಂಬದನ್ನು ತೋರಿಸುವದೇ ಅವನ ಉದ್ದೇಶವಾಗಿದೆ. **19**

**15:19** ಇವನು ಪೇತ್ರನ ಮಾತುಗಳನ್ನು ಒಪ್ಪಿಕೊಂಡನು (ವ 10). ಇಡೀ ಧರ್ಮಶಾಸ್ತ್ರವನ್ನು ಅನ್ಯರಾಗಿದ್ದು ದೇವರನ್ನು ಕಂಡುಕೊಂಡಿರುವ ವಿಶ್ವಾಸಿಗಳ ಮೇಲೆ ಹೊರಿಸುವದರಲ್ಲಿ ಯಾವುದೇ ಪ್ರಯೋಜನವಿಲ್ಲ. **20-21**

**15:20-21** ಯಾಕೋಬನು ತಿಳಿಯಪಡಿಸಿರುವ ವಿಷಯಗಳು ಗ್ರೀಕರು ಮತ್ತು ರೋಮನ್ನರ ನಡುವೆ ಅತ್ಯಂತ ಸಾಮಾನ್ಯವಾಗಿತ್ತು, ಆದರೆ ಹಳೆಯ ಒಡಂಬಡಿಕೆಯಲ್ಲಿ ಇವುಗಳನ್ನು ನಿಷೇಧಿಸಲಾಗಿತ್ತು. ಅನ್ಯರ ಸ್ಥಳಗಳಲ್ಲಿ ಅಲ್ಲೊಂದು ಇಲ್ಲೊಂದು ಸಭಾಮಂದಿರಗಳಿದ್ದವು ಅಲ್ಲಿ ಸುವಾರ್ತೆಯೇ ಇರಲಿಲ್ಲ (13:14; 14:1). ಯಾಕೋಬನು ಮತ್ತು ಯೆಹೂದ್ಯರೆಲ್ಲರೂ ಹಳೆಯ ಒಡಂಬಡಿಕೆಯ ನಿಷೇಧಗಳನ್ನು ಬಲ್ಲವರಾಗಿದ್ದರು. ಅವನ ಮಾತಿನ ಅರ್ಥವೇನೆಂದರೆ ಅನ್ಯರಾಗಿದ್ದು ದೇವರನ್ನು ಕಂಡುಕೊಂಡಿರುವ ಕ್ರೈಸ್ತರು

ಯೆಹೂದ್ಯರು ಇಷ್ಟಪಡದಿರುವ ಕಾರ್ಯಗಳನ್ನು ಮಾಡಿ ಅವರನ್ನು ನೋಯಿಸಬಾರದು ಎಂಬದಾಗಿದೆ. ವಿವಿಧ ರೀತಿಯ ಜನರ ನಡುವೆ ಜೀವಿಸುವ ಕ್ರೈಸ್ತರೆಲ್ಲರಿಗೂ ಈ ತತ್ವವು ಎಲ್ಲಾ ಸಮಯಗಳಲ್ಲಿಯೂ ಅನ್ವಯಿಸುತ್ತದೆ. 1 ಕೊರಿಂಥ 9:19-23; 10:32; 2 ಕೊರಿಂಥ 6:3 ರೊಂದಿಗೆ ಹೋಲಿಸಿ ನೋಡಿರಿ. ಮಾಂಸದೊಂದಿಗೆ ರಕ್ತವನ್ನು ತಿನ್ನುವದರ ನಿಷೇಧವು ಮೋಶೆಯ ಧರ್ಮಶಾಸ್ತ್ರಕ್ಕಿಂತಲೂ ಹಳೆಯದಾಗಿದೆ (ಆದಿ 9:4). ಲೈಂಗಿಕ ಅನೈತಿಕತೆಯನ್ನು ಸತ್ಯವೇದದಾದ್ಯಂತ ಖಂಡಿಸಲಾಗಿದೆ, ಮತ್ತು ಖಂಡಿತವಾಗಿಯೂ ಯಾವ ವಿಶ್ವಾಸಿಯ ಜೀವಿತದಲ್ಲಿಯೂ ಇದಕ್ಕೆ ಅವಕಾಶವೇ ಇರಬಾರದು (ವಿಮೋ 20:14; ಮತ್ತಾಯ 5:27-28; ಗಲಾ 5:19-21; ಎಫೆ 5:3). ವಿಗ್ರಹಗಳಿಗೆ ಅರ್ಪಿಸುವ ಪದಾರ್ಥಗಳ ಬಗ್ಗೆ ತಿಳಿಯಲು 1 ಕೊರಿಂಥ 8:1,4,10; 10:19,28; ಪ್ರಕ 2:14,20 ನೋಡಿರಿ. **22**

**15:22** ಸೀಲನ ಬಗ್ಗೆ ಹೇಳುವ ಇತರೆ ವಾಕ್ಯಗಳು – ವ 40; 2 ಕೊರಿಂಥ 1:19; 1 ಥೆಸ 1:1-2; 2 ಥೆಸ 1:1; 1 ಪೇತ್ರ 5:12. **23**

**15:23** ಅಂತಿಯೋಕ್ಯವು ಸಿರಿಯಾ ಮತ್ತು ಕಿಲಿಕ್ಯ ಪ್ರಾಂತ್ಯದ ಪ್ರಮುಖ ಪಟ್ಟಣವಾಗಿದೆ ಹಾಗೂ ಧರ್ಮಶಾಸ್ತ್ರದ ಕುರಿತಾದ ಭಿನ್ನಾಭಿಪ್ರಾಯಗಳು ಪ್ರಾರಂಭವಾದ ಸ್ಥಳವಾಗಿದೆ. **24**

**15:24** ನೀವು ಕೇಳಿರುವ ಸುಳ್ಳು ಬೋಧನೆಗಳ ಹಿಂದೆ ಅಪೊಸ್ತಲರು ಇಲ್ಲ ಎಂಬ ಭರವಸೆಯನ್ನು ಅವರು ಅನ್ಯವಿಶ್ವಾಸಿಗಳಿಗೆ ನೀಡಿದರು. **28**

**15:28** ಐಕ್ಯವಾದ ಈ ತೀರ್ಮಾನ ತೆಗೆದುಕೊಳ್ಳಲು ಪವಿತ್ರಾತ್ಮನು ಅವರನ್ನು ಪ್ರೇರಿಸಿದ್ದಾನೆ ಎಂದು ಅವರು ದೃಢವಾಗಿ ನಂಬಿದರು. **29**

**15:29** ಅನ್ಯರ ಸಭೆಗಳಲ್ಲಿ ಸಬ್ಬತ್ ದಿನದ ಆಚರಣೆಯ ಬಗ್ಗೆ ಇಲ್ಲಿ ಏನೂ ಹೇಳಲಾಗದಿರುವದನ್ನು ಗಮನಿಸಿರಿ. ಅದು ಅನ್ಯರಾಗಿರುವ ವಿಶ್ವಾಸಿಗಳಿಗೆ ಪ್ರಾಮುಖ್ಯವಾಗಿದೆ ಎಂದು ಯೆಹೂದ್ಯ ವಿಶ್ವಾಸಿಗಳು ಸಹ ಪರಿಗಣಿಸಲಿಲ್ಲ. **31**

**15:31** ಅವರನ್ನು ತೊಂದರೆ ಒಳಪಡಿಸಿದ್ದ ಬೋಧನೆ (ವ 1,5) ಸತ್ಯವಲ್ಲ ಎಂಬದು ಪ್ರೋತ್ಸಾಹದಾಯಕವಾಗಿದೆ. **32**

**15:32** ಆದಿ 20:7 ರಲ್ಲಿ ಪ್ರವಾದಿಗಳ ಕುರಿತಾದ ನೋಟ್ಸ್ ನೋಡಿರಿ. **35**

**15:35** ಆ ಕ್ಷಣಕ್ಕಾದರೂ ಆ ಸ್ಥಳದಲ್ಲಿ ಸುಳ್ಳು ಬೋಧನೆಗಳು ಸೋತು ಹೋದವು. ಆದರೆ ಅದೇ ಬೋಧನೆಯು ಗಲಾತ್ಯದಲ್ಲಿದ್ದ ಸಭೆಗಳ ಮೇಲೆ ಪರಿಣಾಮ ಬೀರಿತು ಮತ್ತು ಆಗಿನಿಂದ ಕಾಲಕ್ರಮೇಣ ಅಂಥದ್ದೇ ವಿಷಯಗಳು ಕ್ರೈಸ್ತರನ್ನು ತೊಂದರೆ ಪಡಿಸುತ್ತಲೇ ಬಂದಿದೆ. **36**

**15:36** ಸುವಾರ್ತೆಯನ್ನು ಸಾರುವದು, ಜನರನ್ನು ಕ್ರಿಸ್ತನಿಗಾಗಿ ಗೆಲ್ಲುವದು ನಂತರ ಅವರನ್ನು ಶಾಶ್ವತವಾಗಿ ಬಿಟ್ಟುಬಿಡುವದು ಪೌಲನ ಕೆಲಸವಾಗಿರಲಿಲ್ಲ. ಅವನ ಕುರುಬನ ಹೃದಯವುಳ್ಳವನಾಗಿದ್ದನು (2 ಕೊರಿಂಥ 11:28-29), ಮತ್ತು ಯೇಸು ಕ್ರಿಸ್ತನ ಪ್ರತಿಯೊಬ್ಬ ಸೇವಕನಿಗೂ ಅವನು ಒಳ್ಳೆಯ ಮಾದರಿಯಾಗಿದ್ದಾನೆ. **37-38**

**15:37-38** 13:13 ನೋಡಿರಿ. ಮಾರ್ಕನು ಬಾರ್ನಬನ ಸಂಬಂಧಿಕನಾಗಿದ್ದನು (ಕೊಲೊ 4:10). ಈ ಕಾರಣದಿಂದ ಅವನು ಮಾರ್ಕನನ್ನು ತಮ್ಮೊಂದಿಗೆ ಕರೆದುಕೊಂಡು ಹೋಗೋಣ ಎಂದು ಒತ್ತಾಯಪಡಿಸಿರಬಹುದು. ಕೆಲವೊಮ್ಮೆ ದೇವಜನರು ತಮ್ಮ ಕುಟುಂಬದ ಸಂಬಂಧಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡುತ್ತಾರೆ ಮತ್ತು ಸೇವೆಯಲ್ಲಿ ಸೋತುಹೋಗುವವರು ಸಹಜವಾಗಿ ಸೇವೆಗೆ ಹಾನಿಯನ್ನುಂಟು ಮಾಡುತ್ತಾರೆ. ನಂಬಿಕೆಗೆ ಅರ್ಹನಲ್ಲದ ವ್ಯಕ್ತಿಯನ್ನು ಪ್ರಾಮುಖ್ಯವಾದ ಕಾರ್ಯಕ್ಕಾಗಿ ಕರೆದುಕೊಂಡು ಹೋಗುವದು ಸರಿಯಲ್ಲ ಎಂಬ ದೃಢವಾದ ತೀರ್ಮಾನವನ್ನು ಪೌಲನು ತೆಗೆದುಕೊಂಡನು. ಪೌಲನು ಇಲ್ಲಿ ತೆಗೆದುಕೊಂಡ ತೀರ್ಮಾನವು ಮಾರ್ಕನು ದೇವರ ಸೇವೆಯಲ್ಲಿ ಹೆಚ್ಚು ನಂಬಿಗಸ್ತನಾಗುವಂತೆ ಮತ್ತು ನಂತರ ಅವನ ಜೀವಿತದಲ್ಲಿ ಅವನನ್ನು ದೇವರಿಗೆ ಉಪಯುಕ್ತ ಸೇವಕನನ್ನಾಗಿ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿತು ಎಂಬದು ನಮ್ಮೆಲ್ಲರಿಗೂ ಗೊತ್ತಿರುವ ಸಂಗತಿಯಾಗಿದೆ (ಫಿಲೆ 24; 2 ತಿಮೊ 4:11). ಖಂಡಿತವಾಗಿಯೂ ಪೌಲನಂಥ ದೇವರ ಮನುಷ್ಯನ ನಿರಾಕರಣೆಯು ಮಾರ್ಕನ ಮೇಲೆ ಹೆಚ್ಚು ಪ್ರಭಾವವನ್ನು ಬೀರಿರಬಹುದು ಮತ್ತು ತನ್ನ ಹೃದಯ ಹಾಗೂ ಮಾರ್ಗಗಳನ್ನು ಪರೀಕ್ಷಿಸಿಕೊಳ್ಳುವಂತೆ ಅವನನ್ನು ಕೆರಳಿಸಿರಬಹುದು.
**39**

**15:39** ದೇವಜನರ ನಡುವೆಯೂ ಕೆಲವು ತೀಕ್ಷ್ಣವಾದ ಭಿನ್ನಾಭಿಪ್ರಾಯಗಳಿರುತ್ತವೆ. ಇಂಥ ಭಿನ್ನಾಭಿಪ್ರಾಯಗಳು ಒಳ್ಳೇಯವುಗಳು ಎಂಬದಾಗಿ ಹೇಳಲು ಇದನ್ನೂ ಹೇಳಿಲ್ಲ. ಪೌಲನಂಥ ವ್ಯಕ್ತಿ ಒಮ್ಮೆ ಯಾವುದನ್ನು ಸರಿ ಎಂದು ಪರಿಗಣಿಸುತ್ತಿದ್ದನೋ ಅದರಿಂದ ಹಿಂದೆ ಸರಿಯುವ ಮಾತೇ ಇರಲಿಲ್ಲ. ಅಪೊಸ್ತಲರ ಕೃತ್ಯಗಳಲ್ಲಿ ಬಾರ್ನಬನ ಬಗ್ಗೆ ಬರೆಯಲ್ಪಟ್ಟಿರುವದು ಇದೇ ಕೊನೆಯಾಗಿದೆ. **40**

**15:40** ಅಂತಿಯೋಕ್ಯದ ಸಭೆ ಪೌಲ ಮತ್ತು ಬಾರ್ನಬನ ಭಿನ್ನಾಭಿಪ್ರಾಯದ ನಡುವೆ ಪೌಲನನ್ನು ಬೆಂಬಲಿಸಿದಂತೆ ಅನ್ನಿಸುತ್ತದೆ. ಅವರು ಪೌಲ ಮತ್ತು ಸೀಲನನ್ನು ಸುವಾರ್ತಾ ಪ್ರಯಾಣಕ್ಕೆ ನೇಮಿಸಿದರು ಆದರೆ ಬಾರ್ನಬ ಮತ್ತು ಮಾರ್ಕನನ್ನು ನೇಮಿಸಿದ್ದರ ಬಗ್ಗೆ ಏನೂ ಹೇಳಲಾಗಿಲ್ಲ, ಮತ್ತು ಖಂಡಿತವಾಗಿಯೂ ಈ ತೀರ್ಮಾನ ಪ್ರಾಮುಖ್ಯವಾದದ್ದಾಗಿದೆ. ಹಾಗೆಯೇ ಕ್ರೈಸ್ತ ಸೇವಕನು ಹೇಗಿರಬೇಕು ಎಂಬದಕ್ಕೆ ದೇವರು ಪೌಲನನ್ನು ಮಾದರಿಯಾಗಿ ತೋರಿಸಿದ್ದಾನೆಯೇ ಹೊರತು ಬಾರ್ನಬನನ್ನಲ್ಲ ಎಂಬದನ್ನೂ ನಾವು ಮರೆಯಬಾರದು – ಫಿಲಿಪ್ಪಿ 3:17; 1 ಕೊರಿಂಥ 4:16; 11:1; 2 ಥೆಸ 3:8-9. **41**

**15:41** ದೇವರ ವಾಕ್ಯದ ಸರಳ ಹಾಗೂ ಯುಕ್ತವಾದ ಬೋಧನೆ ಸಭೆಯನ್ನು ಅಧಿಕವಾಗಿ ಬಲಗೊಳಿಸುತ್ತದೆ.

# 16₁

**16:1** 14:6 ನೋಡಿರಿ. ಯೆಹೂದ್ಯರು ಮತ್ತು ಗ್ರೀಕರ ನಡುವೆ ಮದುವೆಗೆ ಹೆಣ್ಣನ್ನು ಕೊಡುವ ಮತ್ತು ತೆಗೆದುಕೊಳ್ಳುವ ಪದ್ಧತಿ ಇರಲಿಲ್ಲ. ತಿಮೊಥೆಯನ ತಾಯಿ ಯೇಸು ಕ್ರಿಸ್ತನ ವಿಶ್ವಾಸಿಯಾಗಿದ್ದಳು (2 ತಿಮೊ 1:5). ತಿಮೊಥೆಯನು ಪೌಲನ ಸೇವೆಯಲ್ಲಿ ಅತ್ಯಂತ ಪ್ರಾಮುಖ್ಯ ವ್ಯಕ್ತಿಯಾಗಿ ಗುರುತಿಸಿಕೊಂಡನು – 17:14-15; 18:5; 19:22; 20:4; ರೋಮಾ 16:21; 2 ಕೊರಿಂಥ 1:1; 4:17; ಫಿಲಿಪ್ಪಿ 1:1; ಕೊಲೊ 1:1; 1 ಥೆಸ 1:1; 2 ಥೆಸ 1:1; 1 ತಿಮೊ 1:2; 2 ತಿಮೊ 1:2. ಕಲ್ಲೇಟುಗಳಿಗೆ ಒಳಗಾಗಿ ಬಹುತೇಯ ಸಾಯುವ ಸ್ಥಿತಿಯಲ್ಲಿ ರಸ್ತೆಯ ಮೇಲೆ ಬಿದ್ದಿರುವಾಗ ಪೌಲನು ಅವನನ್ನು ನೋಡಿದನು – 14:19. **3**

**16:3** ತಿಮೊಥೆಯನು ಸುನ್ನತಿ ಮಾಡಿಸಿಕೊಂಡಿರಲಿಲ್ಲ ಬಹುಶಃ ಗ್ರೀಕನಾಗಿದ್ದ ಅವನ ತಂದೆ ಅದನ್ನು ವಿರೋಧಿಸಿರಬಹುದು. ಆದರೆ ಅವನಿಗೆ ಹಳೆಯ ಒಡಂಬಡಿಕೆಯ ಬಗ್ಗೆ ಕಲಿಸಲಾಗಿತ್ತು (2 ತಿಮೊ 3:15), ಮತ್ತು ಅವನ ತಾಯಿಯ ನಿಮಿತ್ತ ಅವನನ್ನು ಯೆಹೂದ್ಯನೆಂದು ಪರಿಗಣಿಸಲಾಗುತಿತ್ತು. ಅವನಿಗೆ ಸುನ್ನತಿ ಮಾಡಿಸುವ ಮೂಲಕ ಪೌಲನು 15:1,5 ರಲ್ಲಿ ಹೇಳಿರುವ ತಪ್ಪನ್ನು ಮಾಡಲಿಲ್ಲ. ಅವನ ಉದ್ದೇಶವೇನೆಂದರೆ ತಿಮೊಥೆಯು ಯೇಸು ಕ್ರಿಸ್ತನ ಸೇವೆಯಲ್ಲಿ ಮುಂದುವರೆಯುವದರಿಂದ ಯೆಹೂದ್ಯರು ಅವನನ್ನು ಅಂಗೀಕರಿಸಿಕೊಳ್ಳಬೇಕು ಎಂಬದೇ ಆಗಿತ್ತು. 1 ಕೊರಿಂಥ 9:19-22 ರೊಂದಿಗೆ ಹೋಲಿಸಿ ನೋಡಿರಿ. ಯೆಹೂದ್ಯರು ಯೇಸು ಕ್ರಿಸ್ತನ ಕಡೆಗೆ ತಿರುಗಿಕೊಳ್ಳಬೇಕು ಎಂಬ ಪೌಲನ ಬಯಕೆಯನ್ನು ತಿಳಿದುಕೊಳ್ಳಲು ರೋಮಾ 9:1-4 ನೋಡಿರಿ. ಅವನು ಸುನ್ನತಿಯ ಬಗ್ಗೆ ತನ್ನ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸುತ್ತಿದ್ದನು – ಗಲಾ 6:15. **4**

**16:4** 15:23-29 ನೋಡಿರಿ. **5**

**16:5** ಯೆರೂಸಲೇಮಿನಲ್ಲಿ ನಡೆದ ಒಪ್ಪಂದವು (ಅಧ್ಯಾಯ 15) ಸಭೆಗೆ ಅತ್ಯಂತ ಪ್ರಯೋಜನಕಾರಿಯಾಗಿತ್ತು. **6**

**16:6** ಆಸ್ಯ ಎಂಬದು ಪ್ರಾಂತ್ಯದ ಹೆಸರಾಗಿದ್ದು ಎಫೆಸವು ಅದರ ರಾಜಧಾನಿಯಾಗಿತ್ತು. ಆಸ್ಯ ಸೀಮೆ ಎಂದು ಕರೆಯಲ್ಪಡುವ ಹೆಚ್ಚು ವಿಸ್ತಾರ ಪ್ರಾಂತ್ಯದಲ್ಲಿ ಆಸ್ಯ ಇತ್ತು (ಈಗ ಅದನ್ನು ಟರ್ಕಿ ಎಂದು ಕರೆಯುತ್ತಾರೆ) ಇದು ಆಸ್ಯ ಸೀಮೆಯ ಸಣ್ಣ ಪ್ರದೇಶವಾಗಿದೆ. ಪೌಲನು ನಂತರದಲ್ಲಿ ಅಲ್ಲಿ ಅತ್ಯಂತ ಫಲದಾಯಕ ಸೇವೆಯನ್ನು ಮಾಡಿದನು (19:1-22). ಆದರೆ ಪವಿತ್ರಾತ್ಮನು ಈಗ ಅಲ್ಲಿಗೆ ಹೋಗದಂತೆ ಅವನನ್ನು ತಡೆದನು. ದೇವರು ತನ್ನ ಯಾವುದೇ ಕಾರ್ಯಗಳಿಗಾದರೂ ನಿರ್ದಿಷ್ಟವಾದ ಸಮಯವುಳ್ಳವನಾಗಿದ್ದಾನೆ ಮತ್ತು ತನ್ನ ಪ್ರತಿಯೊಬ್ಬ ಸೇವಕನು ಯಾವ ಸಮಯದಲ್ಲಿ ಎಲ್ಲಿರಬೇಕು ಎಂಬದನ್ನು ಬಲ್ಲವನಾಗಿದಾನೆ. ಅವರು ಆತನ ಮುನ್ನಡೆಸುವಿಕೆಯನ್ನು ಅನುಸರಿಸಬೇಕು ಮತ್ತು ಅದಕ್ಕೆ ವಿಧೇಯರಾಗಬೇಕು. **7**

**16:7** ಬಿಥಾನ್ಯವು ಆಸ್ಯ ಸೀಮೆಯ ಉತ್ತರಪೂರ್ವದ ಕಡೆಗಿತ್ತು. ಪೌಲನು ಅಲ್ಲಿಗೆ ಹೋಗಲು ಪ್ರಯತ್ನಿಸಿದರೂ ಆಗದೇ ಹೋದದ್ದು ನಮಗೆ ಕೆಲವು ಸತ್ಯಗಳನ್ನು ಕಲಿಸುತ್ತದೆ. ಪೌಲನು

ಮುಂದೆ ಸಾಗುತ್ತಿದ್ದನು, ಎಲ್ಲಾ ಕಡೆಗಳಲ್ಲಿಯೂ ಸುವಾರ್ತೆ ಸಾರುವ ತನ್ನ ಕರೆಗೆ ವಿಧೇಯನಾಗಿದ್ದನು. ತಾನು ಎಲ್ಲಿಗೆ ಹೋಗಬೇಕೆಂದು ದೇವರು ಬಯಸುತ್ತಾನೆ ಎಂಬದು ಅವನಿಗೆ ಯಾವಾಗಲೂ ಗೊತ್ತಿರಲಿಲ್ಲ, ಆ ಕಾರಣದಿಂದ ಅವನು ಮನೆಯಲ್ಲಿಯೇ ಸುಮ್ಮನೆ ಕೂರಲಿಲ್ಲ. ಅವನು ಮುಂದೆ ಸಾಗುವಾಗ ದೇವರು ಅವನಿಗೆ ಮಾರ್ಗದರ್ಶನ ಕೊಡುತ್ತಿದ್ದನು ಮತ್ತು ಪೌಲನು ದೇವರ ಕರೆಯುವಿಕೆಗೆ ವಿಧೇಯನಾದ್ದರಿಂದ ದೇವರು ತನ್ನ ಚಿತ್ತವನ್ನು ಅವನಿಗೆ ಪ್ರಕಟಪಡಿಸಿದನು. 6ನೇ ವಚನದಲ್ಲಿ ಯಾರನ್ನು ಪವಿತ್ರಾತ್ಮನು ಎಂದು ಕರೆಯಲಾಗಿದೆಯೋ ಅವನನ್ನು ಇಲ್ಲಿ ಯೇಸುವಿನ ಆತ್ಮ ಎಂದು ಕರೆಯಲಾಗಿರುವದನ್ನು ಗಮನಿಸಿರಿ. ಯೋಹಾನ 14:16,26; 16:7; ರೋಮಾ 8:9 ರೊಂದಿಗೆ ಹೋಲಿಸಿ ನೋಡಿರಿ. **8**

**16:8** ತ್ರೋವವು ಏಜಿಯನ್ ಸಮುದ್ರದ ಪ್ರಾಮುಖ್ಯ ಬಂದರು ಪಟ್ಟಣವಾಗಿತ್ತು ಗ್ರೀಕ್ ಮತ್ತು ಮೆಕದೋನ್ಯದ ಕಡೆ ಮುಖಮಾಡಿತು. **9**

**16:9** "*ದರ್ಶನ*"– 18:9-10 ರಲ್ಲಿ ರೆಫರೆನ್ಸ್ ನೋಡಿರಿ. ಅವರು ದೇವರ ಮಾರ್ಗದರ್ಶನಕ್ಕಾಗಿ ಕಾಯುತ್ತಿದ್ದರು ಮತ್ತು ದೇವರು ಅವರಿಗೆ ಅದನ್ನು ಕೊಡಲು ಈ ಮಾರ್ಗವನ್ನು ಆಯ್ಕೆಮಾಡಿಕೊಂಡನು. ಅವರು ಕೂಡಲೇ ವಿಧೇಯರಾದರು-ದೇವರು ಸಂಪೂರ್ಣವಾಗಿ ಇಂಥ ವಿಧೇಯತೆಯನ್ನು ಮಾತ್ರವೇ ಸಮ್ಮತಿಸುವವನಾಗಿದ್ದಾನೆ. ಮೊಟ್ಟಮೊದಲನೆಯ ಸಲ (ನಮಗೆ ಗೊತ್ತಿರುವ ಪ್ರಕಾರ) ಯೇಸು ಕ್ರಿಸ್ತನ ಅಪೊಸ್ತಲರಲ್ಲಿ ಒಬ್ಬನು ಯೂರೂಪ್ ದೇಶಕ್ಕೆ ಸುವಾರ್ತೆ ಸಾರಲು ಹೋದನು. ಕ್ರೈಸ್ತತ್ವವು ಆಸ್ಯ ಸೀಮೆಯಲ್ಲಿ ಪ್ರಾರಂಭವಾಯಿತು ಮತ್ತು ಮೊದಲನೆಯ ಸಭೆಗಳು ಪಶ್ಚಿಮ ಆಸ್ಯದಲ್ಲಿ ಸ್ಥಾಪನೆಯಾದವು. 10ನೇ ವಾಕ್ಯದಲ್ಲಿ "ನಾವು" –ಎಂಬ ಪದವನ್ನು ಗಮನಿಸಿರಿ-ಲೂಕನು ಈಗ ತನ್ನನ್ನು ಗುಂಪಿನೊಳಗೆ ಸೇರಿಸಿಕೊಳ್ಳುತ್ತಿದ್ದಾನೆ. ಲೂಕನು ತ್ರೋವದಲ್ಲಿ ಪೌಲನೊಂದಿಗೆ ಸೇರಿಕೊಂಡನು ಎಂಬದಕ್ಕೆ ಪುರಾವೆಗಳಿವೆ. **11**

**16:11** ಸಮೊಥ್ರಾ ಏಜಿಯನ್ ನ ದ್ವೀಪವಾಗಿತ್ತು. ನೆಯಾಪೊಲಿ ಮೆಕೆದೋನ್ಯದಲ್ಲಿರುವ ಫಿಲಿಪ್ಪಿ ಪಟ್ಟಣದ ಬಂದರಾಗಿತ್ತು. ಫಿಲಿಪ್ಪಿ ರೋಮನ್ ಪಟ್ಟಣವಾಗಿತ್ತು – ಆ ಸಮಯದಲ್ಲಿ ರೋಮನ್ನರು ಮೆಕೆದೋನ್ಯದಲ್ಲಿ ಆಳ್ವಿಕೆ ಮಾಡುತ್ತಿದ್ದರು. **13**

**16:13** ಪಟ್ಟಣದಲ್ಲಿ ಯಾವುದೇ ಸಭಾಮಂದಿರವಿಲ್ಲ ಎಂಬದು ಅವರಿಗೆ ಗೊತ್ತಿತ್ತು, ಆದ್ದರಿಂದ ಅವರು (ಯೆಹೂದ್ಯರ ಪ್ರಭಾವಕ್ಕೆ ಒಳಗಾಗಿರುವವರು ಮತ್ತು) ಯೆಹೂದ್ಯರು ಒಟ್ಟಾಗಿ ಆರಾಧನೆಗೆ ಸೇರಿ ಬರಲು ಅನುಕೂಲವಾಗುವ ಸ್ಥಳವನ್ನು ಹುಡುಕುತ್ತಿದ್ದರು. **14**

**16:14** ಥುವತ್ತೈರ ಆಸ್ಯ ಸೀಮೆಯಲ್ಲಿತ್ತು ಅಲ್ಲಿಗೆ ಹೋಗದಂತೆ ದೇವರು ಪೌಲನನ್ನು ತಡೆದಿದ್ದನು – ವ 6.

"*ದೇವಭಕ್ತಳು*"– ಇದರ ಅರ್ಥ ಆಕೆ ಸತ್ಯವೇದದ ದೇವರನ್ನು – ಅಂದರೆ ನಿಜವಾದ ದೇವರನ್ನು ಆರಾಧಿಸುತ್ತಿದ್ದಳು. ಥುವತ್ತೈರದಲ್ಲಿದ್ದ ಯೆಹೂದ್ಯರ ಮೂಲಕ ಆಕೆ ಆತನ

ಬಗ್ಗೆ ತಿಳಿದುಕೊಂಡಿರಬಹುದು. ಈಗ ಯೇಸು ಕ್ರಿಸ್ತನ ಕುರಿತಾದ ಸಂದೇಶವನ್ನು ಕೇಳಿಸಿಕೊಳ್ಳಲು ದೇವರು ಆಕೆಯ ಹೃದಯವನ್ನು ತೆರೆದನು (ಲೂಕ 24:45 ರೊಂದಿಗೆ ಹೋಲಿಸಿ ನೋಡಿರಿ). ಯಾರೆಲ್ಲಾ ನಂಬಿಕೆಯಿಂದ ಆತನ ಬಳಿಗೆ ಬರುತ್ತಾರೋ ದೇವರು ಅವರೆಲ್ಲರಿಗೂ ಹೀಗೆಯೇ ಮಾಡುತ್ತಾನೆ. ಒಂದುವೇಳೆ ಆತನು ಈ ಕಾರ್ಯವನ್ನು ಮಾಡಲಿಲ್ಲವೆಂದರೆ, ಅದನ್ನು ಯಾರಿಂದಲೂ ಮಾಡಲು ಆಗುವದಿಲ್ಲ. ಆತನು ಜನರ ಹೃದಯಗಳನ್ನು ತೆರೆಯುವದು ಸೆರೆಮನೆಯ ಕದಗಳನ್ನು ತೆರೆಯುವ ಮಹಾ ಅದ್ಭುತಕ್ಕೆ ಸಮಾನವಾದ ಕಾರ್ಯವಾಗಿದೆ (ವ 26; 5:19). ಆದರೆ ಜನರು ಆತನಿಗಾಗಿ ತಮ್ಮ ಹೃದಯದ ಬಾಗಿಲನ್ನು ತೆರೆಯುವ ಜವಾಬ್ದಾರಿಯಿಂದ ಮುಕ್ತರಾಗುತ್ತಾರೆ ಎಂಬದು ಇದರ ಅರ್ಥವಲ್ಲ – ಪ್ರಕ 3:20. **15**

**16:15** 2:38; ಮತ್ತಾಯ 3:6; ಮಾರ್ಕ 16:16 ರಲ್ಲಿ ದೀಕ್ಷಾಸ್ನಾನದ ಕುರಿತಾದ ನೋಟ್ಸ್ ನೋಡಿರಿ. ಆಕೆ ತನ್ನ ಕ್ರಿಯೆಗಳ ಮೂಲಕ ತನ್ನ ನಂಬಿಕೆಯನ್ನು ತೋರಿಸಿದಳು (ಯಾಕೋಬ 2:14-19). **16**

**16:16** *"ಗರುಡಗಾತಿ"*–ಅಂದರೆ ದುರಾತ್ಮವಿರುವವಳು, ಕೆಡುಕನು (ಮತ್ತಾಯ 4:24 ರಲ್ಲಿ ನೋಟ್ ನೋಡಿರಿ). ಒಳ್ಳೆಯ ಆತ್ಮಗಳು ಈ ರೀತಿಯ ಕಾರ್ಯಗಳಲ್ಲಿ ಭಾಗಿಯಾಗುವದಿಲ್ಲ. ಧರ್ಮೋ 18:9-13 ನೋಡಿರಿ. ಆ ದಾಸಿಯು ಹೇಳುತ್ತಿದ್ದ ವಿಷಯಗಳು ಎಷ್ಟು ನಿಖರವಾಗಿದ್ದವು ಎಂದು ಹೇಳಲು ನಮ್ಮಿಂದ ಆಗುವದಿಲ್ಲ. ಆಕೆ ಬಹುಕಾಲದಿಂದ ಜನರು ತನ್ನಲ್ಲಿ ನಂಬಿಕೆಯಿಡುವಂತೆ ಮಾಡಿದ್ದಳು. **17-18**

**16:17-18** ಇತರೆ ದುರಾತ್ಮಗಳು ಕೂಗಿರುವದನ್ನು ನೋಡಿರಿ – ಮತ್ತಾಯ 8:29; ಮಾರ್ಕ 1:24; 3:11-12; 5:7; ಲೂಕ 4:33,41; 8:28. ಯೇಸು ಕ್ರಿಸ್ತನಾಗಲಿ ಆತನ ಶಿಷ್ಯರಾಗಲಿ ದುರಾತ್ಮಗಳು ಅವರ ಪರವಾಗಿ ಸಾಕ್ಷಿ ಹೇಳುವದನ್ನು ಇಷ್ಟಪಡಲಿಲ್ಲ. ದುರಾತ್ಮ ಪೀಡಿತಳಾಗಿರುವ ಈ ಹುಡುಗಿ ಯೇಸು ಕ್ರಿಸ್ತನ ಸುವಾರ್ತೆಯ ಕಡೆಗೆ ಇದ್ದಾಳೆ ಎಂದು ಜನರು ಆಲೋಚಿಸುವದು ಒಳ್ಳೆಯ ಸಂಗತಿಯಲ್ಲ. ಒಂದುವೇಳೆ ಸೈತಾನನು ಕ್ರಿಸ್ತನ ಸೇವಕರೊಂದಿಗೆ ಸೇರಿಕೊಳ್ಳಲು ಬಯಸುವದಾದರೆ, ಅವನ ಮುಖ್ಯ ಉದ್ದೇಶ ಸತ್ಯವನ್ನು ಹಾಳುಮಾಡುವದೇ ಆಗಿರುತ್ತದೆ. ಪೌಲನು ಸಮಸ್ಯೆಯನ್ನು ನೋಡುತ್ತಿರಲಿಲ್ಲ ಬದಲಾಗಿ ಆ ಪರಿಸ್ಥಿತಿಯಲ್ಲಿ ಸಹಿಸಿಕೊಳ್ಳಲು ಅವನಿಂದ ಆಗಲಿಲ್ಲ. ದುರಾತ್ಮಗಳನ್ನು ಓಡಿಸುವದರ ಬಗ್ಗೆ ತಿಳಿಯಲು ಮತ್ತಾಯ 4:24; 10:1 ನೋಡಿರಿ. **19-21**

**16:19-21** ಹಣವೇ ಅವರ ದೇವರಾಗಿತ್ತು, ಮತ್ತು ಅವರು (ಹಣವನ್ನೇ ದೇವರೆಂದುಕೊಂಡಿರುವವರೆಲ್ಲರೂ) ಬಡ ಹುಡುಗಿಯ ಆರೋಗ್ಯದ ಬಗ್ಗೆ ಸ್ವಲ್ಪವೂ ಚಿಂತೆಯಿಲ್ಲದವರಾಗಿದ್ದರು ಅಥವಾ ಸತ್ಯ ಮತ್ತು ನ್ಯಾಯದ ಬಗ್ಗೆ ಯೋಚಿಸದವರಾಗಿದ್ದರು. ಯೋಹಾನ 12:6 ರೊಂದಿಗೆ ಹೋಲಿಸಿ ನೋಡಿರಿ. ಇವರು

ರೋಮನ್ ಪಟ್ಟಣದಲ್ಲಿ ಯೆಹೂದ್ಯ ವಿರೋಧಿ ಪೂರ್ವಾವರದ ಎದುರು ಮನವಿ ಮಾಡುತ್ತಿದ್ದರು. ಅವರೊಂದಿಗೆ ಹೊಂದಿಕೆ ಮಾಡಿಕೊಳ್ಳುವ ಮೂಲಕ ಯೇಸು ಕ್ರಿಸ್ತನ ಸೇವಕರನ್ನು ಸೋಲಿಸಲು ಆಗದೇ ಹೋದಾಗ ಸೈತಾನನು ಇವರ ಮೂಲಕ ಬೇರೆ ವಿಧಾನವನ್ನು ಪ್ರಯತ್ನಿಸಿದನು. **23**

**- 16:23** 5:40; ಮತ್ತಾಯ 27:26; 2 ಕೊರಿಂಥ 11:23-25. **24**

**16:24** *"ಕೋಳ"*– ಬಂಧಿಗಳು ಎಲ್ಲಿಗೂ ಹೋಗದಂತ ತಡೆಯಲು ಅವರ ಕಾಲುಗಳನ್ನು ಅಥವಾ ಕಾಲುಗಳು ಮತ್ತು ಕೈಗಳಿಗೆ ಕೋಳಗಳನ್ನು ಹಾಕುತ್ತಿದ್ದರು, ಇವು ಮರದ ತುಂಡುಗಳಾಗಿದ್ದು ಅವುಗಳ ನಡುವೆ ಕಾಲುಗಳನ್ನು ಸಿಕ್ಕಿಸಲು ಒಂದು ರಂಧ್ರವಿರುತ್ತಿತ್ತು. **25**

**16:25** ನಿಜವಾದ ಕ್ರೈಸ್ತರು ತಮ್ಮ ಕಷ್ಟಗಳು ಮತ್ತು ಹಿಂಸೆಗಳನ್ನು ಯಾವ ರೀತಿ ಎದುರಿಸಬಹುದು ಎಂಬದನ್ನು ನೋಡಿರಿ-ಶಪಿಸುವ ಬದಲು ಪ್ರಾರ್ಥನೆ, ವ್ಯಥೆ ಮತ್ತು ಆರೋಪದ ಬದಲು ಹಾಡುಗಳು, ಗೊಂದಲ ಮತ್ತು ಕುಗ್ಗುವಿಕೆಗೆ ಬದಲು ದೈವೀಕ ಆದರಣೆ, ಸೇಡು ತೀರಿಸಿಕೊಳ್ಳುವ ದಾಹಕ್ಕೆ ಬದಲು ಸಂತೋಷ. 5:41; ಮತ್ತಾಯ 5:10-12; ರೋಮಾ 5:3; 2 ಕೊರಿಂಥ 1:5; 1 ಪೇತ್ರ 4:13 ರೊಂದಿಗೆ ಹೋಲಿಸಿ ನೋಡಿರಿ. ದೇವರೇ ನಮ್ಮನ್ನು ಇಲ್ಲಿಗೆ ಬರಮಾಡಿದ್ದಾನೆ (ವ 10) ಎಂಬದು ಅವರಿಗೆ ಗೊತ್ತಿತ್ತು, ಅಲ್ಲದೆ ನಾವು ನಮ್ಮ; ಕುರುಬನ ಪಾಲನೆಯಲ್ಲಿದ್ದೇವೆ ಮತ್ತು ಭೂಪರಲೋಕಗಳ ಒಡೆಯನಾದ ದೇವರು ಇವೆಲ್ಲವುಗಳನ್ನು ಒಳ್ಳೆಯ ಉದ್ದೇಶದಿಂದ ಮಾಡುತ್ತಿದ್ದಾನೆ ಎಂಬದನ್ನು ಅವರು ಬಲ್ಲವರಾಗಿದ್ದರು. **26**

**16:26** ಪೌಲ ಮತ್ತು ಸೀಲನನ್ನು ಹಾಳುಮಾಡಲು ಸೈತಾನನು ಸರ್ವಪ್ರಯತ್ನಗಳನ್ನು ನಡೆಸಿದನು. ತನ್ನ ಸೇವಕರನ್ನು ಬಿಡಿಸಲು ಮತ್ತು ಆ ಸ್ಥಳದಲ್ಲಿ ಸುವಾರ್ತೆಯು ಈ ರೀತಿಯಾಗಿ ಹಬ್ಬಿಕೊಳ್ಳಲು ದೇವರು ಈ ಮಾರ್ಗವನ್ನು ಆರಿಸಿಕೊಂಡನು. ಆತನು ಯಾವಾಗಲೂ ಇಂಥ ವಿಧಾನಗಳನ್ನು ಅನುಸರಿಸುವದಿಲ್ಲ (7:57-58; 12:1-7), ಆದರೆ ಆತನು ಯಾವುದೇ ವಿಧಾನಗಳನ್ನು ಉಪಯೋಗಿಸಿದರೂ ಅವುಗಳು ಯುಕ್ತವಾದವುಗಳು ಮತ್ತು ಒಳ್ಳೆಯವುಗಳು ಎಂಬ ಭರವಸೆ ನಮಗಿರಬೇಕು. **27**

**16:27** 12:19 ನೋಡಿರಿ. **28**

**16:28** ತನ್ನೊಂದಿಗೆ ಕ್ರೂರವಾಗಿ ನಡೆದುಕೊಂಡಿದ್ದ ಸೆರೆಮನೆಯ ಯಜಮಾನನ ಹಿತವನ್ನು ಬಯಸಿದನು (ವ 24). ಮತ್ತಾಯ 5:44; ರೋಮಾ 12:19-21 ನೋಡಿರಿ. **29-30**

**16:29-30** ಪೌಲ ಮತ್ತು ಸೀಲನು ನಿಜವಾದ ದೇವ ಸಂದೇಶಕರಾಗಿದ್ದು ರಕ್ಷಣೆಯ ಮಾರ್ಗವನ್ನು ಕಲಿಸುತ್ತಾರೆ ಎಂಬದಾಗಿ ಅವನು ಅರಿತುಕೊಂಡನು. ಪವಿತ್ರಾತ್ಮನ ಅವನಿಗೆ ಅವನ ಆತ್ಮೀಕ ಅವಶ್ಯಕತೆಯ ಬಗ್ಗೆ ತಿಳಿಸಿದನು, ಮತ್ತು ಅವನು ಯಾವುದೇ ವ್ಯಕ್ತಿಯಾದರೂ ಕೇಳುವ ಅತ್ಯಂತ ಪ್ರಾಮುಖ್ಯವಾದ ಪ್ರಶ್ನೆಯನ್ನೇ ಕೇಳಿದನು. ಒಂದುವೇಳೆ ಅಧಿಕ ಜನರು

ಯಥಾರ್ಥವಾಗಿ ದೇವ ಸೇವಕರಲ್ಲಿ ಇದನ್ನು ಕೇಳಿಕೊಳ್ಳುವದಾದರೆ, ಅಧಿಕ ಜನರು ದೇವರ ಕುರಿತಾದ ತಿಳುವಳಿಕೆಗೆ ಬರಬಹುದಾಗಿದೆ. ಕೇಳದೆ ಇರುವದು ಮತ್ತು ಉತ್ತರವನ್ನು ತಿಳಿದುಕೊಳ್ಳಲು ಬಯಸದೆ ಇರುವದು, ಜನರನ್ನು ಅಂಧಕಾರದಲ್ಲಿಯೇ ಇರಿಸುತ್ತದೆ. **31**

**16:31** ರಕ್ಷಣೆಯ ಮಾರ್ಗವನ್ನು ತಿಳಿದುಕೊಳ್ಳಬೇಕೆಂದು ಬಯಸುವ ಯಾರಿಗೇ ಆದರೂ ಉತ್ತರ ಇಲ್ಲಿ ಕೊಡಲಾಗಿದೆ. ಕರ್ತನಾದ ಯೇಸು ಕ್ರಿಸ್ತನು ಮತ್ತು ಆತನ ಸಂದೇಶಕರು ಮತ್ತೆಮತ್ತೆ ತಿಳಿಸಿರುವ ಉತ್ತರವೇ ಆಗಿದೆ – 13:39; ಯೋಹಾನ 1:12; 3:16,36; 5:24; 6:47; ರೋಮಾ 5:1; ಗಲಾ 2:16; ಎಫೆ 2:8-9. ನಿಜವಾದ ನಂಬಿಕೆ ಪಶ್ಚಾತ್ತಾಪದ ಮೂಲಕ ಪ್ರಾರಂಭವಾಗುತ್ತದೆ. ಪೌಲನು ಇಲ್ಲಿ ಪಶ್ಚಾತ್ತಾಪದ ಬಗ್ಗೆ ಮಾತನಾಡಿಲ್ಲ ಯಾಕಂದರೆ ಆ ವ್ಯಕ್ತಿ ಪಶ್ಚಾತ್ತಾಪಪಡುತ್ತಿರುವದು ಸ್ಪಷ್ಟವಾಗಿತ್ತು. ಜನರು ಪಶ್ಚಾತ್ತಾಪಪಡುವ ಸಂದರ್ಭ ಇರುವಾಗ, ದೇವರ ಸೇವಕರು ತಪ್ಪದೆ ಅವರಿಗೆ ತಿಳಿಸಿದರು – 2:38; 17:30; ಮತ್ತಾಯ 3:2. ಯಾರೆಲ್ಲಾ ಪಶ್ಚಾತ್ತಾಪಪಡುತ್ತಿದ್ದಾರೋ ಅವರಿಗಿರುವ ಪದ "ನಂಬಿರಿ" ಯಾರೆಲ್ಲಾ ಪಶ್ಚಾತ್ತಾಪಪಡುತ್ತಿಲ್ಲವೋ ಅವರಿಗಿರುವ ಪದ "ಪಶ್ಚಾತ್ತಾಪಪಡಿರಿ." ಪೌಲನು ಆ ಮನುಷ್ಯನ ಕುಟುಂಬದವರ ಕುರಿತಾಗಿಯೂ ಮಾತನಾಡಿದ್ದಾನೆ. ನಂಬಿಕೆಯಿರುವಾದ ದೇವರು ಕುಟುಂಬದವರೆಲ್ಲರನ್ನೂ ರಕ್ಷಿಸುವದರಲ್ಲಿ ಸಂತೋಷಿಸುತ್ತಾನೆ – 11:14; ಆದಿ 7:1; ಯೆಹೋ 2:11-13; 6:22-23; ಇಬ್ರಿ 11:7. **32**

**16:32** ಅವರು ಆ ಮನುಷ್ಯನಿಗೆ ಒಂದೋ ಅಥವಾ ಎರಡೋ ದೇವರ ವಾಕ್ಯಗಳನ್ನು ಕೊಡುವದಕ್ಕಿಂತ ಹೆಚ್ಚಿನ ಕಾರ್ಯವನ್ನು ಮಾಡಿದರು – ಅವರು ಅವನಿಗೆ ಸುವಾರ್ತೆಯನ್ನು ವಿವರಿಸಿದರು. **33-34**

**16:33-34** ಅವನು ಪಶ್ಚಾತ್ತಾಪಕ್ಕೆ ಅರ್ಹವಾದ ಫಲಗಳನ್ನು ತೋರಿಸಿದನು (ಮತ್ತಾಯ 3:8) ಮತ್ತು ತಾನು ಮಾಡಿದ ಕಾರ್ಯದ ಮೂಲಕ ತನ್ನ ನಂಬಿಕೆ ಹಾಗೂ ತನ್ನ ಹೃದಯದಲ್ಲಾಗಿರುವ ಬದಲಾವಣೆಯನ್ನು ತೋರಿಸಿದನು (ಯಾಕೋಬ 2:14-19). ನಂಬಿಕೆ ಮತ್ತು ಸಂತೋಷದ ನಡುವೆಯಿರುವ ವ್ಯತ್ಯಾಸವನ್ನು ಮತ್ತು 34 ಹಾಗೂ 27-29 ವಚನಗಳ ನಡುವೆಯಿರುವ ವ್ಯತ್ಯಾಸವನ್ನು ಗಮನಿಸಿರಿ. ಜನರ ಜೀವಿತಗಳಲ್ಲಿ ಈ ಕಾರ್ಯಗಳನ್ನು ಕ್ರಿಸ್ತನು ಮಾಡುತ್ತಾನೆ ಮತ್ತು ಮಾಡಲು ಶಕ್ತನಾಗಿದ್ದಾನೆ – 2 ಕೊರಿಂಥ 5:17. **35**

**16:35** ಪೌಲ ಮತ್ತು ಸೀಲನು ಪಟ್ಟಣದ ಸಮಾಧಾನವನ್ನು ಹಾಳುಮಾಡುತ್ತಿದ್ದಾರೆ ಎಂದು ಅವರು ನೆನೆಸಿದ್ದರಿಂದ ತಾವು ಅವರಿಗೆ ಅಧಿಕವಾದ ಶಿಕ್ಷೆಯನ್ನು ಕೊಟ್ಟಿದ್ದೇವೆ ಎಂಬದಾಗಿ ಅವರು ಅಂದುಕೊಂಡರು. **37**

**16:37** ಪೌಲನು ಸೇಡು ತೀರಿಸಿಕೊಳ್ಳಲು ಬಯಸಲಿಲ್ಲ ಅಥವಾ ತನ್ನ ಹಕ್ಕುಗಳಿಗಾಗಿ ಹೋರಾಡಲಿಲ್ಲ. ಆದರೆ ಅಧಿಪತಿಗಳು ಸಾರ್ವಜನಿಕ ಅಪರಾಧವನ್ನು ಮಾಡಿದ್ದರು, ಆದ್ದರಿಂದ ಅವರು ಅದನ್ನು ಸಾರ್ವಜನಿಕವಾಗಿಯೇ ಒಪ್ಪಿಕೊಳ್ಳಬೇಕೆಂದು ಪೌಲನು

ಹೇಳಿದನು. ಅವನು ತನ್ನ ಹಿತವನ್ನು ಚಿಂತಿಸಲಿಲ್ಲ, ಬದಲಾಗಿ ಅವರ ಮತ್ತು ಸುವಾರ್ತೆಯ ಹಿತವನ್ನು ಚಿಂತಿಸಿದನು. **38**

**16:38** ರೋಮಾಪುರದ ಪ್ರಜೆಗಳನ್ನು ಹೊಡೆಯುವದು ನಿಯಮಕ್ಕೆ ವಿರುದ್ಧವಾಗಿತ್ತು – 22:25-29. ಪೌಲನು ಮತ್ತು ಸೀಲನು ರೋಮಾಪುರದ ಪ್ರಜೆಗಳು ಎಂದು ಅವರಿಗೆ ಗೊತ್ತಿರಲಿಲ್ಲ, ಆದರೆ ಒಂದುವೇಳೆ ಅವರು ನಿಜವಾಗಿಯೂ ಕಾನೂನು ಪಾಲನೆ ಮಾಡುವವರಾಗಿದ್ದರೆ ಅವರನ್ನು ಹೊಡೆಸುವ ಮೊದಲು ವಿಚಾರಿಸಿ ತಿಳಿದುಕೊಳ್ಳಬಹುದಾಗಿತ್ತು.

# 17 1

**17:1** ಥೆಸಲೊನಿಕವು ಪ್ರಾಮುಖ್ಯ ಪಟ್ಟಣವಾಗಿತ್ತು ಸುಮಾರು 150 ಕಿಲೋಮೀಟರ್ ದೂರ ಫಿಲಿಪ್ಪಿಗೆ ಪೂರ್ವದಲ್ಲಿತ್ತು.

*"ಸಭಾಮಂದಿರ"*– ಮತ್ತಾಯ 4:23. **2**

**17:2** 13:5,14; 14:1 ನೋಡಿರಿ. **3**

**- 17:3** ಲೂಕ 24:25-27,45-47. **4**

**17:4** 10:2; 13:50 ನೋಡಿರಿ. **5**

**17:5** 5:17; 13:45 ನೋಡಿರಿ. **6-7**

**17:6-7** 16:20-21; ಯೋಹಾನ 19:12-16 ನೋಡಿರಿ. ಸತ್ಯವನ್ನು ಬೋಧಿಸುವವರಿಗೆ ಸಾಮಾನ್ಯವಾಗಿ ತೊಂದರೆ ಮಾಡುವವರು ಎಂಬ ಹೆಸರನ್ನು ಕೊಡಲಾಗುತ್ತದೆ. ನಿಜವಾಗಿಯೂ ಹೇಳುವದಾದರೆ ಅವರು ಸಮಾಧಾನಪಡಿಸುವವರಾಗಿದ್ದಾರೆ – ದೇವರು ಮತ್ತು ಮನುಷ್ಯರ ನಡುವೆ ಇರಬೇಕಾದ ಸಮಾಧಾನದ ಬಗ್ಗೆ ಬೋಧಿಸುವವರಾಗಿದ್ದಾರೆ (ಮತ್ತಾಯ 5:9; 10:34-36; 2 ಕೊರಿಂಥ 5:18-20). ಲೋಕವು ತನಗೆ ಅವಶ್ಯವಾಗಿರುವದನ್ನು ಬೇಡವೆನ್ನುತ್ತದೆ ಮತ್ತು ಅದನ್ನು ಯಾರು ಕೊಡುತ್ತಾರೋ ಅವರನ್ನು ದ್ವೇಷಿಸುತ್ತದೆ. **10**

**17:10** ಬೆರೋಯ ಸುಮಾರು 100 ಕಿಲೋಮೀಟರ್ ದೂರ ಥೆಸಲೊನಿಕದ ಪಶ್ಚಿಮಕ್ಕಿದೆ. **11-12**

**17:11-12** *"ಕುಲೀನರು"*–ಎಂಬದಾಗಿ ಭಾಷಾಂತರ ಮಾಡಲಾಗಿರುವ ಗ್ರೀಕ್ ಪದದ ಮೂಲ ಅರ್ಥ ಶ್ರೀಮಂತ ಕುಟುಂಬದಲ್ಲಿ ಜನಿಸಿದವರು ಎಂಬದಾಗಿದೆ. ನಂತರದಲ್ಲಿ ಸದ್ಗುಣವುಳ್ಳವರು-ಹೊರಗಿನ ತೋರಿಕೆಗೆ ಇತರರಿಗೆ ಉದಾರವಾಗಿ ಕೊಡುವವರು, ಮೂಲ ಪೂರ್ವಾಪರಗಳಿಂದ ಸ್ವತಂತ್ರರು, ಸತ್ಯ ಮತ್ತು ವಾಸ್ತವಗಳಿಗೆ ತೆರೆದ ಹೃದಯವುಳ್ಳವರು ಎಂಬ ಅರ್ಥವಾಗಿ ಮಾರ್ಪಟ್ಟಿತು. ಬೆರೋಯದಲ್ಲಿರುವ ಈ ಜನರು ತಮ್ಮ ಸದ್ಗುಣವನ್ನು ಹೀಗೆ ವ್ಯಕ್ತಪಡಿಸಿದರು: ಯೇಸು ಕ್ರಿಸ್ತನ ಸೇವಕರ ಮಾತುಗಳನ್ನು ಆಸಕ್ತಿಯಿಂದ

ಕೇಳಿಸಿಕೊಳ್ಳುವದು, ಅವರು ಹೇಳುತ್ತಿರುವದು ಸರಿಯೋ ಅಲ್ಲವೋ ಎಂದು ತಿಳಿಯಲು ಸತ್ಯವೇದವನ್ನು ಹುಡುಕುವದು, ಮತ್ತು ಸತ್ಯವು ಸ್ಪಷ್ಟವಾದಾಗ ಅದನ್ನು ನಂಬುವದು. ನಾವೆಲ್ಲರೂ ಪೂರ್ವಾಪರಗಳನ್ನು, ಮನಸ್ಸಿನ ಚಂಚಲತೆಯನ್ನು, ಇತರರ ಭಯ ಮತ್ತು ಸತ್ಯದ ಭಯವನ್ನು ತೆಗೆದುಹಾಕೋಣ ಮತ್ತು ಬೆರೋಯದವರ ಮಾದರಿಯನ್ನು ಅನುಸರಿಸೋಣ. ಇವುಗಳಿಂದ ನಮಗೆ ಉಜ್ವಲವಾದ ಭವಿಷ್ಯವು ದೊರೆಯುತ್ತದೆ. **13**

**17:13** 14:19; ಮತ್ತಾಯ 23:13 ನೋಡಿರಿ. ಜನರು ಹೊಟ್ಟೆಕಿಚ್ಚು ಮತ್ತು ಪೂರ್ವಾಪರ ಆಲೋಚನೆಗಳ ಮೂಲಕ ಏನೆಲ್ಲಾ ಕೆಟ್ಟ ಕೆಲಸಗಳನ್ನು ಮಾಡುತ್ತಾರೆ. **14**

**17:14** ಪೌಲನು ಗುಂಪಿನ ನಾಯಕನಾಗಿದ್ದನು ಮತ್ತು ಪ್ರಮುಖ ಬೋಧಕನಾಗಿದ್ದನು ಆದ್ದರಿಂದ ದೊಡ್ಡ ಅಪಾಯಕ್ಕೆ ಗುರಿಯಾದನು. ಆದರೆ ಅವನು ಭಯದಿಂದ ಓಡಿಹೋಗಲಿಲ್ಲ (14:6,19,20), ಬದಲಾಗಿ ಅದುವೇ ಬುದ್ಧಿವಂತಿಕೆ ಎಂಬದಾಗಿ ಅಂದುಕೊಂಡನು. **15**

**17:15** ಅಥೇನೆಯು ಸುಮಾರು 300 ಕಿಲೋಮೀಟರ್ ಥೆಸಲೋನಿಕದ ದಕ್ಷಿಣದಲ್ಲಿತ್ತು. ಅದು ಭೂಮಿಯ ಮೇಲೆ ಅತ್ಯಂತ ಪ್ರಸಿದ್ಧವಾದ ಪಟ್ಟಣಗಳಲ್ಲಿ ಒಂದಾಗಿತ್ತು, ಅದು ಪ್ರಜಾಪ್ರಭುತ್ವದ ಉಗಮ ಸ್ಥಾನ, ಕಲೆ, ಭಾಷೆ, ಸಾಹಿತ್ಯ, ವಿಜ್ಞಾನ ಮತ್ತು ತತ್ವಜ್ಞಾನದ ತವರು ಮನೆಯಾಗಿತ್ತು. ಅದು ಸಾಕ್ರೇಟೀಸ್ ಮತ್ತು ಪ್ಲಾಟೋರಂಥವರ ಸ್ವಂತ ಸ್ಥಳವಾಗಿತ್ತು ಮತ್ತು ಅರಿಸ್ಟಾಟಲ್, ಎಪಿಕುರಸ್ ಹಾಗೂ ಜೀನೋರ ದತ್ತು ಮನೆಯಾಗಿತ್ತು. ಪೌಲನ ಕಾಲದಲ್ಲಿ ರೋಮನ್ನರು ಅಲ್ಲಿ ಆಳ್ವಿಕೆ ಮಾಡುತ್ತಿದ್ದರು ಮತ್ತು ಅದರ ವೈಭವವು ಗತಿಸಿಹೋಗಿತ್ತು ಆದರೂ ಅದು ಸಾಂಸ್ಕೃತಿಕ ಮತ್ತು ಜ್ಞಾನದ ಕೇಂದ್ರವಾಗಿತ್ತು. **16**

**17:16** ಪೌಲನು ಅಥೇನೆಯ ಮಾನವ ಪ್ರಭಾವಗಳ ನಡುವೆ ಪಾಪಿಗಳಾಗಿರುವ ಜನರು ಸುಳ್ಳು ಧರ್ಮಗಳಿಗೆ ಆಕರ್ಷಿತರಾಗಿರುವದನ್ನು ಕಂಡನು. ವಿಗ್ರಹಗಳ ನೋಟವು ಅವನನ್ನು ಬಹಳವಾಗಿ "ಕುದಿಯುವಂತೆ" ಮಾಡಿತು ("ಅವನನ್ನು ಬಹಳವಾಗಿ ಕೆರಳಿಸಿತು" ಅಥವಾ "ಅವನು ಕೋಪಗೊಳ್ಳುವಂತೆ ಮಾಡಿತು" ಅಥವಾ "ಬೇಸರಗೊಳಿಸಿತು" ಎಂಬದಾಗಿಯೂ ಈ ಗ್ರೀಕ್ ಪದವನ್ನು ಭಾಷಾಂತರ ಮಾಡಬಹುದು. ಇದು ಬಲವಾದ ಭಾವನೆಯನ್ನು ಸೂಚಿಸುತ್ತದೆ). ಇದಕ್ಕೆ ಕಾರಣ ವಿಗ್ರಾಹಾರಾಧನೆಯ ವಿಷಯದಲ್ಲಿ ದೇವರ ಪ್ರಕಟನೆ ಏನು ಎಂಬದು ಅವನಿಗೆ ಗೊತ್ತಿತ್ತು ಮತ್ತು ಅವನು ಯೇಸು ಕ್ರಿಸ್ತನನ್ನು ಹಾಗೂ ದೇವರ ಪ್ರಭಾವವನ್ನು ಮತ್ತು ವಿಗ್ರಹಾರಾಧನೆಯಲ್ಲಿ ಮುಳುಗಿ ಹೋಗಿದ್ದ ಜನರನ್ನು ಅವನನ್ನು ಬಹಳವಾಗಿ ಪ್ರೀತಿಸುತ್ತಿದ್ದನು (ವಿಮೋ 20:1-6; ಕೀರ್ತನೆ 115:2-8; ಯೆಶಾಯ 40:18-26; 44:6-11; 2 ಕೊರಿಂಥ 5:13-14). ರೋಮಾ 1:18-25 ರಲ್ಲಿ ಪೌಲನು ಪ್ರಭಾವ ಮತ್ತು ಸೌಂದರ್ಯದ ಮಿನುಗುವ ಕಾರ್ಯಗಳ ಹಿಂದಿರುವ ಕಪ್ಪು ಸತ್ಯವನ್ನು ಪೌಲನು ಪ್ರಕಟಿಸಿದನು. ಅಥೇನೆಯಲ್ಲಿ ಅಧಿಕ ಜ್ಞಾನ ಮತ್ತು ಸಾಮರ್ಥ್ಯವಿದ್ದರೂ ಆತ್ಮೀಕ ಅಂಧಕಾರ

ನೆಲೆಗೊಂಡಿದ್ದರಿಂದ ಅವನ ಮನಸ್ಸು ಕುದಿಯಿತು – ಇಂದು ಅಂಥ ಪರಿಸ್ಥಿತಿಯನ್ನು ನಾವು ಎಲ್ಲೆಲ್ಲಿಯೂ ನೋಡಬಹುದಾಗಿದೆ. **17**

**17:17** ತನಗೆ ಅವಕಾಶ ದೊರೆಯುವಾಗ ಸತ್ಯವನ್ನು ಬೋಧಿಸುತ್ತಿದ್ದ ಅವನಿಗೆ ಇದು ದೊಡ್ಡ ಅವಕಾಶವಾಗಿ ಕಾಣಿಸಿತು. 4:20; ಯೆರೆ 20:9 ರೊಂದಿಗೆ ಹೋಲಿಸಿ ನೋಡಿರಿ. **18**

**17:18** (ಕ್ರಿ.ಪೂ 241-270 ರಲ್ಲಿ ಜೀವಿಸಿದ) ಎಪಿಕುರಸ್ ತತ್ವವು ಸಂತೋಷವೇ ಜೀವನದ ಅಂತ್ಯ ಎಂದು ಹೇಳುತ್ತದೆ. ಅವನ ದೃಷ್ಟಿಯಲ್ಲಿ ನಿಜವಾದ ಸಂತೋಷವು ದೈಹಿಕ ಸಂತೋಷವಲ್ಲ, ಬದಲಾಗಿ ಮನಸ್ಸಿನ ಸಂತೋಷ, ನೋವು, ಅಡಚಣೆಯನ್ನುಂಟು ಮಾಡುವ ಬಯಕೆಗಳು, ಹೆದರಿಕೆಗಳು ಮತ್ತು ಮರಣದ ಕುರಿತಾದ ಚಿಂತೆಯಿಂದ ಬಿಡುಗಡೆ ಹೊಂದಿರುವ ಜೀವನವಾಗಿದೆ. ದೇವರುಗಳು ಅನೇಕರಿದ್ದರೂ ಯಾರೊಬ್ಬರೂ ಮಾನವರ ಬಗ್ಗೆ ಚಿಂತಿಸುವದಿಲ್ಲ ಎಂಬದು ಅವನ ನಂಬಿಕೆಯಾಗಿತ್ತು. ಆದರೆ ಪೌಲನ ಕಾಲದಲ್ಲಿ ಎಪಿಕುರಿಯನರು ಎಪಿಕುರಿಯಸ್ ನ ಬೋಧನೆಗಳನ್ನು ತಕ್ಕ ಮಟ್ಟಿಗೆ ತಿರುಚಿದ್ದರು ಮತ್ತು ದೈಹಿಕ ಸಂತೋಷಕ್ಕೆ ಆದ್ಯತೆ ಕೊಟ್ಟು ಲೈಂಗಿಕ ಕಾರ್ಯಗಳನ್ನು ಘನಪಡಿಸಿದ್ದರು. (ಕ್ರಿ.ಪೂ 340-260 ರಲ್ಲಿ ಜೀವಿಸಿದ) ಜಿನೋ ಸ್ಟೋಯಿಕ್ ತತ್ವವನ್ನು ಸ್ಥಾಪಿಸಿದನು. ಮಾನವನು ಪ್ರಕೃತಿಯೊಂದಿಗೆ ಸಮಾಧಾನದಿಂದ ಜೀವಿಸಬೇಕು ಮತ್ತು ಆ ಕಾರಣ ಅಥವಾ ರಚನೆಯೇ ಪ್ರಕೃತಿಯಲ್ಲಿ ದೊಡ್ಡ ಸಂಗತಿಯಾಗಿದೆ ಎಂಬದಾಗಿ ಇವನು ಕಲಿಸುತ್ತಿದ್ದನು. ದೈವಶಾಸ್ತ್ರದಲ್ಲಿ ಇವನು ಅದ್ವೈತ ವಾದಿಯಾಗಿದ್ದನು (ದೇವರು ಮತ್ತು ಲೋಕ ಒಟ್ಟುಗೂಡಿದೆ, ಒಂದನ್ನು ಬಿಟ್ಟು ಒಂದು ಇರಲು ಆಗುವದಿಲ್ಲ ಎಂದು ಯೋಚಿಸುವದು). ದೇವರು ಲೋಕದ ಆತ್ಮ ಎಂದು ಇವನು ಅಂದುಕೊಂಡಿದ್ದನು. ಕಾರಣಗಳನ್ನು ಕೊಡುವ ಮಾನವನ ಸಾಮರ್ಥ್ಯ ಮತ್ತು ಸ್ವಯಂಪೂರ್ಣತೆಗೆ ಇವನು ಆದ್ಯತೆ ಕೊಡುತ್ತಿದ್ದನು. ಈ ಇಬ್ಬರು ತತ್ವಜ್ಞಾನಿಗಳ ಕೆಲವು ಹಿಂಬಾಲಕರು ಪೌಲನನ್ನು ಕೋಪ ಮತ್ತು ಸಿನಿಕತೆಯಿಂದ ನೋಡಿದರು ಮತ್ತು ಅವನನ್ನು “ಮಾತಾಳಿ” ಎಂದು ಕರೆದರು. ತತ್ವಜ್ಞಾನ ಮತ್ತು ಪೌಲನ ಬೋಧನೆಯ ನಡುವೆ ಅವರಿಗೆ ಹೆಚ್ಚು ವ್ಯತ್ಯಾಸವೇನೂ ಗೊತ್ತಿರಲಿಲ್ಲ. ತತ್ವಜ್ಞಾನವು ವಾಸ್ತವವಾಗಿರುವ ಪ್ರಕೃತಿಯ ಬಗೆಗಿನ ಮಾನವನ ವಿಚಾರಗಳಾಗಿವೆ ಆದರೆ ಯೇಸು ಕ್ರಿಸ್ತನ ಸುವಾರ್ತೆಯು ವಾಸ್ತವದ ಬಗ್ಗೆ ದೇವರು ಕೊಟ್ಟಿರುವ ಪ್ರಕಟನೆಯಾಗಿದೆ ಮತ್ತು ಅದರ ಬೆಳಕಿನಲ್ಲಿ ಮಾನವನು ಏನು ಮಾಡಬೇಕು ಎಂಬದನ್ನು ತಿಳಿಸುತ್ತದೆ (1 ಕೊರಿಂಥ 1:17-28; ಕೊಲೊ 2:8 ರ ನೋಟ್ಸ್ ನೋಡಿರಿ). **19**

**17:19** ಅರಿಯೋಪಾಗವು ಅಥೇನೆಯ ಮುಖ್ಯ ನ್ಯಾಯಾಲಯವಾಗಿತ್ತು ಮತ್ತು ಧಾರ್ಮಿಕ ವಿಷಯಗಳಲ್ಲಿ ಹಿರಿಯರೆಲ್ಲರೂ ಸೇರಿ ತೀರ್ಮಾನ ತೆಗೆದುಕೊಳ್ಳುತ್ತಿದ್ದರು. ಪಟ್ಟಣದಲ್ಲಿ ಪೌಲನಿಗೆ ಬೋಧಿಸಲು ಅನುಮತಿ ಕೊಡುವ ಮತ್ತು ಅನುಮತಿ ಕೊಡದಿರುವ ಅಧಿಕಾರ ಈ ನ್ಯಾಯಾಲಯಕ್ಕಿತ್ತು. **21**

**17:21** ಬಹುತೇಕರು ಸತ್ಯವನ್ನು ಹುಡುಕುತ್ತಿರಲಿಲ್ಲ ಬದಲಾಗಿ ಆಲಂಕಾರಿಕ ವಿಷಯಗಳನ್ನು ಮಾತ್ರವೇ ಹುಡುಕುತ್ತಿದ್ದರು. **22**

**17:22** ಇದು ಸತ್ಯದ ವಿಷಯವಾಗಿದೆ ಆದರೆ ಅವರ ಧರ್ಮವು ವಾಸ್ತವ ಮತ್ತು ಸತ್ಯದ ಪ್ರಕಾರವಾಗಿರಲಿಲ್ಲ.

"*ಭಕ್ತಿವಂತರು*"– ಗ್ರೀಕ್ ಪದದ ನಿಜವಾದ ಅರ್ಥ "ಭಯವುಳ್ಳವರಾಗಿರುವದು ಅಥವಾ ದೇವರಿಗೆ ಭಕ್ತಿಯುಳ್ಳವರಾಗಿ ನಡೆದುಕೊಳ್ಳುವದು." **23**

**17:23** ಜನರು ರೋಮನ್ ಸಾಮ್ರಾಜ್ಯದಲ್ಲಿ ಇಂಥ ಬಲಿಪೀಠಗಳನ್ನು ಅನೇಕ ಸ್ಥಳಗಳಲ್ಲಿ ಮಾಡಿಸಿದ್ದರು. ತಮಗೆ ಸಹಾಯ ಮಾಡುವ ಅಥವಾ ನೋಯಿಸುವ ಕೆಲವು ದೇವರುಗಳನ್ನು ಅಥವಾ ದೇವರನ್ನು ಬಿಡಲು ಅವರಿಗೆ ಮನಸ್ಸಿರಲಿಲ್ಲ. ಪೌಲನು "ಅನ್ಯದೇಶದ ದೇವರನ್ನು" (ವ 18) ಪ್ರಚುರಪಡಿಸುತ್ತಿದ್ದಾನೆ ಎಂಬದಾಗಿ ತತ್ವಜ್ಞಾನಿಗಳು ಹೇಳಿದರು. "ಇಲ್ಲ" ನಾನು ಈ ಪಟ್ಟಣದಲ್ಲಿರುವ ಬಲಿಪೀಠದ ದೇವರ ಬಗ್ಗೆ ಮಾತನಾಡುತ್ತಿದ್ದೇನೆ – ಆತನು ಯಾರು ಎಂದು ನಿಮಗೆ ಗೊತ್ತಿಲ್ಲ ಆದರೆ ಆತನು ಮಾತ್ರವೇ ಸತ್ಯವಂತನು ಮತ್ತು ಜೀವಸ್ವರೂಪನಾಗಿದ್ದಾನೆ ಎಂಬದಾಗಿ ಪೌಲನು ಹೇಳಿದನು. **24**

**17:24** ನಿಜವಾದ ದೇವರೇ ಭೂಪರಲೋಕಗಳ ನಿರ್ಮಾಣಿಕನಾಗಿದ್ದಾನೆಯೇ ಹೊರತು ಯಾವುದೋ ರೀತಿಯ ಅದ್ವೈತ ವಾದಿ ದೈವತ್ವ ಅಥವಾ ಲೋಕದ ಆತ್ಮವಲ್ಲ ಎಂದು ಪೌಲನು ಹೇಳಿದನು. ಸತ್ಯವೇದದಲ್ಲಿ ದೇವರು ತನ್ನ ಕುರಿತು ಕೊಟ್ಟಿರುವ ಪ್ರಕಟನೆಗಳ ಆಧಾರದ ಮೇರೆಗೆ ಅವನು ಇದನ್ನು ದೃಢಪಡಿಸಿದನು-ಆದಿ 1:1; ವಿಮೋ 20:11; ಕೀರ್ತನೆ 8:3; 19:1; ಯೆಶಾಯ 40:28; 42:5; 45:12,18. ಮತ್ತು ನಿಜವಾದ ದೇವರು ಮಾನವರು ನಿರ್ಮಿಸಿರುವ ದೇವಾಲಯಗಳಲ್ಲಿ ಜೀವಿಸುವದಿಲ್ಲ – 1 ಅರಸು 8:27; ಯೆಶಾಯ 66:1-2. **25**

**17:25** ನಿಜವಾದ ದೇವರು ಮತ್ತು ವಿಗ್ರಹಗಳ ನಡುವೆಯಿರುವ ವ್ಯತ್ಯಾಸವನ್ನು ಪೌಲನು ವಿವರಿಸಿದನು. ವಿಗ್ರಹಗಳನ್ನು ಮನುಷ್ಯರೇ ಜೋಪಾನವಾಗಿ ನೋಡಿಕೊಳ್ಳಬೇಕು. ದೇವರಿಗೆ ಯಾವ ಅವಶ್ಯಕತೆಗಳೂ ಇಲ್ಲ (ಕೀರ್ತನೆ 50:9-15) – ಆತನು ಮಾನವರೆಲ್ಲರಿಗೆ ಬೇಕಾಗಿರುವದನ್ನೆಲ್ಲಾ ಒದಗಿಸುತ್ತಾನೆ (14:15-17; 1 ತಿಮೊ 6:17). **26**

**17:26** ಒಬ್ಬ ಮನುಷ್ಯನು ಅಂದರೆ ಆದಾಮನು (ಆದಿ 1:26-28). ದೇವರು ಈಗಾಗಲೇ ಜನಾಂಗಗಳ ಏಳುವಿಕೆ ಮತ್ತು ಬೀಳುವಿಕೆ, ಆತನನ್ನು ಕಂಡುಕೊಳ್ಳಲು ದೊರೆಯುವ ಅವಕಾಶಗಳ ಸಮಯ ಮತ್ತು ಅವರು ಯಾವ ಮೇರೆಗಳಲ್ಲಿ ಜೀವಿಸಬೇಕು ಎಂಬದನ್ನು ನಿರ್ಧರಿಸಿದ್ದಾನೆ. **27**

**17:27** ಭೂಲೋಕದ ಎಲ್ಲಾ ಜನಾಂಗಗಳೊಂದಿಗೆ ದೇವರು ಒಳ್ಳೆಯ ಉದ್ದೇಶದೊಂದಿಗೆ ಕಾರ್ಯ ಮಾಡುವವನಾಗಿದ್ದಾನೆ. "ಕಂಡುಕೊಂಡಾರೇನೋ" ಎಂಬದನ್ನು ಕತ್ತಲೆಯಲ್ಲಿ

“ತಡಕಾಡುವರೇನೋ” ಎಂಬದಾಗಿ ಭಾಷಾಂತರ ಮಾಡಬಹುದು (ಯೆಶಾಯ 60:2; ಯೋಹಾನ 12:46). ಆದರೆ ದೇವರು ಮಾನವರಿಗೆ ಬಹಳಷ್ಟು ಬೆಳಕು ಕೊಟ್ಟಿದ್ದಾನೆ ಒಂದುವೇಳೆ ಅವರು ಬಯಸಿದರೆ ಆತನನ್ನು ಹುಡುಕಿ ಕಂಡುಕೊಳ್ಳಬಹುದು (ಯೋಹಾನ 1:9; ರೋಮಾ 1:19-20; ಕೀರ್ತನೆ 19:1-4). **28**

**17:28** ತನ್ನ ಬರವಣಿಗೆಯು ಜನರಿಗೆ ಚಿರಪರಿಚಿತವಾಗಿದ್ದ ಒಬ್ಬ ವ್ಯಕ್ತಿಯ ಹಿಂದಿನ ಸಮಯದ ಎರಡು ಪದ್ಯಗಳನ್ನು ಪೌಲನು ಇಲ್ಲಿ ಉಪಯೋಗಿಸಿದ್ದಾನೆ. ಪೌಲನು ಅವನು ಬರೆದಿರುವ ಪದ್ಯಗಳನ್ನೆಲ್ಲಾ ಉಪಯೋಗಿಸುವ ಅವಶ್ಯಕತೆಯಿರಲಿಲ್ಲ ಆದರೆ ಅವರ ಬರವಣಿಗೆಯಿಂದಲೇ ಆತನು ಸತ್ಯವನ್ನು ತಿಳಿಸಿದನು ಮತ್ತು ಅದನ್ನು ಕೇಳುವವರಿಗೆ ಸತ್ಯವು ಮನಮುಟ್ಟುವಂತೆ ಮಾಡಲು ಅದನ್ನು ಉಪಯೋಗಿಸಿಕೊಂಡನು. ದೇವರು ಯಾವ ವ್ಯಕ್ತಿಗೂ ದೂರವಾಗಿಲ್ಲ ಬದಲಾಗಿ ಎಲ್ಲರನ್ನೂ ಸುತ್ತುವರೆಯುವವನಾಗಿದ್ದಾನೆ. ಆತನನ್ನು ಹುಡುಕಲು ನಾವು ಯಾತ್ರೆಗೂ ಹೋಗುವ ಅವಶ್ಯಕತೆಯಿಲ್ಲ. ಮಾನವರು ತಮ್ಮ ಆಲೋಚನೆಗಳನ್ನು ಒಪ್ಪಿಸುವಾಗ ಮತ್ತು ಪೂರ್ಣಹೃದಯದಿಂದ ಆತನನ್ನು ಯಥಾರ್ಥವಾಗಿ ಹುಡುಕುವಾಗ ಸೃಷ್ಟಿಕರ್ತನನ್ನು ಕಂಡುಕೊಳ್ಳಬಹುದಾಗಿದೆ. ಯೆರೆ 29:13 ರೊಂದಿಗೆ ಹೋಲಿಸಿ ನೋಡಿರಿ. **29**

- **17:29** ಆದಿ 1:27; ವಿಮೋ 20:4; ಯೆಶಾಯ 40:19,25. **30**

**17:30** ಆತನು ವಿಗ್ರಹಾರಾಧನೆಯನ್ನು “ಅಜ್ಞಾನ” ಎಂಬದಾಗಿ ಕರೆದಿರುವದನ್ನು ಗಮನಿಸಿರಿ. ರೋಮಾ 1:21-23; ಯೆಶಾಯ 44:9,18,20 ರೊಂದಿಗೆ ಹೋಲಿಸಿ ನೋಡಿರಿ. ಅಥೇನೆಯಲ್ಲಿ ಅದ್ಭುತವಾದ ಕಲೆಯಿಂದ ಕೂಡಿದ ದೇವಾಲಯಗಳಿದ್ದವು ಮತ್ತು ಉನ್ನತ ಕಲೆ ಎಂದು ಪರಿಗಣಿಸಲ್ಪಟ್ಟ ವಿಗ್ರಹಗಳಿದ್ದವು. ಪೌಲನಿಗೆ ಮತ್ತು ಪೌಲನ ಕರ್ತನಿಗೆ ಅವೆಲ್ಲವೂ ಅಥೇನೆಯಲ್ಲಿ ಜ್ಞಾನದ ಕೊರತೆಯಿರುವದಕ್ಕೆ ಪುರಾವೆಗಳಾಗಿದ್ದವು. ಅವರ ತತ್ವಜ್ಞಾನವು, ದೇವರ ಬಗೆಗಿನ ತಿಳುವಳಿಕೆಗೆ ನಡೆಸಲು ವಿಫಲವಾಯಿತು, ಅದು ಅದ್ಭುತವಾದ ಅಜ್ಞಾನವಲ್ಲದೆ ಬೇರೇನೂ ಅಲ್ಲವಾಗಿತ್ತು (1 ಕೊರಿಂಥ 1:19-25 ರೊಂದಿಗೆ ಹೋಲಿಸಿ ನೋಡಿರಿ). ಅಂಥ ಮಾತುಗಳು ಕೇಳುಗರನ್ನು ಮೆಚ್ಚಿಸಿರುವದಿಲ್ಲ, ಆದರೆ ಪೌಲನು ಈಗ ಪ್ರಾರಂಭದಲ್ಲಿ ತಾನು ಉದ್ದೇಶಿಸಿದ ವಿಷಯಕ್ಕೆ ಬಂದನು – ಅವರ ಪಶ್ಚಾತ್ತಾಪ. ಪಶ್ಚತ್ತಾಪದ ಕುರಿತಾದ ನೋಟ್ಸ್ ಗಾಗಿ ಮತ್ತಾಯ 3:2,8; ಲೂಕ 13:1-5 ನೋಡಿರಿ. ದೇವರು ಎಲ್ಲಾ ಜನರಿಗೆ – ಎಲ್ಲಾ ತತ್ವಜ್ಞಾನಿಗಳಿಗೆ, ಎಲ್ಲಾ ಧಾರ್ಮಿಕ ಪಂಗಡದವರಿಗೆ, ಎಲ್ಲಾ ವಿಗ್ರಹಾರಾಧಕರಿಗೆ, ವಿಜ್ಞಾನವನ್ನು ಕಲಿಯುವ ಎಲ್ಲಾ ಜ್ಞಾನಿಗಳಿಗೆ, ಅಧಿಕಾರದಲ್ಲಿರುವ ಎಲ್ಲಾ ಜನರಿಗೆ, ಎಲ್ಲಾ ಸಾಧಾರಣ ಜನರಿಗೆ, ಎಲ್ಲಾ ಕಡೆಗಳಲ್ಲಿರುವ, ಎಲ್ಲಾ ಜನರಿಗೆ ಪಶ್ಚಾತ್ತಾಪಪಡುವಂತೆ ದೇವರು ಆಜ್ಞಾಪಿಸಿದ್ದಾನೆ. ಆತನೇ ಹೀಗೆ ಆಜ್ಞಾಪಿಸಿದ್ದಾನೆ, ಯಾಕಂದರೆ ಎಲ್ಲರೂ ಪಾಪಿಗಳಾಗಿದ್ದೇವೆ (ರೋಮಾ 3:23), ಎಲ್ಲರೂ ಪಾಪದಿಂದ ರಕ್ಷಣೆ ಹೊಂದಬೇಕಾಗಿದೆ,

ಮತ್ತು ಆತನು ಎಲ್ಲರನ್ನೂ ರಕ್ಷಿಸಲು ಬಯಸುವವನಾಗಿದ್ದಾನೆ (ಯೋಹಾನ 3:16; 1 ತಿಮೊ 2:4-5; 2 ಪೇತ್ರ 3:9). **31**

**17:31** ದೇವರ ನ್ಯಾಯತೀರ್ಪಿನ ಬಗ್ಗೆ ತಿಳಿಯಲು ಮತ್ತಾಯ 10:15; 11:22,24; 12:36; ರೋಮಾ 2:2; 14:10; 2 ಪೇತ್ರ 2:9; ಪ್ರಕ 14:7; 20:11-15 ನೋಡಿರಿ. ಯೇಸು ಕ್ರಿಸ್ತನ ಪುನರುತ್ಥಾನದ ಬಗ್ಗೆ ತಿಳಿಯಲು ವ 18; 2:24; 3:15; 4:10; 13:30; ಮತ್ತಾಯ 28:6 ನೋಡಿರಿ. ಯೇಸು ಕ್ರಿಸ್ತನ ಪುನರುತ್ಥಾನವೇ ದೇವರು ಲೋಕಕ್ಕೆ ನ್ಯಾಯ ತೀರಿಸುತ್ತಾನೆ ಎಂಬದಕ್ಕೆ ಪುರಾವೆಯಾಗಿದೆ ಎಂಬದನ್ನು ಗಮನಿಸಿರಿ. **32**

**17:32** ಯಾರೆಲ್ಲಾ ಅಪಹಾಸ್ಯ ಮಾಡಿದರೋ ಅವರು ತಮ್ಮ ಅಜ್ಞಾನ ಮತ್ತು ಸತ್ಯವನ್ನು ತಿಳಿದುಕೊಳ್ಳಬೇಕೆಂಬ ಬಯಕೆಯ ಕೊರತೆಯನ್ನು ವ್ಯಕ್ತಪಡಿಸಿದರು. **34**

**17:34** ಇತರೆ ಸ್ಥಳಗಳಲ್ಲಿ ಸುವಾರ್ತೆಯು ಫಲ ಕೊಟ್ಟ ಹಾಗೆ ಅಥೇನೆಯಲ್ಲಿ ಹೆಚ್ಚಾಗಿ ಫಲ ಕಾಣಲಿಲ್ಲ. ಗಂಭೀರವಾಗಿ ವಿಚಾರ ಮಾಡಲು ಕೆಲವರು ಮಾತ್ರವೇ ಮನಸ್ಸು ಕೊಟ್ಟರು ಉಳಿದವರು ತಾವೇ ಬುದ್ಧಿವಂತರೆಂಬ ಗರ್ವವನ್ನು ತೋರ್ಪಡಿಸಿದರು (ವ 18,21,32). ಆದರೆ ಪೌಲನು ಪಟ್ಟಣದ ಹಿರೀಸಭೆಯ ಸದಸ್ಯನನ್ನು ಗೆಲ್ಲುವಲ್ಲಿ ಸಫಲನಾದನು.

# 18 1

**18:1** ರೋಮ್, ಅಲೆಕ್ಸಾಂಡ್ರಿಯ ಮತ್ತು ಅಂತಿಯೋಕ್ಯದ ನಂತರ ಕೊರಿಂಥವು ರೋಮ್ ಸಾಮ್ರಾಜ್ಯದ ನಾಲ್ಕನೇ ದೊಡ್ಡ ಪಟ್ಟಣವಾಗಿತ್ತು. ಅದು ಅಥೇನೆಯಿಂದ ಸುಮಾರು 75 ಕಿಲೊಮೀಟರ್ ದೂರ ಪಶ್ಚಿಮ ಭಾಗದಲ್ಲಿತ್ತು. ಅದು ಅಖಾಯದ (ಗ್ರೀಸ್) ರಾಜಧಾನಿ ಮತ್ತು ವ್ಯಾಪಾರಿ ಪಟ್ಟಣವಾಗಿತ್ತು ಮತ್ತು ಘೋರವಾದ ಅನೈತಿಕ ಕಾರ್ಯಗಳು ಅಲ್ಲಿ ನಡೆಯುತ್ತಿದ್ದವು. ಪೌಲನು ಕೊರಿಂಥಕ್ಕೆ ಬಂದಾಗ ಅವನ ಮನಸ್ಥಿತಿ ಹೇಗಿತ್ತು ಎಂಬದನ್ನು 1 ಕೊರಿಂಥ 2:1-5 ವಚನಗಳು ವಿವರಿಸುತ್ತವೆ. ಅಥೇನೆಯಲ್ಲಿ ಸೋಲಾಯಿತು ಬಹುಶಃ ಕೊರಿಂಥದಲ್ಲಿಯೂ ಬಹುತೇಕ ಜನರು ಸುವಾರ್ತೆಯನ್ನು ನಿರಾಕರಿಸುವರೇನೋ ಎಂಬ ಭಯ ಅವನನ್ನು ಕಾಡಲಾರಂಭಿಸಿತು. ಅಥೇನೆಯಲ್ಲಿ ಹೇಗೆ ಬೋಧಿಸಿದನೋ ಹಾಗೆ ಬೋಧಿಸದೆ ಇಲ್ಲಿ ತನ್ನ ವಿಧಾನವನ್ನು ಅವನು ಬದಲಾಯಿಸಿಕೊಂಡಂತೆ ಅನ್ನಿಸುತ್ತದೆ. ಸತ್ಯದೊಂದಿಗೆ ರಾಜಿಯಾಗದೆ, ಯಾವುದೇ ಪರಿಸ್ಥಿತಿಗೆ ಹೊಂದಿಕೆಯಾಗುವ ರೀತಿಯಲ್ಲಿ ತನ್ನ ಬೋಧನಾ ಶೈಲಿಯನ್ನು ಹೊಂದಿಸಿಕೊಳ್ಳಲು ಪೌಲನು ಶಕ್ತನಾಗಿದ್ದನು. **2**

**18:2** *"ಅಕ್ವಿಲ" ಎಂದರೆ "ಹದ್ದು."*–ಪೊಂತವು ಆಸ್ಯ ಸೀಮೆಯ ಉತ್ತರ ಭಾಗವಾಗಿತ್ತು (ಈಗ ಅದನ್ನು ಟರ್ಕಿ ಎಂದು ಕರೆಯುತ್ತಾರೆ). ಇತಾಲ್ಯವು ಪಶ್ಚಿಮ ದೇಶವಾಗಿದ್ದು ರೋಮ್ ಅದರ ರಾಜಧಾನಿಯಾಗಿತ್ತು.

*"ಕ್ಲೌದಿಯ"*– 11:28. **3**

**18:3** ಪೌಲನು ಪ್ರಸಿದ್ಧ ಅಪೊಸ್ತಲನಾಗಿದ್ದರೂ ತನ್ನ ಜೀವನೋಪಾಯಕ್ಕೆ ದುಡಿಯಲು ಹಿಂಜರಿಯಲಿಲ್ಲ ಅಥವಾ ಅದನ್ನು ಅವಮಾನವೆಂದು ಪರಿಗಣಿಸಲಿಲ್ಲ. ಮತ್ತು ಇದರಲ್ಲಿ ಅವನು ನಮ್ಮೆಲ್ಲರಿಗೂ ಮಾದರಿಯಾಗಿದ್ದಾನೆ – 20:34; 1 ಥೆಸ 2:9; 2 ಥೆಸ 3:7-8; 1 ಕೊರಿಂಥ 9:1-15. **4**

**18:4** 13:14; 14:1; 17:2 ನೋಡಿರಿ. **5**

**18:5** ಪೌಲನು ಕೆಲಹೊತ್ತು ತನ್ನ ದುಡಿಮೆಯನ್ನು ನಿಲ್ಲಿಸುವ ಸಲುವಾಗಿ ಸೀಲನು ಮತ್ತು ತಿಮೊಥೆಯನು ಮೆಕದೋನ್ಯದಿಂದ ಅವಶ್ಯಕ ಸಾಮಗ್ರಿಗಳನ್ನು ತಂದರು. ಮತ್ತಾಯ 1:1; ಅಪೊ 2:36 ರಲ್ಲಿ "ಕ್ರಿಸ್ತನೇ" ಕುರಿತಾದ ನೋಟ್ಸ್ ನೋಡಿರಿ. ಇಲ್ಲಿ "ಮೆಸ್ಸೀಯ" ಎಂಬದು ಉತ್ತಮ ಭಾಷಾಂತರವಾಗಿರುತ್ತದೆ. **6**

**18:6** 13:45-46; 14:19; 17:5; 28:28; ಮತ್ತಾಯ 8:11; 21:43; ರೋಮಾ 1:16 ನೋಡಿರಿ. ಪೌಲನಿಗೆ ತನ್ನ ಜವಾಬ್ದಾರಿಕೆ ಚೆನ್ನಾಗಿ ಗೊತ್ತಿತ್ತು – 20:26-27. ಒಂದುವೇಳೆ ಅವನು ಅವರಿಗೆ ಸುವಾರ್ತೆಯನ್ನು ಸಾರದೆ ಹೋಗಿದ್ದರೆ ಖಂಡಿತವಾಗಿಯೂ ಅವರ "ರಕ್ತದ" ಅಪರಾಧವು ಅವನ ಮೇಲೆ ಬಂದಿರುತ್ತಿತ್ತು (ಅವರಿಗೆ ದೇವರ ರಕ್ಷಣೆ ಹೊಂದುವ ಅವಕಾಶ ಕೊಡದೆ ಇರುವದಕ್ಕೆ). ಯೆಹೆಜ್ಕೇಲ 33:1-9 ರೊಂದಿಗೆ ಹೋಲಿಸಿ ನೋಡಿರಿ. ವಸ್ತ್ರಗಳನ್ನು ಝಾಡಿಸುವದು ಕಾಲಿಗೆ ಹತ್ತಿದ ಧೂಳನ್ನು ಝಾಡಿಸುವದಕ್ಕೆ ಸಮಾನವಾಗಿದೆ (13:51; ಮತ್ತಾಯ 10:14). **8**

**18:8** ಯೇಸು ಕ್ರಿಸ್ತನ ಬಳಿಗೆ ಬರಲು ದೇವರು ಯಾರನ್ನು ಆರಿಸಿಕೊಂಡಿದ್ದಾನೋ ಅವರನ್ನು ತಡೆಯಲು ಯಾವ ವಿರೋಧಗಳಿಂದಲೂ ಸಾಧ್ಯವಿಲ್ಲ (13:48; ಯೋಹಾನ 6:37,44). **9**

**18:9** *"ದರ್ಶನ"*– 9:10; 10:3; 16:9; ಆದಿ 15:1; ಸಂಖ್ಯಾ 12:6; ಕೀರ್ತನೆ 89:19; ಯೆರೆ 14:14; 23:16; ದಾನಿ 2:19; ಲೂಕ 1:22. ಶಾರೀರಿಕ ಶ್ರಮೆಗಳನ್ನು ಅನುಭವಿಸುವದು ಪೌಲನಿಗೆ ಸಹಜವಾಗಿತ್ತು. ಅವನು ಈಗಾಗಲೇ ಏನನ್ನು ಅನುಭವಿಸಿದ್ದನೋ ಅದರ ನೆನಪು ಇನ್ನೂ ಅವನ ಮನಸ್ಸಿನೊಳಗೆ ಹಾಗೆಯೇ ಉಳಿದಿತ್ತು (14:19; 16:22-24). ಆದರೆ ದೇವರಿಗೆ ತನ್ನ ಸೇವಕರನ್ನು ಯಾವ ರೀತಿ ಸಂತೈಸಬೇಕು ಮತ್ತು ಪ್ರೋತ್ಸಾಹಪಡಿಸಬೇಕು ಎಂಬದು ಗೊತ್ತಿದೆ (2 ಕೊರಿಂಥ 1:3-7). **11**

**18:11** ಪೌಲನಿಗೆ ಇದು ದೀರ್ಘಕಾಲ ಒಂದೇ ಸ್ಥಳದಲ್ಲಿ ಉಳಿದ ಮೊದಲನೆಯ ಅನುಭವವಾಗಿತ್ತು. **12**

**18:12** ಅವರು ಪೌಲನ ಮೇಲೆ ದಾಳಿ ಮಾಡಿದರು ಆದರೆ ಅವನಿಗೆ ಕೇಡು ಮಾಡಲಿಲ್ಲ. ಗಲಿಲಿಯೋ, ತತ್ವಜ್ಞಾನಿಯಾದ ಸೆನೆಕನ ಸಹೋದರನಾಗಿದ್ದು, ವಿದ್ಯಾವಂತನು ಮತ್ತು ಬುದ್ಧಿವಂತನು ಎಂಬದು ನಮಗೆ ಚರಿತ್ರೆಯಿಂದ ತಿಳಿಯುತ್ತದೆ. ಆದರೆ ಅವನಿಗೆ ಯೆಹೂದ

ಧರ್ಮದಲ್ಲಾಗಲಿ ಅಥವಾ ಕ್ರೈಸ್ತತ್ವದಲ್ಲಾಗಲಿ ಅಥವಾ ನಿಜವಾದ ಜೀವಸ್ವರೂಪ ದೇವರಲ್ಲಾಗಲಿ ಆಸಕ್ತಿಯಿರಲಿಲ್ಲ. **13**

**18:13** 16:20-21; 17:6-7 ನೋಡಿರಿ. **15**

**18:15** ಯೇಸು ಕ್ರಿಸ್ತನ ಸುವಾರ್ತೆಯನ್ನು ಅರ್ಥಮಾಡಿಕೊಳ್ಳಲಾಗದೆ ಇರುವ ಕೆಲವರು ಧರ್ಮದ ವಿಷಯಕ್ಕೆ ಬರುವಾಗ ಒಂದು ಪದ ಅಥವಾ ಒಂದು ಹೆಸರು ಒಂದಕ್ಕಿಂತ ಇನ್ನೊಂದು ಉತ್ತಮವಾಗಿದೆ. ಗಲಿಲಿಯೋ ತನ್ನ ವಿದ್ಯಾಭ್ಯಾಸ ಮತ್ತು ಬುದ್ಧಿವಂತಿಕೆಯ ಹೊರತಾಗಿಯೂ 4:12 ರ ಸತ್ಯದ ವಿಷಯದಲ್ಲಿ ಅಜ್ಞಾನಿಯಾಗಿದ್ದನು. **18**

**18:18** "*ದೀಕ್ಷೆ*"– 21:23-24. ಸಂಖ್ಯಾ 6:1-21 ನೋಡಿರಿ. ದೀಕ್ಷೆ ಮುಗಿದ ನಂತರ ತಲೆ ಕೂದಲನ್ನು ಪೂರ್ತಿಯಾಗಿ ಕ್ಷೌರ ಮಾಡಿಸಿಕೊಳ್ಳುವರು. ಯೆಹೂದ್ಯ ಕ್ರೈಸ್ತನಾಗಿದ್ದ ಪೌಲನು (23:6; 2 ಕೊರಿಂಥ 11:22) ಹಳೆಯ ಒಡಂಬಡಿಕೆಯ ದೀಕ್ಷೆಯನ್ನು ಪೂರ್ತಿಗೊಳಿಸುವದು ಯುಕ್ತವೆಂದು ನೆನೆಸಿದನು. ಜೊತೆಯಲ್ಲಿರುವ ಯೆಹೂದ್ಯರನ್ನು ಮನಸ್ಸಿನಲ್ಲಿಟ್ಟುಕೊಂಡು ಅವನು ಹೀಗೆ ಮಾಡಿರಬಹುದು (1 ಕೊರಿಂಥ 9:19-23). **19-21**

**18:19-21** ಎಫೆಸ ಆಸ್ಯ ಸೀಮೆಯ ರಾಜಧಾನಿ ಪಟ್ಟಣವಾಗಿತ್ತು ಮತ್ತು ವಿಸ್ತಾರವಾಗಿದ್ದ ಅಸ್ಯ ಸೀಮೆಯ ದೊಡ್ಡ ಪಟ್ಟಣವಾಗಿತ್ತು. ಒಮ್ಮೆ ಅಲ್ಲಿಗೆ ಹೋಗದಂತೆ ದೇವರು ಪೌಲನನ್ನು ತಡೆದಿದ್ದನು (16:6). ಈಗ ಅಲ್ಲಿಗೆ ಹೋಗಲು ಅನುಮತಿಸಿದನು. **23**

**- 18:23** 15:36,41; 2 ಕೊರಿಂಥ 11:28 ನೋಡಿರಿ. **24**

**18:24** 19:1; 1 ಕೊರಿಂಥ 3:4-6,22; 4:6; 16:12; ತೀತ 3:13 ನೋಡಿರಿ. ಅಲೆಗ್ಸಾಂಡ್ರಿಯ ಪಟ್ಟಣವು ಐಗುಪ್ತದಲ್ಲಿತ್ತು. ಅದನ್ನು ಮಹನಾದ ಅಲೆಗ್ಸಾಂಡ್ರನು ಸ್ಥಾಪಿಸಿದನು, ಅದು ಕಲಿಕೆಯ ಮಹಾ ಕೇಂದ್ರವಾಗಿ ಪ್ರಸಿದ್ಧಿಯಾಯಿತು. ಅಪೊಲ್ಲೋಸಲು ಅಲ್ಲಿದ್ದ ವ್ಯಾಪಕವಾದ ಯೆಹೂದ್ಯ ಸಮುದಾಯದ ಸದಸ್ಯನಾಗಿದ್ದನು. **25**

**18:25** "*ಯೋಹಾನನ ದೀಕ್ಷಾಸ್ನಾನ*"– ಮತ್ತಾಯ 3:1-6. ಬಹುಶಃ ಸ್ನಾನಿಕನಾದ ಯೋಹಾನನ ಹಿಂಬಾಲಕರು ಅಪೊಲ್ಲೋಸನಿಗೆ ಯೇಸು ಕ್ರಿಸ್ತನ ಬಗ್ಗೆ ಹೇಳಿರಬಹುದು. **26**

**18:26** ಅಪೊಲ್ಲೋಸನು, ಕಲಿಕೆ ಮತ್ತು ಮಾತಿನಲ್ಲಿ ಪ್ರಸಿದ್ಧನಾಗಿದ್ದರೂ, ಸಭೆಯ ಇಬ್ಬರು ಸದಸ್ಯರಿಂದ ದೀನಭಾವದೊಡನೆ ಕಲಿತುಕೊಂಡನು. ಮತ್ತು ಅವರಿಬ್ಬರೂ ಸಭೆಗೆ ಅತ್ಯಂತ ಉಪಯುಕ್ತವಾದ ಸೇವೆಯನ್ನು ಸಲ್ಲಿಸಿದರು ಮತ್ತು ಎಲ್ಲಾ ಕಾಲಕ್ಕೂ ಹೊಂದಿಕೆಯಾಗುವ ಒಳ್ಳೆಯ ಮಾದರಿಗಳಾಗಿದ್ದಾರೆ. **27**

**18:27** ಕೊರಿಂಥವು ಅಖಾಯದ ರಾಜಧಾನಿಯಾಗಿದೆ (ವ 7). "ಸಹೋದರರು" ಮತ್ತು "ಶಿಷ್ಯರು" ಯೇಸು ಕ್ರಿಸ್ತನ ಹಿಂಬಾಲಕರಿಗಿರುವ ಎರಡು ಹೆಸರುಗಳಾಗಿವೆ. "ದೇವರ ಕೃಪೆಯಿಂದ ನಂಬಿದವರು" ಪದವನ್ನು ಗಮನಿಸಿರಿ. 13:48; ಯೋಹಾನ 6:37,44; ಎಫೆ 2:8-9; ಫಿಲಿಪ್ಪಿ 1:29 ರೊಂದಿಗೆ ಹೋಲಿಸಿ ನೋಡಿರಿ. ದೇವರ ಕೃಪೆಯುಳ್ಳ ಕಾರ್ಯವು

ಹೃದಯದಲ್ಲಿ ನಡೆಯದೆ ಹೋದರೆ ಯಾವನೂ ಯೇಸು ಕ್ರಿಸ್ತನಲ್ಲಿ ಸತ್ಯವಾದ ಹಾಗೂ ಜೀವಿಸುವ ನಂಬಿಕೆಗೆ ಬರಲು ಸಾಧ್ಯವೇ ಇಲ್ಲ. **28**

**18:28** ವಚನ 5; 9:22; 17:2-3.

# 19[1]

**19:1** 18:19 ನೋಡಿರಿ. ಅಪೊಲ್ಲೋಸನಿಗೆ ಸೂಚನೆಗಳನ್ನು ಕೊಟ್ಟ ಹಾಗೆ ಎಫೆಸದಲ್ಲಿರುವ ಎಲ್ಲಾ ಶಿಷ್ಯರಿಗೆ ಸೂಚನೆಗಳನ್ನು ಕೊಡಲು ಪ್ರಿಸ್ಕಿಲ್ಲ ಮತ್ತು ಅಕ್ವಿಲನಿಗೆ ಆಗಲಿಲ್ಲ (18:26). ಇವರು, ಅಂದರೆ ಹನ್ನೆರೆಡು ಜನರು (ವ 7), ಬಹುಶಃ ಸ್ನಾನಿಕನಾದ ಯೋಹಾನನಿಂದ ಯೂದಾಯದಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಿರಬಹುದು ಅಥವಾ ಯೋಹಾನನ ಶಿಷ್ಯನು ಇವರಿಗೆ ಬೇರೆ ಎಲ್ಲಾದರೂ ದೀಕ್ಷಾಸ್ನಾನ ಮಾಡಿಸಿರಬಹುದು (ವ 3). ಒಂದುವೇಳೆ ಅವರು ಯೂದಾಯಕ್ಕೆ ಹೋಗಿದ್ದರೆ, ಯೇಸು ಕ್ರಿಸ್ತನ ಮರಣ, ಪುನರುತ್ಥಾನ ಮತ್ತು ಸ್ವರ್ಗಾರೋಹಣ ಹಾಗೂ ಪಂಚಾಶತ್ತಮ ದಿನದಲ್ಲಿನ ಪವಿತ್ರಾತ್ಮನ ಆಗಮನಕ್ಕೂ ಮುಂಚಿತವಾಗಿಯೇ ಅವರು ಅಲ್ಲಿಂದ ಹೊರಟಿರಬೇಕು. ಅವರಿಗೆ ಈ ಮಹಾ ಸತ್ಯಗಳು ತಿಳಿದಿರಲಿಲ್ಲ. **2**

**19:2** ಅವರ ಜೀವನ ಶೈಲಿ ಮತ್ತು ಅವರ ಸಂಭಾಷಣೆ ಹಾಗೂ ಯೇಸು ಕ್ರಿಸ್ತನ ಕುರಿತು ಅವರಿಗಿದ್ದ ತಿಳುವಳಿಕೆ ಎಲ್ಲವೂ, ಪೌಲನು ಅವರ ಆತ್ಮೀಕ ಸ್ಥಿತಿಯ ಬಗ್ಗೆ ಆಶ್ಚರ್ಯಪಡುವಂತೆ ಮಾಡಿತು. ಒಂದುವೇಳೆ ಅವರು ನಿಜವಾಗಿಯೂ ಯೇಸು ಕ್ರಿಸ್ತನನ್ನು ನಂಬಿದ್ದರೆ ಪವಿತ್ರಾತ್ಮನನ್ನು ಹೊಂದಿಕೊಳ್ಳುತ್ತಿದ್ದರು ಎಂಬ ಅವನ ದೃಢತೆಯನ್ನು ಅವನ ಪ್ರಶ್ನೆಯು ಸೂಚಿಸುತ್ತದೆ (ಎಫೆ 1:13; ಗಲಾ 3:14; ರೋಮಾ 8:9). ಯೋಹಾನನ ಮರಣದ ನಂತರ ಸಂಭವಿಸಿದ ಘಟನೆಗಳ ಬಗ್ಗೆ ಅವರಿಗೆ ಎಷ್ಟು ಕಡಿಮೆ ಗೊತ್ತಿದೆ ಎಂಬದನ್ನು ಅವರ ಪ್ರತಿಕ್ರಿಯೆಯೇ ಪ್ರಕಟಿಸಿತು. **4**

**- 19:4** ಮತ್ತಾಯ 3:6; ಯೋಹಾನ 3:27-36. **5**

**19:5** 2:38; ಮತ್ತಾಯ 28:19 ನೋಡಿರಿ. ಸತ್ಯವೇದದಲ್ಲಿ ಪುನರ್ ದೀಕ್ಷಾಸ್ನಾನದ ಬಗ್ಗೆ ಬರೆಯಲ್ಪಟ್ಟಿರುವದು ಇಲ್ಲಿ ಮಾತ್ರವೇ ಆಗಿದೆ.

“*ಹೆಸರಿನಲ್ಲಿ*”– “ಹೆಸರಿನ ಮೇಲೆ” ಎಂಬದಾಗಿಯೂ ಭಾಷಾಂತರ ಮಾಡಬಹುದು. ಗ್ರೀಕ್ ಪದ (ಈಸ್) ಎರಡೂ ಅರ್ಥವನ್ನು ಕೊಡುತ್ತದೆ. ಗ್ರೀಕರು ಈ ಪದವನ್ನು ವ್ಯವಹಾರದ ಸಮಯದಲ್ಲಿ ಉಪಯೋಗಿಸುತ್ತಿದ್ದರು – ಆಸ್ತಿ ಅಥವಾ ಹಣವನ್ನು ಬೇರೆಯೊವರ ಖಾತೆಯಲ್ಲಿ ಇಡುತ್ತಿದ್ದಾಗ ಬಳಕೆ ಮಾಡುತ್ತಿದ್ದರು. ಆದ್ದರಿಂದ ಅದು ಆತನದ್ದಾಗುತ್ತಿತ್ತು. ಯೇಸು ಕ್ರಿಸ್ತನ ಹೆಸರಿನಲ್ಲಿ ಅಥವಾ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳುವ ವ್ಯಕ್ತಿ ಈಗ ತಾನು ಆತನಿಗೆ ಸೇರಿದವನು ಎಂದು ಪ್ರಕಟಿಸುವವನಾಗಿದ್ದಾನೆ. **6**

**19:6** *"ಕೈಗಳನ್ನಿಟ್ಟನು"*– 8:15-17; 9:17; 10:47 ರಲ್ಲಿ ನೋಟ್ಸ್ ನೋಡಿರಿ.

*"ಅನ್ಯಭಾಷೆಗಳು"*– 2:4,11 ಮತ್ತು 10:46 ರಲ್ಲಿ ನೋಟ್ಸ್ ನೋಡಿರಿ. "ಅನ್ಯಭಾಷೆ" ಎಂದರೆ 2:4-11 ರಲ್ಲಿ ಮತ್ತು ಇಲ್ಲಿ ಇನ್ನೊಂದು ಎಂಬದಾಗಿ ಎಂದು ಯೋಚಿಸಲು ಯಾವುದೇ ಕಾರಣವಿಲ್ಲ. ಅಪೊಸ್ತಲರ ಕೃತ್ಯಗಳ ಬರಹಗಾರನಾದ (ಲೂಕನು) ಇದು ಅದಕ್ಕಿಂತ ವ್ಯತ್ಯಾಸವಾಗಿದೆ ಎಂಬದಕ್ಕೆ ಯಾವುದೇ ಸೂಚನೆಗಳನ್ನು ಕೊಟ್ಟಿಲ್ಲ. ಪ್ರವಾದನೆ ಹೇಳುವದರ ಬಗ್ಗೆ ತಿಳಿಯಲು ಆದಿ 20:7; ಸಂಖ್ಯಾ 11:25; 1 ಕೊರಿಂಥ 12:10 ರ ನೋಟ್ಸ್ ನೋಡಿರಿ. **8**

**19:8** 13:14; 14:1; 17:2 ನೋಡಿರಿ. **9**

**19:9** 13:45-46; 14:19; 17:5,13; 18:5-6 ನೋಡಿರಿ. ಆಗಿನ ಕಾಲದಲ್ಲಿ ಕೆಲವೊಮ್ಮೆ ಯೇಸು ಕ್ರಿಸ್ತನ ಮಾರ್ಗವನ್ನು ಸರಳವಾಗಿ "ಆ ಮಾರ್ಗ" ಎಂದು ಕರೆಯುತ್ತಿದ್ದರು. **10**

**19:10** ತನ್ನ ಎಲ್ಲಾ ಪ್ರಯಾಣಗಳಲ್ಲಿ ಪೌಲನು ಬೇರೆ ಯಾವ ಪಟ್ಟಣದಲ್ಲಿಯೂ ಹೆಚ್ಚು ಸಮಯ ಉಳಿದಿರಲಿಲ್ಲ (20:31). ಮತ್ತು ಈ ಸ್ಥಳಕ್ಕೆ ಹೋಗದಂತೆ ದೇವರು ಒಮ್ಮೆ ಅವನನ್ನು ತಡೆದಿದ್ದನು (16:6; 18:19). **11-12**

**19:11-12** ಪೌಲನು ತನ್ನ ಅಪೊಸ್ತಲನು ಎಂಬದನ್ನು ಎಲ್ಲರಿಗೂ ಮನವರಿಕೆ ಮಾಡಿಸಲು ದೇವರು ಈ ಮಾರ್ಗವನ್ನು ಉಪಯೋಗಿಸಿಕೊಂಡನು (2 ಕೊರಿಂಥ 12:11-12). 5:15; 8:15,17 ರ ನೋಟ್ಸ್ ಸಹ ನೋಡಿರಿ. ಪೌಲನು ತಾನಾಗಿಯೇ ಈ ಅದ್ಭುತಕಾರ್ಯಗಳನ್ನು ಮಾಡಲು ಪ್ರಯತ್ನಿಸಲಿಲ್ಲ ಮತ್ತು ಇದರಿಂದ ಯಾವ ಲಾಭವನ್ನೂ ಪಡೆಯುತ್ತಿರಲಿಲ್ಲ. **13-16**

**19:13-16** ದುರಾತ್ಮಗಳು ಮತ್ತು ದುರಾತ್ಮಗಳನ್ನು ಓಡಿಸುವದರ ನೋಟ್ಸ್ ಗಾಗಿ ಮತ್ತಾಯ 4:24; 10:1 ನೋಡಿರಿ. ಯೇಸು ಕ್ರಿಸ್ತನ ನಾಮವನ್ನು ಸುಮ್ಮನೆ ಉಪಯೋಗಿಸುವದರಿಂದ ದುರಾತ್ಮಗಳನ್ನು ಓಡಿಸಲು ಆಗುವದಿಲ್ಲ ಎಂದು ನಾವು ನೋಡುತ್ತೇವೆ. ಕ್ರಿಸ್ತನ ಅಧಿಕಾರ ಮತ್ತು ದೇವರ ಆತ್ಮನು ಇದಕ್ಕೆ ಅವಶ್ಯವಾಗಿದೆ. **17**

**19:17** ದುರಾತ್ಮನನ್ನು ಓಡಿಸುವಲ್ಲಿ ಸ್ಕೇವನ ಮಕ್ಕಳು ವಿಫಲರಾದದ್ದು ಒಳ್ಳೆಯ ಫಲಿತಾಂಶವನ್ನು ನೀಡಿತು. ಪೌಲನ ಮೂಲಕ ದೇವರು ವ್ಯಕ್ತಿಪಡಿಸಿದ ಅಧಿಕಾರಕ್ಕೆ ಇದು ಸಂಪೂರ್ಣವಾಗಿ ವಿರುದ್ಧವಾಗಿತ್ತು (ವ 11,12). ಸುವಾರ್ತೆಯ ಪ್ರಚಾರಕ್ಕಾಗಿ, ಒಂದುವೇಳೆ ದೇವರು ಬಯಸುವದಾದರೆ ಇಂಥ ಎಲ್ಲಾ ಕಾರ್ಯಗಳನ್ನು ಉಪಯೋಗಿಸುವವನಾಗಿದ್ದಾನೆ. **18**

**- 19:18** ಮತ್ತಾಯ 3:5-6. **19**

**19:19** ಅವರು ನಿಜವಾದ ದೇವರ ಶಕ್ತಿಯು ಕಾರ್ಯಮಾಡುವದನ್ನು ನೋಡಿದ್ದರು ಮತ್ತು ಮಾಟಮಂತ್ರದ ದುಷ್ಟತನವನ್ನು ಹಾಗೂ ದೇವರ ಶಕ್ತಿಗೆ ಹೋಲಿಸಿದರೆ ಅದರ ಶಕ್ತಿ

ಕೊಂಚವೇ ಇರುವದನ್ನು ಮನವರಿಕೆ ಮಾಡಿಕೊಂಡಿದ್ದರು. ಮಾಟಮಂತ್ರದ ಬಗ್ಗೆ ತಿಳಿಯಲು ಧರ್ಮೋ 18:9-11 ನೋಡಿರಿ. ಅಪೊಸ್ತಲರ ಕೃತ್ಯಗಳಲ್ಲಿ ಇದರ ಬಗ್ಗೆ ಬರೆಯಲ್ಪಟ್ಟಿರುವದು ಇದು ಮೂರನೆಯ ಸಲವಾಗಿದೆ (8:9-11; 13:8-10). ಅವರ "ಪುಸ್ತಕಗಳು" ಮಾಟಮಂತ್ರದ ವಿಷಯಗಳ ಬರವಣಿಗೆಗಳಾಗಿದ್ದವು. ಐವತ್ತು ಸಾವಿರ ಬೆಳ್ಳಿ ನಾಣ್ಯ ಎಂದರೆ ದೊಡ್ಡ ಮೊತ್ತವಾಗಿದೆ. ಒಂದು ಬೆಳ್ಳಿ ನಾಣ್ಯ ಒಬ್ಬ ವ್ಯಕ್ತಿಯ ಒಂದುದಿನದ ಸಂಬಳವಾಗಿತ್ತು. 50,000 ಎಂಬದು ಒಬ್ಬನ 140 ವರ್ಷಗಳ ಸಂಬಳವಾಗಿದೆ! ಅವರು ಈ ಪುಸ್ತಕವನ್ನು ಮಾರಾಟ ಮಾಡಿ ಬಂದ ಹಣವನ್ನು ಉಪಯೋಗಿಸಲಿಲ್ಲ ಎಂಬದನ್ನು ಗಮನಿಸಿರಿ. ಅವರು ಮಾಟಮಂಟ್ರದ ದುಷ್ಟತನವನ್ನು ಅರಿತುಕೊಂಡರು ಮತ್ತು ಆ ಪುಸ್ತಕಗಳನ್ನು ಸಂಪೂರ್ಣವಾಗಿ ನಾಶಮಾಡಲು ಬಯಸಿದರು. ದೇವರ ಸತ್ಯವನ್ನು ಒಮ್ಮೆ ಕಲಿತುಕೊಂಡ ನಂತರ ಅದರ ವಿಷಯದಲ್ಲಿ ತೋರಿದ ಆಸಕ್ತಿಯನ್ನು ಗಮನಿಸಿರಿ. **21**

**19:21** ಯೆರೂಸಲೇಮಿಗೆ ಭೇಟಿ ಕೊಡಲು ಒಂದು ಕಾರಣ ಅಲ್ಲಿರುವ ಬಡವರಿಗಾಗಿ ಸಭೆಗಳಿಂದ ಕಾಣಿಕೆಯನ್ನು ತೆಗೆದುಕೊಳ್ಳುವದಾಗಿತ್ತು (1 ಕೊರಿಂಥ 16:1-4; 2 ಕೊರಿಂಥ 8:1—9:15 ನೋಡಿರಿ). ರೋಮಾಪುರಕ್ಕೆ ಹೋಗಬೇಕೆಂಬ ಆತನಿಗೆ ಬಹಳ ಸಮಯದಿಂದ ಇತ್ತು (ರೋಮಾ 1:15; 15:23-28). ಇಲ್ಲ ಆತನು ಅದನ್ನು "ಮಾಡಲೇಬೇಕು" ಎಂದು ಹೇಳುತ್ತಿದ್ದಾನೆ. ಇದರಲ್ಲಿ ದೇವರ ಚಿತ್ತವಿದೆ ಎಂಬ ಅರಿವು ಅವನಿಗಿತ್ತು ಎಂಬದನ್ನು ಇದು ಸೂಚಿಸುವದಿಲ್ಲವೇ (20:20)? **24**

**19:24** ವಚನ 9.

"*ಡಯಾನಾ*"– ಗ್ರೀಕ್ ನಲ್ಲಿ ಇಲ್ಲಿ "ಅರ್ತೆಮೀ ದೇವಿ." ಡಯಾನಾ ಎಂಬದು ಇದೇ ದೇವತೆಗೆ ಇರುವ ರೋಮನ್ ಹೆಸರಾಗಿದೆ. ಎಫೆಸಸ್ ಮತ್ತು ಆಸ್ಯ ಸೀಮೆಯ ಜನರು ಹುದುವಾಗಿ ಅರ್ತೆಮೀ ದೇವಿಯನ್ನು ತಾಯಿ ದೇವತೆ ಎಂದು ಪೂಜಿಸುತ್ತಿದ್ದರು. ಆಕೆಯ ಪ್ರತಿಮೆಗೆ ಆಕಾಶದಿಂದ ಎಫೆಸಕ್ಕೆ ಬಿದ್ದಿದೆ ಎಂದು ಅವರು ನಂಬುತ್ತಿದ್ದರು. ಅಲ್ಲಿದ್ದ ಆಕೆಯ ದೇವಸ್ಥಾನವನ್ನು ಪ್ರಾಚೀನ ಕಾಲದ ಏಳು ಅದ್ಭುತಗಳಲ್ಲಿ ಒಂದು ಎಂಬದಾಗಿ ಕರೆಯಲಾಗುತ್ತಿತ್ತು ಮತ್ತು ಅಥೇನೆಯಲ್ಲಿರುವ ಪ್ರಸಿದ್ಧ ಪಾರ್ಥೆನಾನ್ ಗಿಂತ ನಾಲ್ಕು ಪಟ್ಟು ಅದು ದೊಡ್ಡದಾಗಿತ್ತು. ಪಟ್ಟಣದ ಬಹುತೇಕ ಆದಾಯವು ಆಕೆಯ ಆರಾಧನೆಯ ನಿಮಿತ್ತ ದೊರೆಯುತಿತ್ತು. ದೊಡ್ಡ ಗಲಭೆಗೆ ಕಾರಣ (ವ 23) ಮುಖ್ಯವಾಗಿ ಆರ್ಥಿಕ ವಿಷಯವಾಗಿತ್ತು. ಬಹಳಷ್ಟು ಜನರು ಕ್ರಿಸ್ತನ ಕಡೆಗೆ ತಿರುಗಿಕೊಳ್ಳುತ್ತಿದ್ದರು ಮತ್ತು ವಿಗ್ರಹಾರಾಧನೆಯನ್ನು ತ್ಯಜಿಸುತ್ತಿದ್ದರು ಆದ್ದರಿಂದ ಎಫೆಸದ ಆರ್ಥಿಕ ಸ್ಥಿತಿ ಕಡಿಮೆಯಾಗಲಾರಂಭಿಸಿತು (ವ 25,26). ದೇಮೇತ್ರಿಯನು ಮತ್ತು ಅವನ ಸ್ನೇಹಿತರು ಸತ್ಯಕ್ಕೆ ಬದಲಾಗಿ ಹಣವನ್ನು ಪ್ರೀತಿಸುತ್ತಿದ್ದರಿಂದ, ಖಂಡಿತವಾಗಿಯೂ ಸಮಸ್ಯೆ ಕಾಣಿಸಿಕೊಳ್ಳುವದಾಗಿತ್ತು. **26**

- **19:26** 17:29-30; 1 ಕೊರಿಂಥ 8:4-6 ನೋಡಿರಿ. **28**

**19:28** ಹಣದಾಸೆ ಮತ್ತು ಸುಳ್ಳು ಧರ್ಮದ ಮತಾಂಧತೆ ಅಪಾಯಕಾರಿ ವಿಷಯಗಳಾಗಿವೆ. **34**

**19:34** ವಿಗ್ರಹಾರಾಧನೆಯ ವಿಷಯದಲ್ಲಿ ಯೆಹೂದ್ಯರಿಗಿರುವ ಮನಸ್ಥಿತಿಯೇ ಕ್ರೈಸ್ತರಿಗೂ ಇದೆ ಎಂಬದು ಅವರಿಗೆ ಗೊತ್ತಿತ್ತು (ವಿಮೋ 20:1-5; ಕೀರ್ತನೆ 115:2-8). ಡಯಾನಾ ಪ್ರಖ್ಯಾತಿಯ ಬಗ್ಗೆ ಅವರು ಸುಮಾರು ಎರಡು ತಾಸುಗಳ ಕಾಲ ಕೂಗಿದರು ಆದರೆ ಇಂದು ಯಾರಾದರು ಆಕೆಯನ್ನು ಆರಾಧಿಸುತ್ತಿದ್ದಾರೆಯೇ? ಎಫೆಸದಲ್ಲಿದ್ದ ಆಕೆಯ ದೊಡ್ಡ ದೇವಸ್ಥಾನವು ಇಂದು ಕೆಸರಿನಲ್ಲಿ ಮುಚ್ಚಿಹೋಗಿದೆ. **35**

**19:35** *"ಪರಲೋಕ"*– ಜೂಪಿಟರ್ (KJV) ಗ್ರೀಕ್ ಪದ ಇಲ್ಲಿ ಇಲ್ಲ. ಎಫೆಸದಲ್ಲಿ ರೋಮನ್ನರು ಆಳ್ವಿಕೆ ಮಾಡುತ್ತಿದ್ದರು. ರೋಮನ್ ರಾಜ್ಯಪಾಲರು ನ್ಯಾಯಸ್ಥಾನದ ಅಧಿಪತಿಗಳಾಗಿದ್ದರು (ವ 38). ಜನರಿಗೆ ಕಾನೂನನ್ನು ಕೈಗೆ ತೆಗೆದುಕೊಳ್ಳುವ ಅಧಿಕಾರ ಇರಲಿಲ್ಲ ಮತ್ತು ಒಂದುವೇಳೆ ಹಾಗೇನಾದರೂ ಮಾಡಿದರೆ ಅಧಿಕಾರಿಗಳಿಂದ ಅವರಿಗೆ ತೊಂದರೆಗಳು ಎದುರಾಗುತ್ತಿದ್ದವು. ಆದ್ದರಿಂದ ಪಟ್ಟಣದ ಯಜಮಾನನು ನಿಧಾನವಾಗಿ ಜನರ ಗುಂಪನ್ನು ಸಮಾಧಾನಪಡಿಸಿದನು ಮತ್ತು ಕಳುಹಿಸಿಬಿಟ್ಟನು.

# 20 1-2

**20:1-2** 16:10—18:18 ರ ತನಕ ವಿವರಿಸಲಾಗಿರುವ, ಪೌಲನ ಸೇವೆಯಿಂದ ಪ್ರಾರಂಭಗೊಂಡ ಸಭೆಗಳೆಲ್ಲವೂ ಮೆಕದೋನ್ಯ ಮತ್ತು ಗ್ರೀಸ್ ನಲ್ಲಿದ್ದವು. **3**

**20:3** 13:45; 14:2,5,19 ನೋಡಿರಿ. **4**

**20:4** *"ದರ್ಬೆ"*– 16:20-21. **5**

**20:5** *"ನಮಗೋಸ್ಕರ"*– 16:10. **6**

**20:6** *"ಹುಳಿಯಿಲ್ಲದ ರೊಟ್ಟಿಯ ಹಬ್ಬದ ದಿವಸಗಳು"*– ವಿಮೋ 12:17-20; ಯಾಜಕ 23:4-8. **7**

**20:7** ಯೆಹೂದ್ಯರ ಹಳೆಯ ಸಬ್ಬತ್ ದಿನಕ್ಕೆ (1 ಕೊರಿಂಥ 16:2 ನೋಡಿರಿ) ಬದಲಾಗಿ ಅವರೆಲ್ಲರೂ ಕರ್ತನ ಭೋಜನ ಆಚರಿಸಲು ಭಾನುವಾರದಂದು ಸೇರಿ ಬರುತ್ತಿದ್ದರು. ಇದು ಸೂಕ್ತವಾಗಿದೆ ಯಾಕಂದರೆ ಭಾನುವಾರದಂದು ಕರ್ತನಾದ ಯೇಸು ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದನು ಮತ್ತು ಹೊಸ ಯುಗವನ್ನು ಪ್ರಾರಂಭಿಸಿದನು. **10**

- **20:10** 9:40-41; ಲೂಕ 6:11-15; 8:49-55; ಯೋಹಾನ 11:43-44; 1 ಅರಸು 17:21; 2 ಅರಸು 4:34-35 ನೋಡಿರಿ. **15**

**20:15** ಮಿಲೇತವು ಎಫೆಸದಿಂದ ಸುಮಾರು 50 ಕಿಲೋಮೀಟರ್ ದೂರ ದಕ್ಷಿಣದ ಕಡೆಗಿತ್ತು. **16**

**20:16** *"ಪಂಚಾಶತ್ತಮ"*– 2:1-4; ಯಾಜಕ 23:15-21. **17**

**20:17** *“ಹಿರಿಯರು”*– 14:23. **18-36**

**20:18-36** ಯೇಸು ಕ್ರಿಸ್ತನ ಸೇವಕನು ಹೇಗಿರಬೇಕು ಎಂಬದಕ್ಕೆ ಪೌಲನು ನಮಗೆ ಮಾದರಿಯಾಗಿದ್ದಾನೆ ಮತ್ತು ದೇವರು ತಾನೇ ನಮ್ಮ ಸೂಚನೆಗಾಗಿ ಅವನನ್ನು ನೇಮಿಸಿದ್ದಾನೆ (ಫಿಲಿಪ್ಪಿ 3:17; 1 ಕೊರಿಂಥ 4:16; 11:1; 2 ಥೆಸ 3:8-9; 1 ತಿಮೊ 1:16). ಅವನು ತನ್ನ ಶ್ರೇಷ್ಠತೆಯನ್ನು ತೋರಿಸಿಕೊಳ್ಳಲು ಹಿರಿಯರಿಗೆ ಈ ಮಾತುಗಳನ್ನು ಹೇಳಲಿಲ್ಲ, ಆದರೆ ಹಿರಿಯರಾಗಿ ಅವರು ಹೇಗಿರಬೇಕು ಎಂಬದನ್ನು ತೋರಿಸಲು ಪ್ರಯತ್ನಿಸಿದನು. ಅವನಿಗೆ ತಾನೇನು ಎಂಬದು ಚೆನ್ನಾಗಿ ಗೊತ್ತಿತ್ತು ಮತ್ತು ಹೊಗಳಿಕೊಳ್ಳಲು ಅವನ ವಿಷಯದಲ್ಲಿ ಏನೂ ಇರಲಿಲ್ಲ (ರೋಮಾ 7:18; 1 ಕೊರಿಂಥ 3:7; 2 ಕೊರಿಂಥ 2:5-6; 1 ತಿಮೊ 1:15). **19**

**20:19** ನಮ್ರತೆಯುಳ್ಳ ವ್ಯಕ್ತಿಗೆ ತಾನು ನಮ್ರತೆಯುಳ್ಳವನು ಎಂಬದನ್ನು ತಿಳಿದುಕೊಳ್ಳಲು ಸಾಧ್ಯವೇ? *ಖಂಡಿತವಾಗಿಯೂ* ಸಾಧ್ಯ. ನಾನು ನಮ್ರತೆಯುಳ್ಳವನಾಗಿ ನಡೆದುಕೊಂಡಿದ್ದೇನೆ ಎಂಬದನ್ನಾದರೂ ಅವನು ತಿಳಿದುಕೊಳ್ಳಬಹುದು.

*“ಬಹು ಕಣ್ಣೀರಿನಿಂದಲೂ”*– ವ 31; 2 ಕೊರಿಂಥ 2:4; 11:28-29; ಕೀರ್ತನೆ 126:5-6; ಲೂಕ 19:41. **20-21**

**20:20-21** ಏನೇ ಆದರೂ ಪರವಾಗಿಲ್ಲ ಪ್ರತಿಯೊಬ್ಬ ವ್ಯಕ್ತಿಗೂ ಸುವಾರ್ತೆ ಕೇಳಿಸಿಕೊಳ್ಳುವ ಅವಕಾಶ ಸಿಗಬೇಕು ಎಂಬ ದೃಢವಾದ ತೀರ್ಮಾನ ಅವನಲ್ಲಿತ್ತು. ಒಂದುವೇಳೆ ಅವರು ಸಾರ್ವಜನಿಕ ಕೂಟಗಳಿಗೆ ಬಾರದೆ ಹೋದರೆ ಅವನೇ ಅವರ ಬಳಿಗೆ ಹೋಗುತ್ತಿದ್ದನು. ರಕ್ಷಣೆ ಹೊಂದಲು ಪ್ರಾಮುಖ್ಯವಾಗಿರುವ ಎರಡು ಸಂಗತಿಗಳ ಬಗ್ಗೆಯೇ ಅವನು ಯಾವಾಗಲೂ ಬೋಧಿಸುತ್ತಿದ್ದನು – ಪಶ್ಚಾತ್ತಾಪ ಮತ್ತು ಯೇಸು ಕ್ರಿಸ್ತನಲ್ಲಿ ನಂಬಿಕೆ (ಇದು ನಿಜವಾಗಿಯೂ ಒಂದೇ ಪ್ರಾಮುಖ್ಯತೆಯಾಗಿದೆ-ನಿಜವಾದ ನಂಬಿಕೆಯು ಬೇರ್ಪಡಿಸಲಾಗದ ಹಾಗೆ ಪಶ್ಚಾತ್ತಾಪದೊಂದಿಗೆ ಬೆರೆತು ಹೋಗಿದೆ). ಪಶ್ಚಾತ್ತಾಪದ ಬಗ್ಗೆ ತಿಳಿಯಲು 2:38; 17:30; ಮತ್ತಾಯ 3:2; 4:17; ಲೂಕ 13:1-5; 24:47 ನೋಡಿರಿ. **22-23**

**20:22-23** 21:1,10,11 ನೋಡಿರಿ. **24**

**20:24** ಇಲ್ಲಿ ನಾವು ದೇವರ ಮನುಷ್ಯನ ಯಶಸ್ಸಿಗೆ ಕಾರಣವಾಗುವ ಪ್ರಮುಖವಾದ ರಹಸ್ಯವನ್ನು ನೋಡುತ್ತೇವೆ. ಅವನು ಮತ್ತಾಯ 10:38; ಲೂಕ 9:23; 14:26-27 ಅಭ್ಯಾಸ ಮಾಡಿದನು. ಮತ್ತು ಅವನು ಜೀವನದಲ್ಲಿ ಒಂದು ದೊಡ್ಡ ಗುರಿಯನ್ನು ಹೊಂದಿದ್ದನು – ದೇವರು ಒಪ್ಪಿಸಿರುವ ಕಾರ್ಯವನ್ನು ಮಾಡಿ ಮುಗಿಸುವದು ಮತ್ತು ಕಡೆಯಲ್ಲಿ ಬಹುಮಾನವನ್ನು ಗೆಲ್ಲುವದು – 1 ಕೊರಿಂಥ 9:24-27; ಫಿಲಿಪ್ಪಿ 3:12-14; 2 ತಿಮೊ 4:7-8. ತಾನು ಯಾರೆನ್ನೆಲ್ಲಾ ಭೇಟಿ ಮಾಡುತ್ತಾನೋ ಅವರೆಲ್ಲರಿಗೂ ದೇವರ ಕೃಪೆಯನ್ನು

ಸಾರುವದು ಮತ್ತು ವಿವರಿಸುವದು ಅವನ ಕೆಲಸವಾಗಿತ್ತು (ಎಫೆ 3:2,7; 2 ತಿಮೊ 1:9-11). ಸೌಲಭ್ಯಗಳು, ಅನುಕೂಲತೆಗಳು, ಸಮಾಧಾನ, ಸಂತೋಷಗಳು, ಸಹಜವಾಗಿ ಜನರು ಇಷ್ಟಪಡುವ ವಸ್ತುಗಳು, ಸ್ವಂತ ಜೀವನ ಯಾವುದೂ ಆತನಿಗೆ ಮುಖ್ಯವಾಗಿರಲಿಲ್ಲ ತನ್ನ ಗುರಿ ಸಾಧನೆ ಒಂದೇ ಮುಖ್ಯವಾಗಿತ್ತು. ಇವೆಲ್ಲವುಗಳನ್ನು ಮಾಡಲು ಆತನು ಶಕ್ತಿ ಎಲ್ಲಿಂದ ಬರುತಿತ್ತು ಎಂಬದನ್ನು ನಾವು ಕೊಲೊ 1:29 ರಲ್ಲಿ ನೋಡಬಹುದು. **25**

**20:25** ಲೋಕದ ಆ ಭಾಗದಲ್ಲಿ ತನ್ನ ಸೇವೆಯು ಪೂರ್ಣವಾಗಿದೆ ಎಂದು ಅವನು ಭಾವಿಸಿದನು ಮತ್ತು ಬೇರೆ ಕಡೆಗೆ ಹೋಗಲು ಯೋಚಿಸಿದನು (19:21; ರೋಮಾ 15:23-24). "ದೇವರ ರಾಜ್ಯದ ಬಗ್ಗೆ ಬೋಧಿಸುವದು" ಮತ್ತು "ದೇವರ ಕೃಪೆಯ ವಿಷಯವಾದ ಸುವಾರ್ತೆಯನ್ನು ಆಸಕ್ತಿಯಿಂದ ಸಾರುವದು" (ವ 24) ಎರಡು ಒಂದೇ ರೀತಿಯ ಸೇವೆಯಾಗಿದೆ ಎಂಬದನ್ನು ಗಮನಿಸಿರಿ. **26-27**

**20:26-27** 18:6; ಯೆಹೆಜ್ಕೇಲ 33:7-9 ನೋಡಿರಿ. ಪೌಲನು ದೊಡ್ಡ ಸುವಾರ್ತಿಕನಾಗಿದ್ದನು, ಆದರೆ ಸುವಾರ್ತೆಯನ್ನು ಸಾಧರಣವಾಗಿ ಹೇಳಿ ಮುಂದಕ್ಕೆ ಹೋಗುವದು ಅವನಿಗೆ ಇಷ್ಟವಿರಲಿಲ್ಲ. ಮತ್ತು ಮನುಷ್ಯರ ಭಯ ಅಥವಾ ಅವರು ಒಪ್ಪಿಕೊಳ್ಳುತ್ತಾರೋ ಇಲ್ಲವೋ ಎಂಬ ಯೋಚನೆಯ ಬಗ್ಗೆ ಚಿಂತಿಸದೆ, ಅವನು ಯಾವ ಸತ್ಯವನ್ನೂ ಪ್ರಕಟಿಸದೆ ಇರಲಿಲ್ಲ. (ವ 20; ಗಲಾ 1:10). **28**

**20:28** ಅಲ್ಲಿದ್ದ ಸಭೆಯ ಹಿರಿಯರು (ಗ್ರೀಕ್ "ಎಪಿಸ್ಕೋಪಸ್) ಪವಿತ್ರಾತ್ಮನ ಮೂಲಕ ಹಾಗಾಗಿದ್ದರು. ಯಾವುದೇ ಸಭೆಯಲ್ಲಾದರೂ ಇಂಥ ನಾಯಕರು ಮಾತ್ರವೇ ನಾಯಕರು ಎಂಬ ಹೆಸರಿಗೆ ಯೋಗ್ಯರಾಗಿರುತ್ತಾರೆ ಮತ್ತು ಯಶಸ್ವಿಯಾಗಿ ತಮ್ಮ ಜವಾಬ್ದಾರಿಕೆಗಳನ್ನು ನಿಭಾಯಿಸಲು ಶಕ್ತರಾಗಿರುತ್ತಾರೆ – ಯೇಸು ಕಿಸ್ತನ ಕುರಿಗಳಿಗೆ ನಿಜವಾದ ಕುರುಬರಾಗಿ ಕಾರ್ಯಮಾಡುತ್ತಾರೆ (ಯೋಹಾನ 21:16; ಎಫೆ 4:11; 1 ಪೇತ್ರ 5:2-4). ಪವಿತ್ರಾತ್ಮನ ಮಾರ್ಗದರ್ಶನವಿಲ್ಲದೆ ಒಂದುವೇಳೆ ಸಭೆಗಳು ತಾವಾಗಿಯೇ ನಾಯಕರನ್ನು ಆಯ್ಕೆ ಮಾಡಿಕೊಳ್ಳುವದಾದರೆ ಅದರ ಪರಿಣಾಮಗಳನ್ನು ಅವರು ಅನುಭವಿಸಬೇಕಾಗುತ್ತದೆ-ಮತ್ತು ಎದುರಾಗುವ ಪರಿಣಾಮಗಳು ಚೆನ್ನಾಗಿರುವದಿಲ್ಲ.

"*ಸಭೆ*"– ಮತ್ತಾಯ 16:18 ರಲ್ಲಿ ನೋಟ್ಸ್ ನೋಡಿರಿ. ಈ ವಾಕ್ಯದಲ್ಲಿ ಯೇಸು ಕ್ರಿಸ್ತನನ್ನು ದೇವರು ಎಂದು ಕರೆಯಲಾಗಿದೆ – ದೇವರು "ತನ್ನ ಸ್ವಂತ ರಕ್ತವನ್ನು" ಕೊಟ್ಟು ಸಭೆಯನ್ನು ಕೊಂಡುಕೊಂಡನು – ಅದು ಯೇಸು ಕ್ರಿಸ್ತನ ರಕ್ತವಾಗಿದೆ (1 ಕೊರಿಂಥ 6:19-20; ಎಫೆ 1:7; 1 ಪೇತ್ರ 1:18-19). ಯೇಸು ಕ್ರಿಸ್ತನ ದೈವೀಕತೆಯನ್ನು ತಿಳಿಸುವ ಇತರೆ ವಚನಭಾಗಗಳು ಫಿಲಿಪ್ಪಿ 2:6; ಲೂಕ 2:11. **29**

**20:29** "*ತೋಳಗಳು*"– ಮತ್ತಾಯ 7:15; ಯೋಹಾನ 10:12. ಪೌಲನ ಮಾತಿನ ಅರ್ಥ ಸುಳ್ಳು ಬೋಧಕರು ಬಂದು ಸಭೆಯನ್ನು ಚೂರು ಮಾಡಲು ಪ್ರಯತ್ನಿಸುತ್ತಾರೆ (ರೋಮಾ

16:17-18; 1 ತಿಮೊ 4:1; 2 ಪೇತ್ರ 2:1). **30**

**20:30** ಸುಳ್ಳು ಬೋಧಕರು ಹೊರಗಿನಿಂದ ಬಾರದಂತೆ ಸಭೆಯ ನಾಯಕರು ಎಚ್ಚರವಾಗಿದ್ದರೆ ಮಾತ್ರ ಸಾಲದು. ಯಾಕಂದರೆ ಸಭೆಯ ಒಳಗೂ, ಜನರು ಯೇಸು ಕ್ರಿಸ್ತನನ್ನು ಹಿಂಬಾಲಿಸುವ ಬದಲು ತಮ್ಮನ್ನು ಹಿಂಬಾಲಿಸಬೇಕೆಂದು ಬಯಸುವ ವ್ಯಕ್ತಿಗಳು ಇರುತ್ತಾರೆ. ಹಿಂಬಾಲಕರನ್ನು ಪಡೆಯುವ ಸಲುವಾಗಿ ಅವರು ದೇವರ ವಿಷಯವಾದ ಸತ್ಯವನ್ನು ತಿರುಚುತ್ತಾರೆ, ಯಾಕಂದರೆ ಅವರಿಗೆ ಸತ್ಯಕ್ಕಿಂತಲೂ ಅವರ ದುರಭಿಮಾನವೇ ಪ್ರಾಮುಖ್ಯವಾಗಿರುತ್ತದೆ. **31**

**20:31** ವಚನ 19. ಯೇಸು ಕ್ರಿಸ್ತನ ನಂಬಿಗಸ್ತ ಸೇವಕರು ಸತ್ಯವನ್ನು ಪ್ರೀತಿಸುತ್ತರೆ ಮತ್ತು ಸತ್ಯವನ್ನು ಕೆಡಿಸಲು ಪ್ರಯತ್ನಿಸುವ ಬೋಧಕರ ವಿಷಯದಲ್ಲಿ ಎಚ್ಚರವಾಗಿರುವಂತೆ ವಿಶ್ವಾಸಿಗಳಿಗೆ ಬುದ್ಧಿಮಾತು ಹೇಳುತ್ತಾರೆ. ಯೇಸು ಕ್ರಿಸ್ತನು ಮತ್ತು ಆತನ ಅಪೊಸ್ತಲರು ಈ ಕಾರ್ಯವನ್ನು ಸತತವಾಗಿ ಮಾಡುತ್ತಿದ್ದರು (ಮತ್ತಾಯ 7:15; 24:4-5; 2 ಕೊರಿಂಥ 11:13-15; 1 ಯೋಹಾನ 2:18-19; ಯೂದ 3,4). **32**

**20:32** ಯೇಸು ಕ್ರಿಸ್ತನ ಸುವಾರ್ತೆಯಲ್ಲಿ ನಮಗೆ "ಕೃಪಾವಾಕ್ಯವನ್ನು" ಕೊಡಲಾಗಿದೆ.

*"ನಿಮ್ಮಲ್ಲಿ ಭಕ್ತಿವೃದ್ಧಿಯನ್ನುಂಟು ಮಾಡುತ್ತದೆ"*– ಎಫೆ 4:11-13,16,29; 2 ತಿಮೊ 3:16-17; 1 ಪೇತ್ರ 2:1-2; 2 ಪೇತ್ರ 2:18; ಯೂದ 20.

*"ಹಕ್ಕು"*– 26:18; ರೋಮಾ 8:16-17; 1 ಕೊರಿಂಥ 6:9; ಎಫೆ 1:11,14; 5:5; ಕೊಲೊ 1:12; 3:24; ಇಬ್ರಿ 1:14; 1 ಪೇತ್ರ 1:4; ಪ್ರಕ 21:7.

*"ಪವಿತ್ರರಾದವರು"*– ಯೋಹಾನ 17:17-19; ರೋಮಾ 8:15-16; 1 ಕೊರಿಂಥ 1:2,30; 6:11; ಎಫೆ 5:26. **33**

**20:33** 1 ತಿಮೊ 6:6-10 ರಲ್ಲಿ ಬರೆಯಲ್ಪಟ್ಟಿರುವ ಅಪಾಯಗಳ ಬಗ್ಗೆ ಆತನು ಚೆನ್ನಾಗಿ ಬಲ್ಲವನಾಗಿದ್ದನು. ಫಿಲಿಪ್ಪಿ 4:10-13 ರೊಂದಿಗೆ ಹೋಲಿಸಿ ನೋಡಿರಿ. **34**

**20:34** 18:3 ನೋಡಿರಿ. **35**

**20:35** ಯೇಸು ಕ್ರಿಸ್ತನ ಈ ಮಾತುಗಳು ಯಾವ ಸುವಾರ್ತೆಗಳಲ್ಲಿಯೂ ಬರೆಯಲ್ಪಟ್ಟಿಲ್ಲ ಆದರೆ ಆತನು ಈ ತತ್ವವನ್ನು ತನ್ನ ಜೀವನ ಹಾಗು ಸೇವೆಯಲ್ಲಿ ಯಾವಾಗಲೂ ತೋರಿಸಿದ್ದಾನೆ (ಯೇಸು ಕ್ರಿಸ್ತನು ಬರೆಯಲ್ಪಡದಿರುವ ಅನೇಕ ಕಾರ್ಯಗಳನ್ನು ಮಾಡಿದ್ದಾನೆ ಮತ್ತು ಅನೇಕ ವಿಷಯಗಳನ್ನು ಹೇಳಿದ್ದಾನೆ – ಯೋಹಾನ 21:25). ಬಡವರು ಮತ್ತು ಅಸಹಾಯಕರೊಂದಿಗೆ ಆತನು ನಡೆದುಕೊಂಡ ರೀತಿಯನ್ನು ನೋಡಿರಿ ಮತ್ತಾಯ 9:36; 11:5; 19:21; ಲೂಕ 4:18; 6:20; 11:41; 14:13; ಯೋಹಾನ 5:6-8 (ಆತನು ತನ್ನ ಬಹುತೇಕ ಅದ್ಭುತಗಳನ್ನು ಬಡವರ ನಡುವೆ ಮಾಡಿದನು). ಆತನು ಯಾರಿಗೆಲ್ಲಾ ಸಹಾಯ ಮಾಡಿದನೋ ಅವರಿಂದ ಏನನ್ನೂ ನಿರೀಕ್ಷಿಸದೆ ತನಗಿರುವದನ್ನೆಲ್ಲಾ ಕೊಟ್ಟನು. ಮತ್ತಾಯ

20:28; ಯೋಹಾನ 10:11 ರೊಂದಿಗೆ ಹೋಲಿಸಿ ನೋಡಿರಿ. ಪೌಲನು ಆತನ ಮಾದರಿಯನ್ನು ಅನುಸರಿಸಿದನು – 1 ಕೊರಿಂಥ 9:12-17; 2 ಕೊರಿಂಥ 12:15. "ದೈವೀಕತೆಯು" ಆರ್ಥಿಕ ಲಾಭದ ಸಾಧನವಾಗಿದೆ (1 ತಿಮೊ 6:5) ಮತ್ತು ತಮಗಾಗಿ ಆಸ್ತಿ ಮಾಡುವದು ಹಾಗೂ ಹಣ ಸಂಪಾದನೆ ಮಾಡುವದೇ ನಿಜವಾದ ಆಶೀರ್ವಾದ ಎಂದು ಇಂದು ಅನೇಕರು ಭಾವಿಸುತ್ತಾರೆ ಆದರೆ ಅವನು ಹಾಗಿರಲಿಲ್ಲ (ಯೋಹಾನ 12:6 ರೊಂದಿಗೆ ಹೋಲಿಸಿ ನೋಡಿರಿ). ಅಂಥ ಜನರು ಕ್ರಿಯಾ ರೂಪವಾಗಿರುವ ಕ್ರೈಸ್ತತ್ವವು ನಮಗೆ ಎಷ್ಟು ಸಿಗುತ್ತದೆ ಎಂದು ನೋಡುವದಲ್ಲ ಬದಲಾಗಿ ನಾವು ಇತರರಿಗೆ ಎಷ್ಟು ಕೊಡಬಹುದು ಎಂದು ಯೋಚಿಸುವದೇ ಆಗಿದೆ ಎಂಬದನ್ನು ಎಂದಿಗೂ ಅರ್ಥಮಾಡಿಕೊಳ್ಳದವರಾಗಿದ್ದಾರೆ. ಕರ್ತನಾದ ಯೇಸು ಕ್ರಿಸ್ತನು ತಾನೇ ಹೇಳಿರುವ ಈ ಮೂಲಭೂತವಾದ ತತ್ವವನ್ನು ನಾವು ಕಲಿತುಕೊಂಡಿದ್ದೇವೆಯೇ? ಕೊಡುವದರ ಬಗೆಗಿನ ನೋಟ್ಸ್ ಮತ್ತು ರೆಫರೆನ್ಸ್ ಗಳನ್ನು 2 ಕೊರಿಂಥ 9:15 ರಲ್ಲಿ ನೋಡಿರಿ. **37**

**20:37** ಅವನ ಮಾತುಗಳಲ್ಲಿ ಯಾವ ಅತಿಶಯೋಕ್ತಿಯೂ ಇಲ್ಲ, ಅವನು ತನ್ನ ಸಮಯ, ಬಲ, ಹಣ, ತಲಾಂತುಗಳು ಮತ್ತು ತನ್ನನ್ನೇ ಅವರಿಗಾಗಿ ಕೊಟ್ಟಿದ್ದಾನೆ ಎಂಬದು ಅವರಿಗೆ ಗೊತ್ತಿತ್ತು. ಅವರ ಕಣ್ಣೀರು ಈಗ ಅವರ ಪ್ರೀತಿಗೆ ಸಾಕ್ಷಿಯಾಗಿದೆ.

# 21 **4**

**21:4** ಪೌಲನ ವಿಷಯವಾಗಿ ದೇವರಾತ್ಮನು ಅವರೊಳಗೆ ದೊಡ್ಡ ಕಾಳಜಿಯನ್ನು ಹುಟ್ಟಿಸಿದನು ಮತ್ತು ಅಲ್ಲಿ ಅವನಿಗೆ ಎದುರಾಗುವ ಹಿಂಸೆಗಳನ್ನು ಬಹುಶಃ ಅವರಿಗೆ ಪ್ರಕಟಪಡಿಸಿರಬಹುದು. ಆದರೆ ಅದೇ ಆತ್ಮನು ಯೆರೂಸಲೇಮಿಗೆ ಹೋಗುವಂತೆ ಪೌಲನನ್ನು ಪ್ರೇರೇಪಿಸಿದನು (20:22). **5**

**21:5** 20:36 ನೋಡಿರಿ. **8**

**21:8** *"ಫಿಲಿಪ್ಪನು"*, *"ಏಳು"*– 6:5; 8:5-40. ಅಪೊಸ್ತಲನಾದ ಪೌಲನು (1:13) ಇವನಲ್ಲ ಎಂಬದನ್ನು ಸೂಚಿಸುವದಕ್ಕಾಗಿ ಇವನನ್ನು "ಸುವಾರ್ತಿಕನು" –ಎಂದು ಕರೆಯಲಾಗಿದೆ. **9**

**21:9** ಸತ್ಯವೇದದಲ್ಲಿ ಪ್ರವಾದನೆಯ ವರವನ್ನು ಹೊಂದಿದ್ದ ಇತರೆ ಸ್ತ್ರೀಯರು – ವಿಮೋ 15:20; ನ್ಯಾಯ 4:4; 2 ಅರಸು 22:14; ನೆಹೆ 6:14; ಯೆಶಾಯ 8:3; ಲೂಕ 2:36. ಕುಟುಂಬದಲ್ಲಿ ನಾಲ್ಕು ಸಹ ಖಂಡಿತವಾಗಿಯೂ ಅಸಹಜವಾದ ವಿಷಯವಾಗಿದೆ ಮತ್ತು ಫಿಲಿಪ್ಪನು (ಹಾಗೂ ನಿಸ್ಸಂದೇಹವಾಗಿ ಅವನ ಹೆಂಡತಿ) ಅವರ ಮೇಲೆ ಬೀರಿದ ಪ್ರಭಾವಕ್ಕೆ ಒಳ್ಳೆಯ ಸಾಕ್ಷಿಯಾಗಿದೆ. **10**

**21:10** 11:27 ನೋಡಿರಿ. **11**

**21:11** ಯೆರೂಸಲೇಮಿಗೆ ಹೋಗಬಾರದೆಂದು ಪವಿತ್ರಾತ್ಮನು ಆಜ್ಞಾಪಿಸುತ್ತಿದ್ದಾನೆ ಎಂಬದಾಗಿ ಅವನು ಪೌಲನಿಗೆ ಹೇಳಲಿಲ್ಲ. ಪವಿತ್ರಾತ್ಮನು ತನ್ನನ್ನು ಯಾವುದೇ ಗೊಂದಲಗಳಿಗೆ ಒಳಪಡಿಸಿಕೊಳ್ಳುವದಿಲ್ಲ (20:22). ಪವಿತ್ರಾತ್ಮನು ಅಗಬನ ಮೂಲಕ ನಿಖರವಾಗಿ ಏನಾಗುತ್ತದೆ ಎಂಬದಾಗಿ ಪೌಲನಿಗೆ ತಿಳಿಸಿದನು, ಯಾಕಂದರೆ ಪೌಲನು ಅದಕ್ಕಾಗಿ ಸಿದ್ಧಗೊಳ್ಳಬೇಕಾಗಿತ್ತು. **12**

**21:12** ವಚನ 4. **13**

**21:13** 20:24 ನೋಡಿರಿ. **16**

**21:16** *"ಕುಪ್ರ ದ್ವೀಪ"*– 13:4-12. **17**

**21:17** ಈ ಸಮಯದಲ್ಲಿ ಅವರು ಇತರೆ ಸಭೆಗಳಿಂದ ಹಣವನ್ನು ಕಾಣಿಕೆಯಾಗಿ ತಂದರು (ರೋಮಾ 15:25-27; 1 ಕೊರಿಂಥ 16:1-4). **18**

**21:18** *"ಯಾಕೋಬನು"*– 15:13. **19**

**21:19** 15:4 ನೋಡಿರಿ. ಯೆಹೂದ್ಯರು (ಸಮಾರ್ಯದವರನ್ನು ಹೊರತುಪಡಿಸಿ) ಇತರೆ ಜನರನ್ನು "ಅನ್ಯರೆಂದು" ಕರೆಯುತ್ತಿದ್ದರು. **20**

**21:20** ಯೆಹೂದ್ಯರಾದ ಇವರು ಯೇಸು ಕ್ರಿಸ್ತನನ್ನು ಇಸ್ರಾಯೇಲಿನ ಮೆಸ್ಸೀಯನೆಂದು ಅಂಗೀಕರಿಸಿಕೊಂಡಿದ್ದರು, ಆತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಿದ್ದರು ಮತ್ತು ಕ್ರೈಸ್ತರಾಗಿದ್ದರು. ಆದರೆ ಹಳೆಯ ಒಡಂಬಡಿಕೆಯಲ್ಲಿ ಪ್ರಕಟಪಡಿಸಲಾಗಿರುವ ಮೋಶೆಯ ಧರ್ಮಶಾಸ್ತ್ರವನ್ನು ಇನ್ನೂ ಪ್ರೀತಿಸುತ್ತಿದ್ದರು ಮತ್ತು ಸಂಪ್ರದಾಯಗಳ ಪ್ರಕಾರ, "ಶುದ್ಧ" ಮತ್ತು "ಅಶುದ್ಧ" ಆಹಾರಗಳು, ಹಬ್ಬದ ದಿನಗಳು ಇತ್ಯಾದಿಗಳನ್ನು ಆಚರಿಸುತ್ತಿದ್ದರು. ಈ ಕಾರ್ಯಗಳೆಲ್ಲವೂ ಯೇಸು ಕ್ರಿಸ್ತನಲ್ಲಿರುವ ಆತ್ಮೀಕ ವಾಸ್ತವಗಳ ನೆರಳುಗಳು, ವಿಧಗಳು ಮತ್ತು ಚಿತ್ರಗಳು ಎಂಬದನ್ನು ಅವರು ಇನ್ನೂ ಅರ್ಥಮಾಡಿಕೊಳ್ಳದವರಾಗಿದ್ದರು – ಮತ್ತಾಯ 5:17; ಕೊಲೊ 2:17; ಇಬ್ರಿ 10:1. (ಇಬ್ರಿಯ ಪತ್ರಿಕೆಯನ್ನು ಬರೆದಿರುವ ಒಂದು ಉದ್ದೇಶ ಇದನ್ನು ತೋರಿಸುವದು ಮತ್ತು ಹಳೆಯ ಒಡಂಬಡಿಕೆಯು ಈಗ ಕಾರ್ಯದಲ್ಲಿಲ್ಲ ಎಂಬದನ್ನು ಕಲಿಸುವದು. ಆದರೆ ಈ ಪತ್ರಿಕೆಯನ್ನು ಈ ಸಮಯಕ್ಕಾಗಿ ಬರೆಯಲಾಗಿಲ್ಲ). **21**

**21:21** ಇದು ಸುಳ್ಳು ಆರೋಪವಾಗಿದೆ. ಯೆಹೂದ್ಯ ಕ್ರೈಸ್ತರು ತಮ್ಮ ಮಕ್ಕಳಿಗೆ ಸುನ್ನತಿ ಮಾಡಿಸುವದನ್ನು ಅಥವಾ ಧರ್ಮಶಾಸ್ತ್ರ ಅನುಸರಿಸುವದನ್ನು ನಿಲ್ಲಿಸಬೇಕೆಂದು ಪೌಲನು ಎಲ್ಲಿಯೂ ಹೇಳಿಲ್ಲ. ಧರ್ಮಶಾಸ್ತ್ರದ ಮೂಲಕ ರಕ್ಷಣೆಯು ದೊರೆಯುವದಿಲ್ಲ ಎಂಬದನ್ನು ಅವನು ಅವರಿಗೆ ಮತ್ತು ಉಳಿದವರೆಲ್ಲರಿಗೆ ಹೇಳಿದ್ದಾನಷ್ಟೇ (13:39; ರೋಮಾ 3:28; ಗಲಾ 2:15-16). ಮತ್ತು ಯೆಹೂದ್ಯರ ಆಚಾರಗಳು ಮತ್ತು ಸಂಪ್ರದಾಯಗಳನ್ನು ಅನುಸರಿಸಬಾರದೆಂದು ಅವನು ದೇವರ ಕಡೆಗೆ ತಿರುಗಿಕೊಂಡ ಅನ್ಯರಿಗೆ ಬೋಧಿಸಿದ್ದಾನೆ (ಗಲಾ 5:1; 5:15; ಕೊಲೊ 2:16-17). ಆದರೆ ಧರ್ಮಶಾಸ್ತ್ರದ ಅತ್ಯಂತ ಪ್ರಾಮುಖ್ಯವಾದ

ಸಂಗತಿಗಳಾದ – ಅದರ ನೀತಿ – ಯೆಹೂದ್ಯನಾಗಲಿ ಅಥವಾ ಅನ್ಯನಾಗಲಿ ಪ್ರತಿಯೊಬ್ಬ ವಿಶ್ವಾಸಿಯಲ್ಲಿಯೂ ನೆರವೇರಬೇಕು ಎಂಬದನ್ನು ಕಲಿಸಿದ್ದಾನೆ (ರೋಮಾ 8:4). **22-24**

**21:22-24** ಪೌಲನು ಯೆಹೂದ್ಯ ವಿಶ್ವಾಸಿಗಳನ್ನು ವಿರೋಧಿಸುತ್ತಿಲ್ಲ ಎಂಬದನ್ನು ತೋರ್ಪಡಿಸಬಹುದಾದ ಮಾರ್ಗವನ್ನು ಅವರು ಆತನಿಗೆ ತಿಳಿಸಿದರು. ಪೌಲನು ಒಮ್ಮೆ ಹಿಂದೆ ಮಾಡಿದ್ದ "ವ್ರತ" ಬಹುಶಃ ಇದಕ್ಕೆ ಸಮಾನವಾಗಿರಬಹುದು – ಈಗ ಅದು ನಾಜೀರ ವ್ರತವಾಗಿದೆ. 18:18 ನೋಡಿರಿ. **25**

**21:25** 15:20,29 ನೋಡಿರಿ. ಪೌಲನಿಗೆ ಗೊತ್ತಿಲ್ಲದಿರುವ ವಿಷಯವನ್ನು ಅವರು ಅವನಿಗೆ ಹೇಳಲಿಲ್ಲ; ಅನ್ಯರಾಗಿದ್ದು ಯೇಸು ಕ್ರಿಸ್ತನನ್ನು ಅಂಗೀಕರಿಸಿಕೊಂಡಿರುವ ವಿಶ್ವಾಸಿಗಳು ಮೋಶೆಯ ಧರ್ಮಶಾಸ್ತ್ರವನ್ನು ಪಾಲಿಸಲೇಬೇಕು ಎಂಬದಾಗಿ ಒತ್ತಾಯಪಡಿಸುತ್ತಿಲ್ಲ ಎಂಬದನ್ನು ಪೌಲನಿಗೆ ದೃಢಪಡಿಸಿದರು. **26**

**21:26** ಈ ಶುದ್ಧೀಕರಣವು ದೇವಾಲಯದಲ್ಲಿರುವ ಯಾಜಕರಿಗೆ ತಿಳಿಸುವದು ಮತ್ತು ಪವಿತ್ರ ಜಲವನ್ನು ತಮ್ಮ ಮೇಲೆ ಚಿಮುಕಿಸಿಕೊಳ್ಳುವ ಕಾರ್ಯವನ್ನು ಒಳಗೊಂಡಿರುತ್ತದೆ. ಆ ನಾಲ್ವರು ಮಾಡಬೇಕಾದ ಅರ್ಪಣೆಯ ಬಗ್ಗೆ ಸಂಖ್ಯಾ 6:14-15 ರಲ್ಲಿ ತಿಳಿಸಲಾಗಿದೆ. ಪೌಲನು ತಾನಾಗಿಯೇ ಇಲ್ಲಿ ಯಾವುದೇ ವ್ರತವನ್ನು ಮಾಡುತ್ತಿಲ್ಲ. ಹಳೆಯ ಒಡಂಬಡಿಕೆಯ ಎಲ್ಲಾ ಕಾಣಿಕೆಗಳು ಮತ್ತು ಯಜ್ಞಗಳು ಯೇಸು ಕ್ರಿಸ್ತನ ಬಗ್ಗೆ ಮಾತನಾಡುತ್ತವೆ. ಆತನು ಚಿತ್ರಣಗಳಾಗಿದ್ದವುಗಳ ವಾಸ್ತವವಾಗಿದ್ದಾನೆ (ಯಾಜಕ 1:2 ನೋಡಿರಿ). ಈ ನಾಲ್ವರು ಕ್ರೈಸ್ತರಾಗಿದ್ದರಿಂದ ಯೇಸು ಕ್ರಿಸ್ತನ ಯಜ್ಞ ಮಾತ್ರವೇ ತಮ್ಮ ಪಾಪಗಳನ್ನು ಪರಿಹರಿಸುತ್ತದೆ ಎಂದು ಚೆನ್ನಾಗಿ ಬಲ್ಲವರಾಗಿದ್ದರು. ಒಂದುವೇಳೆ ಅವರಿಗೆ ಗೊತ್ತಿಲ್ಲದೆ ಹೋಗಿದ್ದರೆ, ಪೌಲನು ಅವರಿಗೆ ಸ್ಪಷ್ಟವಾಗಿ ಹೇಳಿರಬಹುದೇನೋ ಎಂದು ನಾವು ಸಂದೇಹಪಡಬಹುದೇ? ಈ ಎಲ್ಲಾ ವಿಷಯಗಳಲ್ಲಿ ಪೌಲನು 1 ಕೊರಿಂಥ 9:19-23 ರಲ್ಲಿ ತಾನೇ ಹೇಳಿರುವ ತನ್ನ ಮಾತುಗಳಿಗನುಸಾರವಾಗಿ ನಡೆದುಕೊಂಡನು. ಯಾರನ್ನೆಲ್ಲಾ ಉನ್ನತವಾದ ಹಾಗೂ ಉತ್ತಮವಾದ ಸತ್ಯಕ್ಕಾಗಿ ಗೆಲ್ಲಬೇಕೆಂದು ನಿರೀಕ್ಷಿಸಿದನೋ ಅವರಿಗೆ ಪ್ರೀತಿ ಮತ್ತು ನಮ್ರತೆಯನ್ನು ಅವನು ತೋರಿಸುತ್ತಿದ್ದನು. **27**

**21:27** *"ಆಸ್ಯ"*– 18:19; 19:1,8,9; 20:19. **29**

**21:29** ಪೌಲನು ಅನ್ಯನಾಗಿದ್ದ ತ್ರೊಫಿಮನನ್ನು ದೇವಾಲಯದೊಳಗೆ ಕರೆದುಕೊಂಡು ಬಂದಿರಲಿಲ್ಲ. ಯಾವ ಯೆಹೂದ್ಯರನ್ನು ಗೆಲ್ಲಬೇಕೆಂದು ಅವನು ಬಯಸುತ್ತಿದ್ದನೋ ಅವರಿಗೆ ನೋವಾಗುವ ಹಾಗೆ ಅವನು ಯಾವ ಕಾರ್ಯವನ್ನು ಮಾಡಲಿಲ್ಲ. **31**

**21:31** ಯೆರೂಸಲೇಮಿನಲ್ಲಿ ಆಗ ರೋಮನ್ನರು ಆಳ್ವಿಕೆ ಮಾಡುತ್ತಿದ್ದರು. **36**

- **21:36** 22:22; ಲೂಕ 23:18; ಯೋಹಾನ 15:18-21 ನೋಡಿರಿ. **39**

**21:39** *"ಪ್ರಖ್ಯಾತ ಪಟ್ಟಣದವನು"*– ಏಷ್ಯಾ ಮೈನರ್ ನ ದಕ್ಷಿಣ ಭಾಗದಲ್ಲಿದ ಕಿಲಿಕ್ಯ

ಸೀಮೆಗೆ ತಾರ್ಸ ಪಟ್ಟಣವು ರಾಜಧಾನಿಯಾಗಿತ್ತು. (ಪ್ರಾಚೀನ ಕಾಲದ ಚರಿತ್ರೆಗಾರರ ಪ್ರಕಾರ) ಅದು ವಾಣಿಜ್ಯ ಕೇಂದ್ರವಾಗಿದ್ದು ಅಥೇನೆಯನ್ನು ಮೀರಿಸುವಂಥ ಶೈಕ್ಷಣಿಕ ಹಾಗೂ ತತ್ವಜ್ಞಾನದ ಆಸಕ್ತಿ ಅಲ್ಲಿನವರಲ್ಲಿತ್ತು. **40**

**21:40** *"ಇಬ್ರಿಯ ಭಾಷೆ"*– ಬಹುಶಃ ಅರೆಮಾಯ ಭಾಷೆಯಾಗಿರಬಹುದು ಯಾಕಂದರೆ ಇದು ಸತ್ಯವೇದದ ಇಬ್ರಿಯ ಭಾಷೆಗೆ ಸಮಾನವಾಗಿದೆ ಮತ್ತು ಆಗಿನ ಕಾಲದಲ್ಲಿ ಪಾಲೆಸ್ತೀನಿನಲ್ಲಿ ಜೀವಿಸುತ್ತಿದ್ದ ಯೆಹೂದ್ಯರು ಈ ಭಾಷೆಯನ್ನೇ ಮಾತನಾಡುತ್ತಿದ್ದರು. ಇಬ್ರಿಯರು ಈ ಭಾಷೆಯನ್ನು ಮಾತನಾಡುತ್ತಿದ್ದರಿಂದ ಕೆಲವೊಮ್ಮೆ ಇದನ್ನು "ಇಬ್ರಿಯ" –ಎಂದು ಕರೆಯಲಾಗುತ್ತಿತ್ತು.

# 22 1

**22:1** 7:2 ನೋಡಿರಿ. **3**

**22:3** *"ಗಮಾಲಿಯೇಲನು"*– 5:34-40.

*"ಅಭಿಮಾನಿ"*– ಫಿಲಿಪ್ಪಿ 3:4-6. **4-5**

**22:4-5** 8:1,3; 9:1-2 ನೋಡಿರಿ. **6-13**

**22:6-13** 9:3-18. **10**

**22:10** *"ಕರ್ತನೇ ನಾನೇನು ಮಾಡಬೇಕು?"*– 9ನೇ ಅಧ್ಯಾಯದಲ್ಲಿ ಈ ಪ್ರಶ್ನೆಯನ್ನು ಬರೆಯಲಾಗಿಲ್ಲ. ಪೌಲನು ಯೇಸು ಕ್ರಿಸ್ತನ ಒಡೆತನಕ್ಕೆ ತನ್ನನ್ನು ಒಪ್ಪಿಸಿಕೊಟ್ಟದ್ದರ ಬಗ್ಗೆ ಇದು ಮಾತನಾಡುತ್ತದೆ, ಅವರು ರೂಪಾಂತರಗೊಂಡ ದಿನದಂದು ಇದು ಪ್ರಾರಂಭವಾಯಿತು ಮತ್ತು ಅವನ ಜೀವನದಾದ್ಯಂತ ಇದನ್ನು ನಾವು ನೋಡಬಹುದಾಗಿದೆ. ಅವರು ಯೇಸು ಕ್ರಿಸ್ತನನ್ನು ರಕ್ಷಕನನ್ನಾಗಿ ಮತ್ತು ಕರ್ತನನ್ನಾಗಿ ಅಂಗೀಕರಿಸಿಕೊಳ್ಳಲು ಎಂದಿಗೂ ಪ್ರಯತ್ನಿಸಲಿಲ್ಲ. ಆದರೆ ಇಂದು ಅನೇಕರು ಈ ಕಾರ್ಯವನ್ನು ಮಾಡಲು ಪ್ರಯತ್ನಿಸುತ್ತಿರುವಂತೆ ತೋರುತ್ತದೆ, ಆದರೆ ಈ ನೋಟ್ಸ್ ಗಳ ಬರಹಗಾರನ ನಂಬಿಕೆ ಏನೆಂದರೆ ಅಂಥ ಆಲೋಚನೆಯು ಪೌಲನ ಆಲೋಚನೆಯಿಂದ ಅಥವಾ ಮೂಲ ಅಪೊಸ್ತಲರು ಹಾಗು ಶಿಷ್ಯರ ಮನಸ್ಸುಗಳಲ್ಲಿ ಇರಲೇ ಇಲ್ಲ ಎಂಬದಾಗಿದೆ. ಯೇಸು ಕ್ರಿಸ್ತನು ಅದ್ಭುತನಾದ ವ್ಯಕ್ತಿಯಾಗಿದ್ದಾನೆ-ಆತನು ಕ್ರಿಸ್ತನಾಗಿದ್ದಾನೆ, ಮನುಷ್ಯ ಕುಮಾರನಾಗಿದ್ದಾನೆ, ದೇವಕುಮಾರನಾಗಿದ್ದಾನೆ, ಯೆಹೋವ ದೇವರ ಪ್ರತಿರೂಪವಾಗಿದ್ದಾನೆ, ರಕ್ಷಕನಾಗಿದ್ದಾನೆ ಮತ್ತು ಕರ್ತನಾಗಿದ್ದಾನೆ. ಒಬ್ಬ ಪಾಪಿಯು ಪಶ್ಚಾತ್ತಾಪಪಡುತ್ತಾ ಆತನ ಬಳಿಗೆ ಬರುವಾಗ, ಅವನಿಗಾಗಲಿ (ಅಥವಾ ಅವಳಿಗಾಗಲಿ) ಆತನ ಕುರಿತಾದ ಈ ಸತ್ಯಗಳ ಬಗ್ಗೆ ಅತ್ಯಲ್ಪವಾದ ಮಾಹಿತಿಯಿದ್ದರೂ ಮತ್ತು ಅವರಲ್ಲಿ ಒಬ್ಬನಿಗೆ ಅಥವಾ ಇನ್ನೊಬ್ಬನಿಗೆ (ರಕ್ಷಣೆ ಹೊಂದಬೇಕಾದರೆ ದೈವಶಾಸ್ತ್ರವನ್ನು ಹೆಚ್ಚಾಗಿ ತಿಳಿದುಕೊಳ್ಳುವ ಅವಶ್ಯಕತೆಯಿಲ್ಲ) ಎಂಬ

ಭಾವನೆ ಮನಸ್ಸಿನಲ್ಲಿ ಇರುವದಾದರೆ, ಅವನು ಬೇಕೆಂದೇ ಯಾರನ್ನೂ ನಿರಾಕರಿಸುವದಿಲ್ಲ ಮತ್ತು ಯೇಸು ಕ್ರಿಸ್ತನಲ್ಲಿ ನಿಜವಾದ ನಂಬಿಕೆಯನ್ನಿಡಲು ನಿರೀಕ್ಷಿಸುವದಿಲ್ಲ. ಅದ್ಭುತನಾಗಿರುವ ಈ ವ್ಯಕ್ತಿಯನ್ನು ಅಂಗೀಕರಿಸಿಕೊಳ್ಳಬೇಕೆಂದರೆ ಆತನಿರುವ ಹಾಗೆಯೇ, ಮತ್ತು ಆತನು ಏನಾಗಿದ್ದಾನೋ ಹಾಗೆಯೇ-ಅಂದರೆ ಆತನನ್ನು ಅಂಗೀಕರಿಸಿಕೊಳ್ಳುವಾಗ ಆತನು ಯಾರಾಗಿದ್ದಾನೆ ಎಂದು ನಮಗೆ ಕೊಂಚವೇ ಗೊತ್ತಿದ್ದರೂ ಆತನನ್ನು ಅಂಗೀಕರಿಸಿಕೊಳ್ಳುವದಾಗಿದೆ ಮತ್ತು ನಮ್ಮ ಜೀವಿತದ ಉಳಿದ ದಿವಸಗಳು ಆತನು ಯಾರಾಗಿದ್ದಾನೆ ಹಾಗೂ ಆತನಿಗೆ ಪೂರ್ಣ ವಿಧೇಯರಾಗಿ ಆತನನ್ನು ಹಿಂಬಾಲಿಸುವದೆಂದರೆ ಏನು ಎಂಬದನ್ನು ಅರ್ಥಮಾಡಿಕೊಳ್ಳುವದಾಗಿದೆ. ಈ ವಾಕ್ಯದಲ್ಲಿ ಪೌಲನು ಯೇಸು ಕ್ರಿಸ್ತನನ್ನು ಕರ್ತನೆಂದು ತಿಳಿದುಕೊಂಡನು ಎಂಬದನ್ನು ನಾವು ನೋಡಬಹುದು ಮತ್ತು ತಾನೇನು ಮಾಡಬೇಕೆಂಬದನ್ನು ಹೇಳುವ ಅಧಿಕಾರ ಯೇಸು ಕ್ರಿಸ್ತನಿಗಿದೆ ಎಂಬದನ್ನೂ ತಿಳಿದುಕೊಂಡನು ಮತ್ತು ಆತನ ಆದೇಶಗಳಿಗಾಗಿ ಕಾಯುತ್ತಿದ್ದನು ಎಂಬದನ್ನೂ ನಾವು ನೋಡುತ್ತೇವೆ. ನಿಜವಾದ ಕ್ರೈಸ್ತೀಯ ಜೀವಿತಕ್ಕೆ ಇದೊಂದೇ ಮಾರ್ಗವಾಗಿದೆ. ಕೆಳಗೆ ಕೊಡಲಾಗಿರುವ ವಾಕ್ಯಭಾಗಗಳ ಬಗ್ಗೆ ಆಲೋಚಿಸಿರಿ: - ಮತ್ತಾಯ 4:17. ಪ್ರತಿಯೊಬ್ಬ ಪಾಪಿಯು ಯೇಸು ಕ್ರಿಸ್ತನ ಒಡೆತನಕ್ಕೆ ವಿರುದ್ಧವಾಗಿರುವ ತನ್ನ ಎದುರುಬೀಳುವ ವಿಷಯದಲ್ಲಿ ಪಶ್ಚಾತ್ತಾಪಪಡಬೇಕು. ಅರಸನಿಗೆ ತನ್ನನ್ನು ಒಪ್ಪಿಸಿಕೊಡದೆ ಹೋದರೆ ಒಬ್ಬನು ಆತನ ರಾಜ್ಯದೊಳಗೆ ಪ್ರವೇಶಿಸಲು ಹೇಗೆ ಸಾಧ್ಯ? ಇದೇ ಪ್ರಕಾರ ಆತನು ಶಿರಸ್ಸಾಗಿದ್ದಾನೆ ಮತ್ತು ಆತನ ದೇಹವಾಗಿರುವ ಸಭೆಗೆ ಕರ್ತನಾಗಿದ್ದಾನೆ. ಆತನ ದೇಹದೊಳಗೆ ಪವಿತ್ರಾತ್ಮನ ಮೂಲಕ ಒಬ್ಬನು ದೀಕ್ಷಾಸ್ನಾನ ಹೊಂದುವದು ಹೇಗೆ – 1 ಕೊರಿಂಥ 12:12-13 – ಅವನು ಯೇಸು ಕ್ರಿಸ್ತನ ಒಡೆತನವನ್ನು ತನ್ನ ಹೃದಯದಲ್ಲಿ ನಿರಾಕರಿಸುತ್ತಿರುವದಾದರೆ ಇದು ಸಾಧ್ಯವೇ? - ಮತ್ತಾಯ 7:21. ಯೇಸುವೇ ನಮ್ಮ ಕರ್ತನೆಂದು ನಮ್ಮನ್ನು ನಾವು ಆತನಿಗೆ ಒಪ್ಪಿಸಿಕೊಡುವದರಲ್ಲಿ ತಂದೆಯಾದ ದೇವರ ಚಿತ್ತವು ಖಂಡಿತವಾಗಿಯೂ ಅದರಲ್ಲಿ ಒಳಗೊಂಡಿರುತ್ತದೆ – ಫಿಲಿಪ್ಪಿ 2:9-11. - ಮತ್ತಾಯ 16:24-26. ಒಬ್ಬನು ತನ್ನನ್ನು ನಿರಾಕರಿಸಿ ಯೇಸು ಕ್ರಿಸ್ತನನ್ನು ಹಿಂಬಾಲಿಸಲು ತನ್ನ ಶಿಲುಬೆಯನ್ನು ಹೊತ್ತುಕೊಳ್ಳುವದರಲ್ಲಿ ಅವನು ತನ್ನ ಮೇಲಿನ ತನ್ನ ಒಡೆತನವನ್ನು ನಿರಾಕರಿಸಿ ಆತನನ್ನು ಕರ್ತನನ್ನಾಗಿ ಅಂಗೀಕರಿಸಿಕೊಳ್ಳುವ ಕಾರ್ಯವು ಒಳಗೊಂಡಿರುತ್ತದೆ. - ಮಾರ್ಕ 10:17-27. ನಿತ್ಯಜೀವವನ್ನು ಪಡೆಯಬೇಕೆಂದರೆ ಏನು ಮಾಡಬೇಕೆಂದು ಯೇಸುವಿನ ಬಳಿಗೆ ಬಂದು ಕೇಳಿದ ಯೌವನಸ್ಥನಿಗೆ ಯೇಸು ಕ್ರಿಸ್ತನು ಹೇಳಿದ್ದೇನೆಂದರೆ ನಿನ್ನ ಅಧಿಕಾರಿಗಳಿಗೆ ಅಧೀನನಾಗಿರು ಮತ್ತು ಆತನಿಗೆ ವಿಧೇಯನಾಗಿ ನಡೆದುಕೋ, ಯೇಸು ಕ್ರಿಸ್ತನನ್ನು ಹಿಂಬಾಲಿಸುವಾಗ ನಿನಗೆ ಯಾವುದೇ ಕಾರ್ಯಗಳು ತಡೆಯಾಗಿರದಿರಲಿ. ಮತ್ತು ಯೇಸು ಕ್ರಿಸ್ತನು ದೇವರ ರಾಜ್ಯದೊಳಗೆ ಪ್ರವೇಶಿಸುವದು – ವ 23, ಮತ್ತು ರಕ್ಷಣೆ ಹೊಂದುವದರ ಬಗ್ಗೆ – ವ

26,27 ಮಾತನಾಡಿದನು. - ಲೂಕ 6:46; ಮತ್ತು ಮತ್ತಾಯ 7:24. ಯೇಸು ಕ್ರಿಸ್ತನ ಬೋಧಕನೆಗಳನ್ನು ಕಡೆಗಣಿಸಿ ಮತ್ತು ನಿರಾಕರಿಸಿ, ಉಸುಬಿನ ಮೇಲೆ ಮನೆ ಕಟ್ಟಿಕೊಂಡ ಮೂರ್ಖರು ರಕ್ಷಣೆ ಹೊಂದಿದ್ದಾರೆ ಎಂದು ನಾವು ನಂಬಬಹುದೇ – ಮತ್ತಾಯ 7:26? - ಲೂಕ 14:26-27,33. ಒಂದುವೇಳೆ ನಾವು ಆತನ ಶಿಷ್ಯರಾಗದೆ ಹೋದರೆ, ಆತನನ್ನು ರಕ್ಷಕನ್ನಾಗಿ ತಿಳಿದುಕೊಳ್ಳಬಹುದು ಎಂದು ಹೇಳುವ ಧೈರ್ಯ ಮಾಡಬಹುದೇ? - ಯೋಹಾನ 1:10-12. ವಚನ 10,11 ಯೇಸು ಕ್ರಿಸ್ತನು ಸೃಷ್ಟಿಕರ್ತನು ಮತ್ತು ಲೋಕದ ಕರ್ತನು ಎಂದು ಹೇಳುತ್ತವೆ ಹಾಗೂ 12 ನೇ ವಚನವು ನಾವು ಆತನನ್ನು ಹಾಗೆಯೇ ಅಂಗೀಕರಿಸಿಕೊಳ್ಳಬೇಕು ಎಂದು ಹೇಳುತ್ತದೆ. ಆದರೆ ಸಹಜವಾಗಿ 12 ನೇ ವಚನದ ಬಗ್ಗೆ ಮಾತನಾಡುವಾಗ ಈ ವಿಷಯವನ್ನು ಕಡೆಗಣಿಸಲಾಗುತ್ತದೆ. - ಯೋಹಾನ 8:24. ನಾನು ಯೆಹೋವನ ಪ್ರತಿರೂಪ, ಭೂಪರಲೋಕಗಳ ಕರ್ತನು ಮತ್ತು ರಕ್ಷಣೆ ಹೊಂದಬೇಕಾದರೆ ಯೆಹೂದ್ಯರು ನನ್ನನ್ನು ಹೀಗೆಯೇ ಅಂಗೀಕರಿಸಿಕೊಳ್ಳಬೇಕು ಎಂಬದಾಗಿ ಯೇಸು ಕ್ರಿಸ್ತನು ಹೇಳಿದ್ದಾನೆ. - ಯೋಹಾನ 10:4,14,27. ಯೇಸು ಕ್ರಿಸ್ತನು ಹೇಳಿರುವದೇನಂದರೆ ನನ್ನ ಕುರಿಗಳು ನನ್ನನ್ನು ತಮ್ಮ ಕುರುಬನೆಂದು ಗುರುತು ಹಿಡಿಯುತ್ತವೆ-ಅಂದರೆ, ತಮ್ಮ ಕರ್ತನು ಮತ್ತು ಯಜಮಾನನೆಂದು ಗುರುತಿಸುತ್ತವೆ ಮತ್ತು ನನ್ನನ್ನು ಹಿಂಬಾಲಿಸುತ್ತವೆ. ಒಂದುವೇಳೆ ಗುರುತಿಸಲು ಆಗಲಿಲ್ಲವೆಂದರೆ ಅವುಗಳು ಆತನ ಕುರಿಗಳಲ್ಲ. - ಯೋಹಾನ 14:15. ಒಂದುವೇಳೆ ನಾವು ಯೇಸು ಕ್ರಿಸ್ತನನ್ನು ಪ್ರೀತಿಸಲಿಲ್ಲವೆಂದರೆ, ನಾವು ರಕ್ಷಣೆ ಹೊಂದಿರುವ ಜನರು ಎಂದು ಹಾಗೇ ಸುಮ್ಮನೆ ಅಂದುಕೊಳ್ಳಬಹುದೇ – 1 ಕೊರಿಂಥ 16:22? ಮತ್ತು ಒಂದುವೇಳೆ ನಾವು ಆತನನ್ನು ಪ್ರೀತಿಸಿದರೆ ಖಂಡಿತವಾಗಿಯೂ ಆತನಿಗೆ ವಿಧೇಯರಾಗುತ್ತೇವೆ – ಅಂದರೆ ನಮ್ಮ ಮೇಲಿನ ಅತನ ಒಡೆತನಕ್ಕೆ ಖಂಡಿತವಾಗಿಯೂ ನಮ್ಮನ್ನು ಒಪ್ಪಿಸಿಕೊಡುತ್ತೇವೆ. - ಅಪೊ 2:36-38. ಪೇತ್ರನು ಯೆಹೂದ್ಯರಿಗೆ ನೀವು ಯೇಸುವನ್ನು ಕರ್ತನಾಗಿ ಮತ್ತು ಕ್ರಿಸ್ತನಾಗಿ ನಿರಾಕರಿಸಿದ್ದರಿಂದ ಪಶ್ಚಾತ್ತಾಪಪಟ್ಟು ಆತನನ್ನು ಕರ್ತನಾಗಿ ಮತ್ತು ಕ್ರಿಸ್ತನಾಗಿ ಅಂಗೀಕರಿಸಿಕೊಳ್ಳಿರಿ ಅಂದನು. ದೀಕ್ಷಾಸ್ನಾನವು ಇದಕ್ಕೆ ಸೂಚನೆಯಾಗಿತ್ತು ಮತ್ತು ಈಗಲೂ ಸೂಚನೆಯಾಗಿದೆ. ಅದು ಹಳೆಯ ಜೀವಿತಕ್ಕೆ ನಾವು ಸಾಯುವದು ಮತ್ತು ಯೇಸು ಕ್ರಿಸ್ತನ ಒಡೆತನದ ಅಡಿಯಲ್ಲಿ ಹೊಸ ಜೀವನವನ್ನು ಪಡೆಯುವದು ಎಂಬದನ್ನು ಇದು ಸೂಚಿಸುತ್ತದೆ. ಇದನ್ನು ಅರ್ಥಮಾಡಿಕೊಳ್ಳದೆ ಜನರು ದೀಕ್ಷಾಸ್ನಾನ ತೆಗೆದುಕೊಳ್ಳಬಾರದು. - ಅಪೊ 5:32. ಪವಿತ್ರಾತ್ಮನಿಲ್ಲದೆ ನಾವು ರಕ್ಷಣೆ ಹೊಂದಬಹುದು ಅಥವಾ ದೇವಕುಮಾರನಿಗೆ ನಮ್ಮನ್ನು ಒಪ್ಪಿಸಿಕೊಡದೆ ಪವಿತ್ರಾತ್ಮನನ್ನು ಪಡೆಯಬಹುದು (ರೋಮಾ 8:9) ಎಂಬದಾಗಿ ನಾವು ಯೋಚಿಸಬಹುದೇ? - ಅಪೊ 16:31. ಸೆರೆಮನೆಯ ಯಜಮಾನನಿಗೆ ರಕ್ಷಕನಾದ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡು ಎಂದು ಹೇಳಲಾಗಲಿಲ್ಲ ಬದಲಾಗಿ ಕರ್ತನಾದ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡು ಎಂದು ಹೇಳಲಾಯಿತು ಮತ್ತು ಆತನಿಗೆ ಒಪ್ಪಿಸಿಕೊಡಲು ಬಯಸದಿರುವ

ಹೃದಯದಲ್ಲಿ ಆತನ ಮೇಲೆ ನಿಜವಾದ ನಂಬಿಕೆ ಹುಟ್ಟುತ್ತದೆ ಎಂದು ನಾವು ಯೋಚಿಸಲು ಸಾಧ್ಯವೇ? ಆತನಲ್ಲಿ ನಂಬಿಕೆಯನ್ನಿಡುವದು ಮತ್ತು ಆತನನ್ನು ಅಂಗೀಕರಿಸಿಕೊಳ್ಳುವದು ಒಂದೇ ಅಲ್ಲವೇ, ಹೀಗಿರುವಾಗ ಕರ್ತನನ್ನು ನಂಬುವವರು ಕರ್ತನನ್ನು ಅಂಗೀಕರಿಸಿಕೊಳ್ಳಲು ಆಗುವದಿಲ್ಲವೇ – ಯೋಹಾನ 1:12? - ರೋಮಾ 1:5. ವಿಧೇಯತೆ ಮತ್ತು ನಂಬಿಕೆ ಎರಡೂ ಒಟ್ಟಿಗೆ ಸೇರಿವೆ ಎಂಬದನ್ನು ಮತ್ತೊಮ್ಮೆ ಗಮನಿಸಿರಿ. ನಿಜವಾಗಿ ಹೇಳುವದಾದರೆ ಒಂದನ್ನು ಬಿಟ್ಟು ಇನ್ನೊಂದು ಇರಲಾರದು. 2 ಥೆಸ 1:8; ರೋಮಾ 16:17 ರೊಂದಿಗೆ ಹೋಲಿಸಿ ನೋಡಿರಿ. ಪವಿತ್ರಾತ್ಮನು ಯಾರಿಗೆ ನಂಬಿಕೆಯನ್ನು ಕೊಡುತ್ತಾನೋ ಅವರಿಗೆ ವಿಧೇಯತೆಯ ಹೃದಯವನ್ನೂ ಕೊಡುತ್ತಾನೆ. ನಾವು ವಿಧೇಯತೆಯಿಂದ ರಕ್ಷಣೆ ಹೊಂದಿಲ್ಲ, ನಂಬಿಕೆಯಿಂದ ರಕ್ಷಣೆ ಹೊಂದಿದ್ದೇವೆ – ಈ ನಂಬಿಕೆ ನಮ್ಮನ್ನು ವಿಧೇಯತೆಗೆ ನಡೆಸಲು ಪ್ರಾರಂಭಿಸುತ್ತದೆ. ಬೇರೆ ಯಾವುದೇ ರೀತಿಯ ನಂಬಿಕೆಯು ಸತ್ತದ್ದಾಗಿದೆ. ಯಾಕೋಬ 2:14-16 ರೊಂದಿಗೆ ಹೋಲಿಸಿ ನೋಡಿರಿ. - ರೋಮಾ 6:16-23. ಪೌಲನು ಹೇಳುವದೇನೆಂದರೆ ಪ್ರತಿಯೊಬ್ಬ ವ್ಯಕ್ತಿಯು ಯಾವುದಕ್ಕೆ ವಿಧೇಯನಾಗುತ್ತಾನೋ ಅದಕ್ಕೆ ದಾಸನಾಗಿದ್ದಾನೆ. ಒಂದುವೇಳೆ ನಾವು ಪಾಪಕ್ಕೆ ಅಧೀನರಾದರೆ ಪಾಪಕ್ಕೆ ಸೇವಕರಾಗಿದ್ದೇವೆ; ಒಂದುವೇಳೆ ದೇವರಿಗೆ ಅಧೀನರಾದರೆ ದೇವರ ಸೇವಕರಾಗಿದ್ದೇವೆ. ಒಂದು ಮಾರ್ಗವು ನಮ್ಮನ್ನು ಮರಣದ ಕಡೆಗೆ ನಡೆಸುತ್ತದೆ; ಇನ್ನೊಂದು ಮಾರ್ಗವು ನಮ್ಮನ್ನು ನೀತಿ ಮತ್ತು ಜೀವದ ಕಡೆಗೆ ನಡೆಸುತ್ತದೆ. ಅಪೊಸ್ತಲರು ಸರಳವಾಗಿ ತಿಳಿಸಿರುವ ಬೋಧನೆಗೆ ವಿಧೇಯರಾಗುವದು ನಮ್ಮ ಮೇಲಿನ ಯೇಸು ಕ್ರಿಸ್ತನ ಒಡೆತನವನ್ನು ಸೂಚಿಸುವದಿಲ್ಲವೇ? ನಾವು ದೇವರಿಗೆ ದಾಸರಾಗಿದ್ದು ಯೇಸು ಕ್ರಿಸ್ತನನ್ನು ನಮ್ಮ ಕರ್ತನನ್ನಾಗಿ ಮನವರಿಕೆ ಮಾಡಿಕೊಳ್ಳದಿರಲು ಹೇಗೆ ಸಾಧ್ಯ? - ರೋಮಾ 8:14. ದೇವರಾತ್ಮನು ನಾವು ಯೇಸು ಕ್ರಿಸ್ತನ ಒಡೆತನಕ್ಕೆ ನಮ್ಮನ್ನು ಒಪ್ಪಿಸಿಕೊಡುವಂತೆ ನಮಗೆ ಮಾರ್ಗದರ್ಶನವನ್ನು ಕೊಡುವದಿಲ್ಲವೇ? ಪ್ರಶ್ನೆಯನ್ನು ಕೇಳಿದರೆ ಅದಕ್ಕೆ ಉತ್ತರಿಸಬೇಕು. ಯಾರೆಲ್ಲಾ ದೇವರಾತ್ಮನಿಂದ ನಡೆಸಿಕೊಳ್ಳುತ್ತಾರೋ ಅವರು ಮಾತ್ರವೇ ರಕ್ಷಣೆ ಹೊಂದಿರುವ ಜನರು ಎಂದು ಪೌಲನು ಹೇಳುತ್ತಿಲ್ಲವೇ? - ರೋಮಾ 10:9. ಯೇಸು ಕ್ರಿಸ್ತನನ್ನು ನಮ್ಮ ಕರ್ತನೆಂದು ಅರಿಕೆ ಮಾಡಿಕೊಂಡು ನಮ್ಮ ಹೃದಯಗಳಲ್ಲಿ ಆತನ ಒಡೆತನವನ್ನು ನಿರಾಕರಿಸುವ ಬಗ್ಗೆ ಯೋಚಿಸಬಹುದು? ಇದುವೇ ರಕ್ಷಣೆಯ ಮಾರ್ಗ ಎಂದು ನಾವು ಊಹಿಸಿಕೊಳ್ಳಬಹುದೇ? ಇದು ಕಪಟತನದ ಕಾರ್ಯವಾಗಿದೆ ಅಲ್ಲವೇ? ಮತ್ತು ಪೌಲನು ರಕ್ಷಣೆಯ ಮೂಲಭೂತ ವಿಷಯಗಳ ಬಗ್ಗೆ ಮಾತನಾಡುತ್ತಿರುವದನ್ನು ಗಮನಿಸಿರಿ. - ರೋಮಾ 14:9. ಆತನು ಕರ್ತನಾಗಿರುವದಕ್ಕಾಗಿ ಪ್ರಾಣ ಕೊಟ್ಟನು. ನಂಬಿಕೆಯಿಂದ ಆತನ ಬಳಿಗೆ ಬರುವ ಪ್ರತಿಯೊಬ್ಬರಲ್ಲಿಯೂ ಆತನು ಈ ಉದ್ದೇಶವನ್ನು ನೆರವೇರಿಸಲು ಪ್ರಾರಂಭಿಸುವದಿಲ್ಲವೇ? - ಎಫೆ 2:10 ಮತ್ತು ಫಿಲಿಪ್ಪಿ 1:6. ದೇವರು ವಿಶ್ವಾಸಿಗಳಲ್ಲಿ ಪ್ರಾರಂಭಿಸಿರುವ ಒಳ್ಳೆಯ ಕಾರ್ಯಗಳ ಒಂದು ಭಾಗವು ಯೇಸು ಕ್ರಿಸ್ತನ ಒಡೆತನಕ್ಕೆ ತಮ್ಮನ್ನು

ಒಪ್ಪಿಸಿಕೊಡುವ ಹೃದಯವನ್ನು ಕೊಡುವದು ಮತ್ತು ಆತನು ಒಪ್ಪಿಸಿರುವ ಒಳ್ಳೆಯ ಕಾರ್ಯಗಳನ್ನು ಮಾಡುವದೇ ಆಗಿದೆ. - ಫಿಲಿಪ್ಪಿ 2:10-11. ದೇವರು ಯಾರೆನ್ನೆಲ್ಲಾ ನನ್ನ ಜನರಾಗಿರಲು ಬನ್ನಿರಿ ಎಂದು ಕರೆಯುತ್ತಾನೋ ಅವರಲ್ಲಿ ಈ ಕಾರ್ಯವು ನಡೆಯುವ ಹಾಗೆ ಮಾಡುತ್ತಾನೆ. - ಕೊಲೊ 2:6. ಕೊಲೊಸ್ಸೆದವರು ಯೇಸು ಕ್ರಿಸ್ತನನ್ನು ಕರ್ತನಾಗಿ ಅಂಗೀಕರಿಸಿಕೊಂಡರು. ಅವರಿಗೆ ಈ ನಂಬಿಕೆಯನ್ನು ಕಲಿಸಲಾಗಿತ್ತು ಮತ್ತು ಅದನ್ನೇ ಅವರು ಅಂಗೀಕರಿಸಿಕೊಂಡರು. ಖಂಡಿತವಾಗಿಯೂ ನಿಜವಾದ ವಿಶ್ವಾಸಿಗಳೆಲ್ಲರೂ ಅವರ ಹೆಜ್ಜೆಜಾಡುಗಳನ್ನು ಹಿಂಬಾಲಿಸಬೇಕು. - 1 ಥೆಸ 1:9-10. ನಿಜವಾದ ರೂಪಾಂತರ ಎಂದರೆ ಏನು ಎಂಬದನ್ನು ತೋರಿಸುವ ಉದಾಹರಣೆಯನ್ನು ನಾವು ಇಲ್ಲಿ ನೋಡಬಹುದು. ಯೇಸುವನ್ನು ಕರ್ತನೆಂದು ಅಂಗೀಕರಿಸಿಕೊಳ್ಳದೆ ಹೋದರೆ ದೇವರು ಯಾವುದೇ ರೀತಿಯ ನಿಜವಾದ ಸೇವೆಯನ್ನು ಮಾಡಬಹುದು ಎಂದು ನಾವು ಯೋಚಿಸಲು ಸಾಧ್ಯವೇ? - ಇಬ್ರಿ 5:9. ಯಾರೆಲ್ಲಾ ಯೇಸು ಕ್ರಿಸ್ತನಿಗೆ ವಿಧೇಯರಾಗುತ್ತಾರೋ ಅವರಿಗೆ ಮಾತ್ರವೇ ನಿತ್ಯವಾದ ರಕ್ಷಣೆ ಸಿಗುತ್ತದೆ ಎಂದು ಇಲ್ಲಿ ನಮಗೆ ಸ್ಪಷ್ಟವಾಗಿ ಹೇಳಲಾಗಿದೆ; ರಕ್ಷಿಸುವ ನಂಬಿಕೆ ಮತ್ತು ಯೇಸು ಕ್ರಿಸ್ತನಿಗೆ ವಿಧೇಯರಾಗುವದು ಎರಡು ಒಟ್ಟಾಗಿ ಸಾಗುತ್ತವೆ ಎಂಬದನ್ನು ಇದರಿಂದ ನಾವು ತಿಳಿಯಬಹುದು. ದೇವರು ಯಾರಿಗೇ ನಂಬಿಕೆಯನ್ನು ಅನುಗ್ರಹಿಸಿದರೂ ಅದೇ ಸಮಯದಲ್ಲಿ ಅವರಿಗೆ ವಿಧೇಯತೆಯ ಹೃದಯವನ್ನೂ ಕೊಡುತ್ತಾನೆ. ಇಬ್ರಿ 8:10; ಯೆಹೆಜ್ಕೇಲ 36:26-27 ನೋಡಿರಿ. - 1 ಪೇತ್ರ 1:2. ದೇವರು ಜನರನ್ನು ಆಯ್ಕೆ ಮಾಡಿಕೊಳ್ಳುವ ಉದ್ದೇಶ ಮತ್ತು ಅವರನ್ನು ಕ್ರಿಸ್ತನ ಬಳಿಗೆ ನಡೆಸುವ ಪವಿತ್ರಾತ್ಮನ ಕಾರ್ಯದ ಉದ್ದೇಶ, ಅವರು ಯೇಸು ಕ್ರಿಸ್ತನಿಗೆ ವಿಧೇಯರಾಗಬೇಕು ಎಂಬದಾಗಿ ಎಂಬದನ್ನು ಗಮನಿಸಿರಿ. “ಆತನ ರಕ್ತವನ್ನು ಚಿಮುಕಿಸುವ ಮೊದಲು” ವಿಧೇಯತೆಗೆ ಇಲ್ಲಿ ಆದ್ಯತೆ ಕೊಡಲಾಗಿರುವದನ್ನು ಗಮನಿಸಿರಿ. - 1 ಪೇತ್ರ 4:17. ಪೇತ್ರನು ಹೇಳುವದೇನೆಂದರೆ “ದೇವರ ಸುವಾರ್ತೆಗೆ” ನಾವು ವಿಧೇಯರಾಗಿ ನಡೆದುಕೊಳ್ಳಬೇಕು ಮತ್ತು ಯಾರೆಲ್ಲಾ ಅದಕ್ಕೆ ವಿಧೇಯರಾಗುವದಿಲ್ಲವೋ ಅವರಿಗೆ ಭಯಾನಕವಾದ ನ್ಯಾಯತೀರ್ಪು ಉಂಟಾಗುತ್ತದೆ. - 1 ಯೋಹಾನ 2:4-6. ಇದರ ಬೆಳಕಿನಲ್ಲಿ, ಯೇಸು ಕ್ರಿಸ್ತನಿಗೆ ವಿಧೇಯವಾಗುವ ಹೃದಯವಿಲ್ಲದೆಯೇ ಆತನ ನಿಜವಾದ ಮತ್ತು ರಕ್ಷಣೆಯ ತಿಳುವಳಿಕೆಯನ್ನು ಹೊಂದಲು ಸಾಧ್ಯ ಎಂದು ನಾವು ಯೋಚಿಸಬಹುದೇ? - ಪ್ರಕ 3:20. 14 ನೇ ವಚನದಲ್ಲಿ ಆತನು ತನ್ನನ್ನು ಈ ಸಭೆಗೆ ರಕ್ಷಕನು ಎಂದು ಪರಿಚಯಪಡಿಸಿಕೊಳ್ಳುತ್ತಿಲ್ಲ ಬದಲಾಗಿ “ದೇವರ ಸೃಷ್ಟಿಗೆ ಮೂಲನು” – ವ 14 ಎಂಬದಾಗಿ ಹೇಳಿರುವದನ್ನು ಗಮನಿಸಿರಿ. 20ನೇ ವಚನವನ್ನು ಉಪಯೋಗಿಸುವಾಗ ಈ ವಿಷಯವನ್ನು ಸಹ ಸಹಜವಾಗಿ ಕಡೆಗಣಿಸಲಾಗುತ್ತದೆ. ಕರ್ತನು ಮತ್ತು ಒಡೆಯನಾಗಿರುವ ಆತನು ಬಾಗಿಲ ಹೊರಗೆ ನಿಂತು ಬಡಿಯುತ್ತಿರುವ ಹಾಗೆ ಅನ್ನಿಸುತ್ತದೆ. ಮತ್ತು ಆತನನ್ನು ನಾವೇ ಅಂಗೀಕರಿಸಿಕೊಳ್ಳಬೇಕು ಎಂಬದಾಗಿ ಅನ್ನಿಸುತ್ತದೆ. ಆತನು ಏನಾಗಿದ್ದಾನೋ ಹಾಗೆಯೇ ಬರುವಾಗ – ಅಂದರೆ ಕರ್ತನು,

ರಕ್ಷಕನು, ರಾಜನಾಗಿಯೇ ಬರುತ್ತಾನೆ. ನಾವು ಆತನನ್ನು ರಕ್ಷಕನನ್ನಾಗಿ ಮಾತ್ರವೇ ಅಂಗೀಕರಿಸಿಕೊಂಡು ಕರ್ತನು ಹಾಗೂ ಅರಸನನ್ನಾಗಿ ನಿರಾಕರಿಸಲು ಆಗುವದಿಲ್ಲ. ನಾವು ಅದ್ಭುತನಾಗಿರುವಾತನನ್ನು ಸಂಪೂರ್ಣವಾಗಿ ಆತನಿರುವ ಹಾಗೆಯೇ ಅಂಗೀಕರಿಸಿಕೊಳ್ಳುವಾಗ, ಅದು ನಮ್ಮ ಆತ್ಮೀಕ ಜೀವಿತಕ್ಕೆ ಉತ್ತಮವಾಗಿರುತ್ತದೆ. ಪಶ್ಚತ್ತಾಪಪಡಲು ಮತ್ತು ನಂಬಿಕೆಯಿಂದ ಯೇಸು ಕ್ರಿಸ್ತನ ಬರಲು ಅತನನ್ನು ರಕ್ಷಕನನ್ನಾಗಿ ಹಾಗೂ ಕರ್ತನನ್ನಾಗಿ ಅಂಗೀಕರಿಸಿಕೊಳ್ಳುವದು ಅವಶ್ಯ ಎಂಬದನ್ನು ನಿರೂಪಿಸಲು ಇನ್ನೂ ಯಾವುದಾದರು ವಾಕ್ಯಗಳು ಇವೆಯೇ? ಆತನ ಬಳಿಗೆ ಬರುವ ಪ್ರತಿಯೊಬ್ಬನು ಈ ವಿಷಯಗಳ ಬಗ್ಗೆ ಪೂರ್ಣ ಮಾಹಿತಿಯುಳ್ಳವನಾಗಿರುತ್ತಾನೆ ಅಥವಾ ಪೂರ್ತಿಯಾಗಿ ತಿಳಿದುಕೊಂಡಿರುತ್ತಾನೆ ಎಂಬದಾಗಿ ನಾನು ಹೇಳುತ್ತಿಲ್ಲ. ಅಥವಾ ಆತನನ್ನು ನಂಬಿದ ನಂತರ ಎಲ್ಲದರಲ್ಲಿಯೂ ನಾವೆಲ್ಲರೂ ಆತನಿಗೆ ಪರಿಪೂರ್ಣವಾಗಿ ವಿಧೇಯರಾಗುತ್ತೇವೆ ಅಥವಾ ಆತನಿಗೆ ವಿರುದ್ಧವಾಗಿ ತಿರುಗಿ ಬೀಳುವದೇ ಇಲ್ಲ ಎಂದು ನಾನು ಹೇಳುತ್ತಿಲ್ಲ. ನಾವೆಲ್ಲರೂ ಅನೇಕ ರೀತಿಯಲ್ಲಿ ಸೋಲುತ್ತೇವೆ, ಅದರಲ್ಲಿ ಇದೂ ಒಂದಾಗಿದೆ (ಯಾಕೋಬ 3:2). ಆದರೆ ನಾನು ಹೇಳುತ್ತಿರುವದೇನೆಂದರೆ ದೇವರು ಒಬ್ಬನ ಹೃದಯವನ್ನು ಮಾರ್ಪಡಿಸಿ ವಿಶ್ವಾಸವಿಡಲು ಅವನಿಗೆ ನಂಬಿಕೆಯನ್ನು ಕೊಡುವಾಗ, ಆತನು ವಿಶ್ವಾಸಿಯ ಬಯಕೆಗಳು ಮತ್ತು ಆಕರ್ಷಣೆಗಳನ್ನು ಬದಲಾಯಿಸಿ ತನ್ನ ಆತ್ಮನನ್ನು ಕೊಡುತ್ತಾನೆ – ಅದು ಕರ್ತನಾದ ಯೇಸು ಕ್ರಿಸ್ತನ ಆತ್ಮವಾಗಿದೆ – ಆತನಾದರೋ ಅವರಿಗೆ ಹೊಸ ಸ್ವಭಾವವು ದೊರೆತಿರುವದರಿಂದ ಕರ್ತನಾಗಿ ಆತನನ್ನು ಪ್ರೀತಿಸಲು ಮತ್ತು ಆತನಿಗೆ ವಿಧೇಯರಾಗಿ ಜೀವಿಸಲು ಅವರನ್ನು ಬಲಪಡಿಸುತ್ತಾನೆ. ಒಂದನ್ನು ಬಿಟ್ಟು ಇನ್ನೊಂದನ್ನು ಮಾಡಲು ಪ್ರಯತ್ನಿಸುವ ವ್ಯಕ್ತಿ ಅಪಾಯಕರವಾದ ಸ್ಥಿತಿಯಲ್ಲಿರುವವನಾಗಿದ್ದಾನೆ. “ಇವನು ನಮ್ಮ ಮೇಲೆ ದೊರೆತನ ಮಾಡುವದು ನಮಗೆ ಇಷ್ಟವಿಲ್ಲ” (ಲೂಕ 19:14) ಎಂಬದಾಗಿ ಹೇಳಿದವರು ಯೇಸು ಕ್ರಿಸ್ತನ ವೈರಿಗಳೇ ಹೊರತು ಆತನ ಸ್ನೇಹಿತರಲ್ಲ. ಮತ್ತು ಆತ್ಮೀಕವಾಗಿ ಅಬ್ರಹಾಮನಿಗೆ ಮಕ್ಕಳಾಗಿರುವವರು (ರೋಮಾ 4:16) ಅಬ್ರಹಾಮನ ಹಾಗೆಯೇ ಜೀವಿಸುವರು – “ನಂಬಿಕೆಯಿಂದ ಅಬ್ರಹಾಮನು ವಿಧೇಯನಾದನು” (ಇಬ್ರಿ 11:8. ಹಾಗೆಯೇ ಯಾಕೋಬ 2:14,17,20-24 ನೋಡಿರಿ). ರಕ್ಷಣೆಯು ನಂಬಿಕೆಯ ಮೂಲಕ ಕೃಪೆಯಿಂದಲೇ ದೊರೆಯುತ್ತದೆ ಎಂದು ಹೊಸ ಒಡಂಬಡಿಕೆಯು ಎಲ್ಲಾ ಕಡೆಗಳಲ್ಲಿಯೂ ಕಲಿಸುತ್ತದೆ. ದೇವರು ನಮ್ಮನ್ನು ತನ್ನ ಮಂದೆಯ ಕುರಿಗಳನ್ನಾಗಿ ಮಾಡಲು, ನಮಗೆ ವಿಧೇಯತೆಯನ್ನು ಕಲಿಸಲು ನಮ್ಮನ್ನು ರಕ್ಷಿಸುತ್ತಾನೆ ಎಂಬದಾಗಿಯೂ ಕಲಿಸುತ್ತದೆ, ಮತ್ತು ನಂಬಿಕೆ ಎಂಬದಾಗಿ ಕರೆಸಿಕೊಳ್ಳುವ ಯಾವುದೇ ನಂಬಿಕೆಯು ಯೇಸುವನ್ನು ಕರ್ತನನ್ನು ಅಂಗೀಕರಿಸಿಕೊಳ್ಳಲು ನಿರಾಕರಿಸುವದಾದರೆ ಅದು ನಿಜವಾದ ನಂಬಿಕೆಯೇ ಅಲ್ಲ. ಅದು ಕೇವಲ ಊಹೆಯಾಗಿದೆ. ನಿಜವಾದ ನಂಬಿಕೆಯು, ದೇವರ ವರದಾನವಾಗಿದ್ದು, ಕೇವಲ ಪಡೆದುಕೊಳ್ಳುವ ಸ್ಥಗಿತ

ಸ್ಥಿತಿಯಲ್ಲಿರುವದಲ್ಲ; ಅದು ಬಲಯುತವಾದ ಕಾರ್ಯವಾಗಿದ್ದು ಯಾವಾಗಲೂ ಕ್ರಿಯೆಯನ್ನು ಉಂಟುಮಾಡುತ್ತದೆ, ಯೇಸು ಕ್ರಿಸ್ತನಿಗೆ ವಿಧೇಯರಾಗಿ ಜೀವಿಸುವ ಕ್ರಿಯೆಯನ್ನು ನೆಲೆಗೊಳಿಸುತ್ತದೆ. ಈ ವಿಷಯದ ಬಗ್ಗೆ ಬೋಧಿಸುವ ಬಲಹೀನತೆಯು ಇಂದು ನಾವು ಸಭೆಯಲ್ಲಿ ನೋಡುವ ದುರ್ಬಲತೆ ಹಾಗೂ ಪೊಳ್ಳುತನಕ್ಕೆ ಮುಖ್ಯ ಕಾರಣವಾಗಿದೆ. **14-16**

**22:14-16** ಈ ಪದಗಳನ್ನು 9 ನೇ ಅಧ್ಯಾಯದಲ್ಲಿ ಬರೆಯಲಾಗಿಲ್ಲ. "ನೀತಿವಂತನು" ಎಂಬ ಹೆಸರು ಯೇಸು ಕ್ರಿಸ್ತನಿಗೆ ಅತ್ಯಂತ ಸೂಕ್ತವಾದ ಹೆಸರಾಗಿದೆ – 3:14. **15**

**22:15** 1:8 ನೋಡಿರಿ. **16**

**22:16** 2:38; ಮತ್ತಾಯ 3:2; ಮಾರ್ಕ 16:16 ರಲ್ಲಿ ದೀಕ್ಷಾಸ್ನಾನದ ಕುರಿತಾದ ನೋಟ್ಸ್ ನೋಡಿರಿ. ಪಾಪದಿಂದ ಆಂತರಿಕ ಶುದ್ಧೀಕರಣಕ್ಕೆ ಇದು ಗುರುತಾಗಿದೆ ಎಂಬದನ್ನು ನಾವು ಅನನೀಯನ ಮಾತುಗಳಲ್ಲಿ ನೋಡಬಹುದಾಗಿದೆ. ಈ ಆಂತರಿಕ ಶುದ್ಧೀಕರಣವು ಯೇಸು ಕ್ರಿಸ್ತನ ರಕ್ತದ ಮೂಲಕ ನಡೆಯುತ್ತದೆ – ಇಬ್ರಿ 9:14. **17-21**

**22:17-21** ಈ ಘಟನೆಯನ್ನೂ 9 ನೇ ಅಧ್ಯಾಯದಲ್ಲಿ ಬರೆಯಲಾಗಿಲ್ಲ. ಆತನು ರೂಪಾಂತರಗೊಂಡ ನಂತರ ಆ ಸ್ಥಳಕ್ಕೆ ಮತ್ತೆ ಭೇಟಿ ಕೊಟ್ಟಾಗ ಬಹುಶಃ ಈ ಘಟನೆ ಸಂಭವಿಸಿರಬಹುದು (9:26-30). **20**

**22:20** 7:57—8:1 ನೋಡಿರಿ. ರಕ್ತಸಾಕ್ಷಿ ಎಂಬದರ ಕ್ರೈಸ್ತೀಯ ಅರ್ಥ ಸತ್ಯದ ಕುರಿತು ಸಾಕ್ಷಿ ಹೇಳುವ ವ್ಯಕ್ತಿಗೆ (ಸ್ತ್ರೀ ಅಥವಾ ಪುರುಷನನ್ನು) ಕೊಲ್ಲುವದಾಗಿದೆ. **21**

- **22:21** ಗಲಾ 2:7-8. **22**

**22:22** 19:36 ನೋಡಿರಿ. ಆ ಸಮಯದಲ್ಲಿ ಇತರೆ ಜನರ ಕುರಿತಾಗಿದ್ದ ಸಹಜವಾದ ಪೂರ್ವಾಪರ ಯೋಚನೆಗಳಿಗೆ ಇಲ್ಲಿ ಮತ್ತೊಂದು ಉದಾಹರಣೆಯನ್ನು ನಾವು ನೋಡಬಹುದು. ಅವರು ತಮ್ಮನ್ನು ನಾವು ಇತರರಿಗಿಂತ ಶ್ರೇಷ್ಠರು ಎಂದು ಎಣಿಸುತ್ತಿದ್ದರು ಮತ್ತು "ಅನ್ಯರನ್ನು" ತಮ್ಮೊಂದಿಗೆ ಸಮಾನರಾಗಿ ಕಾಣುವದನ್ನು ಸಹಿಸುತ್ತಿರಲಿಲ್ಲ. ತಮ್ಮ ಪೂರ್ವಾಪರತೆಯನ್ನು ಕಾಪಾಡಿಕೊಳ್ಳಲು ಅನ್ಯಾಯ, ಹಿಂಸೆ, ಬೆದರಿಕೆಗಳನ್ನು ಆಯುಧವಾಗಿ ಉಪಯೋಗಿಸುತ್ತಿದ್ದರು. **24**

- **22:24** 5:40; 16:22-23; ಮತ್ತಾಯ 27:26 ನೋಡಿರಿ. **25-28**

**22:25-28** 16:37-38 ನೋಡಿರಿ. ಅನ್ಯಾಯವಾಗಿ ಯಾಕೆ ಮತ್ತೊಮ್ಮೆ ಹೊಡೆಸಿಕೊಳ್ಳುವದನ್ನು ಸಹಿಸಿಕೊಳ್ಳಬೇಕು ಎಂಬದಾಗಿ ಪೌಲನು ಯೋಚಿಸಿದನು. **28**

**22:28** ರೋಮನ್ ಚರಿತ್ರೆಯ ಈ ಸಮಯದಲ್ಲಿ ಪೌರತ್ವವನ್ನು (ಅದರ ಎಲ್ಲಾ ಸೌಲಭ್ಯಗಳೊಂದಿಗೆ) ಕೊಂಡುಕೊಳ್ಳಲು ಬಯಸುವವರಿಗೆ ಮಾರಾಟ ಮಾಡುವ ವಿಚಿತ್ರವಾದ ಪದ್ಧತಿಯು ಆಚರಣೆಯಲ್ಲಿತ್ತು. **30**

**22:30** "*ಹಿರೀಸಭೆ*"– ಮತ್ತಾಯ 5:22.

## 23[1]

**23:1** *"ಒಳ್ಳೇ ಮನಸಾಕ್ಷಿ"*– ಹೊಸ ಒಡಂಬಡಿಕೆಯಲ್ಲಿ ಬರೆಯಲ್ಪಟ್ಟಿರುವ ಪೌಲನ ಬೋಧನೆಗಳು ಮತ್ತು ಪತ್ರಿಕೆಯಲ್ಲಿ ಪೌಲನು ಈ ಪದವನ್ನು 23 ಸಲ ಬಳಸಿದ್ದಾನೆ. ಹೊಸ ಒಡಂಬಡಿಕೆಯ ಇತರೆ ಭಾಗಗಳಲ್ಲಿ ಕೇವಲ ಒಂಭತ್ತು ಸಲ ಮಾತ್ರವೇ ಇದನ್ನು ಬಳಸಲಾಗಿದೆ. ಕೆಲವು ಪ್ರಾಮುಖ್ಯವಾದ ವಚನಭಾಗಗಳು ಯಾವುವೆಂದರೆ ರೋಮಾ 2:15; 1 ತಿಮೊ 1:5,19; 3:9; 4:2; 2 ತಿಮೊ 1:3; ತೀತ 1:15; ಇಬ್ರಿ 9:9,14; 10:22; 1 ಪೇತ್ರ 3:16. ಮನಸ್ಸಾಕ್ಷಿಯು ಒಳಗಿರುವ ಸಾಧನವಾಗಿದ್ದು ಯಾವುದು ಸರಿ ಮತ್ತು ಯಾವುದು ತಪ್ಪು ಎಂಬದನ್ನು ತೀರ್ಮಾನಿಸುತ್ತದೆ. ಅದು ಆಂತರಿಕ ಸ್ವರವಾಗಿದ್ದು ಒಬ್ಬ ವ್ಯಕ್ತಿಯು ಅದರ ನ್ಯಾಯತೀರ್ಪುಗಳಿಗೆ ವಿರುದ್ಧವಾದ ಕಾರ್ಯಗಳನ್ನು ಮಾಡುವಾಗ ಗಟ್ಟಿಯಾಗಿ ಮಾತನಾಡುತ್ತದೆ ಅಥವಾ ನಡೆದುಕೊಂಡ ರೀತಿಗಳು ಸರಿಯಾಗಿರುವಾಗ ಮೌನವಾಗಿ ಮತ್ತು ಸ್ಪಷ್ಟವಾಗಿ ಇರುತ್ತದೆ. ಪೌಲನು ಒಳ್ಳೆಯ ಮನಸ್ಸಾಕ್ಷಿಯುಳ್ಳವರಾಗಿರಿ ಎಂದು ಹೇಳಿದ್ದಾನೆ (1 ತಿಮೊ 1:19). 24:16 ಮತ್ತು 2 ಕೊರಿಂಥ 1:12 ರಲ್ಲಿ ತಾನು ಯಾವಾಗಲೂ ಅನುಸರಿಸುತ್ತಾ ಬಂದಿರುವ ತತ್ವವನ್ನು ಹಂಚಿಕೊಂಡಿದ್ದಾನೆ. ಸಭೆಯನ್ನು ಹಿಂಸೆಪಡಿಸುವಾಗಲೂ ಅವನು ತನ್ನ ಒಳ್ಳೆಯ ಮನಸ್ಸಾಕ್ಷಿಯನ್ನು ಕಾಪಾಡಿಕೊಂಡಿದ್ದನು (26:9; ಫಿಲಿಪ್ಪಿ 3:6). ತಾನು ಮಾಡುತ್ತಿರುವದು ಸರಿ ಎಂಬದಾಗಿ ಅವನು ಅಂದುಕೊಂಡಿದ್ದನು (26:9. ಯೋಹಾನ 16:2 ರೊಂದಿಗೆ ಹೋಲಿಸಿ ನೋಡಿರಿ). ಮನಸ್ಸಾಕ್ಷಿಯು ದೋಷಾತೀತವಾದದ್ದು ಮತ್ತು ಗಂಭೀರವಾದ ಯಾವುದೇ ತಪ್ಪುಗಳನ್ನು ಮಾಡುವದಿಲ್ಲ ಎಂಬದನ್ನು ಇದು ತೋರಿಸುತ್ತದೆ. ದೇವರ ವಾಕ್ಯದ ಮೂಲಕ ಅದಕ್ಕೆ ಸೂಚನೆಗಳನ್ನು ಕೊಡಬೇಕು. ಇಬ್ರಿ 9:14 ರ ನೋಟ್ಸ್ ಸಹ ನೋಡಿರಿ. **2**

**23:2** ಈ ಅನನೀಯನು, ದುಷ್ಟನಾಗಿದ್ದನು ಮತ್ತು ದುರಾಸೆಯುಳ್ಳವನಾಗಿದ್ದನು, ಇವನು ಕ್ರಿ.ಶ 48 ರಲ್ಲಿ ಯೆಹೂದ್ಯರ ಮಹಾಯಾಜಕನಾದನು. ನಾನು ಯಾವುದೇ ತಪ್ಪುಗಳನ್ನು ಮಾಡಿಲ್ಲ ಎಂಬದಾಗಿ ಪೌಲನು ಹೇಳಿದ್ದು ಇವನನ್ನು ಕೆರಳಿಸಿತು. **3**

**23:3** *"ಸುಣ್ಣಾ ಹಚ್ಚಿದ ಗೋಡೆಯೇ"*– ಮತ್ತಾಯ 23:27; ಯೆಹೆಜ್ಕೇಲ 13:10-12 ರೊಂದಿಗೆ ಹೋಲಿಸಿ ನೋಡಿರಿ. ಇದಾದ ನಂತರ ಮುಂದೆ ಯಾವುದೋ ವರ್ಷದಲ್ಲಿ ಅನನೀಯನನ್ನು ಕೊಲೆ ಮಾಡಲಾಗಿದೆ. ಪೌಲನಿಗೆ ಹೊಡೆದದ್ದು ದೇವರ ಧರ್ಮಶಾಸ್ತ್ರಕ್ಕೆ ವಿರುದ್ಧವಾಗಿದೆ ಯಾಕಂದರೆ ಅಪರಾಧ ಸಾಬೀತಾಗುವ ಮೊದಲು ಶಿಕ್ಷಿಸುವದನ್ನು ಧರ್ಮಶಾಸ್ತ್ರದಲ್ಲಿ ನಿಷೇಧಿಸಲಾಗಿದೆ. **5**

**23:5** ಇದರಿಂದ ನಮಗೆ ತಿಳಿಯುವದೇನೆಂದರೆ ಪೌಲನಿಗೆ ಸರಿಯಾಗಿ ಕಣ್ಣು ಕಾಣುತ್ತಿರಲಿಲ್ಲ ಅಥವಾ ಅನನೀಯನು ತನ್ನ ಅಧಿಕಾರದ ವಸ್ತ್ರಗಳನ್ನು ಧರಿಸಿಕೊಂಡಿರಲಿಲ್ಲ ಅಥವಾ

ಸಹಜವಾಗಿ ಸಭೆ ನಡೆಯುವ ಸ್ಥಳದಲ್ಲಿ ಅವನು ಕೂತಿರಲಿಲ್ಲ ಅನ್ನಿಸುತ್ತದೆ (ಸಭೆಯನ್ನು ಹಾಗೇ ಸುಮ್ಮನೆ ಕರೆಯಲಾಗಿತ್ತು – 22:30). ಪೌಲನು ವಿಮೋ 22:28 ನೇ ವಾಕ್ಯವನ್ನು ಹೇಳಿದ್ದಾನೆ. **6**

**23:6** ತನ್ನ ವೈರಿಗಳ ಪಾಳೆಯದಲ್ಲಿ ವಿಭಾಗವನ್ನು ಉಂಟು ಮಾಡಲು ದೇವರು ಕೊಟ್ಟ ಜ್ಞಾನವನ್ನು ಪೌಲನು ಉಪಯೋಗ ಮಾಡಿಕೊಂಡನು. ಅವನು ಹುಟ್ಟು ಫರಿಸಾಯನಾಗಿದ್ದನು (ಫಿಲಿಪ್ಪಿ 3:5. ಮತ್ತಾಯ 3:7 ರ ನೋಟ್ ನೋಡಿರಿ) ಆದರೆ ಮಹಾಯಾಜಕನು ಮತ್ತು ಹಿರೀಸಭೆಯ ಕೆಲವು ಸದಸ್ಯರು ಸದ್ದುಕಾಯರಾಗಿದ್ದರು. 23:7 ಕೆಲವೊಮ್ಮೆ ಧಾರ್ಮಿಕ ಜಗಳಗಳು ಎಲ್ಲಾ ರೀತಿಯ ಹಿಂಸೆಗಳಿಗಿಂತಲೂ ಭೀಕರವಾಗಿರುತ್ತವೆ. **11**

**23:11** *"ಕರ್ತನು ಅವನ ಹತ್ತಿರ ನಿಂತುಕೊಂಡು"*– ಯಾವುದೇ ರೀತಿಯ ಸಮಸ್ಯೆಯಾದರೂ ಯೇಸು ಕ್ರಿಸ್ತನನ್ನು ನಮ್ಮ ಹತ್ತಿರಕ್ಕೆ ಕರೆದುಕೊಂಡು ಬರುವದಾದರೆ ಅದು ಅಪಾಯದಲ್ಲಿಯೂ ನಮಗೆ ಸಿಗುವ ಆಶೀರ್ವಾದವಾಗಿದೆ.

*"ಧೈರ್ಯವಾಗಿರು"*– 18:9-10.

*"ರೋಮ್"*– 19:21. **12-35**

**23:12-35** ಪೌಲನು ರೂಪಾಂತರಗೊಂಡ ಸಮಯದಿಂದ ಯೆಹೂದ್ಯರು ಅವನನ್ನು ಕೊಲ್ಲಲು ಸಮಯ ಹೊಂಚು ಹಾಕುತ್ತಿದ್ದರು (9:23-25,28-30; 14:19; 17:5). ಆದರೆ ಈ ಕಾರ್ಯದಲ್ಲಿ ಅವರು ಎಂದಿಗೂ ಸಫಲರಾಗಲಿಲ್ಲ. ದೇವರಿಗೆ ತನ್ನ ಸೇವಕರನ್ನು ತನ್ನ ಬಳಿಗೆ ಕರೆಸಿಕೊಳ್ಳುವ ಸಮಯ ಬರುವ ಮೊದಲು ಯಾವ ರೀತಿ ಕಾಪಾಡಿಕೊಳ್ಳಬೇಕು ಎಂಬದು ಚೆನ್ನಾಗಿ ಗೊತ್ತು. ಭೂಲೋಕದಲ್ಲಿ ಅವರು ಮಾಡಬೇಕಾಗಿರುವ ಕಾರ್ಯವನ್ನು ಮಾಡುವ ತನಕ ಅವರ ಪ್ರಾಣಕ್ಕೆ ಹಾನಿಯನ್ನು ಮಾಡಲು ಯಾವ ವೈರಿಯಿಂದಲೂ ಆಗುವದಿಲ್ಲ. ಪೌಲನ ಸಂರಕ್ಷಣೆಗಾಗಿ ದೇವರು ಅವನ ಸೋದರಳಿಯನನ್ನು ಉಪಯೋಗಿಸಿಕೊಂಡನು (ವ 16. ಹೊಸ ಒಡಂಬಡಿಕೆಯಲ್ಲಿ ಇವನ ಬಗ್ಗೆ ಅಥವಾ ಪೌಲನ ಸಹೋದರಿಯ ಬಗ್ಗೆ ಇಲ್ಲಿ ಮಾತ್ರವೇ ಬರೆಯಲ್ಪಟ್ಟಿದೆ). ಇದಲ್ಲದೆ ದೇವರು ರೋಮನ್ನರ ಶತಾಧಿಪತಿಯನ್ನು (ವ 17), ರೋಮನ್ನರ ಸಹಸ್ರಾಧಿಪತಿಯನ್ನು (ವ 18), 200 ಮಂದಿ ಸಾಧಾರಣ ಸೈನಿಕರನ್ನು, 70 ಮಂದಿ ಕುದುರೆ ಸವಾರರನ್ನು, ಇನ್ನೂರು ಮಂದಿ ಭಲ್ಲೆಯವರನ್ನು (ವ 23) ಮತ್ತು ಯೂದಾಯದ ರೋಮನ್ ದೇಶಾಧಿಪತಿಯನ್ನು (ವ 34) ಉಪಯೋಗಿಸಿಕೊಂಡನು. ಒಂದುವೇಳೆ ಅವಶ್ಯವಾಗಿದ್ದರೆ ಆತನು ಪರಲೋಕದಿಂದ ದೂತರ ಸೈನ್ಯವನ್ನೂ ಕಳುಹಿಸುತ್ತಿದ್ದನು. **26**

**23:26** ಫೆಲಿಕ್ಸನು ಕ್ರಿ.ಶ 52 ರಲ್ಲಿ ಯೂದಾಯದ ರೋಮನ್ ದೇಶಾಧಿಪತಿಯಾದನು. ಅವನು ದುಷ್ಟನು, ಕ್ರೂರಿ ಮತ್ತು ಕಾಮಾಭಿಲಾಷೆಯುಳ್ಳ ವ್ಯಕ್ತಿಯಾಗಿದ್ದನು.

# 24[1]

**24:1** 23:2 ನೋಡಿರಿ.

*"ವಕೀಲನು"*– ಅಥವಾ "ವಾಗ್ಮಿ." **5**

**24:5** *"ಪೀಡೆ"*– 16:20; 17:6. ಮತ್ತೊಮ್ಮೆ ಸಮಾಧಾನಪಡಿಸುವವನನ್ನು ಸಮಸ್ಯೆಗೆ ಕಾರಣ ಎಂದು ದೂಷಿಸಲಾಗುತ್ತಿದೆ.

*"ನಜರೇತಿನವರ ಪಾಷಂಡಮತ"*– 2:22; ಮತ್ತಾಯ 2:23. ಯೆಹೂದ್ಯರು ಯೇಸು ಕ್ರಿಸ್ತನನ್ನು ದೇವದೂಷಕನೆಂದು ನೆನೆಸುತ್ತಿದ್ದರು, ಆದರೆ ಯೇಸುವನ್ನು ಹಿಂಬಾಲಿಸುವ ಸಲುವಾಗಿ ಪೌಲನು ಮತ್ತು ಅವನ ಮನಸ್ಥಿತಿಯುಳ್ಳವರು ಯೆಹೂದ್ಯ ಧರ್ಮದ ಸತ್ಯವನ್ನು ನಿರಾಕರಿಸುತ್ತಿದ್ದಾರೆ ಎಂಬದು ಇವನ ಮಾತಿನ ಅರ್ಥವಾಗಿದೆ. **14**

**24:14** *"ಮಾರ್ಗ"*– 9:2; 22:4. ಧರ್ಮಶಾಸ್ತ್ರ ಮತ್ತು ಪ್ರವಾದಿಗಳು ಎಂದರೆ ಇಡೀ ಹಳೆಯ ಒಡಂಬಡಿಕೆಯಾಗಿದೆ (ಮತ್ತಾಯ 5:17; ಲೂಕ 24:27). ನಾನು ಇವೆಲ್ಲವುಗಳನ್ನು ನಂಬುತ್ತೇನೆ ಎಂದು ಪೌಲನು ಹೇಳಿರುವದನ್ನು ಗಮನಿಸಿರಿ. ಇದು ಅತ್ಯಂತ ಪ್ರಾಮುಖ್ಯವಾದ ಹೇಳಿಕೆಯಾಗಿದೆ. ಒಂದುವೇಳೆ ನಾವು ಬುದ್ಧಿವಂತರಾಗಿದ್ದರೆ ಎಲ್ಲಾ ಕಾರ್ಯಗಳನ್ನು ಬುದ್ಧಿವಂತಿಕೆಯಿಂದಲೇ ಮಾಡುತ್ತೇವೆ.

*"ಪಾಷಂಡಮತ"*– ಅಥವಾ "ನಾಸ್ತಿಕವಾದ." **15**

**24:15** *"ಪುನರುತ್ಥಾನ"*– ದಾನಿ 12:2; ಯೋಹಾನ 5:28-29. ಸತ್ತವರ ಪುನರುತ್ಥಾನವನ್ನು ನಂಬಿದರೆಂದರೆ (23:8) ಅವರಲ್ಲಿ ಕೆಲವರು ಫರಿಸಾಯರಾಗಿರಬೇಕು. **16**

**24:16** 23:1 ರ ನೋಟ್ ನೋಡಿರಿ. **17**

- **24:17** ರೋಮಾ 15:25-27; 1 ಕೊರಿಂಥ 16:1-4. **18-19**

**24:18-19** 21:26-29 ನೋಡಿರಿ. **20-21**

**24:20-21** 22:30—23:10 ನೋಡಿರಿ. **22**

**24:22** ವಚನ 14; 21:31; 23:23-26. **24**

**24:24** ದ್ರೂಸಿಲ್ಲ ಯೆಹೂದ್ಯಳಾಗಿದ್ದಳು ಮತ್ತು ಫೆಲಿಕ್ಸನ ಮೂರನೇ ಹೆಂಡತಿಯಾಗಿದ್ದಳ. ಫೆಲಿಕ್ಸನು ದೇಶದಲ್ಲಿ ಅತ್ಯಂತ ಪರಿಣಾಮಕರಿಯಾದ ವ್ಯಕ್ತಿಯಾಗಿದ್ದು ಪೌಲನ ವಿಷಯವನ್ನು ಇತ್ಯರ್ಥಿಸುವವನಾಗಿದ್ದರೂ, ಪೌಲನು ಅವನಿಗೆ ಕರ್ತನಾದ ಯೇಸು ಕ್ರಿಸ್ತನ ಕುರಿತಾದ ಸತ್ಯವನ್ನು ಹೇಳಲು ಹಿಂಜರಿಯಲಿಲ್ಲ. 20:24; ಮತ್ತಾಯ 10:18 ರೊಂದಿಗೆ ಹೋಲಿಸಿ ನೋಡಿರಿ. **25**

**24:25** ಫೆಲಿಕ್ಸನಿಗೆ ಸಂಪೂರ್ಣವಾಗಿ ನೀತಿವಂತಿಕೆಯಾಗಲಿ ಶಮೆದಮೆಯಾಗಲಿ ಇರಲಿಲ್ಲ (23:26. ಮತ್ತಾಯ 5:6,20 ರಲ್ಲಿ ನೀತಿವಂತಿಕೆಯ ಕುರಿತಾದ ನೋಟ್ಸ್ ನೋಡಿರಿ) ಅವನು

ದೇವರ ನ್ಯಾಯತೀರ್ಪನ್ನು ಅನುಭವಿಸುತ್ತಿದ್ದನು (17:31). ಖೈದಿಯಾಗಿದ್ದ ಪೌಲನು ಈ ಅಧಿಕಾರಿಯ ಪಾಪ ಮತ್ತು ಅವಶ್ಯಕತೆಯನ್ನು ನೇರವಾಗಿ ಅವನ ಹೃದಯಕ್ಕೆ ಮುಟ್ಟುವ ಹಾಗೆಯೇ ಹೇಳುವ ಧೈರ್ಯ ಮಾಡಿದನು. ಫೆಲಿಕ್ಸನು ಎಲ್ಲಾ ಕಾಲಗಳಲ್ಲಿರುವ ಇರುವ ಅನೇಕರಿಗೆ ಸಮಾನನಾಗಿದ್ದಾನೆ-ಅವನು ತೀರ್ಪು ಕೊಡುವ ದಿನವನ್ನು ಮುಂದೂಡಿದನು. ದೇವರಿಗೆ ಎದುರುಬೀಳುವವರಾಗಿ ನಡೆದುಕೊಳ್ಳುವ ಜನರಿಗೆ "ಅನುಕೂಲಕರವಾದ" ಸಮಯ ಎಂದಾದರು ಬರುವುದೇ? **26**

**24:26** ಪರಲೋಕದಲ್ಲಿ ಸಿಗುವ ನಿಕ್ಷೇಪದ ಬಗ್ಗೆ ಅವನಿಗೆ ಹೇಳಲಾಗಿತ್ತು ಆದರೆ ಅವನು ಇಂದಿನ ಅನೇಕ ಅಧಿಕಾರಿಗಳ ಹಾಗೆ ಭೂಲೋಕದಲ್ಲಿ ಸಿಗುವ ಹಣದ ಮೇಲೆ ಮಾತ್ರವೇ ಮನಸ್ಸಿಟ್ಟಿದ್ದನು. ಲಂಚದ ವಿಷಯದಲ್ಲಿ ತಿಳಿಯಲು ವಿಮೋ 23:8; 1 ಸಮು 8:3; 12:3; ಕೀರ್ತನೆ 15:5; 26:10; ಯೆಶಾಯ 33:15 ನೋಡಿರಿ. ಗತಿಸಿ ಹೋಗುವ ವಿಷಯಗಳಿಗಾಗಿ ಜನರು ಸಹಜವಾಗಿ ನಿತ್ಯವಾದವುಗಳನ್ನು ಕಳೆದುಕೊಳ್ಳುವವರಾಗಿದ್ದಾರೆ. **27**

**24:27** ಮಹನಾದ ಅಪೊಸ್ತಲನನ್ನು ಎರಡು ವರ್ಷಗಳ ಕಾಲ ಸೆರೆಯಲ್ಲಿಡಲು ದೇವರು ಅನುಮತಿಸಿದ್ದು ವಿಚಿತ್ರ ಅನ್ನಿಸುವದಿಲ್ಲವೇ? 12:2-7 ರೊಂದಿಗೆ ಹೋಲಿಸಿ ನೋಡಿರಿ. ಪೌಲನು ಸೆರೆಮನೆಯಲ್ಲಿದ್ದ ದಿವಸಗಳು ವ್ಯರ್ಥವಾಗಲಿಲ್ಲ ಎಂಬದಾಗಿ ನಾವು ಭರವಸೆಯಿಂದ ಹೇಳಬಹುದು. ಅವನಿಗೆ ಪ್ರಾರ್ಥನೆ ಮಾಡಲು, ಜೊತೆಯಲ್ಲಿದ್ದ ಖೈದಿಗಳಿಗೆ ಸುವಾರ್ತೆ ಹೇಳಲು ಮತ್ತು ಪತ್ರಿಕೆಗಳನ್ನು ಬರೆಯಲು ಹೆಚ್ಚು ಸಮಯ ದೊರಕಿತು.

# 25 1

**25:1** ಫೆಸ್ತನ ಬಗ್ಗೆ ಇಲ್ಲಿ ಬರೆಯಲ್ಪಟ್ಟಿರುವದನ್ನು ಬಿಟ್ಟರೆ ನಮಗೆ ಹೆಚ್ಚಿನದಾಗಿ ಏನೂ ಗೊತ್ತಿಲ್ಲ. ಅವನು ಕ್ರಿಶ 60 ರಲ್ಲಿ ದೇಶಾಧಿಪತಿಯಾದನು ಮತ್ತು ಅದಾದ ನಂತರ ಮುಂದಿನ ಎರಡು ವರ್ಷದೊಳಗೇ ಮೃತಪಟ್ಟನು. **3**

**25:3** 23:12,21 ನೋಡಿರಿ. **7**

**25:7** 24:13 ನೋಡಿರಿ. **10**

**25:10** ಕೈಸರನು ರೋಮನ್ ಚಕ್ರವರ್ತಿಯಾಗಿದ್ದಾನೆ. ಯೂದಾಯದಲ್ಲಿ ರೋಮನ್ ಆಳ್ವಿಕೆ ಇತ್ತು ಮತ್ತು ರೋಮನ್ ದೇಶಾಧಿಪತಿಯೂ ಅಪರಾಧ ಪ್ರಕರಣಗಳನ್ನು ವಿಚಾರಿಸುವ ನ್ಯಾಯಾಧೀಶನಾಗಿದ್ದನು. **11**

**25:11** ರೋಮನ್ ಪೌರನಿಗೆ ತನ್ನ ವಿಚಾರಣೆಯ ಯಾವುದೇ ಸಂದರ್ಭದಲ್ಲಾದರೂ, ರೋಮ್ ನಲ್ಲಿರುವ ಚಕ್ರವರ್ತಿಯ ಎದುರು ತನ್ನ ಪ್ರಕಣವನ್ನು ವಿಚಾರಿಸಬೇಕೆಂದು ಮತ್ತು ಚಕ್ರವರ್ತಿಯೇ ತೀರ್ಪು ಕೊಡಬೇಕೆಂದು (ವ 21) ಮನವಿ ಮಾಡಿಕೊಳ್ಳುವ ಅಧಿಕಾರವಿತ್ತು. ಪೌಲನು ಮನವಿ ಮಾಡಿಕೊಂಡದ್ದಕ್ಕೆ ಕಾರಣ ತನಗೆ ಸ್ವಲ್ಪವಾದರೂ ನ್ಯಾಯವಾದ ತೀರ್ಪು

ದೊರೆಯಬಹುದೆಂಬ ನಿರೀಕ್ಷೆಯೇ ಆಗಿದೆ. ಫೆಲಿಕ್ಸನು ಯೆಹೂದ್ಯರನ್ನು ಮೆಚ್ಚಿಸಲು ಬಯಸಿದನು. ಹಾಗೆಯೇ ಪೌಲನಿಗೆ ದೇವರು ತನ್ನನ್ನು ರೋಮಾಪುರಕ್ಕೆ ಕಳುಹಿಸುತ್ತಿದ್ದಾನೆ ಎಂಬದು ಗೊತ್ತಿತ್ತು (23:11). **13**

**25:13** ಈ ಅಗ್ರಿಪ್ಪನು 12:1 ರ ಹೆರೋದ ಅಗ್ರಿಪ್ಪನ ಮಗನಾಗಿದ್ದಾನೆ. ಯೂದಾಯದ ಉತ್ತರದಲ್ಲಿರುವ ಕೆಲವು ಭಾಗಗಳಿಗೆ ಇವನು ಅರಸನಾಗಿದ್ದನು. ಬೆರ್ನಿಕೆ ಇವನ ಚಿಕ್ಕ ತಂಗಿಯಾಗಿದ್ದಾಳೆ. **19**

**25:19** ಫೆಸ್ತನಿಗೆ ಸುವಾರ್ತೆಯ ಕುರಿತಾದ ತಿಳುವಳಿಕೆ ಇರಲಿಲ್ಲ, ಮಾನವರು ಎದುರಿಸುತ್ತಿದ್ದ ಅತ್ಯಂತ ಪ್ರಾಮುಖ್ಯವಾದ ಸಮಸ್ಯೆಗಳ ಕುರಿತಾಗಿಯೂ ಅವನು ಜ್ಞಾನವಿಲ್ಲದವನಾಗಿದ್ದನು. **24**

**25:24** 21:36; 22:22 ನೋಡಿರಿ.

# 26**4-6**

**26:4-6** 22:2-3; 23:6 ನೋಡಿರಿ. **7**

**26:7** ಇಲ್ಲಿ ಅವನು ವ್ಯಕ್ತಪಡಿಸಿರುವ ನಿರೀಕ್ಷೆಯು ನೀತಿವಂತರ ಪುನರುತ್ಥಾನದ ನಿರೀಕ್ಷೆಯಾಗಿದೆ – ದಾನಿ 12:2; ಯೋಹಾನ 5:28-29. **8**

**26:8** ಲೋಕವನ್ನು ಉಂಟುಮಾಡಿ ಅದರಲ್ಲಿ ಮಾನವನನ್ನು ಇಟ್ಟಿರುವ ದೇವರಿಗೆ ಸತ್ತವರನ್ನು ಎಬ್ಬಿಸಲು ಕಷ್ಟವೇ ಇಲ್ಲ. ಪುನರುತ್ಥಾನದ ಬೋಧನೆಯು ಯೇಸು ಕ್ರಿಸ್ತನ ಅಪೊಸ್ತಲರು ಬೋಧಿಸಿದ ಹಾಗೆಯೇ ಸುವಾರ್ತೆಯ ಪ್ರಮುಖ ಭಾಗವಾಗಿರುವದನ್ನು ಮತ್ತೊಮ್ಮೆ ಗಮನಿಸಿರಿ (1:3). **9**

**26:9** 22:3-5; 1 ತಿಮೊ 1:13 ನೋಡಿರಿ. ಸಭೆಯನ್ನು ಹಿಂಸೆಪಡಿಸುವಾಗ ತಾನು ಒಳ್ಳೆಯ ಕಾರ್ಯವನ್ನೇ ಮಾಡುತ್ತಾ ಸತ್ಯವನ್ನು ಕಾಪಾಡುತ್ತಿದ್ದೇನೆ ಎಂಬದಾಗಿ ಪೌಲನು ಅಂದುಕೊಂಡಿದ್ದನು. ಯೋಹಾನ 16:2 ರೊಂದಿಗೆ ಹೋಲಿಸಿ ನೋಡಿರಿ. **10**

**26:10** 8:1-3; 9:1-2; 22:4 ನೋಡಿರಿ. **11**

**26:11** ಮತ್ತಾಯ 9:3 ರಲ್ಲಿ ದೇವದೂಷಣೆಯ ಕುರಿತಾದ ನೋಟ್ ನೋಡಿರಿ. ಇದೊಂದೇ ಸ್ಥಳದಲ್ಲಿ ಪೌಲನು ಕ್ರೈಸ್ತರಿಂದ ದೇವದೂಷಣೆಯ ಮಾತುಗಳನ್ನಾಡಿಸಲು ಪ್ರಯತ್ನಿಸಿದ್ದಾಗಿ ಹೇಳಿದ್ದಾನೆ. ಆದರೆ ಅದರಲ್ಲಿ ಅವನು ಯಶಸ್ವಿಯಾಗಲಿಲ್ಲ. **12-15**

**26:12-15** 9:3-5; 22:5-8 ನೋಡಿರಿ. **14**

**26:14** ಪೌಲನು ಯೇಸು ಕ್ರಿಸ್ತನ ಕಡೆಗೆ ತಿರುಗಿಕೊಂಡದ್ದರ ಬಗ್ಗೆ ಇಲ್ಲಿ (ಮತ್ತು ಇಲ್ಲಿ ಮಾತ್ರವೇ) ತಿಳಿಸಲಾಗಿರುವ ಮೂರು ಸಂಕ್ಷಿಪ್ತವಾದ ವಿಷಯಗಳಲ್ಲಿ, “ಮುಳ್ಳುಗೋಲನ್ನು” ಯಾಕೆ ಒದೆಯುತ್ತೀಯ ಎಂಬದಲ್ಲಿ ಇಲ್ಲಿ ಬರೆಯಲಾಗಿದೆ. ಕ್ರೈಸ್ತರಿಗೆ ಹಿಂಸೆ ಕೊಡುತ್ತಿದ್ದ

ಪೌಲನು ಬಲವಾಗಿ ಎದುರುಬೀಳುವ ಎತ್ತಿನಂತಿದ್ದು ತನ್ನನ್ನು ನಿಯಂತ್ರಿಸಲು ಬಯಸುವ ತನ್ನ ಯಜಮಾನ ಮುಳ್ಳುಕೋಲಿನ ಬಗ್ಗೆ ಎತ್ತಿಗಿರುವ ಮನಸ್ಥಿತಿಯುಳ್ಳವನಾಗಿದ್ದನು. ಬೇರೆ ಮಾತುಗಳಲ್ಲಿ ಹೇಳುವದಾದರೆ, ಕ್ರೈಸ್ತರಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದ ರೀತಿಯಿಂದ, ಪೌಲನ ಮನಸ್ಸಿನಲ್ಲಿ ಏನೋ ಗೊಂದಲ ಇದ್ದಿರಬಹುದು, ಹೃದಯದಲ್ಲಿ ಏನೋ ವೇದನೆ ಇದ್ದಿರಬಹುದು. **16-18**

**26:16-18** 9:6,15; 22:14-15,21 ನೋಡಿರಿ. ಕರ್ತನಾದ ಯೇಸು ಕ್ರಿಸ್ತನು ಅವನನ್ನು ತನ್ನ ಸೇವಕನನ್ನಾಗಿ ನೇಮಿಸಿಕೊಳ್ಳುವಾಗ ಹೇಳಿದ ಮಾತುಗಳನ್ನೆಲ್ಲಾ ಪೌಲನು ಇಲ್ಲಿ ತಿಳಿಸಿದ್ದಾನೆ. **18**

**26:18** ಸುವಾರ್ತಿಕನಾಗಿ ಪೌಲನ ಸೇವೆಯನ್ನು ಇಲ್ಲಿ ಸ್ಪಷ್ಟವಾಗಿ ನೋಡಬಹುದಾಗಿದೆ. ಇವನು ಜನರಿಗೆ ನಿಜವಾದ ಬೆಳಕನ್ನು ಪರಿಚಯಪಡಿಸಿದ; ಅವರನ್ನು ಸೈತಾನನ ಬಂಧನದಿಂದ ಬಿಡುಗಡೆಗೊಳಿಸುವ (ಯೋಹಾನ 8:33-35,44; ಎಫೆ 2:1-2; 2 ತಿಮೊ 2:26 ರೊಂದಿಗೆ ಹೋಲಿಸಿ ನೋಡಿರಿ. 1 ಪೂರ್ವ 21:1 ರಲ್ಲಿ ಸೈತಾನನ ಕುರಿತಾದ ನೋಟ್ ನೋಡಿರಿ); ಜನರನ್ನು ಪಾಪ ಕ್ಷಮಾಪಣೆಗೆ ನಡೆಸುವ (ಮತ್ತಾಯ 26:28; ಲೂಕ 24:47) ಮತ್ತು ದೇವಜನರ ನಡುವೆ ಸ್ವಾಸ್ಥ್ಯವಾಗುವ (20:32; ಎಫೆ 1:11; ಕೊಲೊ 1:12; 1 ಪೇತ್ರ 1:4) ಯೇಸು ಕ್ರಿಸ್ತನ ಸಾಧನವಾಗಿದ್ದಾನೆ. ಇದು ಪ್ರತಿಯೊಬ್ಬ ನಿಜವಾದ ಸುವಾರ್ತಿಕನ ಕೆಲಸವೂ ಆಗಿದೆ. ಶುದ್ದೀಕರಣವು ಯೇಸು ಕ್ರಿಸ್ತನ ಮೇಲಿನ ನಂಬಿಕೆಯಿಂದ ಬರುತ್ತದೆ ಎಂಬದನ್ನು ಗಮನಿಸಿರಿ – ಅಂದರೆ, ದೇವರು ಕ್ರಿಸ್ತನಲ್ಲಿರುವ ವಿಶ್ವಾಸಿಗಳನ್ನು ತನ್ನವರಾಗಲು ಉಳಿದವರೆಲ್ಲರ ನಡುವೆಯಿಂದ ಬೇರ್ಪಡಿಸುತ್ತಾನೆ. **19**

**26:19** ಪೌಲನು (ಎಂದಿನ ಹಾಗೆ) ಇಲ್ಲಿ ಹೇಳುತ್ತಿರುವದೇನೆಂದರೆ ಅವನ ರೂಪಾಂತರವು ಯಾವುದೋ ಕಾರಣದ ವಿಧಾನವಲ್ಲ ಅಥವಾ ಮಾನವರ ಬೋಧನೆಯ ಆಧಾರವಲ್ಲ ಬದಲಾಗಿ ಪರಲೋಕದಿಂದ ಬಂದ ಪ್ರಕಟನೆಯೇ ಆಗಿದೆ (ಗಲಾ 1:11-12). ಅವನು ಇಡೀ ಕ್ರೈಸ್ತೀಯ ಜೀವಿತವು ಆ ಪ್ರಕಟನೆಗೆ ವಿಧೇಯತೆಯುಳ್ಳದ್ದಾಗಿತ್ತು. **20**

**26:20** 9:20-22,28 ನೋಡಿರಿ. ಮತ್ತೊಮ್ಮೆ ಪಶ್ಚಾತ್ತಾಪಕ್ಕೆ ಕೊಡಲಾಗಿರುವ ಪ್ರಾಮುಖ್ಯತೆಯನ್ನು ನೋಡಿರಿ, ಈ ಪಶ್ಚಾತ್ತಾಪವು ಜೀವನ ಶೈಲಿಯನ್ನು ಬದಲಾಯಿಸಿತು. ಮತ್ತಾಯ 3:2,8; 4:17; ಲೂಕ 13:2-5 ರ ನೋಟ್ಸ್ ನೋಡಿರಿ. ಪಶ್ಚಾತ್ತಾಪದ ವಿಷಯವನ್ನು ನಿರ್ಲಕ್ಷಿಸುವ ಬೋಧಕನು ಯೇಸು ಕ್ರಿಸ್ತನ ನಿಜವಾದ ಸುವಾರ್ತೆಯನ್ನು ಸಾರುವವನಲ್ಲ ಮತ್ತು ಅಂಥ ಬೋಧಕರಿಗೆ ಈಗಿನ ದಿನಗಳಲ್ಲಿ ಕಡಿಮೆಯೇನೂ ಇಲ್ಲ. ಇದಲ್ಲದೆ ತಮ್ಮನ್ನು ಕ್ರೈಸ್ತರೆಂದು ಹೇಳಿಕೊಂಡು ಎಂದಿಗೂ ಪಶ್ಚಾತ್ತಾಪವೇ ಪಟ್ಟಿರದ ಮತ್ತು ಲೋಕದ ಇತರೆ ಜನರಿಗಿಂತ ವ್ಯತ್ಯಾಸವಾಗಿ ಜೀವಿಸದ ಜನರು ಇಂದು ಸಭೆಗಳಲ್ಲಿ ಇಲ್ಲವೇ? **22**

**26:22** *"ಚಿಕ್ಕವರು"-ಅಥವಾ "ದೊಡ್ಡವರು"*–ಪೌಲನಿಗೆ ಎಲ್ಲರೂ ಒಂದೇ ಆಗಿದ್ದರು. ಆತನು ಯಾವುದೇ ರೀತಿಯ ವ್ಯಕ್ತಿಗಳೊಂದಿಗೆ ಮಾತನಾಡುವಾಗಲೂ ಸುವಾರ್ತೆಯ ಬೇಡಿಕೆಗಳನ್ನು ಕಡಿಮೆ ಮಾಡುತ್ತಿರಲಿಲ್ಲ. **23**

**- 26:23** ಲೂಕ 24:25-27,46,47.

*"ಬೆಳಕು"*– ಲೂಕ 1:78-79; 2:32; ಯೋಹಾನ 8:12. **24**

**26:24** ಫೆಸ್ತನು ರೋಮಾಪುರದವನಾಗಿದ್ದನು ಮತ್ತು ಸಹಜವಾಗಿ ರೋಮನ್ನರು ಅನೇಕ ದೇವರುಗಳನ್ನು ನಂಬುತ್ತಿದ್ದರು ಮತ್ತು ವಿಚಿತ್ರವಾದ ಮೂಢನಂಬಿಕೆಯುಳ್ಳವರಾಗಿದ್ದರು. ಆದ್ದರಿಂದ ಪೌಲನು ಯೇಸು ಕ್ರಿಸ್ತನ ಪುನರುತ್ಥಾನದ ಪ್ರಯೋಜನವಿಲ್ಲದ ಸತ್ಯವನ್ನು ನಂಬುವ ಹುಚ್ಚನಾಗಿದ್ದಾನೆ ಎಂದಾಗಿ ಫೆಸ್ತನು ಅಂದುಕೊಂಡನು (ಮಾರ್ಕ 3:20-21). ಆದರೆ ಪೌಲನು ವಿದ್ಯಾವಂತನೆಂಬದನ್ನು ಅವರು ತಿಳಿದುಕೊಂಡನು. 4:13 ರೊಂದಿಗೆ ಹೋಲಿಸಿ ನೋಡಿರಿ. **25**

**26:25** ಆತ್ಮೀಕ ಅಂಧಕರದಲ್ಲಿರುವವರಿಗೆ ಯಾವುದು ಹುಚ್ಚುತನ ಎಂಬದಾಗಿ ಅನ್ನಿಸುತ್ತದೆಯೋ ಅದು ದೇವರು ಯಾರನ್ನು ಬೆಳಕಿಗೆ ನಡೆಸಿದ್ದಾನೋ ಅವರಿಗೆ ಸತ್ಯವಾಗಿಯೂ ಯುಕ್ತವಾಗಿಯೂ ತೋರುತ್ತವೆ. ಈ ಲೋಕದಲ್ಲಿ ತಮ್ಮ ಮನಸ್ಸಿಗೆ ಬಂದ ಹಾಗೆ ಜೀವಿಸುವವರು ಮತ್ತು ನಿಜವಾದ ದೇವರನ್ನು ಹುಡುಕದವರು ಅಥವಾ ಯೇಸು ಕ್ರಿಸ್ತನಲ್ಲಿ ದೇವರು ಪ್ರಕಟಪಡಿಸಿರುವ ಸತ್ಯದ ಬಗ್ಗೆ ಎಚ್ಚರಿಕೆಯಿಂದ ಆಲೋಚಿಸುವವರೇ ಹುಚ್ಚರಾಗಿದ್ದಾರೆ. ಪ್ರಸಂಗಿ 9:3 ನೋಡಿರಿ. **26**

**26:26** ಫೆಸ್ತನಿಗೆ ನಂಬುವ ಬಯಕೆ ಇಲ್ಲವೆಂಬದು ಪೌಲನು ತಿಳಿದಾಗ, ಅಗ್ರಿಪ್ಪನನ್ನು ಕ್ರಿಸ್ತನಿಗಾಗಿ ಗೆಲ್ಲುವ ನಿರೀಕ್ಷೆಯಿಂದ ಅವನ ಕಡೆಗೆ ತಿರುಗಿಕೊಂಡನು. **28**

**26:28** ಅಗ್ರಿಪ್ಪನು ಎಷ್ಟು ಯಥಾರ್ಥನಾಗಿದ್ದನು ಎಂಬದು ನಮಗೆ ಗೊತ್ತಿಲ್ಲ. ದೇವರ ರಾಜ್ಯದೊಳಗೆ ಸೇರಬೇಕಾದರೆ ಅವನಿಗಾಗಲಿ (ಅಥವಾ ಬೇರೆ ಯಾರಿಗೇ ಆಗಲಿ) "ಬಹುತೇಕ" ಎಂದರೆ ಆಗುವದಿಲ್ಲ. ಬಹುತೇಕ ಮನವೊಲಿಸಿದನು ಎಂದರೂ ಅವನಿನ್ನೂ ಪಾಪದಲ್ಲಿಯೇ ಇದ್ದನು ಎಂಬದಕ್ಕೆ ಸಮಾನವಾಗಿದೆ. **29**

**26:29** ಈ ಖೈದಿಯ ಮನಸ್ಥಿತಿಯು ಅಧಿಕಾರಿಗಳು ಮತ್ತು ಅಲ್ಲಿದ್ದವರೆಲ್ಲರ ಮುಂದೆ ಹೇಗಿತ್ತು ಎಂಬದನ್ನು ನೋಡಿರಿ – ತನ್ನಂತೆಯೇ ಎಲ್ಲರೂ ಯೇಸು ಕ್ರಿಸ್ತನ ವಿಶ್ವಾಸಿಗಳಾಗಬೇಕು ಎಂಬದು ಅವನ ಬಯಕೆಯಾಗಿತ್ತು. 2 ಕೊರಿಂಥ 5:13-15 ರ ಸತ್ಯವು ಅವನಲ್ಲಿ ಪರಿಣಾಮಕಾರಿಯಾಗಿ ಕಾರ್ಯ ಮಾಡುತ್ತಿತ್ತು.

# 27 1

**27:1** ಇತಾಲ್ಯ ದೇಶದಲ್ಲಿ ನೆಲೆಯಾಗಿದ್ದ ರೋಮನ್ ಸಾಮ್ರಾಜ್ಯಕ್ಕೆ ರೋಮ್

ರಾಜಧಾನಿಯಾಗಿತ್ತು.

*“ನಾವು”*– ಲೂಕನು ಪೌಲನೊಂದಿಗಿದ್ದಾನೆ.

*“ಶತಾಧಿಪತಿ”*– ರೋಮನ್ ಮಿಲಟರಿಯವನಾದ ಇವನು ನೂರು ಮಂದಿ ಸೈನಿಕರಿಗೆ ಮೇಲ್ವಿಚಾರಕನಾಗಿದ್ದನು. **2**

**27:2** *“ಅರಿಸ್ತಾರ್ಕನು”*– 19:29; 20:4; ಕೊಲೊ 4:10; ಫಿಲೆ 24. **9**

**27:9** ಇಲ್ಲಿ “ಮಹಾ ಉಪವಾಸವು” ದೋಷಪರಿಹಾರಕ ದಿನವನ್ನು ಸೂಚಿಸುತ್ತದೆ. ಯಾಜಕ 23:16-32 ರ ನೋಟ್ಸ್ ನೋಡಿರಿ. ಇದು ಸೆಪ್ಟೆಂಬರ್ ತಿಂಗಳ ಕಡೇ ವಾರ ಮತ್ತು ಅಕ್ಟೋಬರ್ ತಿಂಗಳ ಮೊದಲನೇ ವಾರದಲ್ಲಿ ಬರುತ್ತಿತ್ತು. ಮೆಡಿಟರೇನಿಯನ್ ಸಮುದ್ರದಲ್ಲಿ ಪ್ರಯಾಣಿಸುವ ನಾವಿಕರು ಈ ಸಮಯದಲ್ಲಿ ಅತ್ಯಂತ ಅಪಾಯಕಾರಿ ಸಮಯವೆಂದು ಪರಿಗಣಿಸುತ್ತಿದ್ದರು, ಯಾಕಂದರೆ ವಾತಾವರಣವು ಬಹಳ ಅನಾನುಕೂಲಕರವಾಗಿರುತ್ತಿತ್ತು. ನವೆಂಬರ್ ತಿಂಗಳ ಮಧ್ಯಭಾಗದಿಂದ ಪ್ರಯಾಣಿಸುವದು ಪ್ರಾಯೋಗಿಕವಾಗಿ ಅಸಾಧ್ಯವೆಂದು ನಾವಿಕರು ಪರಿಗಣಿಸುತ್ತಿದ್ದರು. **10**

**27:10** ಪೌಲನು ಪ್ರವಾದಿಯಾಗಿದ್ದನು ದೇವರು ಅವನಿಗೆ ಇದನ್ನು ಪ್ರಕಟಪಡಿಸಿದನು.
**22-24**

**27:22-24** ಸಮಸ್ಯೆಗಳೆದುರಾದ ಬೇರೆ ಸಮಯಗಳಲ್ಲಿಯೂ ದೇವರು ಪೌಲನಿಗೆ ಪ್ರಕಟನೆಗಳನ್ನು ಕೊಡುವ ಮೂಲಕ ಪ್ರೋತ್ಸಾಹಪಡಿಸಿದನು (18:9-10; 22:17-18; 23:11). **25**

**27:25** ಪೌಲನು ಇದನ್ನು ನಿರ್ದಿಷ್ಟವಾಗಿರುವ ಆ ಪ್ರಕಟನೆಯ ಬಗ್ಗೆ ಮಾತ್ರವಲ್ಲ ಬದಲಾಗಿ ದೇವರು ಸತ್ಯವೇದದ ಪ್ರಕಟಪಡಿಸಲಾಗಿರುವ ಎಲ್ಲಾ ವಿಷಯಗಳ ಬಗ್ಗೆ ಹೇಳಿದ್ದಾನೆ. ತನ್ನ ಜೀವಿತದಲ್ಲಿ ಎದುರಾದ ಎಲ್ಲಾ ರೀತಿಯ ಅಡಚಣೆಗಳನ್ನು ಯಶಸ್ವಿಯಾಗಿ ಈ ರೀತಿ ಎದುರಿಸಿದನು. 24:14; ರೋಮಾ 4:20-21; 2 ಕೊರಿಂಥ 4:13-14; 2 ತಿಮೊ 1:12; 4:18 ರೊಂದಿಗೆ ಹೋಲಿಸಿ ನೋಡಿರಿ. **27**

**27:27** *“ಆದ್ರಿಯ”*– ಆದ್ರಿಯ ಸಮುದ್ರವು ಇತಾಲ್ಯ, ಮಾಲ್ಟ, ಕ್ರೇತ ಮತ್ತು ಗ್ರೀಸ್ ನಡುವೆ ಇತ್ತು. **28**

**27:28** *“ಮಾರುದ್ದ”*– ಸಮುದ್ರದ ಆಳವನ್ನು ಅಳತೆ ಮಾಡುವಾಗ ನಾವಿಕರು ಈ ಪದವನ್ನು ಉಪಯೋಗಿಸುತ್ತಿದ್ದರು. ಒಂದು ಮಾರುದ್ದ ಎಂದರೆ ಎರಡು ಮೀಟರ್ ಗಳಿಗಿಂತ ಸ್ವಲ್ಪ ಕಡಿಮೆಯಾಗಿತ್ತು. **35**

**27:35** ಜೀವನದ ಎಲ್ಲಾ ಅನುಭವಗಳಲ್ಲಿ ಒಂದೇ ರೀತಿಯ ಭರವಸೆ ಮತ್ತು ಆತ್ಮವಿಶ್ವಾಸವನ್ನು ತೋರಿಸುವವರು ಮತ್ತು ಇತರರಿಗೆ ಮಾದರಿಗಳಾಗಿರುವ ವಿಶ್ವಾಸಿಗಳು ಧನ್ಯರಾಗಿದ್ದಾರೆ.

*“ದೇವರಿಗೆ ಸ್ತೋತ್ರ ಮಾಡಿದರು”*– ಮತ್ತಾಯ 14:19; ಎಫೆ 5:20; 1 ಥೆಸ 5:18; ಯಾಜಕ 7:12-13; ಕೀರ್ತನೆ 7:17; 50:14-15; 56:12. **42**

**27:42** ಖೈದಿಗಳು ತಪ್ಪಿಸಿಕೊಂಡರೆ ಅವರಿಗಾಗ ಬೇಕಾದ ಶಿಕ್ಷೆಯನ್ನು ತಾವು ಅನುಭವಿಸಬೇಕಾಗುತ್ತದೆ ಎಂದು ಸಿಪಾಯಿಗಳು ಹೆದರಿಕೊಂಡರು (12:19; 16:27). **43**

**27:43** ಮತ್ತೊಮ್ಮೆ ದೇವರು ತನ್ನ ಸೇವಕರ ಜೀವಿತವನ್ನು ಕಾಪಾಡಿಕೊಳ್ಳುವ ಮಾರ್ಗ ಸಿದ್ಧಪಡಿಸಿದ್ದನ್ನು ನಾವು ನೋಡುತ್ತೇವೆ (23:12-35 ರ ನೋಟ್ ನೋಡಿರಿ).

# 28 1

**28:1** *“ಮಿಲೇತ”*– ಸಣ್ಣ ದ್ವೀಪ ಈಗ ಅದನ್ನು ಮಾಲ್ಟಾ ಎಂದು ಕರೆಯಲಾಗುತ್ತಿದೆ. ಹೆಚ್ಚು ವಿಸ್ತಾರವಾದ ಸಿಲಿಕ್ಯ ದ್ವೀಪದ ದಕ್ಷಿಣ ಭಾಗಕ್ಕೆ ಸುಮಾರು 100 ಕಿಲೊ ಮೀಟರ್ ದೂರದಲ್ಲಿ ಈ ದ್ವೀಪವಿತ್ತು. **2**

**28:2** *“ಅನ್ಯಭಾಷೆಯವರು”*– ರೋಮಾ 1:14 ರ ನೋಟ್ ನೋಡಿರಿ. ಮೆಲೀತೆಯ ನಿವಾಸಿಗಳು ಅಸಂಸ್ಕೃತರಾಗಿರಲಿಲ್ಲ. **4**

**28:4** ರೋಮಾ 2:14-15 ರೊಂದಿಗೆ ಹೋಲಿಸಿ ನೋಡಿರಿ. ದೇವರು ಎಲ್ಲಾ ಕಡೆಗಳಲ್ಲಿರುವ ಜನರ ಹೃದಯಗಳಲ್ಲಿ ನೀತಿಯ ಆಲೋಚನೆಯನ್ನು ನೆಲೆಗೊಳಿಸಿದ್ದನು. ಈ ದ್ವೀಪದವರು ಸ್ಪಷ್ಟವಾಗಿರುವ ದೈವೀಕ ಶಿಕ್ಷೆಯನ್ನು ನಂಬುವವರಾಗಿದ್ದರು.

*“ಜನರು”*– ಅಕ್ಷರಾರ್ಥವಾಗಿ, “ಅಸಂಸ್ಕೃತರು” ಇತರೆ ಜನರು ಎಲ್ಲಾ ವಿಧದಲ್ಲಿಯೂ ನಾಗರೀಕರಾಗಿರಿದ್ದರೂ ಅವರನ್ನು ಗ್ರೀಕರು ಈ ಶಬ್ದದಿಂದಲೇ ಕರೆಯುತ್ತಿದ್ದರು. **5**

**28:5** ಮಾರ್ಕ 16:18. ಹೊಸ ಒಡಂಬಡಿಕೆಯಲ್ಲಿ ಈ ರೀತಿಯ ವಿಷಯ ಬರೆಯಲ್ಪಟ್ಟಿರುವದು ಇದೊಂದೇ ಆಗಿದೆ. **6**

**28:6** ಪೌಲನಲ್ಲಿ ಅಸಾಧಾರಣವಾದ ಯಾವುದೋ ಶಕ್ತಿ ಇದೆ ಎಂದು ಅವರು ನೆನೆಸಿದರು ಮತ್ತು ತಮ್ಮ ಅಜ್ಞಾನದಲ್ಲಿ ಹಾಗೂ ಮೂಢ ನಂಬಿಕೆಯಲ್ಲಿ “ದೇವರುಗಳು” ಮಾತ್ರವೇ ಇಂಥ ಶಕ್ತಿ ಹೊಂದಿರುತ್ತಾರೆ ಎಂಬದಾಗಿ ಅಂದುಕೊಂಡರು. 14:11-18 ರೊಂದಿಗೆ ಹೋಲಿಸಿ ನೋಡಿರಿ. **8**

- **28:8** ಮಾರ್ಕ 16:18. **12**

**28:12** ಸುರುಕೋಸ್ ಸಿಲಿಕ್ಯ ದ್ವೀಪದ ಪ್ರಮುಖ ರೇವಾಗಿತ್ತು. **13**

**28:13** ರೇಗಿಯವು ಇತಾಲ್ಯದ ದಕ್ಷಿಣ ತೀರದ ಕಡೆಗಿತ್ತು. ಪೊತಿಯೋಲ ದಕ್ಷಿಣ ಇಟಲಿಯ ಪ್ರಮುಖ ರೇವಾಗಿತ್ತು. ಅದು ಇಂದಿನ ನೇಪಲ್ಸ್ ಬಳಿಯಲ್ಲಿದೆ. **14**

**28:14** *“ಸಹೋದರರೇ”*– ಯೇಸು ಕ್ರಿಸನ ವಿಶ್ವಾಸಿಗಳಿಗೆ ಹೊಸ ಒಡಂಬಡಿಕೆಯಲ್ಲಿ ಕರೆಯಲಾಗಿರುವ ಹೆಸರುಗಳಲ್ಲಿ ಇದು ಒಂದಾಗಿದೆ. ಪೌಲನು ರೋಮಾಪುರದ ಹತ್ತಿರ

ಅವರಿಂದ ಪಡೆದ ಸ್ವಾಗವು ಸುದೀರ್ಘ, ಆಯಾಸದಾಯಕ ಮತ್ತು ಅಪಾಯಕಾರಿ ಪ್ರಯಾಣದ ನಂತರ ಅವರ ಹೃದಯವನ್ನು ಹರ್ಷಗೊಳಿಸಿತು. **16**

**28:16** ಪೌಲನಿಗೆ ಗಣನೀಯವಾದ ಸ್ವಾತಂತ್ರ್ಯವನ್ನು ಕೊಡಲಾಯಿತು (ವ 30) ಯಾಕಂದರೆ ಅವನಿಗೆ ವಿರುದ್ಧ ಯಾವ ಆರೋಪಗಳೂ ಇರಲಿಲ್ಲ (25:25-27; 26:31-32) ಇದಲ್ಲದೆ ಅವರು ರೋಮನ್ ಪೌರನಾಗಿದ್ದನು. **17**

**28:17** ಪೌಲನು ಸಮಯವನ್ನು ವ್ಯರ್ಥಮಾಡಲಿಲ್ಲ ಬದಲಾಗಿ ರೋಮಾಪುರದಲ್ಲಿದ್ದ ಯೆಹೂದ್ಯ ಸಮುದಾಯದವರಿಗೆ ಸುವಾರ್ತೆ ಸಾರಲು ಹೋದನು. ರೋಮಾ 9:1-3. **19**

**28:19** 25:11 ನೋಡಿರಿ. **20**

**28:20** *"ನಿರೀಕ್ಷೆ"*– 23:6; 24:15; 26:6. **22**

**28:22** *"ಆ ಮತ"*– ಕ್ರೈಸ್ತತ್ವವು ಯೆಹೂದ್ಯರಲ್ಲಿ ಗೊಂದಲವನ್ನುಂಟು ಮಾಡುವದಾಗಿದೆ ಎಂಬದಾಗಿ ಅವರು ಪರಿಗಣಿಸಿದರು. **23**

**28:23** *"ದೇವರ ರಾಜ್ಯ"*– 1:3; 8:12; 14:22; 19:8; 20:25; ಮತ್ತಾಯ 4:17.

*"ಧರ್ಮಶಾಸ್ತ್ರ . . . ಪ್ರವಾದಿಗಳು"*– ಹಳೆಯ ಒಡಂಬಡಿಕೆಯನ್ನು ಹೇಳುವ ವಿಧಾನವಾಗಿತ್ತು. ಸತ್ಯವನ್ನು ಪ್ರಕಟಿಸುವ ಪೌಲನ ವಿಧಾನವನ್ನು ನೋಡಿರಿ. ಅವನು ದೇವರ ಪ್ರಕಟನೆಯನ್ನು ವಿವರಿಸಿದನು ಮತ್ತು ಸತ್ಯವೇದದ ವಾಕ್ಯಗಳನ್ನು ಸಾಕ್ಷ್ಯವಾಗಿ ತೋರಿಸುತ್ತಿದ್ದನು. ತನ್ನ ಸಂದೇಶವು ಸತ್ಯವಾಗಿದೆ ಮತ್ತು ಯುಕ್ತವಾಗಿದೆ (27:35) ಮತ್ತು ಬಲವಾಗಿ ದೇವರ ವಾಕ್ಯಗಳ ಮೇಲೆ ಆಧಾರಗೊಂಡಿದೆ ಎಂದು ಬಲ್ಲವನಾಗಿದ್ದನು. **24**

**- 28:24** ಮತ್ತಾಯ 10:34; ಯೋಹಾನ 7:12-13; 10:19-21. **25-27**

**28:25-27** ಯೆಶಾಯ 6:9-10; ಮತ್ತಾಯ 13:13-15; ರೋಮಾ 11:8. "ಪವಿತ್ರಾತ್ಮನು ಆಡಿದ ಮಾತುಗಳನ್ನು" ಗಮನಿಸಿರಿ. ಪೌಲನು ಹಳೆ ಒಡಂಬಡಿಕೆಯ ಪೂರ್ಣವಾದ ದೈವೀಕ ಪ್ರೇರಣೆಯನ್ನು ನಂಬಿದನು (2 ತಿಮೊ 3:16). ಇದರಲ್ಲಿಯೂ ಅವನು ಕರ್ತನಾದ ಯೇಸು ಕ್ರಿಸ್ತನ ನಿಜವಾದ ಹಿಂಬಾಲಕನಾಗಿದ್ದನು (ಮತ್ತಾಯ 5:17-18; ಯೋಹಾನ 10:35). ಯೆಹೂದ್ಯರು ಸುವಾರ್ತೆಯನ್ನು ನಿರಾಕರಿಸಿದ್ದು ಅವರ ವಚನಭಾಗದಲ್ಲಿ ಕೊಡಲಾಗಿರುವ ಪ್ರವಾದನೆಗೆ ಅನುಸಾರವಾದದ್ದಾಗಿದೆ. **28**

**- 28:28** 14:14-18; 18:6; 22:18,21; ರೋಮಾ 1:16 ನೋಡಿರಿ. **31**

**28:31** ವಚನ 23. ಅಪೊಸ್ತಲರು ದೇವರ ರಾಜ್ಯದ ಬಗ್ಗೆ ಬೋಧಿಸಿದ್ದು ಮತ್ತು ಯೇಸು ಕ್ರಿಸನ ಬಗ್ಗೆ ನೀಡಿದ ಉಪದೇಶ ಎರಡೂ ಒಂದಕ್ಕೊಂದು ಹೊಂದಿಕೆಯಾಗಿರುವದನ್ನು ಇಲ್ಲಿ ನಾವು ಮತ್ತೊಮ್ಮೆ ನೋಡಬಹುದಾಗಿದೆ. ಮತ್ತಾಯ 4:17 ರಲ್ಲಿ ದೇವರ ರಾಜ್ಯದ ಕುರಿತಾದ ನೋಟ್ ನೋಡಿರಿ. ಲೂಕನು ಆದಿ ಸಭೆಯ ಸಂಕ್ಷಿಪ್ತವಾದ ಚರಿತ್ರೆಯನ್ನು ಪೌಲನು ರೋಮಾಪುರಕ್ಕೆ ಹೋಗುವದರೊಂದಿಗೆ ಮುಗಿಸಿದ್ದಾನೆ. 1:8 ರಲ್ಲಿ ಹೇಳಲಾಗಿರುವ ಯೇಸು

ಕ್ರಿಸ್ತನ ಮಾತುಗಳು ಯಾವ ರೀತಿ ನೆರವೇರಿದವು ಎಂಬದನ್ನು ತೋರಿಸುವದು ಅವನ ಮುಖ್ಯ ಉದ್ದೇಶಗಳಲ್ಲಿ ಒಂದಾಗಿತ್ತು. ಅವನನ್ನು ಯಾವುದಕ್ಕಾಗಿ ಕರೆಯಲಾಗಿತ್ತು ಅವನು ಅದನ್ನು ಮಾಡಿದನು ಮತ್ತು ಅವನ ಕೆಲಸವು ಪೂರ್ತಿಯಾಯಿತು. ನ್ಯಾಯತೀರ್ಪಿಗಾಗಿ ಪೌಲನು ಚಕ್ರವರ್ತಿಯ ಎದುರು ನಿಲ್ಲುವ ಮೊದಲು ಯಾವುದೇ ಸಂದೇಹವಿಲ್ಲದಾಗಿ ಅವನು ಬರೆದನು. ರೋಮಾಪುರದಲ್ಲಿ ಈ ಸಮಯದ ಅಂತ್ಯಕ್ಕೆ ಪೌಲನಿಗೆ ಏನಾಯಿತೆಂದು ನಮ್ಮಲ್ಲಿ ಯಾರಿಗೂ ಗೊತ್ತಿಲ್ಲ. ಅದನ್ನು ತಿಳಿದುಕೊಳ್ಳುವ ಅವಶ್ಯಕತೆಯೂ ಇಲ್ಲ. ಸಂಪ್ರದಾಯಗಳು ಹೇಳುವದೇನೆಂದರೆ ಕಾಲಕ್ರಮೇಣ ಅಲ್ಲಿ ಅವನ ಶಿರಚ್ಛೇದನ ಮಾಡಲಾಯಿತು. ವಿಷಯ ಏನೇ ಆಗಿದ್ದರೂ ಬಹುಕಾಲದ ಹಿಂದೆಯೇ ಪೌಲನು ಮತ್ತು ಅಪೊಸ್ತಲರೆಲ್ಲರೂ ಕ್ರಿಸ್ತನೊಂದಿಗೆ ಇರಲು ಹೊರಟು ಹೋಗಿದ್ದಾರೆ. ಆದರೆ ಯೇಸು ಕ್ರಿಸ್ತನ ಸೇವೆಯು, ಯಾವ ಒಬ್ಬ ವ್ಯಕ್ತಿ ಅಥವಾ ಗುಂಪಿನ ಜನರ ಮೇಲೆಯೂ ಆಧಾರವಾಗಿಲ್ಲದಿರುವದರಿಂದ, ಇಂದಿನ ತನಕ ನಡೆಯುತ್ತಲೇ ಇದೆ. ಯೇಸು ಕ್ರಿಸ್ತನು ಏನನ್ನು “ಪ್ರಾರಂಭಿಸಿದನೋ” (1:1) ಅದನ್ನು ಇನ್ನೂ ಮುಂದುವರೆಸುತ್ತಿದ್ದಾನೆ ಮತ್ತು ತಕ್ಕ ಸಮಯದಲ್ಲಿ ಅದನ್ನು ಪೂರ್ಣಗೊಳಿಸುತ್ತಾನೆ. ಇವೆಲ್ಲವುಗಳಲ್ಲಿ ಭಾಗಿಯಾಗುವವರು ಧನ್ಯರಾಗಿದ್ದಾರೆ.